www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರಚಾರ
ಮುಂಬೈನಲ್ಲಿ ಬುಧವಾರ ನಡೆದ 'ಬಡೇ ಮಿಯಾ ಛೋಟೆ ಮಿಯಾ' ಚಿತ್ರದ ಪ್ರಚಾರ ಕಾರ್ಯಕ್ರಮದಲ್ಲಿ ನಟರಾದ ಅಕ್ಷಯ್ ಕುಮಾರ್ ಮತ್ತು ಟೈಗರ್ ಶ್ರಾಫ್ ಪಾಲ್ಗೊಂಡಿದ್ದರು



ರಾಜಕೀಯ ಶಕ್ತಿ ಪ್ರದರ್ಶನ: ವಾಗ್ಬಾಣ ಪ್ರಯೋಗ

ಮೇಕೆದಾಟು: ಎಚ್‌ಡಿಕೆ ಶಪಥ

ಪ್ರಜಾವಾಣಿ ವಾರ್ತೆ

ಎಚ್.ಡಿ.ಕುಮಾರಸ್ವಾಮಿ ಮೈತ್ರಿ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ ನಂತರ ಮಂಡ್ಯ ವಿವಿ ಆವರಣದಲ್ಲಿ ನಡೆದ ಸಭೆಯಲ್ಲಿ ಮಿತ್ರ ಪಕ್ಷಗಳ ಮುಖಂಡರು ಕೈಕೈ ಹಿಡಿದು ಸಂಭ್ರಮಿಸಿದರು. ಬಿ.ಎಸ್.ಯಡಿಯೂರಪ್ಪ, ಡಾ.ಪ್ರಮೋದ್ ಸಾವಂತ್, ಎಚ್.ಡಿ.ಕುಮಾರಸ್ವಾಮಿ ಬಂಡೆಪ್ಪ ಕಾಶೆಂಪೂರ, ಸುರೇಶ್‌ಗೌಡ, ರವೀಂದ್ರ ಶ್ರೀಕಂಠಯ್ಯ ಇದ್ದಾರೆ

ಮಂಡ್ಯ: 'ಸಂಸದನಾಗಿ ಆಯ್ಕೆಯಾಗಿ ಮೇಕೆದಾಟು, ಮಹದಾಯಿ, ಕೃಷ್ಣಾ, ಭದ್ರಾ ಮೇಲ್ದಂಡೆ ಯೋಜನೆಗಳಿಗೆ ಕೇಂದ್ರ ಸರ್ಕಾರದಿಂದ ಅನುಮತಿ ಪಡೆಯುವುದೇ ನನ್ನ ಗುರಿ. ಇದು ಸಾಧ್ಯವಾಗದಿದ್ದರೆ ರಾಜಕಾರಣದಲ್ಲಿ ಮುಂದುವರಿಯುವುದಿಲ್ಲ' ಎಂದು ಗುರುವಾರ ಮೈತ್ರಿ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಶಪಥ ಮಾಡಿದರು.

ನಗರದ ಮಂಡ್ಯ ವಿವಿ ಮೈದಾನದಲ್ಲಿ ನಡೆದ ಬೃಹತ್ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, 'ರಾಜ್ಯದ 28 ಸಂಸದರೂ ರಾಜ್ಯದ ಅಭಿವೃದ್ಧಿ ಯೋಜನೆಗಳ ಬಗ್ಗೆ ಮಾತನಾಡುತ್ತಿಲ್ಲವೆಂಬ ಆರೋಪವಿದೆ. ಎಚ್.ಡಿ.ದೇವೇಗೌಡರ ಮಾರ್ಗದರ್ಶನದೊಂದಿಗೆ ನಾನು ಕಾವೇರಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಜೊತೆಗೆ ನೀರಾವರಿ ಯೋಜನೆಗಳ ಜಾರಿಗಾಗಿ ಹೋರಾಡುವೆ. ಸಂಸತ್‌ನಲ್ಲಿ ರಾಜ್ಯದ ಎಲ್ಲ ಸಂಸದರ ಧ್ವನಿಯಾಗಿ ಕೆಲಸ ಮಾಡುವೆ' ಎಂದರು.

'ಮೇಕೆದಾಟು ಯೋಜನೆಗಾಗಿ ನನ್ನ ನೀರು ನನ್ನ ಹಕ್ಕು ಪಾದಯಾತ್ರೆ ಮಾಡಿದವರು ಇಂದು ಬರ ಪರಿಸ್ಥಿತಿ ನಿರ್ವಹಿಸುವಲ್ಲಿ ಸಂಪೂರ್ಣ ವಿಫಲರಾಗಿದ್ದಾರೆ. ಕಬ್ಬು, ಭತ್ತ ಒಣಗುತ್ತಿದ್ದು, ರೈತರಿಗೆ ನೀರು ಕೊಡಲು ಸಾಧ್ಯವಾಗಿಲ್ಲ, ಕುಡಿಯುವ ನೀರು ಒದಗಿಸಿಲ್ಲ. ಆದರೆ ತಮಿಳುನಾಡಿಗೆ ನಿರಂತರವಾಗಿ ನೀರು ಹರಿದು ಹೋಗುತ್ತಿದೆ' ಎಂದು ಡಿ.ಕೆ. ಶಿವಕುಮಾರ್ ವಿರುದ್ಧ ವಾಗ್ದಾಳಿ ನಡೆಸಿದರು. 'ನಾನು ಮುಖ್ಯಮಂತ್ರಿಯಾಗಿದ್ದ ವೇಳೆ ಎಂದೂ ಕೇಂದ್ರ ಸರ್ಕಾರದ ಎದುರು ಕೈಚಾಚಿಲ್ಲ. ಭತ್ತ, ಕಬ್ಬು ಹಾಕಬೇಡಿ ಎಂದು ಹೇಳಿದ ಕೃಷಿ ಸಚಿವ ಇದ್ದರೆ, ಅದು ಕರ್ನಾಟಕದ ಕೃಷಿ ಸಚಿವ ಮಾತ್ರ. ಈ ಕುರಿತು ಸಾರ್ವಜನಿಕವಾಗಿ ಚರ್ಚೆಗೆ ಸಿದ್ಧನಿದ್ದೇನೆ, ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಬರಲಿ' ಎಂದು ಆಹ್ವಾನ ನೀಡಿದರು. 'ಇಂದು ಕ್ರಿಕೆಟ್ ಬೆಟ್ಟಿಂಗ್, ಮಟ್ಕಾ ದಂಧೆ ಗಲ್ಲಿಗಲ್ಲಿಯಲ್ಲೂ ನಡೆಯುತ್ತಿದ್ದು, ಗ್ರಾಮೀಣ ಯುವಜನರ ಜೀವನ ಹಾಳಾಗುತ್ತಿದೆ. ಪಾಪದ ಹಣದಲ್ಲಿ ಸರ್ಕಾರ ನಡೆಯುತ್ತಿದೆ. ದೇಶದಲ್ಲಿ ಮುನ್ನಿಮದ ರಕ್ಷಣೆಗಾಗಿ ಮೋದಿ ಅವರ ನಾಯಕತ್ವ ಅನಿವಾರ್ಯ' ಎಂದರು.

ಬಿ.ಎಸ್.ಯಡಿಯೂರಪ್ಪ ಅವರು ಮಾತನಾಡಿ, 'ಕಿಸಾನ್ ಸಮ್ಮಾನ್ ಯೋಜನೆ ಅಡಿ ಕೇಂದ್ರ ಸರ್ಕಾರ ನೀಡುವ ₹ 6 ಸಾವಿರದ ಜೊತೆ ನಮ್ಮ ಸರ್ಕಾರ ₹ 4 ಸಾವಿರ ಕೊಡುತ್ತಿತ್ತು, ಅದನ್ನು ಕಾಂಗ್ರೆಸ್ ಸರ್ಕಾರ ನಿಲ್ಲಿಸಿದ್ದೇಕೆ, ಭಾಗ್ಯಲಕ್ಷ್ಮಿ ಯೋಜನೆಯನ್ನು ಸ್ಥಗಿತಗೊಳಿಸಿದ್ದೇಕೆ' ಎಂದು ಪ್ರಶ್ನಿಸಿದರು.

ನೇಣು ಹಾಕಿಕೊಳ್ಳುವ ಒತ್ತಡ

'ಮಂಡ್ಯ ಜಿಲ್ಲೆಯ ಜನರ ಒತ್ತಾಯದ ಮೇರೆಗೆ ನಾನು ಸ್ಪರ್ಧಿಸುತ್ತಿದ್ದೇನೆ. ಕೆಲವು ರೈತರು ನನಗೆ ಕರೆ ಮಾಡಿ ಮಂಡ್ಯದಿಂದ ಸ್ಪರ್ಧಿಸದಿದ್ದರೆ ಸಂಜಯ ವೃತ್ತದಲ್ಲಿ ನೇಣು ಹಾಕಿಕೊಳ್ಳುವುದಾಗಿ ಹೇಳಿ ಒತ್ತಡ ಹೇರಿದರು' ಎಂದು ಕುಮಾರಸ್ವಾಮಿ ಹೇಳಿದರು.

ಮಲ್ಲೇಶ್ ಬಾಬುಗೆ ತೆನೆ; ಬಾವನಿಗೆ ಏಕೆ ಕಮಲ: ಎಚ್‌ಡಿಕೆಗೆ ಡಿಕೆಶಿ ಪ್ರಶ್ನೆ



ಡಿ.ಕೆ. ಶಿವಕುಮಾರ್

ಕೋಲಾರ: 'ಎಚ್.ಡಿ.ಕುಮಾರಸ್ವಾಮಿ ತೆನೆ ಬಿಸಾಕಿ ಸ್ವಂತ ಬಾವನನ್ನು ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಕಮಲ ಪಕ್ಷದಿಂದ ಕಣಕ್ಕಿಳಿಸಿದ್ದಾರೆ. ಇದಕ್ಕಿಂತ ಅವಮಾನ ಮತ್ತೊಂದಿಲ್ಲ. ಬಾವನನ್ನೇಕೆ ತಮ್ಮ ಪಕ್ಷದ ಚಿಹ್ನೆ ಮೇಲೆ ಕಣಕ್ಕಿಳಿಸಲು ಸಾಧ್ಯವಾಗಲಿಲ್ಲ ಮೇಲೆ ಜೆಡಿಎಸ್ ಪಕ್ಷ ಎಲ್ಲಿದೆ ಹೇಳಿ' ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪ್ರಶ್ನಿಸಿದರು.

ನಗರದಲ್ಲಿ ಗುರುವಾರ ಕೋಲಾರ ಮೀಸಲು ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೆ.ವಿ.ಗೌತಮ್ ಪರ ರೋಡ್ ಶೋ ನಡೆಸಿ ಅವರು ಮಾತನಾಡಿದರು.

'ರಾಜಕೀಯ ಜನ್ಮ ನೀಡಿದ ರಾಮನಗರ ಜಿಲ್ಲೆ ಮರೆತು ಮಂಡ್ಯಕ್ಕೆ ಹೋಗಿದ್ದಾರೆ. ಬೆಂಗಳೂರು ಗ್ರಾಮಾಂತರದಿಂದ ಸಂಸದರಾಗಿದ್ದ ಅವರು ಇಲ್ಲೇ ಸ್ಪರ್ಧಿಸಬೇಕಿತ್ತು. ಅದನ್ನು ಬಿಟ್ಟು ಬಾವನನ್ನು ಮತ್ತೊಂದು ಪಕ್ಷದಿಂದ ಕಣಕ್ಕಿಳಿಸಿದ್ದಾರೆ' ಎಂದು ಟೀಕಿಸಿದರು.

'ಕೋಲಾರ ಕ್ಷೇತ್ರದಲ್ಲಿ ತೆನೆ ಬೇಕಂತೆ. ಆದರೆ, ಬೆಂಗಳೂರು ಗ್ರಾಮಾಂತರದಲ್ಲಿ ಬಾವನಿಗೆ ಕಮಲ ಬೇಕಂತೆ. ಅವರನ್ನು ಏಕೆ ಜೆಡಿಎಸ್‌ನಿಂದ ಕಣಕ್ಕಿಳಿಸಿಲ್ಲ ಎಂಬುದನ್ನು ಜೆಡಿಎಸ್ ಕಾರ್ಯಕರ್ತರು ಕುಮಾರಸ್ವಾಮಿ ಅವರನ್ನು ಪ್ರಶ್ನಿಸಬೇಕು' ಎಂದರು.

'ಕುಮಾರಸ್ವಾಮಿ ಒಮ್ಮೆ ರಾಮನಗರದಿಂದ ಸ್ಪರ್ಧಿಸಿದ್ದರು, ಮತ್ತೊಮ್ಮೆ ಚಿಕ್ಕಬಳ್ಳಾಪುರಕ್ಕೆ ಹೋದರು. ಅನಂತರ ರಾಮನಗರ, ಚನ್ನಪಟ್ಟಣ ಆಯಿತು. ಈಗ ಮಂಡ್ಯಕ್ಕೆ ತೆರಳಿದ್ದಾರೆ. ಊಟ ಕೊಟ್ಟ ಪಕ್ಷ, ಎಚ್.ಡಿ.ದೇವೇಗೌಡರನ್ನು ಪ್ರಧಾನಿ ಮಾಡಿದ್ದು, ತಮ್ಮನ್ನು ಮುಖ್ಯಮಂತ್ರಿ ಮಾಡಿದ್ದು ಕಾಂಗ್ರೆಸ್. ಉಪಕಾರ ಸ್ಮರಣೆ ಇರಬೇಕಿತ್ತು. ಆದರೆ, ಕುಮಾರಸ್ವಾಮಿ ಅವರು ಮರೆತು ನಮ್ಮ ಪಕ್ಷದ ವಿರುದ್ಧ ಕೀಳಾಗಿ ಮಾತನಾಡುತ್ತಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಕಳೆದ ವಿಧಾನಸಭೆ ಚುನಾವಣೆ ರೀತಿಯಲ್ಲೇ ಲೋಕಸಭೆ ಚುನಾವಣೆಯಲ್ಲೂ ಫಲಿತಾಂಶ ಬರಲಿದೆ. ಚುನಾವಣೆ ಬಳಿಕ ಸರ್ಕಾರ ಪತನವಾಗಲಿದೆ ಎಂಬುದಾಗಿ ಬಿಜೆಪಿಯವರು ಹಗಲು ಕನಸು ಕಾಣುತ್ತಿದ್ದಾರೆ' ಎಂದು ಹೇಳಿದರು.

'ಕೋವಿಡ್ ಕಾಲದಲ್ಲಿ ಜನರ ನೆರವಿಗೆ ನಿಂತ ಪಕ್ಷ ಕಾಂಗ್ರೆಸ್. ನಾನು ಮಾಲೂರಿಗೆ ಬಂದು ತರಕಾರಿ ಖರೀದಿಸಿ ರೈತರಿಗೆ ನೆರವಾದೆ. ಕೇಂದ್ರದಲ್ಲಿ ಸಚಿವರಾಗಿದ್ದ ಸುರೇಶ್ ಅಂಗಡಿ ಕೋವಿಡ್‌ನಿಂದ ಮೃತರಾದಾಗ ಅವರ ದೇಹವನ್ನು ದೆಹಲಿಯಿಂದ ತರಲು ಕುಟುಂಬದವರಿಗೆ ಸಾಧ್ಯವಾಗಲಿಲ್ಲ. ಸಹೋದರ ಡಿ.ಕೆ.ಸುರೇಶ್ ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ತನ್ನ ಜೀವ ಲೆಕ್ಕಿಸದೆ ಕೋವಿಡ್‌ನಿಂದ ಮೃತರಾದವರನ್ನು ಹೊತ್ತುಕೊಂಡು ಹೋಗಿ ಅಂತ್ಯಕ್ರಿಯೆ ನಡೆಸಲು ನೆರವಾದ' ಎಂದರು.

ನಾಮಪತ್ರ ಸಲ್ಲಿಸುವ ಸಂದರ್ಭದಲ್ಲಿ ಹಾಸನಕ್ಕೆ ಬಂದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರ ಕಾಲಿಗೆ ಪ್ರಜ್ವಲ್ ರೇವಣ್ಣ ನಮಸ್ಕರಿಸಿದರು. ಶಾಸಕರಾದ ಸಿಮೆಂಟ್ ಮಂಜು, ಎಚ್.ಕೆ. ಸುರೇಶ್, ಸಂಸದ ಡಿ.ವಿ. ಸದಾನಂದಗೌಡ, ಶಾಸಕ ಸಿ.ಎನ್.ಬಾಲಕೃಷ್ಣ, ವಿಧಾನ ಪರಿಷತ್ ಉಪ ಸಭಾಪತಿ ಎಂ.ಕೆ. ಪ್ರಾಣೇಶ್, ಪರಿಷತ್ ಸದಸ್ಯ ಸೂರಜ್ ರೇವಣ್ಣ, ಭವಾನಿ ರೇವಣ್ಣ ಪಾಲ್ಗೊಂಡಿದ್ದರು.

ಪ್ರಜ್ವಲ್ ನಾಮಪತ್ರ: ಪ್ರೀತಂ ಗೌಡ ಗೈರು

ಪ್ರಜಾವಾಣಿ ವಾರ್ತೆ

ಹಾಸನ: ಬಿಜೆಪಿ-ಜೆಡಿಎಸ್ ಮೈತ್ರಿ ಅಭ್ಯರ್ಥಿಯಾಗಿ ಪ್ರಜ್ವಲ್ ರೇವಣ್ಣ ಗುರುವಾರ ಎರಡು ಸೆಟ್‌ಗಳಲ್ಲಿ ನಾಮಪತ್ರ ಸಲ್ಲಿಸಿದ ವೇಳೆ, ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ, ಶಾಸಕ ಎಚ್.ಡಿ. ರೇವಣ್ಣ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಮುಖಂಡರಾದ ಡಿ.ವಿ. ಸದಾನಂದಗೌಡ, ಬೆಳ್ಳಿಪ್ರಕಾಶ್, ಎಂ.ಕೆ. ಪ್ರಾಣೇಶ್ ಹಾಜರಿದ್ದು, ಮಿತ್ರ ಪಕ್ಷಗಳ ಒಗ್ಗಟ್ಟು ಪ್ರದರ್ಶಿಸಿದರು. ಆದರೆ, ನಾಮಪತ್ರ ಸಲ್ಲಿಕೆ ಹಾಗೂ ನಂತರ ನಡೆದ ರ್‍ಯಾಲಿಯಲ್ಲಿ ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಪ್ರೀತಂಗೌಡರ ಗೈರು ಎದ್ದು ಕಾಣುತ್ತಿತ್ತು.

ಆ ಬಗ್ಗೆ ಪ್ರತಿಕ್ರಿಯಿಸಿದ ಬಿ.ವೈ. ವಿಜಯೇಂದ್ರ, 'ನಿನ್ನೆ ಜಿಲ್ಲೆಯ ನಾಯಕರೆಲ್ಲ ಸೇರಿ ಬಿಜೆಪಿ ಪದಾಧಿಕಾರಿಗಳ ಹಾಗೂ ಕಾರ್ಯಕರ್ತರ ಸಭೆ ಕರೆದಿದ್ದು, ಒಂದೆರಡು ದಿನದಲ್ಲಿ ವಾತಾವರಣ ತಿಳಿಯಾಗಲಿದೆ. ಜೆಡಿಎಸ್‌ನೊಂದಿಗೆ ಹೊಂದಾಣಿಕೆ ಮಾಡಿಕೊಂಡಿದ್ದು, ಎನ್‌.ಡಿ.ಎ. ತೆಕ್ಕೆಗೆ ಬಂದಿರುವ ಪಕ್ಷದ ಅಭ್ಯರ್ಥಿಯನ್ನು ಗೆಲ್ಲಿಸುವ ಕರ್ತವ್ಯ ನಮಗೂ ಇರುತ್ತದೆ' ಎಂದರು.

'ಜೆಡಿಎಸ್ ಅಭ್ಯರ್ಥಿಗಳನ್ನು ಸಂಪೂರ್ಣವಾಗಿ ಬಿಜೆಪಿ ಬೆಂಬಲಿಸಬೇಕು. ಬಿಜೆಪಿ ಅಭ್ಯರ್ಥಿಗಳನ್ನು ಜೆಡಿಎಸ್ ಬೆಂಬಲಿಸಲೇಬೇಕು. ಮೈತ್ರಿ ಧರ್ಮಕ್ಕೆ ಅನುಗುಣವಾಗಿ ಕೆಲಸ ಮಾಡಬೇಕೆಂದು ಎಲ್ಲರಿಗೂ ಸೂಚಿಸಲಾಗಿದೆ. ಪ್ರೀತಂ ಗೌಡರಿಗೂ ಅದು ಅನ್ವಯವಾಗುತ್ತದೆ. ಅದರಂತೆಯೇ ಅವರು ಕೆಲಸ ಮಾಡಲಿದ್ದಾರೆ' ಎಂದರು.

ಕಾಂಗ್ರೆಸ್ ವಿರುದ್ಧ ಹರಿಹಾಯ್ದ ಎಚ್‌.ಡಿ. ದೇವೇಗೌಡ, '28 ಗ್ಯಾರಂಟಿ ಕೊಡುತ್ತೇವೆ. 8 ಕೋಟಿ ಮನೆ ನಿರ್ಮಿಸುತ್ತೇವೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ. ನೀವು ಇರುವುದು ಕೇವಲ ಮೂರು ರಾಜ್ಯದಲ್ಲಿ. 8 ಕೋಟಿ ಮನೆ ಕಟ್ಟುತ್ತೇವೆ ಎನ್ನುತ್ತೀರಿ. ಯಾವ ರೀತಿ ಸರ್ವೆ ಮಾಡಿದ್ದೀರಿ? ಈಗ ಜ್ಞಾನೋದಯವಾಯಿತೇ? ನೀವು ಅಧಿಕಾರಕ್ಕೆ ಬರಲು ಸಾಧ್ಯವಿಲ್ಲ. ಯಾರನ್ನು ದಡ್ಡರನ್ನಾಗಿ ಮಾಡುತ್ತಿದ್ದೀರಿ' ಎಂದು ಟೀಕಿಸಿದರು.

'ಜೆಡಿಎಸ್ ಮುಗಿಸುತ್ತೇವೆ ಎಂದು ಕಾಂಗ್ರೆಸ್‌ನವರು ಹೇಳುತ್ತಿದ್ದಾರೆ. ಜೆಡಿಎಸ್ ಎಲ್ಲಿದೆ ಎಂದು ಮುಖ್ಯಮಂತ್ರಿ ಕೇಳುತ್ತಾರೆ. ಅವರಿಗೆ ಪಕ್ಷ ಎಲ್ಲೆಲ್ಲಿದೆ ಎಂಬುದನ್ನು ತೋರಿಸಬೇಕು. ಸಿದ್ದ-ರಾಮಯ್ಯನವರೇ, ನರೇಂದ್ರ ಮೋದಿಯವರ ಜೊತೆ ಜೆಡಿಎಸ್ ಸೇರಿದೆ. ಅಧಿಕಾರದಲ್ಲಿರುವ ಮೂರು ಕಡೆಯೂ ಕಾಂಗ್ರೆಸ್ ಅನ್ನು ನೆಲಸಮ ಮಾಡುತ್ತೇವೆ' ಎಂದು ವಾಗ್ದಾಳಿ ನಡೆಸಿದರು.

'ಆಸ್ಪತ್ರೆ ಸ್ಥಾಪನೆಯಾಗದ್ದಕ್ಕೆ ಸುಧಾಕರ್ ನಿಷ್ಕ್ರಿಯತೆ ಕಾರಣ'

ಪ್ರಜಾವಾಣಿ ವಾರ್ತೆ



ಬಸನಗೌಡ ಪಾಟೀಲ ಯತ್ನಾಳ

ಕುಮಟಾ (ಉತ್ತರ ಕನ್ನಡ): 'ಉತ್ತರ ಕನ್ನಡ ಜಿಲ್ಲೆಯಲ್ಲಿ ಸೂಪರ್ ಸ್ಪೆಶಾಲಿಟಿ ಆಸ್ಪತ್ರೆ ಸ್ಥಾಪನೆ ಆಗದಿರಲು ಹಿಂದಿನ ಬಿಜೆಪಿ ಸರ್ಕಾರದಲ್ಲಿ ಆರೋಗ್ಯ ಸಚಿವರಾಗಿದ್ದ ಡಾ. ಕೆ.ಸುಧಾಕರ್ ಅವರ ನಿಷ್ಕ್ರಿಯತೆಯೂ ಒಂದು ಕಾರಣ' ಎಂದು ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಆರೋಪಿಸಿದರು.

ಪಟ್ಟಣದಲ್ಲಿ ಗುರುವಾರ ಬಿಜೆಪಿ ಕಾರ್ಯಕರ್ತರ ಸಮಾವೇಶದಲ್ಲಿ ಮಾತನಾಡಿದ ಅವರು ಸದ್ಯ ಚಿಕ್ಕಬಳ್ಳಾಪುರ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯೂ ಆಗಿರುವ ಡಾ. ಕೆ.ಸುಧಾಕರ್ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

'ಸಮಸ್ಯೆ ಪರಿಹರಿಸುವಂತೆ ಕೋರಿ ಬರುತ್ತಿದ್ದ ಜನರು, ಜನಪ್ರತಿನಿಧಿ-ಗಳನ್ನು ಡಾ. ಕೆ.ಸುಧಾಕರ್ ಹತ್ತಿರ ಬಿಟ್ಟು-ಕೊಳ್ಳುತ್ತಿರಲಿಲ್ಲ. ಲೋಕಸಭೆ ಚುನಾವಣೆ ಮುಗಿದ ಬಳಿಕವೇ ಆಸ್ಪತ್ರೆ ಸ್ಥಾಪನೆಗೆ ಹೋರಾಟ ನಡೆಸಲು ಇಲ್ಲಿನ ಶಾಸಕರೊಂದಿಗೆ ಕೈಜೋಡಿಸಿ ಹೋರಾಡುವೆ' ಎಂದು ಅವರು ತಿಳಿಸಿದರು.

'ಲೋಕಸಭೆ ಚುನಾವಣೆ ಬಳಿಕ ರಾಜ್ಯದಲ್ಲೂ ಮಹಾರಾಷ್ಟ್ರ ಮಾದರಿಯಲ್ಲೇ ಸರ್ಕಾರ ಪತನ-ಗೊಳ್ಳುತ್ತದೆ. ಏಕನಾಥ ಶಿಂಧೆ, ಅಜಿತ್ ಪವಾರ್ ಪಾತ್ರಧಾರಿಗಳು ಕಾಂಗ್ರೆಸ್‌ನಲ್ಲಿ ಸಿದ್ಧರಾಗಿದ್ದಾರೆ' ಎಂದರು.

ಮೈತ್ರಿ ಅಭ್ಯರ್ಥಿ ಡಾ.ಕೆ.ಸುಧಾಕರ್ ನಾಮಪತ್ರ ಸಲ್ಲಿಕೆ

ಡಾ.ಸುಧಾಕರ್, ನಿಖಿಲ್ ಕಣ್ಣೀರು

ಪ್ರಜಾವಾಣಿ ವಾರ್ತೆ

ನಿಖಿಲ್ ಕುಮಾರಸ್ವಾಮಿ

ರಾಮನಗರ/ಚಿಕ್ಕಬಳ್ಳಾಪುರ: ಮೊದಲ ಹಂತದ ಚುನಾವಣೆಗೆ ನಾಮಪತ್ರ ಸಲ್ಲಿಸಲು ಕೊನೆಯ ದಿನವಾದ ಗುರುವಾರ ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹಾಗೂ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿ ಡಾ.ಕೆ.ಸುಧಾಕರ್ ಅವರು ವಿಧಾನಸಭೆ ಚುನಾವಣೆ ಸೋಲು ನೆನಪಿಸಿಕೊಂಡು ಕಣ್ಣೀರು ಹಾಕಿದರು.

'ಕಳೆದ ಲೋಕಸಭಾ ಚುನಾವಣೆಯಲ್ಲಿ ಯಾವುದೇ ಅನುಭವ-ವಿಲ್ಲದೆ ಮಂಡ್ಯದಿಂದ ಸ್ಪರ್ಧಿಸಿದ್ದ ನಾನು ಕಾಂಗ್ರೆಸ್‌ನವರ ಷಡ್ಯಂತ್ರಕ್ಕೆ ಬಲಿಯಾದೆ. ಜಿಲ್ಲೆಯ ಏಳೂ ವಿಧಾನಸಭಾ ಕ್ಷೇತ್ರಗಳಲ್ಲಿ ಜೆಡಿಎಸ್ ಗೆದ್ದಿದ್ದರೂ ನಾನು ಸೋತೆ' ಎಂದು ನಿಖಿಲ್ ಭಾವುಕರಾದರು.

'ರಾಮನಗರದಿಂದ ವಿಧಾನಸಭಾ ಚುನಾವಣೆಯಲ್ಲಿ ಗಿಫ್ಟ್ ಕಾರ್ಡ್ ಹಂಚಿ ಮೋಸ ಮಾಡಿದರು. ಯಾಕೆ ನನಗೇ ಹೀಗಾಯಿತು? ಯಾರಿಗಾದರೂ ಮೋಸ ಮಾಡಿದ್ದೀನಾ? ಅಗೌರವ ತೋರಿದ್ದೇನೆಯೇ? ನಡವಳಿಕೆಯಲ್ಲಿ ತಪ್ಪಾಗಿದೆಯಾ?' ಎಂದು ಕೇಳಿದರು.

'ರಾಮನಗರದ ಜನರ ಋಣ ಮರೆಯಲಾರೆ. ನನಗೂ ಅವಕಾಶ ಸಿಗುತ್ತದೆ. ನಾನೆಂದಿಗೂ ರಾಮನಗರ ಜಿಲ್ಲೆ ಬಿಟ್ಟು ಹೋಗುವವನಲ್ಲ. ಇಲ್ಲೇ ಗೆದ್ದು ತೋರಿಸುವೆ. ನನಗಾದಂತೆ ಡಾ. ಸಿ.ಎನ್. ಮಂಜುನಾಥ್ ಅವರಿಗೆ ಆಗಬಾರದು' ಎಂದು ಮನವಿ ಮಾಡಿದರು.

'ಜಾತಿ ರಾಜಕೀಯ ಮಾಡಿಲ್ಲ'

ಸುಧಾಕರ್ ಕಣ್ಣೀರು

ಚಿಕ್ಕಬಳ್ಳಾಪುರ: ಮೈತ್ರಿ ಅಭ್ಯರ್ಥಿ ಡಾ.ಕೆ. ಸುಧಾಕರ್ ನಗರದಲ್ಲಿ ಗುರುವಾರ ನಡೆದ ರೋಡ್ ಷೊ ವೇಳೆ ಮಾತನಾಡುತ್ತಲೇ ಗದ್ಗದಿತರಾದರು.

ವಿಧಾನಸಭೆ ಚುನಾವಣೆ ಸೋಲು ನೆನಪಿಸಿಕೊಂಡು ಭಾವುಕರಾದ ಅವರು, 'ನನ್ನ ದೂರ ಮಾಡಿದ್ದೀರಿ. ಅಜ್ಞಾತವಾಸ ಅನುಭವಿಸಿದ್ದೇನೆ. ಮತ್ತೆ ಸೇವೆ ಮಾಡಲು ಅವಕಾಶ ಕೊಡಿ' ಎಂದು ಕಣ್ಣೀರು ಹಾಕಿದರು. 11 ವರ್ಷಗಳ ರಾಜಕೀಯ ಬದುಕಿನಲ್ಲಿ ಸುಧಾಕರ್ ಸಾರ್ವಜನಿಕವಾಗಿ ಕಣ್ಣೀರು ಹಾಕಿದ್ದು ಇದೇ ಮೊದಲು.

'ನಾನು ಎಂದಿಗೂ ಜಾತಿ ರಾಜಕೀಯ ಮಾಡಿಲ್ಲ. ಆದರೆ ಈಗ ಜಾತಿಯನ್ನು ಬಂಡವಾಳ ಮಾಡುತ್ತಿದ್ದಾರೆ. ಕೆಂಪೇಗೌಡರು ಹಾಕಿಕೊಟ್ಟ ಹಾದಿಯಲ್ಲಿ ನಡೆ-ಯುತ್ತಿದ್ದೇನೆ. ಎಲ್ಲರನ್ನೂ ಸಮಾನವಾಗಿ ನೋಡುತ್ತಿದ್ದೇನೆ. ಎಲ್ಲರನ್ನೂ ಜೊತೆಗೆ ಕರೆದುಕೊಂಡು ಹೋಗುವವನೇ ಒಕ್ಕಲಿಗ' ಎಂದರು.

'ಲಾಭವಿಲ್ಲದ ಕಂಪನಿಗಳಿಂದಲೂ ಬಿಜೆಪಿ ಚಂದಾ ವಸೂಲಿ'



ಜೈರಾಮ್ ರಮೇಶ್

ನವದೆಹಲಿ (ಪಿಟಿಐ): ನಷ್ಟ ಅನುಭವಿಸಿರುವ ಅಥವಾ ಶೂನ್ಯ ಲಾಭವಿದ್ದ ಸುಮಾರು 33 ಕಂಪನಿಗಳೂ ಬಿಜೆಪಿಗೆ ಚುನಾವಣಾ ಬಾಂಡ್‌ಗಳ ಮೂಲಕ ₹ 430 ಕೋಟಿಗೂ ಹೆಚ್ಚು ಮೊತ್ತವನ್ನು ಬಾಂಡ್‌ಗಳ ರೂಪದಲ್ಲಿ ದೇಣಿಗೆ ನೀಡಿವೆ ಎಂದು ಕಾಂಗ್ರೆಸ್ ಪಕ್ಷ ಆರೋಪಿಸಿದೆ.

ಭಾರತೀಯ ರಿಸರ್ವ್ ಬ್ಯಾಂಕ್ ನೀಡಿದ್ದ ಸ್ಪಷ್ಟ ಸೂಚನೆಯ ನಂತರವೂ ಚುನಾವಣಾ ಬಾಂಡ್ ಯೋಜನೆ ಜಾರಿಗೊಳಿಸಿದ್ದ ಬಿಜೆಪಿಯ ಚಾಣಾಕ್ಷ ನಡೆಯ ಹಿಂದೆ, ಬಲವಂತವಾಗಿಯಾ-ದರೂ ದೇಣಿಗೆ ಸಂಗ್ರಹಿಸುವ ಆ ಪಕ್ಷದ ಮನಃಸ್ಥಿತಿಯನ್ನು ಕಾಣಬಹುದಾಗಿದೆ ಎಂದು ವ್ಯಾಖ್ಯಾನಿಸಿದೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, 'ಎಕ್ಸ್'ನಲ್ಲಿ ಈ ಆರೋಪ ಮಾಡಿದ್ದಾರೆ. ಪೂರಕವಾಗಿ 'ನಷ್ಟದಲ್ಲಿದ್ದ 33 ಕಂಪನಿಗಳು ₹ 582 ಕೋಟಿ ದೇಣಿಗೆ ನೀಡಿದ್ದವು. ಇದರಲ್ಲಿ ಶೇ 75ರಷ್ಟು ಬಿಜೆಪಿಗೆ ಸಂದಿದೆ' ಎಂಬ ಮಾಧ್ಯಮ ವರದಿಯನ್ನು ಹಂಚಿಕೊಂಡಿದ್ದಾರೆ.

ಚುನಾವಣಾ ಬಾಂಡ್ ಹಗರಣದ ಇನ್ನಷ್ಟು ಮುಖಗಳು ದಿನಕಳೆದಂತೆ ಬಯಲಾಗುತ್ತಿವೆ. ಉಲ್ಲೇಖಿತ 33 ಕಂಪನಿಗಳ ಒಟ್ಟು ನಿವ್ವಳ ನಷ್ಟ ₹ 1 ಲಕ್ಷ ಕೋಟಿ. ಇವುಗಳಲ್ಲಿ 16 ಕಂಪನಿಗಳು ಶೂನ್ಯ ಲಾಭ ಮಾಡಿದ್ದವು ಎಂದು ವರದಿಯನ್ನು ಉಲ್ಲೇಖಿಸಿ ಅವರು ಹೇಳಿದ್ದಾರೆ.

ಚುನಾವಣಾ ಬಾಂಡ್ ಯೋಜನೆ ಜಾರಿಯಾದಾಗಲೇ ಆರ್‌ಬಿಐ, ಈ ಯೋಜನೆಯು ಮುಂದೆ ಅಕ್ರಮ ರೀತಿಯಲ್ಲಿ ಹಣ ವರ್ಗಾವಣೆಗೆ ದಾರಿ ಮಾಡಿಕೊಡಬಹುದು ಎಂದು ಆತಂಕ ವ್ಯಕ್ತಪಡಿಸಿತ್ತು. ಆದರೆ, ಚಂದಾ ವಸೂಲಿ ಮಾಡುವ ಬಿಜೆಪಿಯ ಇರಾದೆಯು ಈ ಯೋಜನೆಯನ್ನು ಜಾರಿಗೊಳಿಸಲು ಪ್ರೇರಕವಾಗಿತ್ತು. ಅಂದು ಆರ್‌ಬಿಐ ಸೂಚನೆಯನ್ನು ಕಡೆಗಣಿಸಿದ್ದಕ್ಕೆ, ಇಂದು ದೇಶವು ಬೆಲೆ ತೆರುತ್ತಿದೆ ಎಂದು ಜೈರಾಮ್ ರಮೇಶ್ ತಿಳಿಸಿದ್ದಾರೆ.

'ಎಕ್ಸ್'ನಲ್ಲಿ ಮಾಹಿತಿ ಹಂಚಿಕೊಂಡ ಸಂಸದೆ

ಸುಮಲತಾ ಬಿಜೆಪಿ ಸೇರ್ಪಡೆ ಇಂದು

ಪ್ರಜಾವಾಣಿ ವಾರ್ತೆ

ಸುಮಲತಾ

ಬೆಂಗಳೂರು: ಮಂಡ್ಯ ಸಂಸದೆ ಸುಮಲತಾ ಅಂಬರೀಷ್ ಅವರು ಶುಕ್ರವಾರ ಬಿಜೆಪಿಗೆ ಅಧಿಕೃತವಾಗಿ ಸೇರಲಿದ್ದಾರೆ.

ಈ ಕುರಿತು 'ಎಕ್ಸ್'ನಲ್ಲಿ ಸುಮಲತಾ ಅವರು ಮಾಹಿತಿ ಹಂಚಿಕೊಂಡಿದ್ದಾರೆ. ಬುಧವಾರ ಮಂಡ್ಯದಲ್ಲಿ ಬೆಂಬಲಿಗರ ಸಭೆ ನಡೆಸಿ ಬಿಜೆಪಿ ಸೇರುವ ತೀರ್ಮಾನವನ್ನು ಅವರು ಪ್ರಕಟಿಸಿದ್ದರು.

'ಮಂಡ್ಯದ ಅಭಿವೃದ್ಧಿಯೇ ನನ್ನ ಮೂಲಮಂತ್ರವಾಗಿಸಿಕೊಂಡಿದ್ದೇನೆ. ನಮ್ಮೆಲ್ಲರ ನೆಚ್ಚಿನ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಮತ್ತೊಮ್ಮೆ ಪ್ರಧಾನಿ ಆಗಲಿ ಎನ್ನುವ ಆಶಯದೊಂದಿಗೆ ಭಾರತೀಯ ಜನತಾ ಪಕ್ಷವನ್ನು ಬೆಂಬಲಿಸುವುದಾಗಿ ಘೋಷಿಸಿದ್ದೆ. ಅದರಂತೆ ಬಿಜೆಪಿ ನಾಯಕರ ಸಮ್ಮುಖದಲ್ಲಿ ಶುಕ್ರವಾರ ಬೆಳಿಗ್ಗೆ 11.30ಕ್ಕೆ ಬಿಜೆಪಿ ಸೇರುತ್ತಿದ್ದೇನೆ. ನಮ್ಮ ಕರುನಾಡಿನ ಸಕ್ಕರೆಯ ನಾಡು ಮಂಡ್ಯದ ನನ್ನ ಸ್ವಾಭಿಮಾನಿ ಬಂಧುಗಳ, ಡಾ.ಅಂಬರೀಶ್ ಅವರ ಅಭಿಮಾನಿಗಳ ಹಾಗೂ ಹಿತೈಷಿಗಳ ಹಾರೈಕೆ ಮತ್ತು ಆಶೀರ್ವಾದ ಎಂದಿನಂತೆ ಇರಲಿ' ಎಂದು ಸುಮಲತಾ ಮನವಿ ಮಾಡಿದ್ದಾರೆ.

ಕಳೆದ ಲೋಕಸಭಾ ಚುನಾವಣೆಯಲ್ಲಿ ಮಂಡ್ಯ ಲೋಕಸಭಾ ಕ್ಷೇತ್ರದಿಂದ ಪಕ್ಷೇತರರಾಗಿ ಸ್ಪರ್ಧಿಸಿ ಗೆಲುವು ಸಾಧಿಸಿದ್ದರು. ಆ ಬಳಿಕ ಅವರು ಬಿಜೆಪಿಯನ್ನು ಬೆಂಬಲಿಸಿದ್ದರು. ಈ ಬಾರಿ ಅವರು ಬಿಜೆಪಿ ಟಿಕೆಟ್‌ನಿಂದ ಮಂಡ್ಯದಿಂದ ಸ್ಪರ್ಧಿಸಲು ಬಯಸಿದ್ದರು. ಆದರೆ ಜೆಡಿಎಸ್ ಎನ್‌ಡಿಎ ಮೈತ್ರಿ ಕೂಟ ಸೇರಿದ್ದರಿಂದ ಬಿಜೆಪಿಯು ಆ ಕ್ಷೇತ್ರವನ್ನು ಜೆಡಿಎಸ್‌ಗೆ ಬಿಟ್ಟುಕೊಟ್ಟಿತು. ಈ ಮಧ್ಯೆ ಬೆಂಬಲಿಗರ ಸಭೆ ನಡೆಸಿ ತಾವು ಪಕ್ಷೇತರರಾಗಿ ಸ್ಪರ್ಧಿಸುವುದಿಲ್ಲ. ಆದರೆ, ಮಂಡ್ಯ ಜಿಲ್ಲೆ ಬಿಟ್ಟು ಬೇರೆ ಕಡೆಯಿಂದ ರಾಜಕೀಯ ಇಚ್ಛೆಯೂ ಇಲ್ಲ ಎಂದು ಹೇಳಿದ್ದರು.

ಬೂತ್ ಅಧ್ಯಕ್ಷರೊಂದಿಗೆ ಪ್ರಧಾನಿ ಮೋದಿ ಸಂವಾದ

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಶುಕ್ರವಾರ ಸಂಜೆ 4.30ಕ್ಕೆ ಕರ್ನಾಟಕದ ಬಿಜೆಪಿಯ ಎಲ್ಲ ಬೂತ್ ಅಧ್ಯಕ್ಷರ ಜತೆ ಸಂವಾದ ನಡೆಸಲಿದ್ದಾರೆ.

ಪ್ರತಿ ದಿನವೂ ಬೇರೆ ಬೇರೆ ರಾಜ್ಯಗಳ ಬೂತ್ ಅಧ್ಯಕ್ಷರು ಮತ್ತು ಕಾರ್ಯಕರ್ತರ ಸಂಜೆ ಸಂವಾದ ನಡೆಸಿ, ಅವರನ್ನು ಚುನಾವಣೆಗೆ ಅಣಿಗೊಳಿಸುವ ಕಾರ್ಯದಲ್ಲಿ ಮೋದಿ ತೊಡಗಿದ್ದಾರೆ. 'ಮೇರಾ ಬೂತ್ ಸಬ್ ಸೆ ಮಜಬೂತ್' ಹೆಸರಿನಲ್ಲಿ ಸಂವಾದವನ್ನು 'ನಮೋ ಆ್ಯಪ್' ಮೂಲಕ ನಡೆಸುತ್ತಿದ್ದಾರೆ.

ಬಿಎಸ್‌ಪಿ: ಕೊನೆ ಗಳಿಗೆಯಲ್ಲಿ ಅಭ್ಯರ್ಥಿ ಬದಲು

ಎಂ. ಕೃಷ್ಣಮೂರ್ತಿ

ಚಾಮರಾಜನಗರ: ಚಾಮರಾಜನಗರ ಮೀಸಲು ಲೋಕಸಭಾ ಕ್ಷೇತ್ರದ ಬಿಎಸ್‌ಪಿ ಅಭ್ಯರ್ಥಿ ಕೊನೆ ಕ್ಷಣದಲ್ಲಿ ಬದಲಾಗಿದ್ದಾರೆ.

ನಾಮಪತ್ರ ಸಲ್ಲಿಕೆಗೆ ಕೊನೆಯ ದಿನವಾಗಿದ್ದ ಗುರುವಾರ, ಪಕ್ಷದ ರಾಜ್ಯ ಸಂಯೋಜಕ ಎಂ.ಕೃಷ್ಣಮೂರ್ತಿ ಅವರು ಅಭ್ಯರ್ಥಿಯಾಗಿ ಉಮೇದುವಾರಿಕೆ ಸಲ್ಲಿಸಿದರು.

ನಿವೃತ್ತ ತಹಶೀಲ್ದಾರ್ ಸಿ. ಮಹದೇವಯ್ಯ ಅವರನ್ನು ಅಭ್ಯರ್ಥಿ ಎಂದು ಪಕ್ಷ ಘೋಷಿಸಿತ್ತು. ಅವರು ಕೂಡ ಕ್ಷೇತ್ರದಾದ್ಯಂತ ಪ್ರವಾಸ ಮಾಡಿ ಪ್ರಚಾರವನ್ನೂ ನಡೆಸಿದ್ದರು. 'ಆದರೆ, ಮಹದೇವಯ್ಯ ವಿರುದ್ಧ ದಾಖಲಾಗಿರುವ ಪ್ರಕರಣವೊಂದು ನ್ಯಾಯಾಲಯದಲ್ಲಿ ಇತ್ಯರ್ಥವಾಗದೇ ಇರುವುದರಿಂದ, ಕೊನೆ ಕ್ಷಣದಲ್ಲಿ ಅವರ ಬದಲಿಗೆ ಬೇರೆ ಅಭ್ಯರ್ಥಿಯನ್ನು ಕಣಕ್ಕಿಳಿಸಲು ಪಕ್ಷ ತೀರ್ಮಾನಿಸಿದೆ' ಎಂದು ಮುಖಂಡರು ತಿಳಿಸಿದ್ದಾರೆ.

ರೆಡ್ಡಿ ವಿರುದ್ಧ ಮಾತನಾಡದಂತೆ ಎಚ್ಚರಿಕೆ

ಬಳ್ಳಾರಿ: 'ಪ್ರಕರಣಗಳಿಗೆ ಹೆದರಿ ಕಾಂಗ್ರೆಸ್ ಸೇರಿದ್ದು ಮತ್ತು ಕೂಡ್ಲಿಗಿಯಿಂದ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಬಿಜೆಪಿಗೆ ದ್ರೋಹ ಮಾಡಿದ್ದು ಸಚಿವ ಬಿ. ನಾಗೇಂದ್ರ. ಜನಾರ್ದನ ರೆಡ್ಡಿ ಅವರ ಬಗ್ಗೆ ಮಾತನಾಡುವಾಗ ಅವರು ನಾಲಿಗೆ ಬಿಗಿ ಹಿಡಿದರೆ ಒಳ್ಳೆಯದು' ಎಂದು ಜನಾರ್ದನ ರೆಡ್ಡಿ ಪತ್ನಿ ಅರುಣಾ ಲಕ್ಷ್ಮೀ ಎಚ್ಚರಿಕೆ ನೀಡಿದರು.

ಕಲ್ಯಾಣ ರಾಜ್ಯ ಪ್ರಗತಿ ಪಕ್ಷವನ್ನು ಬಿಜೆಪಿಯಲ್ಲಿ ವಿಲೀನಗೊಳಿಸಿದ ಬಳಿಕ ಇಲ್ಲಿ ಬಿಜೆಪಿಯ ಬಹಿರಂಗ ಸಭೆಯಲ್ಲಿ ಮಾತನಾಡಿದ ಅವರು,' ಸಚಿವ ಬಿ. ನಾಗೇಂದ್ರ ಅವರ ಅಣ್ಣನನ್ನು ಅಭ್ಯರ್ಥಿ ಮಾಡುವ ಬಗ್ಗೆ ಆರಂಭದಲ್ಲಿ ಚರ್ಚೆಗಳಾದವು. ಆದರೆ, ಜನಾರ್ದನ ರೆಡ್ಡಿ ಬಿಜೆಪಿಗೆ ಸೇರುತ್ತಲೇ ಸೋಲಿನ ಭಯದಿಂದ ತುಕಾರಾಮ್ ಅವರನ್ನು ಅಭ್ಯರ್ಥಿಯಾಗಿ ಮಾಡಲಾಯಿತು. ಗೆದ್ದರೆ ಸಂಸದ, ಸೋತರೆ ಸಚಿವ ಎಂಬ ಆಮಿಷವೊಡ್ಡಿ ತುಕಾರಾಮ್ ಅವರನ್ನು ಅಭ್ಯರ್ಥಿ ಮಾಡಲಾಗಿದೆ' ಎಂದರು. 'ನೂರು ಜನಾರ್ದನ ರೆಡ್ಡಿಗಳು ಬಿಜೆಪಿ ಸೇರಿದರೂ ಕಾಂಗ್ರೆಸ್‌ಗೆ ಏನೂ ಮಾಡಲಾಗದು ಎಂದು ನಾಗೇಂದ್ರ ಹೇಳಿದ್ದಾರೆ. ಆದರೆ, ರೆಡ್ಡಿ ಅವರ ಒಬ್ಬ ಅಭಿಮಾನಿ ನೂರು ಕಾಂಗ್ರೆಸ್ಸಿಗರನ್ನು ಅಲುಗಾಡಿಸಬಲ್ಲ' ಎಂದರು.

'ಬಾಯಲ್ಲಿ ಮಾತ್ರ ಜೈಶ್ರೀರಾಮ್'

ಮಂಗಳೂರು: 'ಚುನಾವಣಾ ಬಾಂಡ್ ಮೂಲಕ ಕಾನೂನುಬದ್ಧವಾಗಿ ಲೂಟಿ ಮಾಡಿದ, ಧರ್ಮವನ್ನು ಬಳಸಿ ಅಧರ್ಮ ನಡೆಸಿದ ಪಕ್ಷ ಬಿಜೆಪಿ. ಬಿಜೆಪಿಯವರು ಬಾಯಲ್ಲಿ ಜೈ ಶ್ರೀರಾಮ್ ಎಂದು ಹೇಳಿ, ಮಾಡಬಾರದ ಕೆಲಸ ಮಾಡುತ್ತಾರೆ' ಎಂದು ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಆರೋಪಿಸಿದರು. ಇಲ್ಲಿ ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, 'ಶೂನ್ಯ ಲಾಭ ಹೊಂದಿದ ಅಥವಾ ನಷ್ಟ-ದಲ್ಲಿದ್ದ 33 ಕಂಪನಿಗಳು ಚುನಾವಣಾ ಬಾಂಡ್ ರೂಪದಲ್ಲಿ ಬಿಜೆಪಿಗೆ ₹ 434.2 ಕೋಟಿ ದೇಣಿಗೆ ನೀಡಿವೆ. ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯನ್ನು ರಾಜಕಾರಣಿಗಳು, ಉದ್ದಿಮೆದಾರರ ಮೇಲೆ ರಾಜಕೀಯವಾಗಿ ದುರ್ಬಳಕೆ ಮಾಡುವ ಜಾರಿ ನಿರ್ದೇಶನಾಲಯವು ಬಿಜೆಪಿ ವಿರುದ್ಧವೂ ಕ್ರಮ ಕೈಗೊಳ್ಳಬೇಕ-ಲ್ಲವೇ' ಎಂದು ಪ್ರಶ್ನಿಸಿದರು.

'ಮೋದಿ ಅಫೀಮಿನ ನಶೆಯಲ್ಲಿ ಮಲಗಿದ್ದರು'

ಜೈಪುರ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಸುಳ್ಳುಗಳ ಸರದಾರ. ಚೀನಾವು ಭಾರತದ ಗಡಿಯೊಳಗೆ ಬರುವ ವೇಳೆ ಮೋದಿ ಅವರು ಅಫೀಮಿನ ನಶೆಯಲ್ಲಿದ್ದಂತೆ ಮಲಗಿದ್ದರು ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆರೋಪಿಸಿದರು.

ರಾಜಸ್ತಾನದ ಛಿತ್ತೋರ್‌ಗಢದ-ಲ್ಲಿ ನಡೆದ ಚುನಾವಣಾ ರ್‍ಯಾಲಿಯಲ್ಲಿ ಮಾತನಾಡಿದ ಖರ್ಗೆ ಅವರು, 'ಮೋದಿ ಅವರು ದೇಶದ ಬಗ್ಗೆ ಯೋಚನೆ ಮಾಡುವ ಬದಲು ದೇಶಕ್ಕಾಗಿ ತಮ್ಮ ಜೀವನವನ್ನು ತ್ಯಾಗ ಮಾಡಿದ ಗಾಂಧಿ ಪರಿವಾರವನ್ನು ಟೀಕಿಸುವುದರಲ್ಲೇ ನಿರತರಾಗಿದ್ದಾರೆ' ಎಂದರು.

'ನನಗೆ 56 ಇಂಚಿನ ಎದೆ ಇದೆ. ನಾನು ಯಾರಿಗೂ ಹೆದರುವುದಿಲ್ಲ ಎಂದು ಹೇಳುವ ಮೋದಿಯವರು, ಯಾಕೆ ಭಾರತದ ದೊಡ್ಡ ಭಾಗವನ್ನು ಚೀನಾಕ್ಕೆ ಬಿಟ್ಟುಕೊಟ್ಟರು. ಚೀನಿಯರು ಭಾರತದೊಳಗೆ ಬರುವಾಗ ನೀವು ಯಾಕೆ ಮಲಗಿದ್ದಿರಿ; ನಿದ್ದೆ ಗುಳಿಗೆ ತೆಗೆದುಕೊಂಡಿದ್ದಿರಾ. ಅವರು ರಾಜಸ್ತಾನದ ಹೊಲಗಳಿಂದ ಅಫೀಮು ತೆಗೆದುಕೊಂಡು ಹೋಗಿ ನಿಮಗೆ ತಿನ್ನಿಸಿದ್ದಾರಾ' ಎಂದು ಪ್ರಶ್ನಿಸಿದ್ದಾರೆ.

'ಮೋದಿಯವರು ಜನರಿಗೆ ಹಿಂಸೆ ನೀಡಿ ತಮ್ಮೊಂದಿಗೆ ಕರೆದೊಯ್ಯುತ್ತಿದ್ದಾರೆ. 1989ರ ಬಳಿಕ ಗಾಂಧಿ ಪರಿವಾರದಿಂದ ಯಾರೊಬ್ಬರೂ ಪ್ರಧಾನಿ ಅಥವಾ ಸಚಿವರಾಗಿಲ್ಲ. ಆದರೂ ಮೋದಿ ಕುಟುಂಬ ರಾಜಕಾರಣದ ಆರೋಪ ಮಾಡುತ್ತಾರೆ' ಎಂದರು.

ಸುರ್ಜೇವಾಲಾ ವಿರುದ್ಧ ದೂರು

ನವದೆಹಲಿ (ಪಿಟಿಐ): ನಟಿ ಹಾಗೂ ಮಥುರಾ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಹೇಮಾಮಾಲಿನಿ ಕುರಿತು ಕಾಂಗ್ರೆಸ್ ಮುಖಂಡ ರಣದೀಪ್ ಸುರ್ಜೇವಾಲಾ ಅವರು ನಿಂದನಾತ್ಮಕವಾಗಿ ಮಾತನಾಡಿದ್ದಾರೆ ಎಂದು ರಾಷ್ಟ್ರೀಯ ಮಹಿಳಾ ಆಯೋಗವು (ಎನ್‌ಸಿಡಬ್ಲ್ಯು) ಚುನಾವಣಾ ಆಯೋಗಕ್ಕೆ ದೂರು ಸಲ್ಲಿಸಿದೆ.

ಬಿಜೆಪಿಯ ಐ.ಟಿ. ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯ ಅವರು ವಿಡಿಯೊ ಒಂದನ್ನು ಎಕ್ಸ್ ಮೂಲಕ ಹಂಚಿಕೊಂಡಿದ್ದಾರೆ. ಆ ವಿಡಿಯೊ ಯಾವತ್ತಿನದ್ದು ಎಂಬುದರ ವಿವರ ಇಲ್ಲ. ಸುರ್ಜೇವಾಲಾ ಅವರು ಹೇಮಾಮಾಲಿನಿ ವಿರುದ್ಧ ನಿಂದನಾತ್ಮಕವಾಗಿ ಮಾತನಾಡಿರುವುದು ಅದರಲ್ಲಿದೆ ಎನ್ನಲಾಗಿದೆ.

ಈಶ್ವರಪ್ಪ ಮಾತಿಗೆ ಸಿಟ್ಟಾದ ಅಮಿತ್ ಶಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಬಿಜೆಪಿ ನಾಯಕ ಕೆ.ಎಸ್. ಈಶ್ವರಪ್ಪ ಅವರನ್ನು ದೆಹಲಿಗೆ ಕರೆಯಿಸಿಕೊಂಡರೂ ಭೇಟಿಗೆ ಅವಕಾಶವನ್ನೇ ಕೊಡದೇ ವಾಪಸ್ ಕಳುಹಿಸಿರುವುದಕ್ಕೆ ಏನು ಕಾರಣ ಎಂಬ ಚರ್ಚೆ ಬಿಜೆಪಿಯಲ್ಲಿ ಗಹನವಾಗಿ ನಡೆದಿದೆ.

ಬೆಂಗಳೂರಿಗೆ ಬಂದಿದ್ದ ಅಮಿತ್ ಶಾ ಅವರು, ಈಶ್ವರಪ್ಪ ಅವರಿಗೆ ಕರೆ ಮಾಡಿ ಬುಧವಾರ ದೆಹಲಿಗೆ ಬರುವಂತೆ ತಿಳಿಸಿದ್ದರು. ಅದರಂತೆ, ರಾತ್ರಿ 8ರ ಸುಮಾರಿಗೆ ಈಶ್ವರಪ್ಪ ದೆಹಲಿ ತಲುಪಿದ್ದರು. ಅಮಿತ್ ಶಾ ಮನೆಗೆ ಕರೆ ಮಾಡಿದಾಗ, 'ಭೇಟಿಯ ಅಗತ್ಯವಿಲ್ಲ' ಎಂದು ಸಂದೇಶ ಬಂದಿದ್ದರಿಂದ, ಈಶ್ವರಪ್ಪ ವಾಪಸ್ ಆದರು.

ಶಾ ಅವರ ಬೇಸರ ಮತ್ತು ಕೋಪಕ್ಕೆ ಮುಖ್ಯ ಕಾರಣ, ತಾವು ದೆಹಲಿಗೆ ಬಂದು ಭೇಟಿ ಮಾಡಲು ತಿಳಿಸಿದ ವಿಚಾರವನ್ನು ಮರುಕ್ಷಣವೇ ಪತ್ರಿಕಾಗೋಷ್ಠಿ ನಡೆಸಿ ಬಹಿರಂಗ ಮಾಡಿದ್ದು ಅಲ್ಲದೇ, ಯಾವುದೇ ಕಾರಣಕ್ಕೂ ಕಣದಿಂದ ಹಿಂದಕ್ಕೆ ಸರಿಯುವುದಿಲ್ಲ ಎಂಬ ಹೇಳಿಕೆ ನೀಡಿದ್ದರು ಎಂದು ಬಿಜೆಪಿ ಮೂಲಗಳು ತಿಳಿಸಿವೆ.

'ಯಡಿಯೂರಪ್ಪ ಕುಟುಂಬದ ವಿರುದ್ಧ ಹೋರಾಟ ಮಾಡುತ್ತಿದ್ದು, ಇದಕ್ಕೆ ಮೋದಿ ಮತ್ತು ಶಾ ಅವರ ಬೆಂಬಲ ಸಿಗಲಿದೆ. ಬಿ.ವೈ.ವಿಜಯೇಂದ್ರ ಅವರನ್ನು ಅಧ್ಯಕ್ಷ ಸ್ಥಾನದಿಂದ ಇಳಿಸಬೇಕು ಎಂದೂ ಈಶ್ವರಪ್ಪ ಹೇಳಿದ್ದರು. ಈಶ್ವರಪ್ಪ ಅವರನ್ನು ದೆಹಲಿಗೆ ಕರೆಸಿ ಮಾತನಾಡಿ ಸಮಸ್ಯೆ ಇತ್ಯರ್ಥ ಮಾಡಲು ಅಮಿತ್ ಶಾ ಬಯಸಿದ್ದರು. ಆದರೆ, ತಾವು ವಿಶ್ವಾಸದಿಂದ ನೀಡಿದ ಆಹ್ವಾನವನ್ನು ಅತ್ಯಂತ ಲಘುವಾಗಿ ಪರಿಗಣಿಸಿ ಹೇಳಿಕೆ ನೀಡಿದ್ದಾರೆ. ಇನ್ನೆಂದಿಗೂ ಅವರನ್ನು ಭೇಟಿ ಮಾಡುವುದಿಲ್ಲ' ಎಂದು ಹೇಳಿದ್ದಾಗಿ ಮೂಲಗಳು ತಿಳಿಸಿವೆ. ದೆಹಲಿಯಿಂದ ವಾಪಸಾದ ಈಶ್ವರಪ್ಪ ಅವರು,'ಅಮಿತ್ ಶಾ ಅವರು ಸಿಗುವುದಿಲ್ಲ ಎಂದು ಹೇಳಿದ್ದಾರೆ. ಚುನಾವಣೆಯಲ್ಲಿ ನಿಂತು ಯಡಿಯೂರಪ್ಪ ಅವರ ಮಗನನ್ನು ಸೋಲಿಸಲಿ ಎಂಬುದು ಶಾ ಅವರ ಅಪೇಕ್ಷೆ ಇರಬೇಕು' ಎಂದಿದ್ದರು.

'ಭೇಟಿಗೆ ನಕಾರ, ನನ್ನ ಸ್ಪರ್ಧೆಗೆ ಶಾ ಹಸಿರು ನಿಶಾನೆ'

ಶಿವಮೊಗ್ಗ: 'ದೆಹಲಿಯಲ್ಲಿ ನನ್ನನ್ನು ಭೇಟಿಯಾಗಲು ನಿರಾಕರಿಸುವ ಮೂಲಕ ಕೇಂದ್ರ ಗೃಹಸಚಿವ ಅಮಿತ್ ಶಾ, ಶಿವಮೊಗ್ಗ ಲೋಕಸಭಾ ಕ್ಷೇತ್ರದಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಲು ನನಗೆ ಹಸಿರು ನಿಶಾನೆ ತೋರಿದ್ದಾರೆ' ಎಂದು ಮಾಜಿ ಉಪಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ಹೇಳಿದರು.

ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಅಮಿತ್ ಶಾ ಭೇಟಿಗೆ ಈಶ್ವರಪ್ಪನಿಗೆ ಅವಕಾಶವನ್ನೇ ಕೊಡಲಿಲ್ಲ ಎಂದು ವಿರೋಧಿಗಳು ಕುಹಕವಾಡುತ್ತಿದ್ದಾರೆ. ವಾಸ್ತವವಾಗಿ ಅವರು ನನ್ನ ಭೇಟಿಯಾಗದೇ ಇಲ್ಲಿ ಸ್ಪರ್ಧೆ ಮಾಡುವುದಕ್ಕೆ ಅಸ್ತು ಎಂಬ ಸಂದೇಶ ನೀಡಿದ್ದಾರೆ' ಎಂದರು.

'ದೆಹಲಿಗೆ ಕರೆದಿದ್ದರಿಂದ ಅಮಿತ್ ಶಾ ಅವರಿಗೆ ಗೌರವ ಕೊಟ್ಟು ಹೋಗಿದ್ದೆ. ಬುಧವಾರ ರಾತ್ರಿ ಅವರ ಭೇಟಿಗೆ ಸಮಯ ನಿಗದಿಗೊಳಿಸಲಾಗಿತ್ತು. ಕೊನೆಯ ಗಳಿಗೆಯಲ್ಲಿ ಈಶ್ವರಪ್ಪ ಭೇಟಿಯ ಅವಶ್ಯಕತೆ ಇಲ್ಲ ಎಂದು ಅಮಿತ್ ಶಾ ಹೇಳಿದ್ದಾರೆ ಎಂದು ಅವರ ಕಚೇರಿಯ ಸಿಬ್ಬಂದಿ ತಿಳಿಸಿದರು. ಅದರ ಅರ್ಥ ನೀನು ಶಿವಮೊಗ್ಗಕ್ಕೆ ವಾಪಸ್ ಹೋಗು, ಅಲ್ಲಿ ಚುನಾವಣೆಗೆ ಸ್ಪರ್ಧಿಸಿ ಗೆದ್ದು ಬಾ ಎಂಬುದೇ ಆಗಿತ್ತು' ಎಂದು ತಿಳಿಸಿದರು.

'ಮೋದಿ ಫೋಟೊ ರಾಘವೇಂದ್ರ ಮನೆ ಆಸ್ತಿ ಅಲ್ಲ': 'ಪ್ರಧಾನಿ ನರೇಂದ್ರ ಮೋದಿ ಅವರನ್ನು ನಾನು ಹೃದಯದಲ್ಲಿ ಇಟ್ಟುಕೊಂಡಿದ್ದೇನೆ. ಅವರ ಫೋಟೊ ಬಳಸಬಾರದು ಎಂದು ಸಂಸದ ಬಿ.ವೈ. ರಾಘವೇಂದ್ರ ಹೇಳಿದ್ದಾರೆ. ಹಾಗೆ ಹೇಳಲು ಮೋದಿ ಅವರ ಮನೆ ಆಸ್ತಿ ಅಲ್ಲ. ಅವರೊಬ್ಬ ವಿಶ್ವ ನಾಯಕ. ನನ್ನನ್ನು ಕಡಿದರೂ ಅವರನ್ನು ಬಿಟ್ಟು ಇರೊಲ್ಲ' ಎಂದು ಈಶ್ವರಪ್ಪ ಹೇಳಿದರು.

'ಬಿ.ವೈ.ವಿಜಯೇಂದ್ರ ಅವರು ಈಶ್ವರಪ್ಪ ಅವರ ಮನವೊಲಿಸಲಾಗುವುದು ಎಂದು ಗುರುವಾರ ಹೇಳಿದ್ದಾರೆ. ಅದು ನನ್ನ ಬೆಂಬಲಿಗರ ದಾರಿತಪ್ಪಿಸುವ ಕೆಲಸ. ವಿಜಯೇಂದ್ರಗೆ ಸಹೋದರನ ಸೋಲಿನ ಭೀತಿ ಉಂಟಾಗಿದೆ. ಹೀಗಾಗಿ ಈ ರೀತಿ ಹೇಳಿಕೆ ಕೊಟ್ಟಿದ್ದಾರೆ. ಅವರಿಗೆ ಷಡ್ಯಂತ್ರ ಮಾಡಿಯೇ ಅಭ್ಯಾಸ. ಈಶ್ವರಪ್ಪನನ್ನು ಅವರು ಸಮಾಧಾನಗೊಳಿಸಲು ಆಗದು' ಎಂದರು.

'ಬಿಜೆಪಿ ವರಿಷ್ಠರು ಮಾತುಕತೆಗೆಂದು ಮತ್ತೊಮ್ಮೆ ದೆಹಲಿಗೆ ಕರೆದರೆ ಹೋಗುವೆ. ಆದರೆ, ಶಿವಮೊಗ್ಗದಲ್ಲಿ ಚುನಾವಣೆಗೆ ಸ್ಪರ್ಧೆ ಮಾಡುವುದು ಮಾತ್ರ ನಿಶ್ಚಿತ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಈಶ್ವರಪ್ಪ ಮೇಲೆ ವಿಶ್ವಾಸವಿದೆ: ವಿಜಯೇಂದ್ರ

ಚಿತ್ರದುರ್ಗ: 'ಕೇಂದ್ರದ ವರಿಷ್ಠರು ಕೆ.ಎಸ್. ಈಶ್ವರಪ್ಪ ಅವರಿಗೆ ಪರಿಸ್ಥಿತಿಯ ಮನವರಿಕೆ ಮಾಡಿಕೊಡಲಿದ್ದಾರೆ. ಈ ವಿಚಾರದಲ್ಲಿ ಅವರ ಮೇಲೆ ಇನ್ನೂ ವಿಶ್ವಾಸವಿದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಗುರುವಾರ ಹೇಳಿದರು.

ನಗರದಲ್ಲಿ ಮೈತ್ರಿ ಅಭ್ಯರ್ಥಿ ಗೋವಿಂದ ಕಾರಜೋಳ ಅವರು ನಾಮಪತ್ರ ಸಲ್ಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಈಶ್ವರಪ್ಪ ಅವರ ಅಪೇಕ್ಷೆಯನ್ನು ಕೇಂದ್ರದ ವರಿಷ್ಠರ ಮುಂದೆ ಹೇಳಲಿ. ಅವರು ಈ ಕುರಿತು ತೀರ್ಮಾನ ಕೈಗೊಳ್ಳುತ್ತಾರೆ' ಎಂದರು.

ಶುಕ್ರವಾರ, ಏಪ್ರಿಲ್ 5, 2024 | ₹ 7.00

www.prajavani.net

prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ವಾದನ

ಗುವಾಹಟಿಯಲ್ಲಿ ಗುರುವಾರ ನಡೆದ 'ಬೊರ್ ಅಸೊಂ' ಬಿಹು ವಸ್ತು ಪ್ರದರ್ಶನದಲ್ಲಿ ಅಸ್ಸಾಂ ನಟಿ ಗಾಯತ್ರಿ ಮಹಾಂತ ಅವರು ಸಂಗೀತ ವಾದ್ಯವನ್ನು ನುಡಿಸಿದರು

ಸಮಾಜ ಕಲ್ಯಾಣ ಇಲಾಖೆ

"ದೇಶದ ಪ್ರಗತಿಯಲ್ಲಿ ನಮ್ಮ ಪ್ರಗತಿಯಿದೆ;
ಅದರ ಉದ್ಧಾರದಲ್ಲೇ ನಮ್ಮ ಉದ್ಧಾರವಿದೆ;
ಅದರ ವಿಮೋಚನೆಯಲ್ಲೇ, ನಮ್ಮ ವಿಮೋಚನೆಯಿದೆ."

- ಡಾ. ಬಾಬು ಜಗಜೀವನ ರಾಂ

117ನೇ ಜನ್ಮದಿನಾಚರಣೆ

ಹಸಿರು ಕ್ರಾಂತಿಯ ಹರಿಕಾರ, ರಾಷ್ಟ್ರನಾಯಕ ಹಾಗೂ ಭಾರತದ ಮಾಜಿ ಉಪ ಪ್ರಧಾನಮಂತ್ರಿಗಳು

ಡಾ. ಬಾಬು ಜಗಜೀವನ ರಾಂ ರವರ

ಪ್ರತಿಮೆಗೆ ಮಾಲಾರ್ಪಣೆ

ಏಪ್ರಿಲ್ 05, 2024 ಶುಕ್ರವಾರ ಬೆಳಿಗ್ಗೆ 10.00 ಗಂಟೆಗೆ
ವಿಧಾನಸೌಧದ ಪಶ್ಚಿಮ ದ್ವಾರ, ಬೆಂಗಳೂರು

``ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು"
-ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಆಯುಕ್ತರು
ಸಮಾಜ ಕಲ್ಯಾಣ ಇಲಾಖೆ

@SWDGok

ನಗರದ ಸರ್ಕಾರಿ ಆರೋಗ್ಯ ಸಂಸ್ಥೆಗಳಲ್ಲಿ ಹೆಚ್ಚಿದ ರೋಗಿಗಳ ದಟ್ಟಣೆ • ತುರ್ತು ಸಂದರ್ಭದಲ್ಲಿ ಖಾಸಗಿ ಆಸ್ಪತ್ರೆಗಳೇ ಗತಿ

ಸರ್ಕಾರಿ ಆಸ್ಪತ್ರೆಗಳ 'ಭಾರ' ಇಳಿಸದ ಭರವಸೆ

• ವರುಣ ಹೆಗಡೆ

ಮಿಂಟೊ ಕಣ್ಣಿನ ಆಸ್ಪತ್ರೆ

ಬೆಂಗಳೂರು: ಪ್ರತಿ ಚುನಾವಣೆಯಲ್ಲಿಯೂ 'ಆರೋಗ್ಯ'ಯುತ ಭರವಸೆಗಳನ್ನು ನೀಡುತ್ತಾ ಬಂದಿರುವ ರಾಜಕೀಯ ಪಕ್ಷಗಳು, ಅಧಿಕಾರಕ್ಕೇರಿದಾಗ ಇಲ್ಲಿನ ಸರ್ಕಾರಿ ವೈದ್ಯಕೀಯ ಸಂಸ್ಥೆಗಳ ಮೇಲಿನ ರೋಗಿಗಳ 'ಭಾರ' ಇಳಿಸುವ ಕೆಲಸ ಮಾಡಿಲ್ಲ. ಇದರಿಂದಾಗಿ ಕಾರ್ಪೊರೇಟ್ ಆಸ್ಪತ್ರೆಗಳು 'ನಾಯಿಕೊಡೆ'ಗಳಂತೆ ತಲೆಯೆತ್ತುತ್ತಿದ್ದರೆ, ಬಡ–ಮಧ್ಯಮ ವರ್ಗದವರು ಚಿಕಿತ್ಸೆಗಾಗಿ ಸರ್ಕಾರಿ ಆಸ್ಪತ್ರೆಗಳ ಆವರಣದಲ್ಲಿ ದಿನವಿಡೀ ಕಾಯುವುದು ತಪ್ಪಿಲ್ಲ.

ಮೂಲಸೌಕರ್ಯದ ಕೊರತೆ, ತಜ್ಞ ವೈದ್ಯರ ಹುದ್ದೆಗಳು ಖಾಲಿ, ಗುತ್ತಿಗೆಯಡಿ ಸಿಬ್ಬಂದಿ ನೇಮಕಾತಿ, ವೈದ್ಯಕೀಯ ಉಪಕರಣಗಳ ಅಸಮರ್ಪಕ ನಿರ್ವಹಣೆ ಸೇರಿ ವಿವಿಧ ಕಾರಣಗಳಿಂದ ನಗರದ ಕೆಲ ಸರ್ಕಾರಿ ಆಸ್ಪತ್ರೆಗಳು ಕುಗ್ಗಿವೆ. ಇನ್ನೊಂದೆಡೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಅನುದಾನದಡಿ ನಡೆಯುತ್ತಿರುವ 'ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ'ದಂತಹ ಯೋಜನೆಗಳ ಫಲಾನುಭವಿಗಳಿಗೆ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆಯೂ ಸವಾಲಾಗಿದೆ. ಇದರಿಂದಾಗಿ ತುರ್ತು ಸಂದರ್ಭದಲ್ಲಿ ಎಲ್ಲ ವರ್ಗದವರಿಗೆ ಖಾಸಗಿ ಆಸ್ಪತ್ರೆಗಳೇ ಅನಿವಾರ್ಯವಾಗುತ್ತಿವೆ. ಈ ಆಸ್ಪತ್ರೆಗಳಲ್ಲಿ ಸಿಗುವ ಚಿಕಿತ್ಸೆಯು ದೈಹಿಕ ಕಾಯಿಲೆಗಳನ್ನು ವಾಸಿಮಾಡಿದರೂ, ಚಿಕಿತ್ಸಾ ವೆಚ್ಚವು ಕುಟುಂಬವನ್ನು ಆರ್ಥಿಕ ಸಂಕಷ್ಟಕ್ಕೆ ನೂಕುತ್ತಿವೆ. ಹೀಗಾಗಿ, ಪ್ರತಿ ಚುನಾವಣೆ ಸಂದರ್ಭದಲ್ಲಿಯೂ ಸರ್ಕಾರಿ ಆಸ್ಪತ್ರೆಗಳ ಬಲವರ್ಧನೆ ಮಾಡುವುದಾಗಿ ರಾಜಕೀಯ ಪಕ್ಷಗಳು ಭರವಸೆ ನೀಡುತ್ತಿವೆ.

ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (ಬಿಎಂಸಿಆರ್‌ಐ) ಅಡಿ ವಿಕ್ಟೋರಿಯಾ, ವಾಣಿವಿಲಾಸ, ಮಿಂಟೊ, ಟ್ರಾಮಾ ಕೇರ್ ಕೇಂದ್ರ, ನೆಫ್ರೊ–ಯೂರಾಲಜಿ ಸಂಸ್ಥೆ, ಪ್ರಧಾನಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನೆ (ಪಿಎಂಎಸ್‌ಎಸ್‌ವೈ) ಆಸ್ಪತ್ರೆ ಹಾಗೂ ಇನ್‌ಸ್ಟಿಟ್ಯೂಟ್ ಆಫ್ ಗ್ಯಾಸ್ಟ್ರೊ-ಎಂಟ್ರಾಲಜಿ ಸೈನ್ಸಸ್ ಆ್ಯಂಡ್ ಆರ್ಗನ್ ಟ್ರಾನ್ಸ್‌ಪ್ಲಾಂಟ್ ಆಸ್ಪತ್ರೆಗಳು ಇಲ್ಲಿ ಕಾರ್ಯನಿರ್ವಹಿಸುತ್ತಿವೆ. ಚಿಕಿತ್ಸೆಗಾಗಿ ಪ್ರತಿನಿತ್ಯ ಮೂರು ಸಾವಿರಕ್ಕೂ ಅಧಿಕ ಹೊರರೋಗಿಗಳು ರಾಜ್ಯದ ವಿವಿಧೆಡೆಯಿಂದ ಇಲ್ಲಿಗೆ ಬರುತ್ತಾರೆ. ಬಿಸಿಲು–ಮಳೆಯನ್ನೂ ಲೆಕ್ಕಿಸದೆ ಆಸ್ಪತ್ರೆಯ ಆವರಣದಲ್ಲಿ ತಮ್ಮ ಸರದಿಗೆ ಕಾಯಬೇಕಾಗಿದೆ.

ಹೃದಯ ಚಿಕಿತ್ಸೆಗೆ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಮಾನಸಿಕ ಅನಾರೋಗ್ಯ ಸಮಸ್ಯೆಗಳಿಗೆ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ, ಕ್ಯಾನ್ಸರ್ ಕಾಯಿಲೆಗೆ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ಸೇರಿ ವಿವಿಧ ಸಮಸ್ಯೆಗಳು ಹಾಗೂ ಕಾಯಿಲೆಗಳಿಗೆ ಅನುಗುಣವಾಗಿ ಪರಿಣತ ವೈದ್ಯರಿರುವ ಸರ್ಕಾರಿ ಸಂಸ್ಥೆಗಳಿವೆ. ನಗರದ ವಿವಿಧೆಡೆ ಈ ಸಂಸ್ಥೆಗಳ ಘಟಕಗಳಿಲ್ಲದ ಕಾರಣ ಒಂದೇ ಕಡೆ ರೋಗಿಗಳ ದಟ್ಟಣೆ ಹೆಚ್ಚುತ್ತಿದೆ. ನಿಮ್ಹಾನ್ಸ್ ಸಂಸ್ಥೆಗೆ ನಿತ್ಯ ಸರಾಸರಿ 1,700 ಮಂದಿ ಚಿಕಿತ್ಸೆಗಾಗಿ ಬರುತ್ತಾರೆ. ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ಒಟ್ಟು 1,050 ಹಾಸಿಗೆಗಳಿವೆ. ಜಗತ್ತಿನ ಅತಿ ದೊಡ್ಡ ಹೃದ್ರೋಗ ಆಸ್ಪತ್ರೆಯಾಗಿದೆ. ಹೃದಯ ಸಂಬಂಧಿ ಸಮಸ್ಯೆ ಹೆಚ್ಚಿನವರಲ್ಲಿ ಕಾಣಿಸಿಕೊಳ್ಳುತ್ತಿರುವುದರಿಂದ ಒಳರೋಗಿಗಳ ದಾಖಲಾತಿಗೆ ಕಾಯಬೇಕಿದೆ.

ಖಾಸಗಿ ವ್ಯವಸ್ಥೆ ಅವಲಂಬನೆ: ಕೆ.ಸಿ. ಜನರಲ್, ಜಯನಗರ ಸಾರ್ವಜನಿಕ ಆಸ್ಪತ್ರೆ ಸೇರಿ ವಿವಿಧ ಸರ್ಕಾರಿ ಆಸ್ಪತ್ರೆಗಳಲ್ಲಿ ತೃತೀಯ ಹಂತದ ವೈದ್ಯಕೀಯ ವ್ಯವಸ್ಥೆಯ ಬಲವರ್ಧನೆ ಸಾಕಾರವಾಗಿಲ್ಲ. ಇದರಿಂದಾಗಿ ಖಾಸಗಿ ಆಸ್ಪತ್ರೆಗಳ ಮೇಲೆ ಅವಲಂಬನೆ ಹೆಚ್ಚಾಗಿದ್ದು, ನಗರದಲ್ಲಿ ಸಾವಿರಕ್ಕೂ ಅಧಿಕ ಖಾಸಗಿ ಆಸ್ಪತ್ರೆಗಳು ತಲೆಯೆತ್ತಿವೆ. ಕೋವಿಡ್‌ನಂತಹ ತುರ್ತು ಸಂದರ್ಭದಲ್ಲಿ ಖಾಸಗಿ ವೈದ್ಯಕೀಯ ವ್ಯವಸ್ಥೆಯನ್ನೇ ಅವಲಂಬಿಸಿ, ನಿರ್ವಹಿಸಿದ ಬಗೆ ಕಣ್ಣ ಮುಂದೆಯೇ ಇದೆ. ಈಗಲೂ ಹಲವು ಸರ್ಕಾರಿ ಆಸ್ಪತ್ರೆಗಳಲ್ಲಿ ಸುಸಜ್ಜಿತ ಪ್ರಯೋಗಾಲಯಗಳಿಲ್ಲ. ಎಕ್ಸ್‌–ರೇ, ಸಿಟಿ ಸ್ಕ್ಯಾನ್, ಎಂಆರ್‌ಐ ಸೇರಿ ವಿವಿಧ ಪರೀಕ್ಷೆಗಳಿಗೆ ಖಾಸಗಿ ಕೇಂದ್ರಗಳನ್ನೇ ಅವಲಂಬಿಸಬೇಕಾದ ಸ್ಥಿತಿಯಿದೆ.

ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಮಾನಸಿಕ ಆರೋಗ್ಯ ಕಾರ್ಯಕ್ರಮ, ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮ, ಮಧುಮೇಹ ಮತ್ತು ಪಾರ್ಶ್ವವಾಯು ನಿಯಂತ್ರಣ ಕಾರ್ಯಕ್ರಮ ಸೇರಿ ಕೇಂದ್ರ ಸರ್ಕಾರ ಪ್ರಾಯೋಜಿತ 34 ಆರೋಗ್ಯ ಕಾರ್ಯಕ್ರಮಗಳು ಇಲ್ಲಿ ಜಾರಿಯಲ್ಲಿವೆ. ಜ್ಯೋತಿ ಸಂಜೀವಿನಿ, ಆರೋಗ್ಯ ಕವಚ ಸೇರಿ ರಾಜ್ಯ ಸರ್ಕಾರ ಪ್ರಾಯೋಜಿತ 21 ಕಾರ್ಯಕ್ರಮಗಳಿವೆ. 'ಜ್ಯೋತಿ ಸಂಜೀವಿನಿ' ಯೋಜನೆಯ ಅಡಿ ಫಲಾನುಭವಿಗಳು ನೇರವಾಗಿ ನೋಂದಾಯಿತ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದುಕೊಳ್ಳಬಹುದು. ಕಳೆದ ಐದು ವರ್ಷಗಳಲ್ಲಿ 13,183 ಮಂದಿ ಚಿಕಿತ್ಸೆ ಪಡೆದಿದ್ದು, ಇವರಲ್ಲಿ 10,517 ಮಂದಿ ಖಾಸಗಿ ಆಸ್ಪತ್ರೆಗಳಲ್ಲಿಯೇ ಚಿಕಿತ್ಸೆಗೆ ಒಳಗಾಗಿದ್ದಾರೆ.

ಮತ ಮಂಥನ

ಸೊರಗಿದ ನಮ್ಮ ಕ್ಲಿನಿಕ್‌ಗಳು

ಜನರ ಸಮಗ್ರ ಆರೋಗ್ಯ ವೃದ್ಧಿಗೆ ವಾರ್ಡ್ ಮಟ್ಟದಲ್ಲಿ ಪ್ರಾರಂಭಿಸಲಾದ ನಮ್ಮ ಕ್ಲಿನಿಕ್‌ಗಳಲ್ಲಿ ವೈದ್ಯರ ಕೊರತೆ ಇದೆ. ಇದರಿಂದ ಗುಣಮಟ್ಟದ ವೈದ್ಯಕೀಯ ಸೇವೆಗೆ ತೊಡಕಾಗಿದೆ. ನಗರದಲ್ಲಿ 200ಕ್ಕೂ ಅಧಿಕ ನಮ್ಮ ಕ್ಲಿನಿಕ್‌ಗಳಿವೆ. ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರ 2022ರ ಫೆಬ್ರವರಿ ತಿಂಗಳಲ್ಲಿ ಮೊದಲ ಹಂತದಲ್ಲಿ 108 ಕ್ಲಿನಿಕ್‌ಗಳಿಗೆ ಚಾಲನೆ ನೀಡಿತ್ತು. ಇನ್ನುಳಿದ ಕ್ಲಿನಿಕ್‌ಗಳು ತದನಂತರ ಕಾರ್ಯಾರಂಭಿಸಿದ್ದವು. 'ಚುನಾವಣೆ ಕಾರಣ ಆತುರದಲ್ಲಿ ಈ ಕ್ಲಿನಿಕ್‌ಗಳಿಗೆ ಸರ್ಕಾರ ಚಾಲನೆ ನೀಡಿದೆ' ಎಂದು ಪ್ರತಿಪಕ್ಷಗಳು ಆ ವೇಳೆ ಆರೋಪಿಸಿದ್ದವು. ಜ್ವರದಂತಹ ಸಾಮಾನ್ಯ ಅನಾರೋಗ್ಯ ಸಮಸ್ಯೆಗಳಿಗೆ ಚಿಕಿತ್ಸೆ ಒದಗಿಸುವ ಜತೆಗೆ ರಕ್ತ ಸೇರಿ ವಿವಿಧ ಪರೀಕ್ಷೆಗಳನ್ನೂ ಇಲ್ಲಿ ನಡೆಸಲಾಗುತ್ತಿದೆ. ಆದರೆ, ಬಹುತೇಕ ಕ್ಲಿನಿಕ್‌ಗಳಲ್ಲಿ ನಿತ್ಯ ಭೇಟಿ ನೀಡುವ ರೋಗಿಗಳ ಸಂಖ್ಯೆ ಎರಡಂಕಿ ತಲುಪುತ್ತಿಲ್ಲ.

ಬಸವನಗುಡಿ, ಶಿವಾಜಿನಗರ, ಚಿಕ್ಕಪೇಟೆ, ಜಯನಗರ, ಮಹದೇವಪುರ, ಯಲಹಂಕ ಸೇರಿ ಬಹುತೇಕ ಕಡೆ ಸಂದಿಗೊಂದಿಗಳಲ್ಲಿ ಬಿಬಿಎಂಪಿ ಕಟ್ಟಡದಲ್ಲಿ ನಮ್ಮ ಕ್ಲಿನಿಕ್ ನಡೆಸಲು ಸ್ಥಳಾವಕಾಶ ನೀಡಲಾಗಿದೆ. ಇದರಿಂದಾಗಿ ಸ್ಥಳೀಯ ನಿವಾಸಿಗಳಿಗೇ ಕ್ಲಿನಿಕ್ ಇರುವ ಬಗ್ಗೆ ಮಾಹಿತಿ ಇಲ್ಲವಾಗಿದೆ.

ಸರ್ಕಾರಿ ವೈದ್ಯಕೀಯ ವ್ಯವಸ್ಥೆ ಸುಧಾರಣೆಗೆ ತಜ್ಞರ ಸಲಹೆ

- ಖಾಸಗಿ ಆಸ್ಪತ್ರೆಗಳಂತೆ ವೈದ್ಯರಿಗೆ ಸೂಕ್ತ ವೇತನ ನೀಡಬೇಕು
- ಕೆಲಸದ ಅವಧಿ ಹಾಗೂ ನಂತರ ಖಾಸಗಿ ಕ್ಲಿನಿಕ್ ಮತ್ತು ಆಸ್ಪತ್ರೆಗಳಲ್ಲಿನ ಸೇವೆಗೆ ಕಡಿವಾಣ ಹಾಕಬೇಕು
- ಆಸ್ಪತ್ರೆಗೆ ಅತ್ಯಾಧುನಿಕ ವೈದ್ಯಕೀಯ ಉಪಕರಣ ಮತ್ತು ಸಿಬ್ಬಂದಿ ಒದಗಿಸಬೇಕು. ಉಪಕರಣಗಳ ನಿರ್ವಹಣೆ ಬಗ್ಗೆ ಸೂಕ್ತ ತರಬೇತಿ ನೀಡಬೇಕು
- ಹೊಸ ಆಸ್ಪತ್ರೆ, ವೈದ್ಯಕೀಯ ಕಾಲೇಜು ಆಸ್ಪತ್ರೆ ನಿರ್ಮಾಣಕ್ಕಿಂತ ಇರುವ ಆಸ್ಪತ್ರೆಗಳ ಬಲವರ್ಧನೆಗೆ ಆದ್ಯತೆ ನೀಡಬೇಕು
- ಬಜೆಟ್‌ನಲ್ಲಿ ಆರೋಗ್ಯ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ನೀಡಬೇಕು
- ಆಸ್ಪತ್ರೆ ಹಾಗೂ ವೈದ್ಯಕೀಯ ಶಿಕ್ಷಣ ಸಂಸ್ಥೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಬೇಕು
- ಲಂಚಕ್ಕೆ ಬೇಡಿಕೆ ಇಟ್ಟಲ್ಲಿ, ಸೇವೆಗೆ ನಿರಾಕರಿಸಿದಲ್ಲಿ ಕಾನೂನು ಅಡಿ ಕಠಿಣ ಕ್ರಮ ಕೈಗೊಳ್ಳಬೇಕು
- ಕಾರ್ಪೊರೇಟ್ ಆಸ್ಪತ್ರೆಗಳ ಲಾಬಿಗೆ ಮಣಿಯಬಾರದು

ನಗರದ ಆರೋಗ್ಯ ವ್ಯವಸ್ಥೆ ಚಿತ್ರಣ

- **225** ಕಾರ್ಯನಿರ್ವಹಿಸುತ್ತಿರುವ ನಮ್ಮ ಕ್ಲಿನಿಕ್‌ಗಳು
- **301** 'ಆಯುಷ್ಮಾನ್' ಯೋಜನೆಯಡಿ ನೋಂದಾಯಿಸಲ್ಪಟ್ಟ ಆಸ್ಪತ್ರೆಗಳು
- **71** ನಗರದಲ್ಲಿರುವ 'ಆರೋಗ್ಯ ಕವಚ' ಆಂಬುಲೆನ್ಸ್‌ಗಳು
- **1.75 ಲಕ್ಷ** 'ಆಯುಷ್ಮಾನ್' ಯೋಜನೆಯಡಿ ಕಳೆದ ಎರಡು ವರ್ಷ ಚಿಕಿತ್ಸೆ ಪಡೆದವರು
- **331** ನಗರದಲ್ಲಿರುವ ಜನೌಷಧ ಮಳಿಗೆಗಳು

'ಕಾರ್ಪೊರೇಟ್ ಆಸ್ಪತ್ರೆಯಂತೆ ಬೆಳೆಸಿ'

ಡಾ.ಎಸ್.ಶ್ರೀನಿವಾಸ್

ಯಾವುದೇ ಲಾಬಿಗೆ ಮಣಿಯದೇ ಸರ್ಕಾರಿ ಆಸ್ಪತ್ರೆಗಳನ್ನು ಕಾರ್ಪೊರೇಟ್ ಆಸ್ಪತ್ರೆಗೆ ಸರಿಸಮಾನವಾಗಿ ಬೆಳೆಸಬೇಕು, ಅಭಿವೃದ್ಧಿಪಡಿಸಬೇಕು. ನವಜಾತ ಶಿಶುಗಳ ಐಸಿಯು, ಮಕ್ಕಳ ಐಸಿಯು ಹಾಗೂ ವೈದ್ಯಕೀಯ ಐಸಿಯು ಘಟಕಗಳನ್ನು ಬಲಪಡಿಸಿ, ಅಗತ್ಯ ವೈದ್ಯಕೀಯ ಉಪಕರಣಗಳನ್ನು ಒದಗಿಸಬೇಕು. ಸರ್ಕಾರಿ ಆಸ್ಪತ್ರೆ, ವೈದ್ಯಕೀಯ ಕಾಲೇಜು ಆಸ್ಪತ್ರೆಗಳಲ್ಲಿ 24x7 ಅವಧಿಯಲ್ಲಿ ತಜ್ಞ ವೈದ್ಯರು ಕರ್ತವ್ಯದಲ್ಲಿ ಇರುವಂತೆ ನೋಡಿಕೊಳ್ಳಬೇಕು. ವೈದ್ಯರಿಗೆ ಕಾರ್ಪೊರೇಟ್ ಆಸ್ಪತ್ರೆಗಳಲ್ಲಿ ನೀಡುವಷ್ಟೇ ವೇತನ ನೀಡಿ, ಪ್ರೋತ್ಸಾಹಿಸಬೇಕು.

ಡಾ.ಎಸ್. ಶ್ರೀನಿವಾಸ್, ಭಾರತೀಯ ವೈದ್ಯಕೀಯ ಸಂಘದ ಕರ್ನಾಟಕ ಶಾಖೆಯ ಅಧ್ಯಕ್ಷ

'ಮಾನವ ಸಂಪನ್ಮೂಲ ಅಗತ್ಯ'

ಡಾ.ಸಿ.ರಾಮಚಂದ್ರ

ನಗರದ ಆಸ್ಪತ್ರೆಗಳು ಹಾಗೂ ವೈದ್ಯಕೀಯ ಕಾಲೇಜು ಆಸ್ಪತ್ರೆಗಳು ಗುಣಮಟ್ಟದ ಸೇವೆ ನೀಡಲು ಅಗತ್ಯ ಮಾನವಸಂಪನ್ಮೂಲ ಒದಗಿಸಬೇಕು. ಬಹುತೇಕ ಆಸ್ಪತ್ರೆಗಳು ತಜ್ಞರ ಹಾಗೂ ಸಿಬ್ಬಂದಿಯ ಕೊರತೆ ಎದುರಿಸುತ್ತಿವೆ. ವೈದ್ಯಕೀಯ ಸಂಸ್ಥೆಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡಲು ಅರ್ಹತೆ ಇದ್ದವರಿಗೆ ಅಧಿಕಾರ ನೀಡಬೇಕು. ನಿರ್ದೇಶಕರು ಆಸ್ಪತ್ರೆಗಳ ಹವಾನಿಯಂತ್ರಿತ ಕೊಠಡಿಗಳಿಂದ ಹೊರಬಂದು, ರೋಗಿಗಳ ಬೇಕು ಬೇಡಗಳನ್ನು ಆಲಿಸಿ, ವ್ಯವಸ್ಥೆ ಸುಧಾರಿಸಬೇಕು. ಆಸ್ಪತ್ರೆಗಳ ಎಲ್ಲ ಪ್ರದೇಶಗಳನ್ನು ನಿಯಮಿತವಾಗಿ ತಪಾಸಣೆ ಮಾಡಬೇಕು.

ಡಾ.ಸಿ. ರಾಮಚಂದ್ರ, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಿಕಟಪೂರ್ವ ನಿರ್ದೇಶಕ

ಲೋಕಸಭಾ ಚುನಾವಣೆ ಮತದಾರರು ಏನಂತಾರೆ ?



ಸಂಸದರಾಗಿ ಆಯ್ಕೆಯಾಗುವ ಅಭ್ಯರ್ಥಿಗಳು ಕ್ಷೇತ್ರದ ಜನರ ಅಭಿಪ್ರಾಯಗಳು ಮತ್ತು ಬೇಡಿಕೆಗಳನ್ನು ಸಂಸತ್ತಿನಲ್ಲಿ ಮಂಡಿಸಬೇಕು. ನಿರುದ್ಯೋಗ ಸಮಸ್ಯೆ ನಿವಾರಣೆ ಅಗತ್ಯ ಕ್ರಮ ಕೈಗೊಳ್ಳಬೇಕು. ಉಪನಗರ ರೈಲ್ವೆ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು. ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಬೇಕು. ಕೇಂದ್ರ ಸರ್ಕಾರದ ಎಲ್ಲ ಯೋಜನೆಗಳನ್ನು ಮತದಾರರಿಗೆ ತಲುಪಿಸಬೇಕು.

ಜೆ. ಕಿರಣ್ ಕುಮಾರ್, ಮೇಡಹಳ್ಳಿ

ಬೆಂಗಳೂರು ದಕ್ಷಿಣ ಕ್ಷೇತ್ರವು ಬಡ, ಮಧ್ಯಮ, ಶ್ರೀಮಂತ, ಅಕ್ಷರಸ್ಥರು, ಅನಕ್ಷರಸ್ಥರಿಂದ ಕೂಡಿದ ಪ್ರದೇಶವಾಗಿದೆ. ಈ ಭಾಗವು ಮೂಲ ಸೌಕರ್ಯಗಳ ಕೊರತೆಯಿಂದ ಬಳಲುತ್ತಿದೆ. ಜನರ ಸಂಕಷ್ಟಕ್ಕೆ ಸ್ಪಂದಿಸುವ, ಸುಲಭವಾಗಿ ಮತದಾರರಿಗೆ ಸಿಗುವಂತಹ ಅಭ್ಯರ್ಥಿಯನ್ನು ಆಯ್ಕೆ ಮಾಡಬೇಕಿದೆ. ಕೇವಲ ಶ್ರೀಮಂತರ ಹಾಗೂ ಬಂಡವಾಳಶಾಹಿಗಳ ಪರವಾಗಿ ಇರುವ ಅಭ್ಯರ್ಥಿಗಳನ್ನು ಬೆಂಬಲಿಸಬಾರದು. ಶುದ್ಧ ಕುಡಿಯುವ ನೀರು, ಉತ್ತಮ ಶಿಕ್ಷಣ, ರಸ್ತೆ, ಪಾದಚಾರಿ ಮಾರ್ಗದ ಅಭಿವೃದ್ಧಿ ಮಾಡುವ ಅಭ್ಯರ್ಥಿಯನ್ನು ಆಯ್ಕೆ ಮಾಡಬೇಕಿದೆ.

ಜ.ಬೋ. ಮಂಜುನಾಥ

ಲೋಕಸಭೆಗೆ ಆಯ್ಕೆ ಆಗುವಂಥವರು ಸಾರ್ವಜನಿಕರ ಸಮಸ್ಯೆಗಳನ್ನು ಅರಿತು ಪರಿಹರಿಸಬೇಕು. ಬೆಂಗಳೂರಿನಲ್ಲಿ ಸಂಚಾರದಟ್ಟಣೆ, ತ್ಯಾಜ್ಯ ವಿಲೇವಾರಿ ಸಮಸ್ಯೆ ನಿವಾರಿಸಬೇಕಿದೆ. ಕೆರೆಗಳ ಒತ್ತುವರಿಯನ್ನು ತೆರವುಗೊಳಿಸಿ ಅವುಗಳನ್ನು ರಕ್ಷಿಸಬೇಕಿದೆ. ಗಿಡ–ಮರಗಳನ್ನು ಬೆಳೆಸುವುದರ ಜೊತೆಗೆ ಪರಿಸರ ಸಂರಕ್ಷಣೆಯಂತಹ ಕಾರ್ಯಕ್ರಮಗಳನ್ನು ಜಾರಿಗೊಳಿಸಬೇಕಿದೆ. ಯುವಕರಲ್ಲಿ ಕೌಶಲಗಳನ್ನು ಬೆಳೆಸಿ ಸ್ವಯಂ ಉದ್ಯೋಗಸ್ಥರನ್ನಾಗಿ ಮಾಡುವಂತಹ ಯೋಜನೆಗಳನ್ನು ರೂಪಿಸಬೇಕು. ಬೃಹತ್ ಕಟ್ಟಡಗಳ ನಿರ್ಮಾಣಕ್ಕೆ ಕಡಿವಾಣ ಹಾಕಬೇಕಿದೆ. ಸ್ವಚ್ಛತೆಗೆ ಆದ್ಯತೆ ನೀಡುವುದರ ಮೂಲಕ ನಗರದ ಸೌಂದರ್ಯವನ್ನು ಕಾಪಾಡಬೇಕು.

ಎಸ್.ಎಲ್. ಮಂಜುನಾಥ್, ಪ್ರಾಂಶುಪಾಲರು, ವಿಜಯ ಸಂಜೆ ಪದವಿ ಪೂರ್ವ ಕಾಲೇಜು, ಜಯನಗರ

ಲೋಕಸಭೆಗೆ ಸ್ಪರ್ಧಿಸುವ ಅಭ್ಯರ್ಥಿಗಳು ರಸ್ತೆ ಅಭಿವೃದ್ಧಿ, ಕುಡಿಯುವ ನೀರಿನ ಸಮಸ್ಯೆ, ಉತ್ತಮ ಸಾರಿಗೆ ಸೌಕರ್ಯ ನೀಡುವುದಕ್ಕೆ ಆದ್ಯತೆ ನೀಡಬೇಕು. ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದಲ್ಲಿ ವಿದ್ಯಾವಂತ ನಿರುದ್ಯೋಗಿಗಳ ಪ್ರಮಾಣ ಹೆಚ್ಚಾಗಿದೆ. ಅವರಿಗೆ ಉದ್ಯೋಗ ಒದಗಿಸಲು ಉದ್ಯೋಗ ಮೇಳವನ್ನು ಆಯೋಜಿಸಬೇಕು. ಪ್ರತಿಭಾನ್ವಿತ ಮಕ್ಕಳಿಗೆ ವೈದ್ಯಕೀಯ, ಎಂಜಿನಿಯರಿಂಗ್ ಸೀಟು ಲಭಿಸಿದರೂ ಪ್ರವೇಶ ಶುಲ್ಕ ಪಾವತಿಸುವ ಶಕ್ತಿ ಇರುವುದಿಲ್ಲ. ಅಂತಹ ಮಕ್ಕಳಿಗೆ ಆರ್ಥಿಕ ಸಹಾಯ ಮಾಡಬೇಕು.

ಎ.ಸಿ. ಪುಷ್ಪ, ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರ

ನನ್ನ ಕ್ಷೇತ್ರ ನನ್ನ ಕಾರ್ಯಸೂಚಿ

ಲೋಕಸಭೆ ಚುನಾವಣೆಯ ಅಭ್ಯರ್ಥಿಯು ನಿಮ್ಮ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಮಾಡಬೇಕಾಗಿರುವುದೇನು? ನಿಮ್ಮ ಕಾರ್ಯಸೂಚಿಯನ್ನು 100 ಪದಗಳ ಮಿತಿಯಲ್ಲಿ ಬರೆಯಿರಿ. ಹೆಸರು, ವಿಳಾಸ, ಭಾವಚಿತ್ರ ಜತೆಗಿರಲಿ

96060 38256

ರ್‍ಯಾಲಿಯಲ್ಲಿ ಕೇಂದ್ರ ಸಚಿವ, ಬಿಜೆಪಿ ಮುಖಂಡರು ಭಾಗಿ

ತೇಜಸ್ವಿ ಸೂರ್ಯ ನಾಮಪತ್ರ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ತೇಜಸ್ವಿ ಸೂರ್ಯ ಗುರುವಾರ ನಾಮಪತ್ರ ಸಲ್ಲಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಕಳೆದ ಬಾರಿಗಿಂತ ಹೆಚ್ಚು ಅಂತರದಿಂದ ಗೆಲುವು ಸಾಧಿಸುವ ವಿಶ್ವಾಸ ವ್ಯಕ್ತಪಡಿಸಿದರು.

ಕಳೆದ 5 ವರ್ಷಗಳಲ್ಲಿ ಬೆಂಗಳೂರು ನಗರಕ್ಕೆ ಪ್ರಧಾನಿ ಮೋದಿಯವರು ₹1.3 ಲಕ್ಷ ಕೋಟಿಗೂ ಹೆಚ್ಚಿನ ಮೊತ್ತದ ಅನುದಾನ ನೀಡಿದ್ದಾರೆ. ಈ ಹಿಂದೆ ಯಾವ ಪ್ರಧಾನಿಯೂ ಬೆಂಗಳೂರು ನಗರಕ್ಕೆ ಈ ಪ್ರಮಾಣದ ಕೊಡುಗೆ ನೀಡಿಲ್ಲ. ಬೆಂಗಳೂರು ಪ್ರತಿಯೊಂದು ಕ್ಷೇತ್ರದಲ್ಲೂ ದಾಪುಗಾಲು ಹಾಕುತ್ತಿದ್ದು, ಮುಂದಿನ 5 ವರ್ಷಗಳ ಕಾಲ ಬೆಂಗಳೂರಿನ ಸರ್ವತೋಮುಖ ಬೆಳವಣಿಗೆಗಾಗಿ ಕಾರ್ಯನಿರ್ವಹಿಸಲು ನಾಗರಿಕರು ನನಗೆ ಆಶೀರ್ವದಿಸುತ್ತಾರೆ ಎಂಬ ವಿಶ್ವಾಸವಿದೆ ಎಂದು ಹೇಳಿದರು.

ಸಾವಿರಾರು ಕಾರ್ಯಕರ್ತರೊಂದಿಗೆ ಜಯನಗರ ಮಯ್ಯಾಸ್ ಹೋಟೆಲ್ ಜಂಕ್ಷನ್‌ನಿಂದ ಅಶೋಕ ಪಿಲ್ಲರ್ ಬಳಿಯ ಚುನಾವಣಾಧಿಕಾರಿಗಳ ಕಚೇರಿವರೆಗೆ ರ್‍ಯಾಲಿ ನಡೆಸಿದ ತೇಜಸ್ವಿ ಅವರ ಜತೆ ಕೇಂದ್ರ ಸಚಿವ ಅನುರಾಗ್ ಸಿಂಗ್ ಠಾಕೂರ್, ಮೈಸೂರು ಸಂಸದ ಪ್ರತಾಪ್ ಸಿಂಹ, ವಿರೋಧಪಕ್ಷದ ನಾಯಕ ಆರ್. ಅಶೋಕ ಇದ್ದರು. ನಾಮಪತ್ರ ಸಲ್ಲಿಕೆಗೂ ಮೊದಲು ಜೆಡಿಎಸ್ ನಾಯಕ ನಿಖಿಲ್ ಕುಮಾರಸ್ವಾಮಿ ಮತ್ತು ತೇಜಸ್ವಿ ಜತೆಯಾಗಿ ಗಿರಿನಗರದ ಗಣಪತಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದರು. ರಾಜ್ಯಸಭಾ ಸದಸ್ಯ ಜಗ್ಗೇಶ್, ಶಾಸಕ ಸಿ.ಕೆ. ರಾಮಮೂರ್ತಿ, ಶಾಸಕರಾದ ಸತೀಶ್ ರೆಡ್ಡಿ, ರವಿ ಸುಬ್ರಹ್ಮಣ್ಯ, ಉದಯ ಗರುಡಾಚಾರ್, ವಿಧಾನಪರಿಷತ್ ಸದಸ್ಯ ಶರವಣ, ಜೆಡಿಎಸ್ ಬೆಂಗಳೂರು ಮಹಾನಗರ ಅಧ್ಯಕ್ಷ ರಮೇಶ್ ಗೌಡ ಇದ್ದರು.

ಬೆಂಗಳೂರು ದಕ್ಷಿಣ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ ನಾಮಪತ್ರ ಸಲ್ಲಿಕೆಗೂ ಮುನ್ನ ರ್‍ಯಾಲಿ ನಡೆಸಿದರು. ಈ ಸಂದರ್ಭದಲ್ಲಿ ವಿರೋಧಪಕ್ಷದ ನಾಯಕ ಆರ್. ಅಶೋಕ ಜತೆಗೆ ಕನ್ನಡದ ಬಾವುಟ ಬೀಸಿದರು.

ತೇಜಸ್ವಿ ವಿರುದ್ಧ ಎನ್‌ಎಸ್‌ಯುಐ ದೂರು

ಸಂಸದ ತೇಜಸ್ವಿ ಸೂರ್ಯ ಅವರು ನಾಮಪತ್ರ ಸಲ್ಲಿಸುವ ಸಂದರ್ಭದಲ್ಲಿ ಜೈನ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಹಾಜರಿರಬೇಕು ಎಂದು ಒತ್ತಡ ಹಾಕಿದ್ದಾರೆ. ಆದ್ದರಿಂದ ಅವರ ನಾಮಪತ್ರ ರದ್ದುಮಾಡಬೇಕು ಎಂದು ಚುನಾವಣಾಧಿಕಾರಿಗೆ ಎನ್.ಎಸ್.ಯು.ಐ ದೂರು ನೀಡಿದೆ.

'ನಾಮಪತ್ರ ಸಲ್ಲಿಕೆಯ ವೇಳೆ ಭಾಗವಹಿಸಬೇಕು ಎಂದು ಸಂಸದರು ತಮ್ಮ ಆಪ್ತರ ಮೂಲಕ ವಿದ್ಯಾರ್ಥಿಗಳಿಗೆ ಸೂಚನೆ ಕೊಡಿಸಿದ್ದಾರೆ. ಆದ್ದರಿಂದ ತೇಜಸ್ವಿ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು. ವಿದ್ಯಾರ್ಥಿಗಳನ್ನು ರಾಜಕೀಯ ಚಟುವಟಿಕೆಗಳಿಗೆ ಭಾಗವಹಿಸುವಂತೆ ಬೆದರಿಕೆ ಹಾಕುತ್ತಿರುವುದು ಚುನಾವಣಾ ನಿಯಮಗಳಿಗೆ ವಿರುದ್ಧ' ಎಂದು ಎನ್‌ಎಸ್‌ಯುಐ ದೂರಿನಲ್ಲಿ ಹೇಳಿದೆ.

ಚುಂಚಶ್ರೀ ಭೇಟಿಯಾದ 'ಕೈ' ಕಲಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಮೊದಲ ಹಂತದಲ್ಲಿ ಚುನಾವಣೆ ನಡೆಯಲಿರುವ ಲೋಕಸಭಾ ಕ್ಷೇತ್ರಗಳ ಕಾಂಗ್ರೆಸ್ ಹುರಿಯಾಳುಗಳು ಪಕ್ಷದ ನಾಯಕರ ಜೊತೆ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಅವರನ್ನು ಗುರುವಾರ ಭೇಟಿ ಮಾಡಿ ಆಶೀರ್ವಾದ ಪಡೆದರು.

ಕಾಂಗ್ರೆಸ್ ಮುಖಂಡರು ಮಹಾಲಕ್ಷ್ಮೀ ಲೇ ಔಟ್‌ನ ಬಿಜಿಎಸ್ ವರ್ಲ್ಡ್ ಸ್ಕೂಲ್‌ನಲ್ಲಿ ಸ್ವಾಮೀಜಿ ಭೇಟಿ ಮಾಡಿದರು.

ಆರಂಭದಲ್ಲಿ ಕಂದಾಯ ಸಚಿವ ಕೃಷ್ಣ ಬೈರೇಗೌಡ, ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ, ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್, ಕೃಷಿ ಸಚಿವ ಚಲುವರಾಯ ಸ್ವಾಮಿ ಜೊತೆ ಅಭ್ಯರ್ಥಿಗಳಾದ ರಕ್ಷಾ ರಾಮಯ್ಯ, ಮನ್ಸೂರ್ ಅಲಿ ಖಾನ್, ಸೌಮ್ಯಾ ರೆಡ್ಡಿ, ಎಂ.ವಿ. ರಾಜೀವ್ ಗೌಡ, ಎಂ. ಲಕ್ಷ್ಮಣ್, ಎಸ್.ಪಿ. ಮುದ್ದ ಹನುಮೇಗೌಡ ಮತ್ತಿತರರು ಸ್ವಾಮೀಜಿ ಭೇಟಿ ಮಾಡಿ ಆಶೀರ್ವಾದ ಕೋರಿದರು.

ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೋಲಾರ ಕ್ಷೇತ್ರದ ಅಭ್ಯರ್ಥಿ ಕೆ.ವಿ. ಗೌತಮ್, ವಿಜಯನಗರ ಶಾಸಕ ಎಂ. ಕೃಷ್ಣಪ್ಪ, ಮುಖ್ಯಮಂತ್ರಿಯ ರಾಜಕೀಯ ಕಾರ್ಯದರ್ಶಿ ಕೆ. ಗೋವಿಂದರಾಜ್ ಅವರ ಜೊತೆ ಸ್ವಾಮೀಜಿ ಅವರನ್ನು ಭೇಟಿ ಮಾಡಿದರು.

ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೂ ಹಾರ ಹಾಕಿದರು

'ಸಬ್ ಕಾ ಸಾಥ್ ಸಬ್ ಕೋ ಸಾಲ'

ಬೆಂಗಳೂರು: '2014ರಲ್ಲಿ ಕೇವಲ ₹55 ಲಕ್ಷ ಕೋಟಿಯಷ್ಟಿದ್ದ ದೇಶದ ಸಾಲ, ಪ್ರಸಕ್ತ ಆರ್ಥಿಕ ವರ್ಷದಲ್ಲಿ ₹ 183.67 ಲಕ್ಷ ಕೋಟಿಗೆ ತಲುಪಿದೆ. ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ 10 ವರ್ಷಗಳಲ್ಲಿ ₹ 123 ಲಕ್ಷ ಕೋಟಿ ಸಾಲ ಮಾಡಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ರಾಜ್ಯ ಸರ್ಕಾರದ ಸಾಲದ ಕುರಿತು ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿಕೆಗೆ ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿ, 'ಅಶೋಕ ಅವರೇ, ಯಾಕೆ ನಮ್ಮ ಕೈಯಲ್ಲಿ ಬಡಿಗೆ ಕೊಟ್ಟು ಬಡಿಸಿಕೊಳ್ಳುತ್ತೀರಿ? ರಾಜ್ಯ ಸರ್ಕಾರದ ಸಾಲದ ಲೆಕ್ಕ ಹೇಳಿದ್ದೀರಿ, ಮೋದಿ ನೇತೃತ್ವದ ನಿಮ್ಮದೇ ಪಕ್ಷದ ಸರ್ಕಾರದ ಸಾಲದ ಕತೆಯನ್ನು ಸ್ವಲ್ಪ ಹೇಳಿಬಿಡಿ. ನೀವು ಮರೆತಿದ್ದರೆ ನಾನು ಹೇಳುತ್ತೇನೆ' ಎಂದು ಕುಟುಕಿದ್ದಾರೆ.

'ಸದ್ಯ ಪ್ರತಿ ಭಾರತೀಯನ ತಲೆ ಮೇಲೆ ₹ 92 ಸಾವಿರ ಸಾಲದ ಹೊರೆ ಇದೆ. ಇದು ಮೋದಿ ಸರ್ಕಾರದ ಸಬ್ ಕಾ ಸಾಥ್ ಸಬ್ ಕೋ ಸಾಲ' ಎಂದು ವ್ಯಂಗ್ಯವಾಡಿದ್ದಾರೆ.

'ಕೇಂದ್ರದ ಬಿಜೆಪಿ ಆಡಳಿತದಲ್ಲಿ ಅವಶ್ಯಕ ವಸ್ತುಗಳ ಬೆಲೆ ಏರಿಕೆಯಿಂದ ಜನರ ವೈಯಕ್ತಿಕ ಸಾಲ ಕೂಡಾ ಹೆಚ್ಚುತ್ತಿದೆ' ಎಂದಿದ್ದಾರೆ.

ಮಾಧ್ಯಮ ವಿಭಾಗ ಮುಖ್ಯಸ್ಥರಾಗಿ ರಮೇಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಪಿಸಿಸಿ ಮಾಧ್ಯಮ ವಿಭಾಗದ ಮುಖ್ಯಸ್ಥರಾಗಿ ವಿಧಾನ ಪರಿಷತ್ ಮಾಜಿ ಸದಸ್ಯ ರಮೇಶ್ ಬಾಬು ಅಧಿಕಾರ ವಹಿಸಿಕೊಂಡರು.

ಕೆಪಿಸಿಸಿ ಕಚೇರಿಯಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ಹಾಲಿ ಮುಖ್ಯಸ್ಥ ಪ್ರಿಯಾಂಕ್ ಖರ್ಗೆ ಅವರು ರಮೇಶ್ ಬಾಬು ಅವರಿಗೆ ಹೊಣೆಗಾರಿಕೆ ನೀಡಿದರು.

ರಮೇಶ್ ಬಾಬು

ಮಾಧ್ಯಮ ವಿಭಾಗದ ಸಹ ಅಧ್ಯಕ್ಷರಾಗಿ ಐಶ್ವರ್ಯಾ ಮಹದೇವ್, ಸಾಮಾಜಿಕ ಮಾಧ್ಯಮ ವಿಭಾಗದ ಸಹ ಅಧ್ಯಕ್ಷರಾಗಿ ವಿಜಯ್ ಮತ್ತಿಕಟ್ಟಿ, ಸತ್ಯಪ್ರಕಾಶ್ ಅಧಿಕಾರ ವಹಿಸಿಕೊಂಡರು.

ಈ ಸಂದರ್ಭದಲ್ಲಿ ಮಾತನಾಡಿದ ಪ್ರಿಯಾಂಕ್ ಅವರು, 'ಕೆಪಿಸಿಸಿ ಅಧ್ಯಕ್ಷರಾದ ಡಿ.ಕೆ. ಶಿವಕುಮಾರ್ ಅವರು ಒಂದು ವರ್ಷ ಮೂರು ತಿಂಗಳ ಹಿಂದೆ ಮಾಧ್ಯಮ ಮತ್ತು ಸಾಮಾಜಿಕ ಜಾಲತಾಣ ವಿಭಾಗದ ಅಧ್ಯಕ್ಷನನ್ನಾಗಿ ನನ್ನನ್ನು ನೇಮಿಸಿದ್ದರು. ಜನಾಭಿಪ್ರಾಯ ರೂಪಿಸುವ ರೀತಿಯಲ್ಲಿ ಕೆಲಸ ಮಾಡಿದ ಸಮಾಧಾನ ನನಗೆ ಇದೆ' ಎಂದು ಹೇಳಿದರು.

ಮೂರು ಸೆಟ್‌ಗಳಲ್ಲಿ ಉಮೇದುವಾರಿಕೆ

ಪ್ರತ್ಯೇಕ ಗುಂಪುಗಳಲ್ಲಿ ನಾಮಪತ್ರ ಸಲ್ಲಿಸಿದ ಗೌತಮ್

ಪ್ರಜಾವಾಣಿ ವಾರ್ತೆ

ಕೋಲಾರ: ಕೋಲಾರ ಮೀಸಲು ಕ್ಷೇತ್ರದಲ್ಲಿ ತಮ್ಮ ಅಳಿಯ ಕೆ.ಜಿ. ಚಿಕ್ಕಪೆದ್ದಣ್ಣ ಅವರಿಗೆ ಟಿಕೆಟ್ ಸಿಗದಿದ್ದರಿಂದ ಅಸಮಾಧಾನಗೊಂಡಿದ್ದ ಸಚಿವ ಕೆ.ಎಚ್.ಮುನಿಯಪ್ಪ ಹಾಗೂ ಅವರ ಪುತ್ರಿ, ಶಾಸಕಿ ರೂಪಕಲಾ ಎಂ.ಶಶಿಧರ್ ಗುರುವಾರ ಕಾಂಗ್ರೆಸ್ ಅಭ್ಯರ್ಥಿ ಕೆ.ವಿ. ಗೌತಮ್ ನಾಮಪತ್ರ ಸಲ್ಲಿಕೆ ವೇಳೆ ಪಾಲ್ಗೊಂಡರು.

ಮಾರ್ಚ್ 30ರಂದು ಕೋಲಾರ ಕಾಂಗ್ರೆಸ್ ಟಿಕೆಟ್ ಘೋಷಣೆಯಾದ ನಂತರ ಕ್ಷೇತ್ರಕ್ಕೆ ಮುನಿಯಪ್ಪ ನೀಡಿದ ಮೊದಲ ಭೇಟಿ ಇದಾಗಿದೆ.

ಕೆ.ವಿ.ಗೌತಮ್ ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ನಾಮಪತ್ರ ಸಲ್ಲಿಸಿದರು. ಮೊದಲ ಸೆಟ್ ನಾಮಪತ್ರ ಸಲ್ಲಿಕೆ ವೇಳೆ ಸಚಿವರಾದ ಬೈರತಿ ಸುರೇಶ್, ಡಾ.ಎಂ.ಸಿ.ಸುಧಾಕರ್, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್ ಹಾಗೂ ಬಂಗಾರಪೇಟೆ ಶಾಸಕ ಎಸ್.ಎನ್.ನಾರಾಯಣಸ್ವಾಮಿ ಇದ್ದರು.

ಮತ್ತೊಂದು ಸೆಟ್ ನಾಮಪತ್ರ ಸಲ್ಲಿಕೆ ವೇಳೆ ಸಚಿವ ಕೆ.ಎಚ್.ಮುನಿಯಪ್ಪ, ಶಾಸಕಿ ರೂಪಕಲಾ ಶಶಿಧರ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಲಕ್ಷ್ಮಿನಾರಾಯಣ ಹಾಗೂ ಶಿಡ್ಲಘಟ್ಟದ ರಾಜೀವ್ ಗೌಡ ಇದ್ದರು.

ಇನ್ನೊಂದು ಸೆಟ್ ನಾಮಪತ್ರ ಸಲ್ಲಿಕೆ ವೇಳೆ ಶಾಸಕರಾದ ಕೆ.ವೈ.ನಂಜೇಗೌಡ, ಕೊತ್ತೂರು ಮಂಜುನಾಥ್, ವಿಧಾನ ಪರಿಷತ್ ಸದಸ್ಯ ಎಂ.ಎಲ್.ಅನಿಲ್ ಕುಮಾರ್ ಹಾಗೂ ಮುಳಬಾಗಿಲಿನ ಆದಿನಾರಾಯಣ ಪಾಲ್ಗೊಂಡಿದ್ದರು.

ಮುನಿಯಪ್ಪ ಅವರು ಮತ್ತೊಂದು ಬಣದಿಂದ ಅಂತರ ಕಾಯ್ದುಕೊಂಡಿದ್ದು ಕಂಡುಬಂತು. ಕೊನೆಯಲ್ಲಿ ಜೊತೆಗೂಡಿ ಫೋಟೊಗೆ ಪೋಸು ನೀಡಿದರೂ ಬಳಿಕ ಬಣಗಳು ಚದುರಿ ಹೋದವು. ರೋಡ್ ಶೋ ವೇಳೆ ಮುನಿಯಪ್ಪ, ರೂಪಕಲಾ ಹಾಗೂ ಅವರ ಕೆಲ ಬೆಂಬಲಿಗರು ಕಾಣಿಸಿಕೊಳ್ಳಲಿಲ್ಲ.

ಮುನಿಯಪ್ಪ ಈ ಕ್ಷೇತ್ರದಲ್ಲಿ 1991ರಿಂದ 2019ರ ಚುನಾವಣೆ ವರೆಗೆ ಸ್ಪರ್ಧಿಸಿದ್ದಾರೆ. ಸತತ ಎಂಟು ಚುನಾವಣೆಗಳಲ್ಲಿ ಕಣಕ್ಕಿಳಿದು ಏಳು ಬಾರಿ ಗೆದ್ದಿದ್ದಾರೆ. ಕಳೆದ ಚುನಾವಣೆಯಲ್ಲಿ ಬಿಜೆಪಿಯ ಎಸ್.ಮುನಿಸ್ವಾಮಿ ವಿರುದ್ಧ ಪರಾಭವಗೊಂಡಿದ್ದರು.

ಕೆ.ವಿ.ಗೌತಮ್ ನಾಮಪತ್ರ ಸಲ್ಲಿಸುವ ಮುನ್ನ ಬೆಳಿಗ್ಗೆ ಕೋಲಾರಮ್ಮ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿದರು. ನಂತರ ಮೆಥೋಡಿಸ್ಟ್ ಚರ್ಚ್‌ಗೆ ಭೇಟಿ ನೀಡಿ ಮುಖಂಡರ ಆಶೀರ್ವಾದ ಪಡೆದರು. ಕ್ಲಾಕ್ ಟವರ್ ದರ್ಗಾದಲ್ಲಿ ಪ್ರಾರ್ಥನೆ ಸಲ್ಲಿಸಿದರು.

ಕೋಲಾರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಕೆ.ವಿ.ಗೌತಮ್ ನಾಮಪತ್ರ ಸಲ್ಲಿಸಿದ ಬಳಿಕ ಸಚಿವ ಕೆ.ಎಚ್.ಮುನಿಯಪ್ಪ ಜೊತೆ ಬೈರತಿ ಸುರೇಶ್, ಡಾ.ಎಂ.ಸಿ.ಸುಧಾಕರ್, ನಸೀರ್ ಅಹ್ಮದ್, ಕೆ.ವೈ.ನಂಜೇಗೌಡ, ಕೊತ್ತೂರು ಮಂಜುನಾಥ್, ರೂಪಕಲಾ ಎಂ.ಶಶಿಧರ್, ಎಂ.ಎಲ್.ಅನಿಲ್ ಕುಮಾರ್, ಸಿ.ಲಕ್ಷ್ಮಿನಾರಾಯಣ, ಅಭಿಷೇಕ್ ದತ್ತ, ಆದಿನಾರಾಯಣ, ರಾಜೀವ್ ಗೌಡ ಗೆಲುವಿನ ಚಿಹ್ನೆ ತೋರಿಸಿದರು

> **ನಮ್ಮಲ್ಲಿ ಗುಂಪುಗಾರಿಕೆ ಇಲ್ಲ. ಜಿಲ್ಲೆಯ ನಾಯಕರು ಅಭ್ಯರ್ಥಿ ಜೊತೆ ಹೋಗಿ ನಾಮಪತ್ರ ಸಲ್ಲಿಸಿದ್ದಾರೆ. ಕೆ.ಎಚ್.ಮುನಿಯಪ್ಪ ಪ್ರಚಾರಕ್ಕೂ ಬರುತ್ತಾರೆ**
> **ಬೈರತಿ ಸುರೇಶ್,** ಜಿಲ್ಲಾ ಉಸ್ತುವಾರಿ ಸಚಿವ

> **ಕೋಲಾರ, ಚಿಕ್ಕಬಳ್ಳಾಪುರ ಕ್ಷೇತ್ರ ಗೆಲ್ಲಿಸುವ ಜವಾಬ್ದಾರಿಯನ್ನು ಮೂವರು ಸಚಿವರಿಗೆ ನೀಡಲಾಗಿದೆ. ಅಭ್ಯರ್ಥಿ ಗೆಲುವಿಗೆ ಕೆಲಸ ಮಾಡುತ್ತೇನೆ.**
> **ಕೆ.ಎಚ್.ಮುನಿಯಪ್ಪ,** ಸಚಿವ

> **ಮುನಿಯಪ್ಪ ಸೇರಿ ಎಲ್ಲರಿಗೂ ಪಕ್ಷದ ಅಭ್ಯರ್ಥಿ ಗೆಲ್ಲಿಸುವ ಜವಾಬ್ದಾರಿಯಿದೆ. ನನ್ನನ್ನು ನಾಮಪತ್ರ ಸಲ್ಲಿಕೆಗೆ ಬನ್ನಿ ಎಂದು ಯಾರೂ ಕರೆದಿಲ್ಲ. ಅವರನ್ನೂ ಕರೆದಿಲ್ಲ**
> **ನಸೀರ್ ಅಹ್ಮದ್,** ಸಿ.ಎಂ ರಾಜಕೀಯ ಕಾರ್ಯದರ್ಶಿ

6ರಿಂದ ಹಳೆ ಮೈಸೂರು ಭಾಗದಲ್ಲಿ 'ಕೈ' ಪ್ರಚಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇದೇ 6ರಿಂದ ಲೋಕಸಭೆ ಚುನಾವಣಾ ಪ್ರಚಾರದ ಅಖಾಡಕ್ಕೆ ಇಳಿಯಲಿರುವ ಕಾಂಗ್ರೆಸ್ ನಾಯಕರು, ಮೊದಲ ಹಂತದಲ್ಲಿ ಹಳೆ ಮೈಸೂರು ಭಾಗದ ಕ್ಷೇತ್ರಗಳಲ್ಲಿ ರ್‍ಯಾಲಿ ಹಾಗೂ ಸಮಾವೇಶಗಳನ್ನು ಹಮ್ಮಿಕೊಳ್ಳಲು ನಿರ್ಧರಿಸಿದ್ದಾರೆ.

ಕೋಲಾರದ ಕುರುಡುಮಲೆಯಿಂದ ಚುನಾವಣಾ ಪ್ರಚಾರ ಆರಂಭವಾಗಲಿದೆ. 6ರಂದು ಬೆಳಿಗ್ಗೆ 10.30ಕ್ಕೆ ದೇವಾಲಯದಲ್ಲಿ ಪೂಜೆ ಸಲ್ಲಿಸುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರು, ಶಾಸಕರು ಪಕ್ಷದ ಅಭ್ಯರ್ಥಿಗಳ ಪರ ಪ್ರಚಾರ ಕಾರ್ಯಕ್ಕೆ ಚಾಲನೆ ನೀಡಲಿದ್ದಾರೆ.

ಬೆಂಬಲ ಕೊಡುವಂತೆ ಕೇಳಿಲ್ಲ: ಕಾಂಗ್ರೆಸ್‌ಗೆ ಎಸ್‌ಡಿಪಿಐ ಪಕ್ಷದ ಬೆಂಬಲದ ಕುರಿತು ಪ್ರತಿಕ್ರಿಯಿಸಿದ ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ಬಿ.ಕೆ. ಹರಿಪ್ರಸಾದ್, 'ನಾವು ಯಾರ ಬೆಂಬಲವನ್ನೂ ಕೇಳಿಲ್ಲ. ಯಾರಾದರೂ ಬೆಂಬಲ ಕೊಡುವುದಾದರೆ, ಅದು ಅವರಿಗೆ ಸೇರಿದ್ದು' ಎಂದರು.

'ಕಾಶ್ಮೀರದಲ್ಲಿ ಪಿಡಿಪಿ ಜೊತೆ ಬಿಜೆಪಿಯವರು ಸರ್ಕಾರ ರಚಿಸಿದ್ದರು. ಆಗ ಅವರು (ಬಿಜೆಪಿಯವರು) ಹೇಗೆ ಬೆಂಬಲ ಪಡೆದುಕೊಂಡಿದ್ದರು? ಹಾಗೆಂದು, ನಾವು ಕೋಮುವಾದಿ ಪಕ್ಷದ ಬೆಂಬಲ ಕೇಳಿಲ್ಲ. ನಾವು ಕೇಳಿದ್ದರೆ ಅದು ಪಕ್ಷದ ಸಿದ್ಧಾಂತಕ್ಕೆ ತಪ್ಪಾಗುತ್ತದೆ' ಎಂದರು.

ಬಿಜೆಪಿಯಿಂದ ರಹಸ್ಯ ಕಾರ್ಯಸೂಚಿ: ಸುದ್ದಿಗಾರರ ಜೊತೆ ಮಾತನಾಡಿದ ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ಸುಧಾಮ್ ದಾಸ್, 'ತನ್ನ ರಹಸ್ಯ ಕಾರ್ಯಸೂಚಿಯನ್ನು ಹಂತ ಹಂತವಾಗಿ ಬಿಜೆಪಿ ಜಾರಿಗೆ ತರುತ್ತಿದೆ. ಮನುವಾದವನ್ನು ಜಾರಿಗೆ ತರುವುದು ಬಿಜೆಪಿಯವರ ಮುಖ್ಯ ಕಾರ್ಯಸೂಚಿ' ಎಂದು ದೂರಿದರು.

ಐ.ಟಿ ವಿರೋಧಿ ನೀತಿ: ಬಿಜೆಪಿ ಟೀಕೆ

ಬೆಂಗಳೂರು: ರಾಜ್ಯ ಸರ್ಕಾರ ಮಾಹಿತಿ ತಂತ್ರಜ್ಞಾನ (ಐ.ಟಿ) ಕ್ಷೇತ್ರದ ವಿರೋಧಿ ನೀತಿ ಅನುಸರಿಸುತ್ತಿರುವುದರಿಂದ ಐ.ಟಿ ಉದ್ಯಮಗಳು ಬೆಂಗಳೂರು ಬಿಟ್ಟು ಹೋಗುವ ಸಾಧ್ಯತೆ ಇದೆ ಎಂದು ಬಿಜೆಪಿ ಪ್ರಕೋಷ್ಠಗಳ ರಾಜ್ಯ ಸಂಯೋಜಕ ಎಸ್. ದತ್ತಾತ್ರಿ ಹೇಳಿದರು.

ಬೆಂಗಳೂರಿನಲ್ಲಿ ನೀರು ಸಿಗುತ್ತಿಲ್ಲ, ಆದ್ದರಿಂದ ಐ.ಟಿ ಉದ್ಯಮಗಳು ಕೇರಳಕ್ಕೆ ಬರಲಿ ಎಂದು ಅಲ್ಲಿನ ಸಚಿವರೊಬ್ಬರು ಕರೆ ನೀಡಿರುವುದು ಕರ್ನಾಟಕಕ್ಕೆ ಅವಮಾನಕರ ಎಂದು ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಬೆಂಗಳೂರಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಮಿತಿ ಮೀರಿದೆ. ಇದಕ್ಕೆ ಕುಡಿಯುವ ನೀರಿನ ಕುರಿತು ಸಮರ್ಪಕ ನೀತಿ ಇಲ್ಲದೇ ಇರುವುದೇ ಕಾರಣ. ನೀರಿನ ಟ್ಯಾಂಕರ್‌ಗಳಿಗೆ ಸರಿಯಾದ ನೀತಿ ರೂಪಿಸಿಲ್ಲ. ಐ.ಟಿ ಉದ್ಯೋಗಿಗಳು ಇರುವ ಅಪಾರ್ಟ್‌ಮೆಂಟ್‌ಗಳಲ್ಲಿ ನೀರು ಸಿಗುತ್ತಿಲ್ಲ. ಟ್ಯಾಂಕರ್ ಮಾಫಿಯಾ ಜನರ ಸುಲಿಗೆ ಮಾಡುತ್ತಿದ್ದರೂ ಸರ್ಕಾರ ಮೌನವಹಿಸಿದೆ ಎಂದು ಅವರು ದೂರಿದರು.

ಕೊಳವೆ ಬಾವಿ ಕೊರೆಸುವ ವೆಚ್ಚವೂ ಬಹುತೇಕ ದುಪ್ಪಟ್ಟಾಗಿದೆ. ಈ ವಿಷಯದಲ್ಲೂ ಸರಿಯಾದ ನೀತಿ ಇಲ್ಲ. ಸಮರ್ಪಕ ಸಂಚಾರ ವ್ಯವಸ್ಥೆ ಇಲ್ಲದೆ, ಐ.ಟಿ ಉದ್ಯೋಗಿಗಳು ರಸ್ತೆಯಲ್ಲೇ ಬಹಳ ಸಮಯ ಕಳೆಯುವ ದುಃಸ್ಥಿತಿ ಬಂದಿದೆ. ಬಿ.ಎಸ್. ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆಗಿದ್ದಾಗ, ಟ್ರಾಫಿಕ್ ಸಮಸ್ಯೆ ಇರುವಲ್ಲಿಗೆ ತೆರಳಿ, ಅಲ್ಲಿ ನಿಂತು ಗಮನಿಸಿ, ಸಮಸ್ಯೆ ಪರಿಹಾರಕ್ಕೆ ಯೋಜನೆ ರೂಪಿಸಿ ಅನುಷ್ಠಾನಕ್ಕೆ ತಂದಿದ್ದರು ಎಂದು ನೆನಪಿಸಿದರು.

ಶುಕ್ರವಾರ, ಏಪ್ರಿಲ್ 5, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 96 | ಪುಟ 16
● www.prajavani.net
prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ಏಪ್ರಿಲ್‌ನಲ್ಲಿ ನಟ ಆಶಿಕಾ ರಂಗನಾಥ್ ನಟನೆಯ ಎರಡು ಸಿನಿಮಾಗಳು ತೆರೆಕಾಣುತ್ತಿವೆ.

ಆಳ-ಅಗಲ: ಲಡಾಖ್ ನೆಲವನ್ನು ಸರ್ಕಾರ ಚೀನಾಕ್ಕೆ ಬಿಟ್ಟುಕೊಟ್ಟಿತೇ?
ಗುಡಿಸಲಲ್ಲೇ ಪುರಸಭೆ ಸದಸ್ಯೆ ವಾಸ 5
'ಬಿಜೆಪಿಗೆ ತಕ್ಕ ಉತ್ತರ ಕೊಡುವ ಕಾಲ' 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
74,227 ▲	22,514 ▲	₹72,190 (ಬೆಂಗಳೂರು) ▲	₹81,200 (ಬೆಂಗಳೂರು) ▲	83.39 ▲

ದುಭಾಷಿ ನೆರವಿನಿಂದ ವಾದ ಆಲಿಸಲು ಹೈಕೋರ್ಟ್ ಸಜ್ಜು

ಪ್ರಜಾವಾಣಿ ವಾರ್ತೆ

ಸಾರಾ ಸನ್ನಿ

ಬೆಂಗಳೂರು: ಸುಪ್ರೀಂ ಕೋರ್ಟ್‌ನಲ್ಲಿ ದುಭಾಷಿಯ ನೆರವಿನಿಂದ ಸಂಕೇತ ಭಾಷೆ ಬಳಸಿ ಕಳೆದ ವರ್ಷ ಅಕ್ಟೋಬರ್‌ನಲ್ಲಿ ವಾದ ಮಂಡಿಸಿ ಇತಿಹಾಸ ಸೃಷ್ಟಿಸಿರುವ ನಗರದ ವಾಕ್ ಮತ್ತು ಶ್ರವಣದೋಷ ಇರುವ ವಕೀಲೆ ಸಾರಾ ಸನ್ನಿ ಇದೀಗ ಕರ್ನಾಟಕ ಹೈಕೋರ್ಟ್‌ನಲ್ಲೂ ವಾದ ಮಂಡಿಸಲು ತಯಾರಾಗಿದ್ದಾರೆ. ಕರ್ನಾಟಕ ಹೈಕೋರ್ಟ್ ಇತಿಹಾಸದಲ್ಲೇ ಮೊದಲ ಬಾರಿಗೆ ನಡೆಯುತ್ತಿರುವ ಇಂತಹುದೊಂದು ವಿಶೇಷ ಕಲಾಪಕ್ಕೆ ಹೈಕೋರ್ಟ್ ಹಾಲ್ 23 ಇದೇ 8ರಂದು ಸಾಕ್ಷಿಯಾಗಲಿದೆ.

11ನೇ ಪುಟ ನೋಡಿ

ಚಿನಕುರಳಿ
ಪ್ರಕಾಶ್ ಶೆಟ್ಟಿ



ಮೊದಲ ಹಂತದ ಕ್ಷೇತ್ರಗಳ ನಾಮಪತ್ರ ಸಲ್ಲಿಕೆ ಕೊನೆ ● ಇದೇ 26ಕ್ಕೆ ಮತದಾನ

14 ಕ್ಷೇತ್ರ; ಸವಾಲಿನ ಸ್ಪಷ್ಟಚಿತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೊದಲ ಹಂತದಲ್ಲಿ ಮತದಾನ ನಡೆಯಲಿರುವ 14 ಕ್ಷೇತ್ರಗಳಲ್ಲಿನ ನಾಮಪತ್ರ ಸಲ್ಲಿಕೆಗೆ ಗುರುವಾರ ತೆರೆ ಬಿದ್ದಿದೆ. ಅಭ್ಯರ್ಥಿ ಆಖೈರಾಗದೇ ಕೊನೆಕ್ಷಣದವರೆಗೂ ಕುತೂಹಲ ಉಳಿಸಿಕೊಂಡಿದ್ದ ಕ್ಷೇತ್ರಗಳಲ್ಲಿ ಪರಸ್ಪರ ಎದುರಾಳಿಗಳು ಯಾರೆಂಬುದು ಖಚಿತವಾಗಿದ್ದು, ಸವಾಲಿನ ಸ್ಪಷ್ಟಚಿತ್ರಣ ಕಣದಲ್ಲಿ ಕಾಣಿಸಿದೆ.

ನಾಮಪತ್ರ ಸಲ್ಲಿಸುವ ಕೊನೆಯ ದಿನವಾದ ಏ.4ರಂದು 183 ಅಭ್ಯರ್ಥಿಗಳು ಸೇರಿದಂತೆ ಇಲ್ಲಿಯವರೆಗೆ 358 ಅಭ್ಯರ್ಥಿಗಳು 492 ನಾಮಪತ್ರ ಸಲ್ಲಿಸಿದ್ದಾರೆ. ಶುಕ್ರವಾರ (ಏ.5) ನಾಮಪತ್ರಗಳ ಪರಿಶೀಲನೆ ನಡೆಯಲಿದೆ. ನಾಮಪತ್ರ ಹಿಂಪಡೆಯುವ ಅವಧಿ ಏ. 8ಕ್ಕೆ ಮುಕ್ತಾಯವಾಗಲಿದೆ.

ಮಾರ್ಚ್ 28ರಂದು ಅಧಿಸೂಚನೆ ಹೊರಬಿದ್ದಿದ್ದು, ಆರಂಭಿಕ ದಿನಗಳಲ್ಲಿ ನಾಮಪತ್ರದ ಭರಾಟೆ ಇರಲಿಲ್ಲ. ಕೊನೆಯ ನಾಲ್ಕುದಿನಗಳಲ್ಲಿ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸುವ ತರಾತುರಿಗೆ ಬಿದ್ದರು. ತೀವ್ರ ಸ್ಪರ್ಧೆ ಇರುವ ಕ್ಷೇತ್ರಗಳಲ್ಲಿ ಭಾರಿ ಜನ ಸೇರಿಸಿದ ಅಭ್ಯರ್ಥಿಗಳು, ತಮ್ಮ ಬಲವನ್ನೂ ಪ್ರದರ್ಶಿಸಿದರು.

ನಾಮಪತ್ರ ಸಲ್ಲಿಕೆ ಆರಂಭವಾಗುವ ದಿನಕ್ಕೂ ಮೊದಲೇ ಬಹುತೇಕ ಕ್ಷೇತ್ರಗಳ ಅಭ್ಯರ್ಥಿಗಳ ಹೆಸರು ಘೋಷಣೆಯಾಗಿದ್ದವು. ಬಿಜೆಪಿ-ಜೆಡಿಎಸ್ ಮೈತ್ರಿಕೂಟ ಸ್ಪರ್ಧಿಸುವ ಕ್ಷೇತ್ರಗಳ ಪೈಕಿ ಚಿತ್ರದುರ್ಗ ಹಾಸನ, ಮಂಡ್ಯ ಮತ್ತು ಕೋಲಾರ ಕ್ಷೇತ್ರಗಳ ಅಭ್ಯರ್ಥಿ ಹೆಸರುಗಳು ಘೋಷಣೆಯಾಗಿರಲಿಲ್ಲ.

5ನೇ ಪುಟ ನೋಡಿ

ಯಾರಿಗೆಲ್ಲ ಪ್ರತಿಷ್ಠೆ?



● ದೇವೇಗೌಡರು ಮಂಡ್ಯದಲ್ಲಿ ತಮ್ಮ ಪುತ್ರ ಕುಮಾರಸ್ವಾಮಿ, ಹಾಸನದಲ್ಲಿ ಮೊಮ್ಮಗ ಪ್ರಜ್ವಲ್ ರೇವಣ್ಣ ಅವರನ್ನು ಕಣಕ್ಕೆ ಇಳಿಸಿದ್ದಾರೆ. ಅಲ್ಲದೇ, ಬಿಜೆಪಿ ಟಿಕೆಟ್ ಪಡೆದು ಬೆಂಗಳೂರು ಗ್ರಾಮಾಂತರದಿಂದ ಕಣಕ್ಕೆ ಇಳಿದಿರುವ ಅಳಿಯ ಡಾ.ಸಿ.ಎನ್.ಮಂಜುನಾಥ್ ಅವರನ್ನು ಗೆಲ್ಲಿಸಿಕೊಳ್ಳಬೇಕಿದೆ

● ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಬ್ಬರಿಗೂ ತಮ್ಮ ತವರು ಜಿಲ್ಲೆಗಳ ಆಸುಪಾಸಿನ ವಿವಿಧ ಕ್ಷೇತ್ರಗಳಲ್ಲಿ ಹೆಚ್ಚಿನ ಸ್ಥಾನಗಳನ್ನು ಗೆಲ್ಲಿಸಿಕೊಳ್ಳುವುದು ಸವಾಲಾಗಿದೆ. ಶಿವಕುಮಾರ್ ಅವರಿಗೆ ತಮ್ಮ ಡಿ.ಕೆ. ಸುರೇಶ್ ಗೆಲುವಿನ ಜತೆಗೆ, ಒಕ್ಕಲಿಗ ಮತ ಪ್ರಾಬಲ್ಯದ ಕ್ಷೇತ್ರಗಳಲ್ಲಿ ತಮ್ಮ ಸಾಮರ್ಥ್ಯ ಪ್ರದರ್ಶಿಸುವ ಅವಕಾಶ ಇದಾಗಿದೆ

● ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರಾಗಿ ಮೊದಲ ಚುನಾವಣೆ ಎದುರಿಸುತ್ತಿರುವ ಬಿ.ವೈ. ವಿಜಯೇಂದ್ರ ಹಾಗೂ ಅವರ ತಂದೆ ಬಿ.ಎಸ್. ಯಡಿಯೂರಪ್ಪ ಅವರಿಗೂ ಹಲವರನ್ನು ಗೆಲ್ಲಿಸಿಕೊಳ್ಳುವುದು ಪ್ರತಿಷ್ಠೆಯಾಗಿದೆ

358 ಒಟ್ಟು ಅಭ್ಯರ್ಥಿಗಳು | **333** ನಾಮಪತ್ರ ಸಲ್ಲಿಸಿದ ಪುರುಷರು | **25** ನಾಮಪತ್ರ ಸಲ್ಲಿಸಿದ ಮಹಿಳೆಯರು

ಕಣದ ಪ್ರಮುಖ ಹುರಿಯಾಳುಗಳು

- ಎಚ್.ಡಿ. ಕುಮಾರಸ್ವಾಮಿ (ಜೆಡಿಎಸ್)
- ಶೋಭಾ ಕರಂದ್ಲಾಜೆ (ಬಿಜೆಪಿ)
- ವಿ. ಸೋಮಣ್ಣ (ಬಿಜೆಪಿ)
- ಡಾ. ಕೆ. ಸುಧಾಕರ್ (ಬಿಜೆಪಿ)
- ಕೋಟ ಶ್ರೀನಿವಾಸ ಪೂಜಾರಿ (ಬಿಜೆಪಿ)
- ಯದುವೀರ ಒಡೆಯರ್ (ಬಿಜೆಪಿ)
- ಡಾ.ಸಿ.ಎನ್. ಮಂಜುನಾಥ್ (ಬಿಜೆಪಿ)
- ಡಿ.ಕೆ. ಸುರೇಶ್ (ಕಾಂಗ್ರೆಸ್)
- ಗೋವಿಂದ ಕಾರಜೋಳ (ಬಿಜೆಪಿ)
- ತೇಜಸ್ವಿ ಸೂರ್ಯ (ಬಿಜೆಪಿ)

ಇತರ ರಾಜ್ಯಗಳಲ್ಲಿ ನಾಮಪತ್ರ ಸಲ್ಲಿಸಿದ ಪ್ರಮುಖರು


ರಾಜೀವ್ ಚಂದ್ರಶೇಖರ್ (ಬಿಜೆಪಿ ತಿರುವನಂತಪುರ, ಕೇರಳ)

ಹೇಮಾ ಮಾಲಿನಿ (ಬಿಜೆಪಿ; ಮಥುರಾ, ಉತ್ತರ ಪ್ರದೇಶ)

ಕೆ.ಸಿ.ವೇಣುಗೋಪಾಲ್ (ಕಾಂಗ್ರೆಸ್; ಆಲಪ್ಪುಳ, ಕೇರಳ)

ಸುರೇಶ್ ಗೋಪಿ (ಬಿಜೆಪಿ; ತ್ರಿಶ್ಶೂರ್, ಕೇರಳ)

● ಭೂಪೇಶ್ ಬಘೇಲ್ (ಕಾಂಗ್ರೆಸ್; ರಾಜನಂದಗಾಂವ್, ಛತ್ತೀಸಗಢ)

ಕಾಗುಣಿತ ದೋಷವಿದ್ದರೂ ಮತ

ನವದೆಹಲಿ (ಪಿಟಿಐ): ಮತ ಚಲಾಯಿಸುವ ಹಕ್ಕಿನಿಂದ ಯಾವುದೇ ಅರ್ಹ ಮತದಾರ ವಂಚಿತನಾಗ ಬಾರದು ಎಂಬ ಕಾರಣದಿಂದ ಕಾಗುಣಿತ, ಮುದ್ರಣ ದೋಷವಿದ್ದರೆ ಅದನ್ನು ಕಡೆಗಣಿಸಿ ಅರ್ಹ ಗುರುತುಚೀಟಿ ಆಧರಿಸಿ ಮತ ಚಲಾವಣೆಗೆ ಅವಕಾಶ ಕಲ್ಪಿಸಬೇಕು ಎಂದು ಚುನಾವಣಾ ಆಯೋಗ ಸೂಚಿಸಿದೆ.

ಗುರುತುಚೀಟಿಯಲ್ಲಿ ಇರುವ ಭಾವ ಚಿತ್ರ ಹೋಲಿಕೆ ಆಗದಿದ್ದಲ್ಲಿ, ಆಯೋಗವು ಪಟ್ಟಿ ಮಾಡಿರುವ ಮತದಾರರ ಭಾವಚಿತ್ರವುಳ್ಳ ಪರ್ಯಾಯ ಗುರುತುಚೀಟಿಯನ್ನು ಹಾಜರುಪಡಿಸಬಹುದು ಎಂದು ತಿಳಿಸಿದೆ.

ಮತದಾರರ ಗುರುತುಚೀಟಿ ಇಲ್ಲದವರು ಪರ್ಯಾಯವಾಗಿ ಆಧಾರ್ ಕಾರ್ಡ್, ಉದ್ಯೋಗ ಖಾತ್ರಿ ಜಾಬ್‌ಕಾರ್ಡ್, ಬ್ಯಾಂಕ್ ಅಥವಾ ಅಂಚೆ ಕಚೇರಿಯ ಭಾವಚಿತ್ರವುಳ್ಳ ಪಾಸ್‌ಬುಕ್, ವಾಹನ ಚಾಲನೆ ಪರವಾನಗಿ, ಪ್ಯಾನ್ ಕಾರ್ಡ್, ಪಾಸ್‌ಪೋರ್ಟ್ ಇತ್ಯಾದಿ ಗುರುತಿನ ಚೀಟಿ ಬಳಸಬಹುದು.

ಕೇಜ್ರಿವಾಲ್ ವಜಾ ಕೋರಿದ್ದ ಅರ್ಜಿ ವಿಚಾರಣೆಗೆ ಹೈಕೋರ್ಟ್ ನಕಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ದೆಹಲಿ ಅಬಕಾರಿ ನೀತಿ ಹಗರಣದಲ್ಲಿ ಜಾರಿ ನಿರ್ದೇಶನಾಲಯದಿಂದ ಬಂಧಿತರಾಗಿರುವ ಅರವಿಂದ ಕೇಜ್ರಿವಾಲ್ ಅವರನ್ನು ದೆಹಲಿಯ ಮುಖ್ಯಮಂತ್ರಿ ಸ್ಥಾನದಿಂದ ವಜಾಗೊಳಿಸಬೇಕೆಂಬ ಮನವಿಯನ್ನು ದೆಹಲಿ ಹೈಕೋರ್ಟ್ ಗುರುವಾರ ತಿರಸ್ಕರಿಸಿದೆ.

ಈ ಕುರಿತ ಅರ್ಜಿ ವಿಚಾರಣೆ ನಡೆಸಿದ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಮನಮೋಹನ್ ಮತ್ತು ನ್ಯಾಯಮೂರ್ತಿ ಮನ್ಮೀತ್ ಪಿ.ಎಸ್. ಅರೋರಾ ಅವರ ಪೀಠವು, ಇದು ನ್ಯಾಯಾಂಗ ಹಸ್ತಕ್ಷೇಪದ ವ್ಯಾಪ್ತಿಯಿಂದ ಹೊರಗಿದ್ದು, ಸರ್ಕಾರದ ಇತರ ಅಂಗಗಳು ಪರಿಶೀಲಿಸಬಹುದು ಎಂದು ಹೇಳಿತು. ಈ ಕುರಿತು ಸುರ್ಜಿತ್ ಸಿಂಗ್ ಯಾದವ್ ಎಂಬುವರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಪರಿಗಣಿಸಲು ಹೈಕೋರ್ಟ್ ನಿರಾಕರಿಸಿತು.

> **ಈ ವಿಷಯವನ್ನು ಲೆಫ್ಟಿನೆಂಟ್ ಗವರ್ನರ್ ಪರಿಶೀಲಿಸುತ್ತಾರೆ. ಅದು ರಾಷ್ಟ್ರಪತಿ ಬಳಿಯೂ ಹೋಗುತ್ತದೆ. ಇದು ಬೇರೆ ಅಂಗಕ್ಕೆ ಸೇರಿದ ಕೆಲಸವಾಗಿದ್ದು, ಇದರಲ್ಲಿ ನ್ಯಾಯಾಂಗ ಹಸ್ತಕ್ಷೇಪಕ್ಕೆ ಅವಕಾಶವಿಲ್ಲ**
> **ದೆಹಲಿ ಹೈಕೋರ್ಟ್**

'ಹಣಕಾಸಿನ ತಪ್ಪುಗಳ ಕುರಿತ ಆರೋಪ ಹೊತ್ತಿರುವ ವ್ಯಕ್ತಿಗಳನ್ನು ಉನ್ನತ ಹುದ್ದೆಯಲ್ಲಿ ಮುಂದುವರಿಸಬಹುದೇ? ಇದರಿಂದ ಪ್ರಜಾಪ್ರಭುತ್ವದ ಸಂಸ್ಥೆಗಳ ಸಮಗ್ರತೆಗೆ ಅಪಾಯ ಎದುರಾಗಬಹುದು' ಎಂದು ಪಿಐಎಲ್‌ನಲ್ಲಿ ಪ್ರತಿಪಾದಿಸಲಾಗಿತ್ತು.

'ಕೇಜ್ರಿವಾಲ್ ಅವರಿಗೆ ಮುಖ್ಯಮಂತ್ರಿಯಾಗಿ ಮುಂದುವರಿಯಲು ಕಾನೂನಿನ ಅಡ್ಡಿ ಏನಾದರೂ ಇದ್ದರೆ ತೋರಿಸಿ' ಎಂದು ಪೀಠವು ಅರ್ಜಿದಾರರ ಪರ ವಕೀಲರನ್ನು ಕೇಳಿತು.

'ಈ ಕುರಿತು ಸಾಂವಿಧಾನಿಕ ವೈಫಲ್ಯವಿದ್ದರೆ ರಾಷ್ಟ್ರಪತಿ ಅಥವಾ ರಾಜ್ಯಪಾಲರು ಕ್ರಮ ತೆಗೆದುಕೊಳ್ಳುತ್ತಾರೆ. ಇದರಲ್ಲಿ ನ್ಯಾಯಾಂಗ ಹಸ್ತಕ್ಷೇಪಕ್ಕೆ ಅವಕಾಶವಿದೆಯೇ' ಎಂದು ಪ್ರಶ್ನಿಸಿತು.

11ನೇ ಪುಟ ನೋಡಿ

ತೆರೆದ ಕೊಳವೆಬಾವಿಯೊಳಗೆ ಬಿದ್ದಿದ್ದ ಮಗು ಸಾತ್ವಿಕ್‌ನನ್ನು ರಕ್ಷಣಾ ಸಿಬ್ಬಂದಿ ಯಶಸ್ವಿ ಕಾರ್ಯಾಚರಣೆ ನಡೆಸಿ ಹೊರತಂದರು –ಪ್ರಜಾವಾಣಿ ಚಿತ್ರ: ಸಂಜೀವ ಅಕ್ಕಿ

ತೆರೆದ ಕೊಳವೆಬಾವಿಗೆ ಬಿದ್ದ ಮಗು ರಕ್ಷಣೆ

ಸಾವು ಗೆದ್ದ ಸಾತ್ವಿಕ್

ಸತತ 20 ಗಂಟೆ ನಡೆದ ಕಾರ್ಯಾಚರಣೆ

● ಬಸವರಾಜ ಸಂಪಳ್ಳಿ

ವಿಜಯಪುರ: ಇಂಡಿ ತಾಲ್ಲೂಕಿನ ಲಚ್ಯಾಣ ಗ್ರಾಮದ ತೋಟದ ಮನೆ ಬಳಿ ರೈತ ಸತೀಶ ಮುಜಗೊಂಡ ಎರಡು ದಿನಗಳ ಹಿಂದೆ ಕೊರೆಯಿಸಿದ್ದ ಕೊಳವೆಬಾವಿಗೆ ತಲೆ ಕೆಳಗಾಗಿ ಬಿದ್ದು, 20 ಗಂಟೆ ಜೀವನ್ಮರಣದ ನಡುವೆ ಹೋರಾಡಿದ 14 ತಿಂಗಳ ಮಗು ಸಾತ್ವಿಕ್ ಕೊನೆಗೂ ಬದುಕಿ ಬಂದ.

ರಾಷ್ಟ್ರೀಯ ಮತ್ತು ರಾಜ್ಯ ವಿಪತ್ತು ಕಾರ್ಯಪಡೆ, ಅಗ್ನಿಶಾಮಕ ದಳ ಮತ್ತು ಪೊಲೀಸ್ ಸಿಬ್ಬಂದಿ ನಡೆಸಿದ ರಕ್ಷಣಾ ಕಾರ್ಯಾಚರಣೆ ಸಫಲವಾಯಿತು. ಕೈಕಾಲು ಮುದುಡಿಕೊಂಡು ಕಣ್ಣು ಮುಚ್ಚಿ ಅಳುತ್ತಿದ್ದ ಸಾತ್ವಿಕ್, ತಂದೆ ಸತೀಶ ಮತ್ತು ತಾಯಿ ಪೂಜಾ ಮಡಿಲು ಸೇರಿದಾಗ ಕಾರ್ಯಾಚರಣೆ ಸ್ಥಳದಲ್ಲಿ ಸಾವಿರಾರು ಜನರ ಹರ್ಷೋದ್ಗಾರ ಮುಗಿಲು ಮುಟ್ಟಿತು. ಜಯ ಘೋಷ ಮೊಳಗಿದವು. ಎಲ್ಲರ ಮೊಗದಲ್ಲಿ ನಿರಾಳಭಾವ ಮೂಡಿತು.

ಬುಧವಾರ ಸಂಜೆ 5.30ಕ್ಕೆ ಕೊಳವೆ ಬಾವಿಯೊಳಗೆ ಮಗು ಬಿತ್ತು. ನಂತರ 6.30ಕ್ಕೆ ಆರಂಭಗೊಂಡ ಕಾರ್ಯಾಚರಣೆ ಗುರುವಾರ ಮಧ್ಯಾಹ್ನ 1.45ಕ್ಕೆ ಮಗುವನ್ನು ಸುರಕ್ಷಿತವಾಗಿ ಹೊರತೆಗೆಯುವುದರ ಮೂಲಕ ಕೊನೆಗೊಂಡಿತು.

5ನೇ ಪುಟ ನೋಡಿ

ಯಶಸ್ವಿಯಾಗಿದ್ದು ಹೇಗೆ?

ತಲೆ ಕೆಳಗಾಗಿ ಬಿದ್ದ ಸಾತ್ವಿಕ್‌ನನ್ನು ಜೀವ ಸಹಿತ ಸುರಕ್ಷಿತವಾಗಿ ಹೊರತರುವುದು ಸವಾಲು ಆಗಿತ್ತು.

ಒಟ್ಟು 265 ಅಡಿ ಆಳದ ಕೊಳವೆಬಾವಿಗೆ ಬಿದ್ದಿದ್ದ ಮಗು 18 ಅಡಿ ಆಳದಲ್ಲಿ ಸಿಲುಕಿದ್ದನ್ನು ಆರಂಭದಲ್ಲೇ ಖಚಿತ ಪಡಿಸಿಕೊಂಡ ಇಂಡಿ ಅಗ್ನಿಶಾಮಕ ದಳದ ಸಿಬ್ಬಂದಿ, ಮತ್ತಷ್ಟು ಆಳಕ್ಕೆ ಜಾರದಂತೆ ಮುನ್ನೆಚ್ಚರಿಕೆ ವಹಿಸಿದರು. ಮಗುವಿನ ಕಾಲಿಗೆ ಪಟ್ಟಿ ಹಾಕಿ, ಬಿಗಿ ಮಾಡಿದರು. ಉಸಿರಾಟಕ್ಕೆ ಅನುಕೂಲ ಆಗುವಂತೆ ವೈದ್ಯರ ತಂಡ ಆಮ್ಲಜನಕದ ವ್ಯವಸ್ಥೆ ಕಲ್ಪಿಸಿತು.

ಬೆಳಗಾವಿ, ಕಲಬುರಗಿಯಿಂದ ಎಸ್‌ಡಿಆರ್‌ಎಫ್ ಮತ್ತು ಹೈದರಾಬಾದ್‌ನಿಂದ ಬುಧವಾರ ತಡರಾತ್ರಿ ಬಂದ ಎನ್‌ಡಿಆರ್‌ಎಫ್ ಸಿಬ್ಬಂದಿ, ಕೊಳವೆ ಬಾವಿಗೆ ಸಮಾನಾಂತರವಾಗಿ ಮೂರು ಅಡಿ ಅಂತರದಲ್ಲಿ ಬೃಹತ್ ಯಂತ್ರಗಳ ನೆರವಿನಿಂದ ಗುಂಡಿ ತೋಡಿದರು.

5ನೇ ಪುಟ ನೋಡಿ

THERE IS SO MUCH MONEY TO MAKE IN THE TRAVEL BUSINESS

BECOME OUR FRANCHISEE NOW!

CHARIOT WORLD TOURS LTD FRANCHISE OPPORTUNITY

- Low investment
- Most recognised brand association
- World class operations
- Largest choice of tours for customers
- Top class business support
- Monthly commission payout

9945775555
atmanand@chariotworldtours.com

CHARIOT
CHARIOT WORLD TOURS LIMITED
3446/40, 1st 'F' Cross, Next to Bunts Sangha, Vijayanagar, Bangalore 40

5 ಹೆಚ್ಚುವರಿ ನ್ಯಾಯಮೂರ್ತಿಗಳ ಕಾಯಂಗೆ ಶಿಫಾರಸು

ನವದೆಹಲಿ: ಕರ್ನಾಟಕ ಹೈಕೋರ್ಟ್‌ನ ಐವರು ಹೆಚ್ಚುವರಿ ನ್ಯಾಯಮೂರ್ತಿಗಳನ್ನು ಅದೇ ಹೈಕೋರ್ಟ್‌ನ ಕಾಯಂ ನ್ಯಾಯಮೂರ್ತಿಗಳಾಗಿ ನೇಮಕ ಮಾಡುವಂತೆ ಸುಪ್ರೀಂ ಕೋರ್ಟ್ ಕೊಲಿಜಿಯಂ ಶಿಫಾರಸು ಮಾಡಿದೆ.

ನ್ಯಾಯಮೂರ್ತಿ ಗುರುಸಿದ್ದಯ್ಯ ಬಸವರಾಜ ಅವರನ್ನು ಆಗಸ್ಟ್ 16ರಿಂದ ಅನ್ವಯವಾಗುವಂತೆ ಹೆಚ್ಚುವರಿ ನ್ಯಾಯಮೂರ್ತಿಯಾಗಿ ನೇಮಕ ಮಾಡುವಂತೆ ಸಿಜೆಐ ಡಿ.ವೈ.ಚಂದ್ರಚೂಡ್ ಅವರ ನೇತೃತ್ವದ ಮೂವರು ಸದಸ್ಯರಿರುವ ಕೊಲಿಜಿಯಂ ಶಿಫಾರಸು ಮಾಡಿದೆ.

ನ್ಯಾಯಮೂರ್ತಿಗಳಾದ ಚೆಪ್ಪುಡಿರ ಮೊನ್ನಪ್ಪ ಪೂಣಚ, ಅನಿಲ್ ಭೀಮಸೇನ ಕಟ್ಟಿ, ಚಂದ್ರಶೇಖರ ಮೃತ್ಯುಂಜಯ ಜೋಶಿ, ಉಮೇಶ ಮಂಜುನಾಥ ಭಟ್ ಅಡಿಗ ಹಾಗೂ ತಲಕಾಡ ಗಿರಿಗೌಡ ಶಿವಶಂಕರೇಗೌಡ ಅವರನ್ನು ಕಾಯಂ ನ್ಯಾಯಮೂರ್ತಿಗಳಾಗಿ ನೇಮಕ ಮಾಡುವಂತೆ ಶಿಫಾರಸು ಮಾಡಲಾಗಿದೆ.

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ,
ಎಲೆಕ್ಟ್ರೋ-ಆಪ್ಟಿಕ್ಸ್ ಸಿಸ್ಟಮ್‌ಗಳಿಗಾಗಿ ಪ್ರಯೋಗಾಲಯ (ಎಲ್‌ಇಒಎಸ್)
ಪೀಣ್ಯ, ಬೆಂಗಳೂರು-560058, ಎಲ್‌ಇಒಎಸ್ ನಿರ್ಮಾಣ ಮತ್ತು ನಿರ್ವಹಣಾ ಸಮೂಹ (ಎಲ್‌ಸಿಎಂಜಿ)
(ದೂರವಾಣಿ: (080)-22685088, 5193, 5093, 5086, (ಫ್ಯಾಕ್ಸ್: (080)-28392310].

ಇಸ್ರೋ isro

ಸಂಕ್ಷಿಪ್ತ ಇ-ಟೆಂಡರ್ (ಎನ್‌ಐಇಟಿ) ಆಹ್ವಾನಿಸುವ ಪ್ರಕಟಣೆ

ಭಾರತದ ರಾಷ್ಟ್ರಪತಿಗಳ ಪರವಾಗಿ, ಈ ಕೆಳಗಿನ ಕೆಲಸಕ್ಕಾಗಿ ಐಟಂ ದರದ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕೆಲಸದ ಹೆಸರು; ಎನ್‌ಐಟಿ ನಂ. & ದಿನಾಂಕ: ಎಲ್‌ಇಒಎಸ್ ಕ್ಯಾಂಪಸ್, ಆರ್ಯಭಟ ಕ್ಯಾಂಪಸ್ ಮತ್ತು ಐಎಸ್‌ಆರ್‌ಎಡಿ ಕ್ಯಾಂಪಸ್, ಪೀಣ್ಯ, ಬೆಂಗಳೂರು-560058ರಲ್ಲಿ ವಿವಿಧ ಸ್ಥಳಗಳಲ್ಲಿ ಪಿವಿಸಿ ನೆಲಹಾಸು ಒದಗಿಸುವ ಒಪ್ಪಂದ. ಎನ್‌ಐಇಟಿ: CMG/LEOS/2024-25/LMN-01, ದಿನಾಂಕ : 03.04.2024, **ಟೆಂಡರ್ ಮತ್ತು ಇಎಂಡಿಗೆ ಇಡಲಾದ ಅಂದಾಜು ವೆಚ್ಚ : ರೂ. 5.35 ಲಕ್ಷಗಳು, ಇಎಂಡಿ ರೂ.10,693/– ತಿಂಗಳುಗಳಲ್ಲಿ ಪೂರ್ಣಗೊಳಿಸುವ ಅವಧಿ:** (01) ವರ್ಷಗಳು, ಟೆಂಡರ್ ಡಾಕ್ಯುಮೆಂಟ್ ಅನ್ನು ಡೌನ್‌ಲೋಡ್ ಮಾಡಬಹುದು, **ತೆರೆಯುವ ದಿನಾಂಕ** : 05.04.2024, **ಮುಕ್ತಾಯವಾಗುವ ದಿನಾಂಕ** : 22.04.2024

ಕೆಲಸದ ಹೆಸರು; ಎನ್‌ಐಟಿ ನಂ. & ದಿನಾಂಕ: ಅಡ್ಮಿನ್ ಬ್ಲಾಕ್, ಎಲ್‌ಇಒಎಸ್ ಕ್ಯಾಂಪಸ್, ಬೆಂಗಳೂರು-58ನಲ್ಲಿ ಉಪನ್ಯಾಸ ಸಭಾಂಗಣಕ್ಕಾಗಿ ಹೊರ ಆವರಣದೊಂದಿಗೆ 13 ಪ್ರಯಾಣಿಕರನ್ನು ಸರಬರಾಜು ಮಾಡಲು ಮತ್ತು ನಿರ್ಮಿಸಲು (ಎಸಿಪಿ ಕ್ಲಾಡಿಂಗ್ ಮತ್ತು ಸ್ಟ್ರಕ್ಚರಲ್ ಗ್ಲ್ಯಾಸಿಂಗ್) ಕೆಲಸ, ಎನ್‌ಐಇಟಿ: CMG/LEOS/2023-24/LMN-11/R1, ದಿನಾಂಕ : 03.04.2024, **ಟೆಂಡರ್ ಮತ್ತು ಇಎಂಡಿಗೆ ಇಡಲಾದ ಅಂದಾಜು ವೆಚ್ಚ : ರೂ.23.21 ಲಕ್ಷಗಳು, ಇಎಂಡಿ ರೂ.46,414/– ತಿಂಗಳುಗಳಲ್ಲಿ ಪೂರ್ಣಗೊಳಿಸುವ ಅವಧಿ:** (04) ನಾಲ್ಕು ತಿಂಗಳುಗಳು, ಟೆಂಡರ್ ಡಾಕ್ಯುಮೆಂಟ್ ಅನ್ನು ಡೌನ್‌ಲೋಡ್ ಮಾಡಬಹುದು, **ತೆರೆಯುವ ದಿನಾಂಕ** : 05.04.2024, **ಮುಕ್ತಾಯವಾಗುವ ದಿನಾಂಕ** : 22.04.2024.

ಕೆಲಸದ ಹೆಸರು; ಎನ್‌ಐಟಿ ನಂ. & ದಿನಾಂಕ: ಎಲ್‌ಇಒಎಸ್ ಕ್ಯಾಂಪಸ್ ಮತ್ತು ಗೆಸ್ಟ್ ಹೌಸ್ ಮತ್ತು ಐಎಸ್‌ಆರ್‌ಎಡಿ ಕ್ಯಾಂಪಸ್, ಪೀಣ್ಯ, ಬೆಂಗಳೂರು-58 ನಲ್ಲಿ ಒಂದು ವರ್ಷಕ್ಕೆ ಕಾವೇರಿ ನೀರು, ಬೋರ್ ವೆಲ್ ನೀರು, ಸಂಸ್ಕರಿಸಿದ ನೀರು ಮತ್ತು ಎಸ್‌ಟಿಪಿಯಿಂದ ಹೊರಸೂಸುವ ನೀರಿನ ಭೌತಿಕ-ರಾಸಾಯನಿಕ ಮತ್ತು ಬ್ಯಾಕ್ಟೀರಿಯೊಲಾಜಿಕಲ್ ಪರೀಕ್ಷೆಯನ್ನು ಕೈಗೊಳ್ಳಲು ಒಪ್ಪಂದ; ಎನ್‌ಐಇಟಿ: CMG/LEOS/2023-24/LMN-14, ದಿನಾಂಕ : 03.04.2024, **ಟೆಂಡರ್ ಮತ್ತು ಇಎಂಡಿಗೆ ಇಡಲಾದ ಅಂದಾಜು ವೆಚ್ಚ : ರೂ. 2.69 ಲಕ್ಷಗಳು, ಇಎಂಡಿ ರೂ.5,373/–, ತಿಂಗಳುಗಳಲ್ಲಿ ಪೂರ್ಣಗೊಳಿಸುವ ಅವಧಿ:** 01 ವರ್ಷ, ಟೆಂಡರ್ ಡಾಕ್ಯುಮೆಂಟ್ ಅನ್ನು ಡೌನ್‌ಲೋಡ್ ಮಾಡಬಹುದು, **ತೆರೆಯುವ ದಿನಾಂಕ** : 05.04.2024, **ಮುಕ್ತಾಯವಾಗುವ ದಿನಾಂಕ** : 22.04.2024

ಆಸಕ್ತ ಟೆಂಡರುದಾರರು ಇ-ಟೆಂಡರ್ (ಎನ್‌ಐಇಟಿ) ಆಹ್ವಾನದ ಪ್ರಕಟಣೆಯ ಅರ್ಹತಾ ಮಾನದಂಡ ಮತ್ತು ಇತರೆ ವಿವರವನ್ನು **www.isro.gov.in** ವೆಬ್‌ಸೈಟ್‌ನಲ್ಲಿ ಪರಿಶೀಲಿಸಬಹುದು ಮತ್ತು ಟೆಂಡರ್ ದಾಖಲೆಗಳನ್ನು **www.tenderwizard.com/ISRO** ನಿಂದ ಡೌನ್‌ಲೋಡ್ ಮಾಡಬಹುದು.

ಸಹಿ/- ಸಮೂಹ ನಿರ್ದೇಶಕ
(ನಿರ್ಮಾಣ ಮತ್ತು ನಿರ್ವಹಣಾ ಸಮೂಹ) (ಸಿ&ಎಂಜಿ)
ಯುಆರ್‌ಎಸ್‌ಸಿ, ಬೆಂಗಳೂರು.

2,500 ಮೂಲೆ ನಿವೇಶನ ಅಡ: ₹1 ಸಾವಿರ ಕೋಟಿ ಸಾಲಕ್ಕೆ ನಿರ್ಧಾರ

ಆರ್ಥಿಕ ಸಂಕಷ್ಟದಲ್ಲಿ ಬಿಡಿಎ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್ಥಿಕ ಸಂಕಷ್ಟಕ್ಕೆ ಒಳಗಾಗಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ), ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿರುವ 2,500 ಮೂಲೆ ನಿವೇಶನಗಳನ್ನು ಬ್ಯಾಂಕ್‌ನಲ್ಲಿ ಅಡವಿಟ್ಟು ₹1 ಸಾವಿರ ಕೋಟಿ ಸಾಲ ಪಡೆಯಲು ನಿರ್ಧರಿಸಿದೆ.

'ಪ್ರತಿ ತಿಂಗಳು ಬಿಲ್‌ಗಳನ್ನು ಪಾವತಿಸಲು ₹200 ಕೋಟಿ ಅಗತ್ಯವಿದೆ. ಆದರೆ, ನಿವೇಶನ, ಫ್ಲ್ಯಾಟ್ ಮಾರಾಟ ಸೇರಿದಂತೆ ಯಾವುದೇ ರೀತಿಯ ಆದಾಯವಿಲ್ಲದೆ ಸಂಕಷ್ಟ ಎದುರಾಗಿದೆ' ಎಂದು ಬಿಡಿಎ ಅಧಿಕಾರಿಗಳು ತಿಳಿಸಿದ್ದಾರೆ.

'ಶಿವರಾಮ ಕಾರಂತ ಬಡಾವಣೆಗಾಗಿ ನಾವು ₹1 ಸಾವಿರ ಕೋಟಿ ವೆಚ್ಚ ಮಾಡಿದ್ದೇವೆ. ಆ ಯೋಜನೆಯನ್ನು ಪೂರ್ಣಗೊಳಿಸಲು ನಮಗೆ ಇನ್ನೂ ₹2,500 ಕೋಟಿ ಬೇಕಿದೆ. ನಿವೇಶನಗಳನ್ನು ಮಾರಾಟ ಮಾಡುವುದು ವಿಳಂಬವಾದರೆ ಮೂಲೆ ನಿವೇಶನಗಳನ್ನು ಅಡವಿಟ್ಟು ಬ್ಯಾಂಕ್‌ನಲ್ಲಿ ಸಾಲ ಪಡೆಯಲು ತೀರ್ಮಾನ ಮಾಡಲಾಗಿದೆ' ಎಂದು ಬಿಡಿಎ ಆಯುಕ್ತ ಎನ್. ಜಯರಾಮ್ ಹೇಳಿದರು.

'ನ್ಯಾಯಾಲಯದಲ್ಲಿ ಪ್ರಕರಣ ಇರುವುದರಿಂದ ಶಿವರಾಮ ಕಾರಂತ ಬಡಾವಣೆಯ ನಿವೇಶನಗಳನ್ನು ಮಾರಾಟ ಮಾಡಲಾಗುವುದಿಲ್ಲ. ಈ ಬಡಾವಣೆಯ ನಿವೇಶನಗಳು ಮಾರಾಟವಾದರೆ ₹7,000 ಕೋಟಿ ಆದಾಯ ಬರುತ್ತದೆ. 3,500ಕ್ಕೂ ಹೆಚ್ಚು ಫ್ಲ್ಯಾಟ್‌ಗಳ ಮಾರಾಟವೂ ಆಗುತ್ತಿಲ್ಲ. ಹೀಗಾಗಿ, ಪ್ರಥಮ ಬಾರಿಗೆ ಬಿಡಿಎ ತನ್ನ ಮೂಲೆ ನಿವೇಶನಗಳನ್ನು ಅಡವಿಡುತ್ತಿದೆ' ಎಂದು ಬಿಡಿಎ ಅಧಿಕಾರಿಗಳು ಮಾಹಿತಿ ನೀಡಿದರು.

'ಬಿಡಿಎ 60 ಬಡಾವಣೆಗಳನ್ನು ಅಭಿವೃದ್ಧಿಪಡಿಸಿದೆ. ಮೂಲೆ ನಿವೇಶನ, ಆಸ್ತಿ ತೆರಿಗೆ, ಕಟ್ಟಡ ನಕ್ಷೆ ಅನುಮೋದನೆಯಿಂದ ಆದಾಯ ಸಂಗ್ರಹಿಸುತ್ತಿದ್ದರೂ, ಆರ್ಥಿಕ ಸಮಸ್ಯೆ ಹೆಚ್ಚಾಗುತ್ತಿದೆ. ಹೀಗಾಗಿ ಸಾಲ ಮಾಡಲಾಗುತ್ತಿದೆ' ಎಂದರು.

ಒಣಗುತ್ತಿವೆ ಉದ್ಯಾನಗಳು

'ಬಿಡಿಎ ವ್ಯಾಪ್ತಿಯಲ್ಲಿರುವ 11 ಉದ್ಯಾನಗಳು ನಿರ್ವಹಣೆ ಇಲ್ಲದೆ ಒಣಗುತ್ತಿವೆ. ಕೊಳವೆಬಾವಿಗಳೂ ಬತ್ತಿದ್ದು, ಗುತ್ತಿಗೆದಾರರಿಗೆ ಹಣವನ್ನೂ ಪಾವತಿ ಮಾಡಿಲ್ಲ. ಇದಲ್ಲದೆ, ರಸ್ತೆ ಬದಿಯಲ್ಲಿ ಸಸಿಗಳನ್ನು ನೆಟ್ಟಿರುವ ಬಿಡಿಎ, ಅವುಗಳಿಗೆ ನೀರು ಹಾಕಲೂ ಸಾಧ್ಯವಾಗುತ್ತಿಲ್ಲ. ನರ್ಸರಿಗಳ ನಿರ್ವಹಣೆಗೂ ಹಣ ನೀಡಲಾಗಿಲ್ಲ. ಹೀಗಾಗಿ, ಎಲ್ಲೆಡೆ ಸಸಿ, ಗಿಡಗಳು ಒಣಗುತ್ತಿವೆ' ಎಂದು ಬಡಾವಣೆಯ ನಿವಾಸಿಗಳ ಆರೋಪಕ್ಕೆ ಅಧಿಕಾರಿಗಳು ಉತ್ತರಿಸಿದ್ದಾರೆ.

ಸರ್ಕಾರಿ ಕಚೇರಿ, ಪ್ರಮುಖ ಸಂಸ್ಥೆಗಳಲ್ಲಿ ಜಲಮಂಡಳಿಯಿಂದಲೇ ಕಾರ್ಯ

4 ಸಾವಿರ ಏರಿಯೇಟರ್ ಅಳವಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಲಮಂಡಳಿ ವತಿಯಿಂದ ಇಸ್ರೊ, ಬಿಬಿಎಂಪಿ, ಲೋಕಾಯುಕ್ತ ಕಚೇರಿ ಸೇರಿದಂತೆ ಹಲವು ಕಚೇರಿಗಳಲ್ಲಿ ಇರುವ ನಲ್ಲಿಗಳಿಗೆ ನಾಲ್ಕು ಸಾವಿರ ಏರಿಯೇಟರ್‌ಗಳನ್ನು ಅಳವಡಿಸಲಾಗಿದೆ.

ಮಾಲ್, ವಾಣಿಜ್ಯ ಸಂಕೀರ್ಣ, ಅಪಾರ್ಟ್‌ಮೆಂಟ್, ಸರ್ಕಾರಿ ಕಟ್ಟಡ, ಐಷಾರಾಮಿ ಹೋಟೆಲ್, ರೆಸ್ಟೋರೆಂಟ್ ಹಾಗೂ ಧಾರ್ಮಿಕ ಸ್ಥಳಗಳಲ್ಲಿ ಸ್ವಚ್ಛತೆಗಾಗಿ ಬಳಸುವ ನಲ್ಲಿಗಳಲ್ಲಿ ಫ್ಲೋ ರಿಸ್ಟ್ರಿಕ್ಟರ್/ ಏರಿಯೇಟರ್ ಅಳವಡಿಸುವುದನ್ನು ಜಲಮಂಡಳಿ ಕಡ್ಡಾಯಗೊಳಿಸಿದೆ.

ಸರ್ಕಾರಿ ಕಚೇರಿಗಳಲ್ಲಿ ಏರಿಯೇಟರ್‌ಗಳನ್ನು ಅಳವಡಿಸುವ ಮೂಲಕ ಸಾರ್ವಜನಿಕರಿಗೆ ಪ್ರೇರಣೆ ಆಗಬೇಕು ಎನ್ನುವ ದೃಷ್ಟಿಯಿಂದ ಮೊದಲ ಹಂತದಲ್ಲಿ ಬೆಂಗಳೂರು ಜಲ ಮಂಡಳಿಯ ತನ್ನ ಎಲ್ಲ ಕಚೇರಿಗಳಲ್ಲಿ ಏರಿಯೇಟರ್ ಅಳವಡಿಸಿತ್ತು. ಈಗ ಎರಡನೇ ಹಂತದಲ್ಲಿ ಬಿಡಿಎ, ಬಿಎಸ್‌ಎನ್‌ಎಲ್, ಇಂದಿರಾ ಕ್ಯಾಂಟೀನ್, ಆದಾಯ ತೆರಿಗೆ ಇಲಾಖೆ, ಬಿಬಿಎಂಪಿ ಶಾಲೆಗಳು, ಇಸ್ರೊ, ಬೆಗ್ಗರ್ಸ್ ಕಾಲೊನಿ, ಎಚ್‌ಎಎಲ್, ಬೆಮೆಲ್, ರೇಷ್ಮೆ ಮಂಡಳಿ, ಕೇಂದ್ರೀಯ ಸದನ, ಡಿಫೆನ್ಸ್, ವಿವಿ ಟವರ್, ಐಎಎಸ್ ಅಧಿಕಾರಿಗಳ ಅಸೋಸಿಯೇಷನ್, ಆರ್‌ಟಿಒ, ಜಿಲ್ಲಾಧಿಕಾರಿ ಕಚೇರಿ, ಜಯದೇವ ಆಸ್ಪತ್ರೆ, ಐಟಿಐ ಇನ್‌ಸ್ಟಿಟ್ಯೂಟ್, ಲೋಕಾಯುಕ್ತರ ನಿವಾಸ, ಕೆಪಿಟಿಸಿಎಲ್, ಕೆಎಂಎಫ್, ಬೆಸ್ಕಾಂ ಕಚೇರಿಗಳಲ್ಲಿ ಜಲಮಂಡಳಿಯಿಂದಲೇ ನಾಲ್ಕು ಸಾವಿರ ಏರಿಯೇಟರ್ ಅಳವಡಿಸಲಾಗಿದೆ.

ಸಭೆ: ಸಂಸ್ಕರಿಸಿದ ನೀರು ವಿಪುಲವಾಗಿದ್ದು ಅದರ ಮಾರುಕಟ್ಟೆಯನ್ನು ಹೆಚ್ಚಿಸಲು ಜಲಮಂಡಳಿಯ ವತಿಯಿಂದ ಸಣ್ಣ ಕೈಗಾರಿಕೆಗಳು, ಎಫ್‌ಕೆಸಿಸಿಐ ಮತ್ತು ಕಾಸಿಯಾ ಜೊತೆ ಸಭೆಯನ್ನು ಆಯೋಜಿಸಲಾಗುವುದು ಎಂದು ಜಲಮಂಡಳಿ ಅಧ್ಯಕ್ಷರಾದ ಡಾ. ರಾಮ್‌ಪ್ರಸಾತ್ ಮನೋಹರ್ ತಿಳಿಸಿದರು.

20 ಲಕ್ಷದಿಂದ 40 ಲಕ್ಷ ಲೀಟರ್ ನೀರು ಬಳಕೆದಾರರೊಂದಿಗೆ ಸಭೆ ನಡೆಸಿ ಅವರು ಮಾತನಾಡಿದರು.

'ಬೆಂಗಳೂರು ನಗರದಲ್ಲಿ ಮಾರ್ಚ್‌ನಲ್ಲಿ ಇದ್ದಂತಹ ನೀರಿನ ಅಭಾವ ಈಗ ಇಲ್ಲ. ನೀರಿನ ಸಮರ್ಪಕ ಬಳಕೆ ಹಾಗೂ ಉಳಿತಾಯಕ್ಕೆ ಒತ್ತು ನೀಡಲಾಗುತ್ತಿದೆ. ನಗರದಲ್ಲಿ ಅಗತ್ಯವಿರುವ ಕಡೆಗಳಲ್ಲಿ 1200ಕ್ಕೂ ಹೆಚ್ಚು ಸಿಂಟೆಕ್ಸ್ ಟ್ಯಾಂಕ್‌ಗಳನ್ನು ಅಳವಡಿಸಿದ್ದು, ಪ್ರತಿ ದಿನ ಸುಮಾರು 50 ಲಕ್ಷ ಲೀಟರ್‌ನಿಂದ 1 ಕೋಟಿ ಲೀಟರ್‌ವರೆಗೆ ಕುಡಿಯುವ ನೀರನ್ನು ಉಚಿತವಾಗಿ ಸರಬರಾಜು ಮಾಡಲಾಗುತ್ತಿದೆ. 20 ಲಕ್ಷದಿಂದ 40 ಲಕ್ಷ ಲೀಟರ್ ನೀರು ಬಳಕೆ ಮಾಡುವ ಸುಮಾರು 18 ಸಾವಿರ ಗ್ರಾಹಕರು ನಗರದಲ್ಲಿದ್ದಾರೆ. ಇವರು ಪ್ರತಿದಿನ ಸುಮಾರು 200 ಎಂಎಲ್‌ಡಿ ನೀರು ಬಳಸುತ್ತಿದ್ದಾರೆ. ಇವರೆಲ್ಲ ಪಂಚ ಸೂತ್ರಗಳನ್ನು ಅಳವಡಿಸಿಕೊಳ್ಳುವುದರಿಂದ ನೀರಿನ ಉಳಿತಾಯ ಸಾಧ್ಯವಿದೆ ಎಂದರು.

ಜಲಮಂಡಳಿ ವತಿಯಿಂದ ಸರ್ಕಾರಿ ಕಚೇರಿಗಳಲ್ಲಿರುವ ನಲ್ಲಿಗಳಿಗೆ ಏರಿಯೇಟರ್‌ಗಳನ್ನು ಅಳವಡಿಸಲಾಯಿತು

'ಜನರಿಗೆ ಕಾವೇರಿ ಮೇಲೆ ಪ್ರೀತಿ ಇಲ್ಲ'

ರಾಮ್‌ಪ್ರಸಾತ್ ಮನೋಹರ್

ಒಂದು ಲೀಟರ್ ಬಾಟಲ್ ನೀರಿಗೆ ನೀಡುವ ಹಣದಲ್ಲಿ ಜಲಮಂಡಳಿ ಕಾವೇರಿಯಿಂದ ಒಂದು ಸಾವಿರ ಲೀಟರ್ ನೀರನ್ನು ನಗರದ ಜನರ ಮನೆಗಳಿಗೆ ಪೂರೈಕೆ ಮಾಡುತ್ತಿದೆ. ಕಡಿಮೆ ದರದಲ್ಲಿ ದೊರೆಯುವ ವಸ್ತುಗಳ ಮೇಲೆ ಯಾವಾಗಲೂ ಜನರಿಗೆ ಹೆಚ್ಚು ಪ್ರೀತಿ ಇರುವುದಿಲ್ಲ. ಇದು ಕಾವೇರಿ ನೀರಿನ ವಿಷಯದಲ್ಲೂ ಸ್ಪಷ್ಟವಾಗಿ ಗೋಚರವಾಗುತ್ತದೆ' ಎಂದು ಜಲಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್ ಹೇಳಿದರು.

'ಒಂದು ಲೀಟರ್ ನೀರನ್ನು ಜೋಪಾನ ಮಾಡುವ ಜನರು ಕೆಲವೆಡೆಗಳಲ್ಲಿ ಅಮೂಲ್ಯವಾದ ಕಾವೇರಿ ನೀರನ್ನು ಅನಗತ್ಯವಾಗಿ ಪೋಲು ಮಾಡುತ್ತಿದ್ದಾರೆ. ಇದನ್ನ ತಡೆಗಟ್ಟುವಲ್ಲಿ ಬಳಕೆದಾರರಲ್ಲಿ ಜಾಗೃತಿ ಮೂಡಿಸಬೇಕಾಗಿರುವುದು ಬಹಳ ಅಗತ್ಯವಾಗಿದೆ' ಎಂದರು.

ಶೇ 10ರಷ್ಟು ಕಡಿತ: ಜಲಮಂಡಳಿಯಿಂದ ಪ್ರತಿ ತಿಂಗಳು 20 ಲಕ್ಷದಿಂದ 40 ಲಕ್ಷ ಲೀಟರ್‌ಗಳಷ್ಟು ಬಳಕೆ ಮಾಡುವ ಬಲ್ಕ್ ಬಳಕೆದಾರರಿಗೆ ಏಪ್ರಿಲ್ 14ರಿಂದ ಶೇ 10 ರಷ್ಟು ನೀರನ್ನು ಕಡಿತಗೊಳಿಸಲಾಗುವುದು. ಈ ಕಡಿತಗೊಳಿಸಿದ ನೀರನ್ನು ಅಗತ್ಯವಿರುವ ಪ್ರದೇಶಗಳಿಗೆ ಸರಬರಾಜು ಮಾಡಲಾಗುವುದು ಎಂದು ಹೇಳಿದರು.

ಸಂಸ್ಕರಿಸಿದ ನೀರಿನ ಬಳಕೆ ಕಡಿಮೆಯಿದೆ. ಆದರೆ ಮುಂದಿನ ದಿನಗಳಲ್ಲಿ ಜನರು ಇನ್ನೂ ಹೆಚ್ಚಿನ ಮಟ್ಟದಲ್ಲಿ ಸಣ್ಣ ಕೈಗಾರಿಕೆಗಳು ಸೇರಿದಂತೆ ಪ್ರಮುಖ ಸಂಸ್ಥೆಗಳು ಇದೇ ನೀರಿನ ಬಳಕೆ ಮಾಡಬೇಕು ಎಂದು ಹೇಳಿದರು.

ನಗರದಲ್ಲಿ ಇಂದು

ಶಿವಕುಮಾರ ಸ್ವಾಮೀಜಿ ಅವರ 117ನೇ ಜಯಂತಿ: ಉದ್ಘಾಟನೆ: ಸಿ. ಸೋಮಶೇಖರ್, ಅತಿಥಿ: ಗಂಗಾಂಬಿಕೆ ಮಲ್ಲಿಕಾರ್ಜುನ, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಉಪಸ್ಥಿತಿ: ಪ್ರಮೀಳಾ ಗರಡಿ, ಪ್ರೇಮಾ ಸೋಮಸುಂದರ್, ಪ್ರಮೀಳಾ ಫಾಲನೇತ್ರ, ಚಿತ್ಕಲ ರವಿ, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಕದಳಿ ಮಹಿಳಾ ವೇದಿಕೆ, ಸ್ಥಳ: ಶಿವರಾತ್ರಿ ರಾಜೇಂದ್ರ ಚಿಂತನ ಮಂಟಪ, ಜೆಎಸ್‌ಎಸ್ ಕಾಲೇಜಿನ ಆವರಣ, ಜಯನಗರ, ಸಂಜೆ 4

'ಥೆರೇಸಮ್ಮ (ಮದರ್)' ಏಕವ್ಯಕ್ತಿ ಪ್ರಯೋಗ: ಪ್ರಸ್ತುತಿ: ನಿರ್ದೇಶನ: ಬೇಲೂರು ರಘುನಂದನ್, ಉದ್ಘಾಟನೆ: ಕೆ.ವಿ. ನಾಗರಾಜಮೂರ್ತಿ, ಅಧ್ಯಕ್ಷತೆ: ಶ್ರೀನಿವಾಸ್ ಜಿ. ಕಪ್ಪಣ್ಣ, ಅತಿಥಿಗಳು: ಬಿ.ವಿ. ರಾಜಾರಾವ್, ಶಶಿಧರ್ ಬಾರಿಘಾಟ್, ಪ್ರಕಾಶಮೂರ್ತಿ, ಮಲ್ಲಿಕಾರ್ಜುನ ಕಡಕೋಳ್, ರವೀಂದ್ರ ಭಟ್ಟ, ರಂಗಸ್ವಾಮಿ, ಬಂಗರೀಶ್ ಬಿಂದೋಡಿ, ತ್ರಿವೇಣಿ, ಶಂಕರ್, ರವೀಂದ್ರನಾಥ್, ಅಶೋಕ್ ಶೆಟ್ಟಿ, ಜಿಪಿಒ ಚಂದ್ರು, ಆಯೋಜನೆ: ರಂಗ ಬದುಕು ಟ್ರಸ್ಟ್, ಸ್ಥಳ:ರವೀಂದ್ರ ಕಲಾಕ್ಷೇತ್ರ,ಸಂಜೆ 4

ಸಂವಾದ ಕಾರ್ಯಕ್ರಮ: ಭಾಗವಹಿಸುವವರು: ಸ್ಮೃತಿ ಇರಾನಿ, ರೇವತಿ ಅಶೋಕ್, ಆಯೋಜನೆ: ಬಿ.ಪ್ಯಾಕ್, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಸಂಜೆ 5

'ತಾಲ್ ತರಂಗ' ನೃತ್ಯ ಕಾರ್ಯಕ್ರಮ: ಅತಿಥಿಗಳು: ಶಮಾ ಕೃಷ್ಣ, ಅರೇನಹಳ್ಳಿ ಶಿವಶಂಕರ್ ಧರ್ಮೇಂದ್ರ ಕುಮಾರ್, ಶ್ರೀವಿದ್ಯಾ ವರ್ಚಸ್ವಿ, ಆಶಾ ವಿಶ್ವನಾಥ್, ಅಂಜಲಿ ರಾಮಣ್ಣ, ಸ್ಥಳ: ಜೆಎಸ್‌ಎಸ್ ಸಭಾಂಗಣ, ಸಂಜೆ 5.30

ಅಂತರ ಹೋರಾಟಗಳ ಕುರಿತು ಮಾತುಕತೆ: ಕೆಸ್ತಾರ ಮೌರ್ಯ, ಮುರಳಿ ಮೋಹನ ಕಾಟಿ, ಅಕ್ಕೈ ಪದ್ಮಶಾಲಿ, ಮಮತ ಯಜಮಾನ್, ಆಯೋಜನೆ: ಲಾಯೇರಿಂಗ್ ಫಾರ್ ಚೇಂಜ್, ಸ್ಥಳ: ಅಲ್ಟರ್‌ನೇಟಿವ್ ಲಾ ಫೋರಂ, ಇನ್ಫೆಂಟ್ರಿ ರಸ್ತೆ, ಸಂಜೆ 6.30

ಸಂಕ್ಷಿಪ್ತ ಸುದ್ದಿ

ಬನಶಂಕರಿ: ಚಿತಾಗಾರ ಸ್ಥಗಿತ

ಬೆಂಗಳೂರು: ಬನಶಂಕರಿ ವಿದ್ಯುತ್ ಚಿತಾಗಾರದ ಎರಡು ಫರ್ನೆಸ್‌ಗಳ ಕಾಯಿಲ್‌ಗಳು ಹಾಗೂ ಬ್ರಿಕ್ಸ್‌ಗಳು ಹಾಳಾಗಿರುವುದರಿಂದ ತುರ್ತು ನಿರ್ವಹಣೆ ಕೆಲಸ ಕೈಗೊಳ್ಳಲಾಗುತ್ತಿದೆ. ಹೀಗಾಗಿ, ಏಪ್ರಿಲ್ 6ರಿಂದ 16ರವರೆಗೆ ಚಿತಾಗಾರ ಸ್ಥಗಿತಗೊಳ್ಳಲಿದೆ ಎಂದು ಬಿಬಿಎಂಪಿ ದಕ್ಷಿಣ ವಲಯದ ವಿದ್ಯುತ್ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ತಿಳಿಸಿದ್ದಾರೆ.

ಇಂದು ಜಲಮಂಡಳಿ ಫೋನ್–ಇನ್

ಬೆಂಗಳೂರು: ಜಲಮಂಡಳಿ ವತಿಯಿಂದ ಏಪ್ರಿಲ್ 5ರಂದು ಫೋನ್–ಇನ್ ಕಾರ್ಯಕ್ರಮ ಆಯೋಜಿಸಲಾಗಿದೆ.

ಜಲಮಂಡಳಿ ಅಧ್ಯಕ್ಷರು ಫೋನ್–ಇನ್ ಕಾರ್ಯಕ್ರಮ ನಡೆಸಿಕೊಡಲಿದ್ದು, ನೀರು ಸರಬರಾಜು, ಒಳಚರಂಡಿ, ಬಿಲ್, ಮೀಟರ್ ರೀಡಿಂಗ್‌ಗೆ ಸಂಬಂಧಿಸಿದ ಸಮಸ್ಯೆಗಳನ್ನು ನಾಗರಿಕರು ಹೇಳಿಕೊಳ್ಳಬಹುದು. ಶುಕ್ರವಾರ ಬೆಳಿಗ್ಗೆ 9.30ರಿಂದ 10.30ರವರೆಗೆ 080-22945119ಗೆ ಕರೆ ಮಾಡಬಹುದು ಎಂದು ತಿಳಿಸಿದೆ.

ಸಂವಾದ ಕಾರ್ಯಕ್ರಮ ನಾಳೆ

ಬೆಂಗಳೂರು: ಜಾಗೃತ ಕರ್ನಾಟಕದ ವತಿಯಿಂದ ಇದೇ 6ರಂದು (ಶನಿವಾರ) ಕಂದಾಯ ಸಚಿವ ಕೃಷ್ಣಬೈರೇಗೌಡ ಹಾಗೂ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರೊಂದಿಗೆ ಸಂವಾದ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಕುಮಾರಕೃಪಾ ರಸ್ತೆಯಲ್ಲಿರುವ ಗಾಂಧಿ ಭವನದ ಬಾಪು ಸಭಾಂಗಣದಲ್ಲಿ ಸಂಜೆ 5ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ 'ತೆರಿಗೆ ಹಾಗೂ ಬರ ಪರಿಹಾರದ ವಿಚಾರ'ದಲ್ಲಿ ಕೇಂದ್ರದಿಂದ ರಾಜ್ಯಕ್ಕೆ ಆಗಿರುವ ಅನ್ಯಾಯದ ಕುರಿತು ಈ ಸಂವಾದ ಕಾರ್ಯಕ್ರಮದಲ್ಲಿ ಚರ್ಚೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಸ್ವಾಯತ್ತತೆಯ ಮಾನ್ಯತೆಯಿಂದ ಕಾಲೇಜು ಸ್ವತಂತ್ರ

ರಾಮಯ್ಯ ಕಾಲೇಜಿಗೆ ಸ್ವಾಯತ್ತತೆ

ಪ್ರಜಾವಾಣಿ ವಾರ್ತೆ

ಬೆಗಳೂರು: ನಗರದ ರಾಮಯ್ಯ ಕಲಾ, ವಾಣಿಜ್ಯ ಮತ್ತು ವಿಜ್ಞಾನ (ಎಂಎಸ್‌ಆರ್‌ಸಿಎಎಸ್‌ಸಿ) ಕಾಲೇಜಿಗೆ 'ಸ್ವಾಯತ್ತತೆ'ಯ ಮಾನ್ಯತೆ ದೊರೆತಿದೆ.

ರಾಮಯ್ಯ ಕಾಲೇಜಿನಲ್ಲಿ ಗುರುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕಾಲೇಜಿಗೆ ಸ್ವಾಯತ್ತತೆಯ ಮಾನ್ಯತೆ ದೊರೆತಿರುವುದನ್ನು ಅನಾವರಣಗೊಳಿಸಲಾಯಿತು.

ಬೆಂಗಳೂರು ನಗರ ವಿಶ್ವವಿದ್ಯಾಲಯದ ಅಧೀನದಲ್ಲಿದ್ದ ಕಾಲೇಜು ಇದೀಗ ಸ್ವಾಯತ್ತತೆ ಪಡೆದುಕೊಳ್ಳುವ ಮೂಲಕ ಶೈಕ್ಷಣಿಕವಾಗಿ ಸ್ವತಂತ್ರವಾಗಿದೆ. ಮುಂದೆ ಕಾಲೇಜು ಪಠ್ಯಕ್ರಮ ರೂಪಿಸಿಕೊಳ್ಳ ಬಹುದಾಗಿದೆ.

ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್‌ನ ಉಪಾಧ್ಯಕ್ಷ ಪ್ರೊ.ಎಸ್.ನಿರಂಜನ ಮತ್ತು ಬೆಂಗಳೂರು ನಗರ ವಿಶ್ವವಿದ್ಯಾಲಯ ಕುಲಪತಿ ಡಾ.ಲಿಂಗರಾಜ ಗಾಂಧಿ ಅವರು ಭಾಗವಹಿಸಿದ್ದರು.

ಪ್ರೊ.ಎನ್.ನಿರಂಜನ ಮಾತನಾಡಿ, 'ರಾಮಯ್ಯ ಕಾಲೇಜು ಗುಣಮಟ್ಟದ ಶಿಕ್ಷಣಕ್ಕೆ ಹೆಸರಾಗಿದೆ. ಇಲ್ಲಿ ಹಲವು ಕೋರ್ಸ್‌ಗಳಿವೆ. ಮೂಲಸೌಕರ್ಯ ಉತ್ತಮವಾಗಿದೆ. ಈ ಎಲ್ಲ ಮಾನದಂಡಗಳಿಂದಲೇ ಕಾಲೇಜಿಗೆ ಸ್ವಾಯತ್ತತೆ ಸಿಕ್ಕಿದೆ' ಎಂದು ಹೇಳಿದರು.

ಪ್ರೊ.ಲಿಂಗರಾಜ ಗಾಂಧಿ, 'ಕಾಲೇಜಿಗೆ ಸ್ವಾಯತ್ತತೆ ಸಿಕ್ಕಿರುವುದು ಆಡಳಿತ ಮಂಡಳಿಗೆ ಬಹಳ ಸಂತಸ ತಂದಿದೆ. ಹೊಸ ಹೊಸ ಕೋರ್ಸ್‌ಗಳನ್ನು ಪರಿಚಯಿಸುವ ಮೂಲಕ ಕಾಲೇಜು ಮತ್ತಷ್ಟು ಅಭಿವೃದ್ಧಿ ಸಾಧಿಸಲಿ' ಎಂದು ಶುಭ ಹಾರೈಸಿದರು.

ಗೋಕುಲ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ.ಎಂ.ಆರ್.ಜಯರಾಮ್, 'ಕಾಲೇಜಿಗೆ ಸ್ವಾಯತ್ತತೆ ದೊರೆತಿರುವುದರಿಂದ, ನಮ್ಮ ಜವಾಬ್ದಾರಿ ಮತ್ತಷ್ಟು ಹೆಚ್ಚಿದೆ'ಎಂದು ಹೇಳಿದರು.

'ಸ್ವಾಯತ್ತತೆ ಸಿಕ್ಕಿದೆ ಎಂಬ ಕಾರಣಕ್ಕೆ ನಾವು ನಿಯಮಗಳನ್ನು ಬಿಟ್ಟು ಕಾಲೇಜು ನಡೆಸುವುದಿಲ್ಲ. ಇನ್ನಷ್ಟು ಜವಾಬ್ದಾರಿಯಿಂದ ಕಾಲೇಜು ನಡೆಸುತ್ತೇವೆ. ಕಾಲೇಜು ಬೆಳವಣಿಗೆ ಎಂದರೆ, ಅದು ನಮ್ಮೆಲ್ಲರ ಬೆಳವಣಿಗೆಯಾಗಿದೆ' ಎಂದರು.

ಗೋಕುಲ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ.ಎಂ.ಆರ್.ಜಯರಾಮ್, ರಾಮಯ್ಯ ಕಾಲೇಜಿನ ನಿರ್ದೇಶಕರಾದ ಜಾನಕಿರಾಮ್, ಕೋದಂಡರಾಮ್, ಗೋಕುಲ ಶಿಕ್ಷಣ ಸಂಸ್ಥೆಯ ಕಾರ್ಯಕಾರಿ ನಿರ್ದೇಶಕ ಬಿ.ಎಸ್.ರಾಮಪ್ರಸಾದ್, ಹಣಕಾಸು ಅಧಿಕಾರಿ ಜಿ.ರಾಮಚಂದ್ರ, ಪ್ರಾಂಶುಪಾಲರಾದ ಡಾ.ಜಿ. ವತ್ಸಲಾ ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ರಾಮಯ್ಯ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮವನ್ನು ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಲಿಂಗರಾಜ ಗಾಂಧಿ(ಎಡದಿಂದ ನಾಲ್ಕನೆಯವರು) ಉದ್ಘಾಟಿಸಿದರು. ಗೋಕುಲ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ. ಎಂ.ಆರ್. ಜಯರಾಮ್, ಪ್ರತಿಷ್ಠಾನದ ಸಿಇ ಬಿ.ಎಸ್.ರಾಮ್‌ಪ್ರಸಾದ್, ಎಂಎಸ್‌ಆರ್‌ಸಿಎಎಸ್‌ಸಿ ಪ್ರಾಚಾರ್ಯೆ ಡಾ. ವತ್ಸಲಾ ಜಿ., ಎಂಎಸ್‌ಆರ್‌ಸಿಎಎಸ್‌ಸಿ ನಿರ್ದೇಶಕ ಎಂ.ಆರ್. ಜಾನಕಿರಾಮ್, ಕರ್ನಾಟಕ ರಾಜ್ಯ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷ ಪ್ರೊ. ಎಸ್.ಆರ್. ನಿರಂಜನ್, ಜಿಇಎಫ್‌ನ ಹಣಕಾಸು ವಿಭಾಗದ ಮುಖ್ಯ ಅಧಿಕಾರಿ ಜಿ.ರಾಮಚಂದ್ರ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಪ್ರಜಾವಾಣಿ ಕ್ಲಾಸಿಫೈಡ್ಸ್ — ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

General

REQUIRED FIELD Recruiter, We are Hiring For Permanent Work,Salary asper Company Standards, ESI, PF Available. 8217640947, 8095307162

Part-Time Jobs

TOP MNC Company Licensed from Central Government Hiring Retired VRS, House wife's age 35 above Minimum Monthly Earnings 75k above: 9916197616

Teachers/ Professors

GAYATHRI VIDYANIKETAN, 53/3 2nd Cross Kottigepalya, Off Magadi Road Bangalore-91. Required PRINCIPAL, Primary TEACHERS for Science English Social Studies Kannada P.E. Computer Teacher. B.Sc/ M.Sc/ B.Ed, BA/ MA/ B.Ed, B.Ped. Also HOME TUTOR for Hindi. Contact: 9900035670 Send resume with recent photo to: E- mail: gvidyaniketan@gmail.com

WANTED QUALIFIED TEACHERS For Primary and High School, PMS Public School, Bettahalasur, Bangalore 9632329017/ 9880113895.

RENTAL PROPERTIES

Accommodation Available

Commercial

COMMERCIAL RENT BANKS/ SHOWROOMS/ OFFICE G + 3, 3200 Sqft Lift, RT Nagar Kaval Byrasandra, LR Bande Main Road: 9448522995

Farm House/Land/ Resorts

RESORT & Bar for Rent, Lease or Sale. Contact: 9900480600. Kodagu District (Coorg) Kushalnagar

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE SELLING

Commerical

Sarjapur Road

COMMERCIAL 20,000 Sft, Suitable For Complex Near Wipro Kodathi Rs.10500/- Genuine Buyers Contact: 8884501767

House

Basaveshwaranagar

60X40 EAST facing Independent House at prime location for Sale 45 squares building, Ground, 1st & 2nd Floor with 5 Bedrooms with attached bathroom, built with teak wood, Italian Marble Tiles, at BEML Layout, Basaveshwaranagar, Bangalore. Clear Titles & 'A' Katha. Rs.5.50 Crores. Party going out of station, Immediate Registration, Contact: 9845765559/ 9845043282

PROPERTY CORNER

OFFICE SPACE FOR RENT

We have a fully furnished office space available for immediate Rent at "BRIGADE RUBIX" on the 1st Floor, spanning 10,940 Sqft, including 22 parking spaces. This space is fully fitted out, features amenities such as a spacious Conference Room, Cubicles, Reception area, Manager Cabin, and offers easy access.

It has close Proximity to METRO STATION, TAJ YESHWANTHPUR and PEENYA INDUSTRIAL AREA

For Details Contact Owner: 963 953 9555

ROUNAQH

Industrial & Factory

Tumkur Road

AVAILABLE INDUSTRIAL Warehouse, Agriculture Land, 5/ 10/ 20/ 30/ 100 acres around Nelamangala Dabaspet. 9141326819

Sites

Kempegowda Layout

NADAPRABHU KEMPEGOWDA LAYOUT 1st Block 'K' Sector 30x40 North Facing 7000/-,9th Block 'A'Sector 40x60 East Facing 5350/-,3rd Block 'L' Sector 40x60 West Facing 5900/-. Contact:9686469799

Whitefield

BDA APPROVED sites for Sale off Whitefield/ Old Madras'Road. Ready for registration. Hurry! Call: 9035083224

AKSHAYA

Modern 2 BHK Luxury Flats FOR SALE

BBMP Approved

SCHOOLS: Orchid International School, National Public School
HOSPITALS: Rajarajeshwari Hospital, Fortis Hospital
INSTITUTIONS: RV College of Engineering, Rajarajeshwari Medical College, Don Bosco Institute of Technology, Christ University
1Km to ORR 300 Mtrs to Satellite Bus Terminal

LOCATION: Site No.56 & 57, Anjaneya Enclave Welfare Association 1st Cross, MM Road, behind Byatarayanapura Police Station, Bangalore-26.
LANDMARK - Deepanjali Metro Station, Gali Anjaneya Temple.
MAIL US: akshayaproject9@gmail.com
Contact: 99162 18894 / 96639 58493

BUSINESS

Business Offers

General

DRY FRUITS (more than 50 varieties), Flavoured Cashews, Dry Fruits Gift boxes. Attractive Price, Excellent Quality, Free Home Delivery. Contact Farms India 8095059460/ 6360940295

PERSONAL

Change of Name

I, AJITHKUMAR SHRIKANTH SHIMPI residing at No. 663, 6th Main, Vikram Nagar, ISRO Layout Bangalore- 560078 declare that I have changed my name from AJITHKUMAR SHRIKANTH SHIMPI to AJITH S SHIMPI vide affidavit dated 04-04-2024 sworn before Notary C.N Balasubramanyam Bangalore. Henceforth I shall be known as AJITH S SHIMPI in all my future documents

CHANGE OF NAME
I, RAMAVATI DEVI Mother of Army No-14925767K Ex-HAV, SANTOSH KUMAR CHAUHAN, R/a # 280, M. S. Layout, 2nd Stage Nagasandra Post, Bengaluru- 73 have changed my name from RAMAVATI DEVI to RAMAVATHI DEVI & declare that in my son's Service record. my D.O.B is 01.07.1960 & correct D.O.B is 05.08.1958 affidavit dated 10.12.2023 notary B.A. Lakshminarayana Rao Bengaluru.

CHANGE OF NAME
I, SAROJA M W/o. P. Muniswamy R/a #324, 14th cross, 2nd Block, R.T. Nagar, Bengaluru-560032 declare that my Husband P. Muniswamy was an Ex-Service Army Men, as EX SPR. in his Army Records my Date of Birth Wrongly Recorded as 04.04.1946 instead of 25.03.1954 vide affidavit dated 21.3.2024 Sworn before Notary Puttaramaiah, Bengaluru.

I, SHANKARA CHARI KAMALAMMA (Old Passport No.L7586500) W/o.Seebachari Shankarachari R/o#17/5, 1st Floor, 9th Cross, CubbonPet City Market Post, Bengaluru- 560002 have changed my Name to KAMALAMMA CHANDRACHARI SHANKARACHARI vide`affidavit Dated:2.4.2024 before Notary L.Puttaraju, Bengaluru.

CHANGE OF NAME
I, NEHA RANI, D/o Manoj Kumar, Residing at # 30/407, Block 30,Trilokpuri, East Delhi, Delhi - 110091 have changed my name to NEHA vide affidavit dt: 02.04.2024, before notary M. Krishnamurthy, Hoskote. Henceforth I shall be called NEHA only.

CHANGE OF NAME
I, PUSPA MUNISWAMY, W/o Late K.V.Shamugam, Residing at # 665, J.R. Colony, HAL 3rd Stage, New Thippasandra, Bangalore -560075, have changed my name to PUSHPA MUNISWAMY vide affidavit dt: 04.04.2024, before notary A.R.Muneer Ahmed, Bengaluru. Henceforth I shall be called PUSHPA MUNISWAMY only.

PUBLIC NOTICE

PUBLIC NOTICE
Jamath-e-Lababeen Educational Society (R), K.G. Halli, Bengaluru is registered under the Societies Registration Act 1959, vide registration No. 182/2014-15. The Members of Jamath-e-Lababeen Society at its special Meeting held on 08.03.2024 vide subject No. 5 have unanimously resolved to suspend one Member and Treasurer of the Society viz. Mr. Chuna Rafi Ahmed S/o Late Chuna Abdul Rahman for the reasons that, Sri. Chuna Rafi Ahmed has acted in contravention of the Rules and Regulations of the Society and detrimental to its objectives and causing injuries to the interest or reputation of the Society.
That, Secretary of the Jamath- e-Lababeen Education Society acting on the said Resolution vide order bearing No. LES/149/2023-24 dated 18.03.2024 has issued order of Suspension subject to Enquiry to aforesaid Mr. Chuna Rafi Ahmed and the said Order of suspension has been duly served on Mr. Chuna Rafi Ahmed, pursuant to issuance of Order dated 18.03.2024 Mr. Chuna Rafi Ahmed is no more a Member or Treasurer of the Society till enquiry is concluded. Further, Mr. Chuna Rafi Ahmed has no authority to Interfere with the affairs of the Educational Institutions run under the Jamath-e- Lababeen Education Society (R).
The General Public in large and in Particular Jamath-e- Lababeen are hereby cautioned that, Mr. Chuna Rafi Ahmed is no more a Member or Treasurer of Jamath-e-Lababeen Education Society and any act done by or on behalf of Mr. Chuna Rafi Ahmed in respect of Educational Institutions managed by Jamath-e-Lababeen Society holds no significance and any individual / Institution dealing with Mr.Chuna Rafi Ahmed shall be doing it at their own risk.
Hence this Public Notice.
From, **Jamath-e-Lababeen Education Society (R),**
K.G. Halli, Bengaluru 560 045. Represented by its Secretary, Mr. Nain Ahmed Saleem Ahmed,Mob: 9900194084,
Email Id: lababeeneducationsociety@gmail.com

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

DH Classifieds — More value, more impact | ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS
*Conditions apply
www.dhclassifieds.com BOOK NOW
Book your ad with us now! For more details contact:
+91 9845114560 | +91 9901641752 | 080-45557163/164

ನಿಲ್ದಾಣದ ರಸ್ತೆಯಲ್ಲಿ ಹೊರಟಿದ್ದ ವೃದ್ಧ • ವೇಗದ ಚಾಲನೆಯಿಂದ ಅಪಘಾತ

ಮೆಜೆಸ್ಟಿಕ್: ಬಸ್ ಗುದ್ದಿ ಪ್ರಯಾಣಿಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೆಜೆಸ್ಟಿಕ್ ಬಸ್ ನಿಲ್ದಾಣದಲ್ಲಿ ಗುರುವಾರ ಮಧ್ಯಾಹ್ನ ಅಪಘಾತ ಸಂಭವಿಸಿದ್ದು, ಕೆಎಸ್ಆರ್‌ಟಿಸಿ ಬಸ್ ಗುದ್ದಿ ಪ್ರಯಾಣಿಕ ಗಂಗಾರೆಡ್ಡಿ (85) ಎಂಬುವವರು ಮೃತಪಟ್ಟಿದ್ದಾರೆ.

'ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ಗಂಗಾರೆಡ್ಡಿ, ಬೆಂಗಳೂರಿನ ಬಸವೇಶ್ವರ-ನಗರದ 4ನೇ ಹಂತದಲ್ಲಿ ನೆಲೆಸಿದ್ದರು. ತಮ್ಮೂರಿಗೆ ಹೋಗಲು ಬಸ್ ನಿಲ್ದಾಣಕ್ಕೆ ಬಂದಿದ್ದ ಸಂದರ್ಭದಲ್ಲಿ ಈ ಅವಘಡ ಸಂಭವಿಸಿದೆ' ಎಂದು ಉಪ್ಪಾರಪೇಟೆ ಸಂಚಾರ ಠಾಣೆ ಪೊಲೀಸರು ಹೇಳಿದರು.

'ಕೆಎಸ್ಆರ್‌ಟಿಸಿ ಬಸ್ ಚಾಲಕ ರಾಘವೇಂದ್ರನ ನಿರ್ಲಕ್ಷ್ಯದಿಂದ ಅಪಘಾತ ಸಂಭವಿಸಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ಪ್ರಕರಣ ದಾಖಲಿಸಿಕೊಂಡು, ಚಾಲಕನನ್ನು ಬಂಧಿಸಲಾಗಿದೆ' ಎಂದು ತಿಳಿಸಿದರು.

'ಕೈಚೀಲ ಹಿಡಿದುಕೊಂಡಿದ್ದ ಗಂಗಾರೆಡ್ಡಿ, ಬಸ್ ನಿಲ್ದಾಣದಲ್ಲಿರುವ ಸರ್ವೀಸ್ ರಸ್ತೆಯಲ್ಲಿ ನಡೆದುಕೊಂಡು ಹೊರಟಿದ್ದರು. ಚಿಕ್ಕಮಗಳೂರು ವಿಭಾಗದ ಮೂಡಿಗೆರೆ ಡಿಪೊಗೆ ಸೇರಿದ್ದ ಬಸ್, ಅದೇ ರಸ್ತೆಯಲ್ಲಿ ಬಂದಿತ್ತು. ಚಾಲಕ, ಸರ್ವೀಸ್ ರಸ್ತೆಯಿಂದ ನಿಲ್ದಾಣದ ಪ್ಲಾಟ್‌ಫಾರ್ಮ್‌ಗೆ ಹೋಗಲು ವೇಗದಲ್ಲಿ ಬಸ್ ಚಲಾಯಿಸಿದ್ದ. ಇದೇ ಸಂದರ್ಭದಲ್ಲಿ ಬಸ್, ಗಂಗಾರೆಡ್ಡಿಗೆ ಗುದ್ದಿತ್ತು. ಗಾಯಗೊಂಡ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ' ಎಂದು ಪೊಲೀಸರು ಹೇಳಿದರು.

ಆರೋಪ: ಮೆಜೆಸ್ಟಿಕ್‌ನಲ್ಲಿರುವ ಕೆಎಸ್ಆರ್‌ಟಿಸಿ ಹಾಗೂ ಬಿಎಂಟಿಸಿ ನಿಲ್ದಾಣಗಳಲ್ಲಿ ಸಂಚರಿಸಲು ಪ್ರಯಾಣಿಕರು ಭಯಪಡುವ ಪರಿಸ್ಥಿತಿ ಇದೆ. ಹಲವು ಚಾಲಕರು ಅತೀ ವೇಗದಲ್ಲಿ ನಿರ್ಲಕ್ಷ್ಯದಿಂದ ಬಸ್ ಚಲಾಯಿಸುತ್ತಿದ್ದು, ಈ ಬಗ್ಗೆ ದೂರು ನೀಡಿದರೂ ಅಧಿಕಾರಿಗಳು ಕ್ರಮ ಕೈಗೊಳ್ಳುತ್ತಿಲ್ಲವೆಂಬ ಆರೋಪವಿದೆ.

'ನಗರದ ಹೃದಯ ಭಾಗದಲ್ಲಿರುವ ನಿಲ್ದಾಣಕ್ಕೆ ನಿತ್ಯವೂ ಲಕ್ಷಕ್ಕೂ ಹೆಚ್ಚು ಜನರು ಬಂದು ಹೋಗುತ್ತಾರೆ. ನಿಲ್ದಾಣಕ್ಕೆ ಬರುವ ಹಾಗೂ ನಿಲ್ದಾಣದಿಂದ ಹೋಗುವ ಬಸ್‌ಗಳು ಅತೀ ವೇಗದಲ್ಲಿ ಸಾಗುತ್ತವೆ. ಇದರಿಂದಾಗಿ ನಿಲ್ದಾಣದಲ್ಲಿ ನಿಗದಿತ ಪ್ಲಾಟ್‌ಫಾರ್ಮ್ ಹಾಗೂ ಇತರೆಡೆ ಹೋಗಲು ಜನರು ಭಯಪಡುತ್ತಿದ್ದಾರೆ' ಎಂದು ಪ್ರಯಾಣಿಕ ರಮೇಶ್ ದೂರಿದರು.

ಇತ್ತೀಚಿನ ದಿನಗಳಲ್ಲಿ ಪದೇ ಪದೇ ಅಪಘಾತಗಳು ಸಂಭವಿಸುತ್ತಿವೆ. ಈ ಬಗ್ಗೆ ಉಪ್ಪಾರಪೇಟೆ ಸಂಚಾರ ಠಾಣೆ ಪೊಲೀಸರಿಗೂ ಮಾಹಿತಿ ಇದೆ. ನಿಲ್ದಾಣದಲ್ಲಿ ಕೆಲ ತಾತ್ಕಾಲಿಕ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲಾಗಿದ್ದು, ಇವುಗಳನ್ನು ಚಾಲಕರು ಪಾಲಿಸುತ್ತಿಲ್ಲ' ಎಂದು ಆರೋಪಿಸಿದರು.

ಅತ್ಯಾಚಾರವೆಸಗಿ ಮಹಿಳೆ ಕೊಲೆ: ಆರೋಪಿ ಬಂಧನ

ಬೆಂಗಳೂರು: ರಸ್ತೆಯಲ್ಲಿ ನಡೆದುಕೊಂಡು ಹೊರಟಿದ್ದ 55 ವರ್ಷದ ಮಹಿಳೆಯೊಬ್ಬರನ್ನು ಎಳೆದೊಯ್ದು ಅತ್ಯಾಚಾರ ಎಸಗಿ ಕೊಲೆ ಮಾಡಲಾಗಿದ್ದು, ಆರೋಪಿ ಸಚಿನ್ ಅಲಿಯಾಸ್ ಕರಣ್‌ನನ್ನು (19) ಅಮೃತಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಸಚಿನ್

'ಮಹಿಳೆಯ ಪುತ್ರಿ ನೀಡಿರುವ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಳ್ಳ-ಲಾಗಿದೆ. ಆರೋಪಿ ಉತ್ತರ ಪ್ರದೇಶದ ಸಚಿನ್‌ನನ್ನು ಸೆರೆ ಹಿಡಿಯಲಾಗಿದೆ' ಎಂದು ಪೊಲೀಸರು ಹೇಳಿದರು.

'ರಾಯಚೂರು ಜಿಲ್ಲೆಯ ಮಹಿಳೆ, ಮಕ್ಕಳ ಜೊತೆ ನಗರಕ್ಕೆ ಬಂದಿದ್ದರು. ಅಮೃತಹಳ್ಳಿಯ ವರದರಾಜು ಬಡಾವಣೆಯಲ್ಲಿರುವ ಶೆಡ್‌ನಲ್ಲಿ ನೆಲೆಸಿದ್ದರು. ಮಕ್ಕಳು ಕೆಲಸಕ್ಕೆ ಹೋಗುತ್ತಿದ್ದರು. ಮಹಿಳೆ, ಮನೆಯಲ್ಲಿ ಇರುತ್ತಿದ್ದರು' ಎಂದು ತಿಳಿಸಿದರು.

'ಮೂರು ವರ್ಷದ ಹಿಂದೆಯೇ ನಗರಕ್ಕೆ ಬಂದಿದ್ದ ಆರೋಪಿ ಸಚಿನ್ ಜಕ್ಕೂರಿನಲ್ಲಿ ನೆಲೆಸಿದ್ದ. ಟೈಲ್ಸ್ ಜೋಡಣೆ ಕೆಲಸ ಮಾಡುತ್ತಿದ್ದ' ಎಂದರು.

ಬಾರ್‌ಗೆ ಹೋಗಿದ್ದ ಮಹಿಳೆ: 'ಆರೋಪಿ ಸಚಿನ್, ಮದ್ಯವ್ಯಸನಿ. ಏಪ್ರಿಲ್ 2ರಂದು ರಾತ್ರಿ ಬಾರ್‌ಗೆ ಹೋಗಿದ್ದ. ಆಗಾಗ ಮದ್ಯ ಕುಡಿಯುತ್ತಿದ್ದ ಮಹಿಳೆ ಸಹ ಬಾರ್‌ಗೆ ಹೋಗಿದ್ದರು. ಮದ್ಯ ಕುಡಿದು ಕೆಲ ನಿಮಿಷಗಳ ನಂತರ ಮಹಿಳೆ ಬಾರ್‌ನಿಂದ ಹೊರಗೆ ಬಂದಿದ್ದರು. ನಂತರ, ಮನೆಯತ್ತ ನಡೆದುಕೊಂಡು ಹೊರಟಿದ್ದರು. ಅವರನ್ನು ನೋಡಿದ್ದ ಆರೋಪಿ ಸಚಿನ್, ರಸ್ತೆಯಲ್ಲಿ ಹಿಂಬಾಲಿಸಲಾರಂಭಿಸಿದ್ದ' ಎಂದು ಪೊಲೀಸರು ಹೇಳಿದರು.

'ವರದರಾಜು ಬಡಾವಣೆಯ 8ನೇ ಅಡ್ಡ ರಸ್ತೆಯಲ್ಲಿ ಮಹಿಳೆಯನ್ನು ಅಡ್ಡಗಟ್ಟಿದ್ದ ಆರೋಪಿ, ಸಮೀಪದಲ್ಲಿದ್ದ ನಿರ್ಮಾಣ ಹಂತದ ಕಟ್ಟಡಕ್ಕೆ ಎಳೆದೊಯ್ದಿದ್ದ. ಅಲ್ಲಿಯೇ ಅತ್ಯಾಚಾರ ಎಸಗಿದ್ದ. ಮಹಿಳೆಯ ಮುಖ ಹಾಗೂ ದೇಹದ ಇತರೆ ಭಾಗಗಳಿಗೆ ಕಲ್ಲಿನಿಂದ ಹೊಡೆದಿದ್ದ. ತೀವ್ರ ಗಾಯಗೊಂಡು ಮಹಿಳೆ ಸ್ಥಳದಲ್ಲೇ ಮೃತಪಟ್ಟಿದ್ದರು. ಆರೋಪಿ ಸ್ಥಳದಿಂದ ಪರಾರಿಯಾಗಿದ್ದ' ಎಂದು ತಿಳಿಸಿದರು.

ಹುಡುಕಾಡಿದ್ದ ಕುಟುಂಬಸ್ಥರು: 'ಮನೆಯಿಂದ ಹೊರಗೆ ಬಂದಿದ್ದ ಮಹಿಳೆ, ವಾಪಸು ಹೋಗಿರಲಿಲ್ಲ. ಆತಂಕಗೊಂಡಿದ್ದ ಕುಟುಂಬಸ್ಥರು, ಹಲವೆಡೆ ಹುಡುಕಾಡಿದ್ದರು. ಯಾವುದೇ ಸುಳಿವು ಸಿಕ್ಕಿರಲಿಲ್ಲ' ಎಂದು ಪೊಲೀಸರು ಹೇಳಿದರು.

'ನಿರ್ಮಾಣ ಹಂತದ ಕಟ್ಟಡದಲ್ಲಿ ಏಪ್ರಿಲ್ 3ರಂದು ಮಹಿಳೆಯ ಮೃತದೇಹ ಸಿಕ್ಕಿತ್ತು. ಕುಟುಂಬಸ್ಥರು ಮಹಿಳೆಯ ಗುರುತು ಪತ್ತೆ ಮಾಡಿದ್ದರು. ನಂತರ, ಕೊಲೆ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿತ್ತು. ಕೆಲ ಪುರಾವೆಗಳನ್ನು ಸಂಗ್ರಹಿಸಿ 24 ಗಂಟೆಯೊಳಗೆ ಆರೋಪಿಯನ್ನು ಬಂಧಿಸಲಾಗಿದೆ' ಎಂದು ತಿಳಿಸಿದರು.

ಬಾಲಕಿ ಮೇಲೆ ದೌರ್ಜನ್ಯ: ಜೈಲು ಶಿಕ್ಷೆ

ಬೆಂಗಳೂರು: ಎಂಟು ವರ್ಷದ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ ಅಪರಾಧಿಗೆ 20 ವರ್ಷಗಳ ಜೈಲು ಶಿಕ್ಷೆ ಹಾಗೂ ₹ 10 ಸಾವಿರ ದಂಡ ವಿಧಿಸಿ ನಗರದ 2ನೇ ತ್ವರಿತಗತಿ ವಿಶೇಷ ನ್ಯಾಯಾಲಯ (ಎಫ್‌ಟಿಎಸ್‌ಸಿ) ಆದೇಶ ಹೊರಡಿಸಿದೆ.

ನಂದಿನಿ ಲೇಔಟ್ ಠಾಣೆಯಲ್ಲಿ 2022ರಲ್ಲಿ ಪ್ರಕರಣ ದಾಖಲಾಗಿತ್ತು. ತನಿಖೆ ನಡೆಸಿದ್ದ ಅಂದಿನ ಇನ್‌ಸ್ಪೆಕ್ಟರ್ ವೆಂಕಟೇಗೌಡ ಅವರು ಆರೋಪಿಯನ್ನು ಬಂಧಿಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

'ಸಂತ್ರಸ್ತ ಬಾಲಕಿ, ಪೋಷಕರ ಜೊತೆ ನೆಲೆಸಿದ್ದಳು. ಅವಳ ಪಕ್ಕದ ಮನೆಯಲ್ಲಿಯೇ ಅಪರಾಧಿ ವಾಸವಿದ್ದ. ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ. ಈ ಬಗ್ಗೆ ಪೋಷಕರು ದೂರು ನೀಡಿದ್ದರು. ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು' ಎಂದು ಪೊಲೀಸರು ಹೇಳಿದರು.

ಪಬ್ಲಿಕ್ ಪ್ರಾಸಿಕ್ಯೂಟರ್ ಮಧುಮತಿ ವಾದ ಮಂಡಿಸಿದ್ದರು' ಎಂದು ತಿಳಿಸಿದರು.

ಯುಗಾದಿಗೆ ವಿಶೇಷ ಬಸ್

ಬೆಂಗಳೂರು: ಯುಗಾದಿ ಸಂದರ್ಭದಲ್ಲಿ ಉಂಟಾಗುವ ಪ್ರಯಾಣಿಕರ ದಟ್ಟಣೆಯನ್ನು ಕಡಿಮೆ ಮಾಡಲು ನಾಲ್ಕು ಸಾರಿಗೆ ನಿಗಮಗಳು 2000ಕ್ಕೂ ಅಧಿಕ ವಿಶೇಷ ಬಸ್‌ಗಳನ್ನು ರಸ್ತೆಗಿಳಿಸಲು ನಿರ್ಧರಿಸಿದೆ. ಏ.6ರಿಂದ 8ರವರೆಗೆ ಬೆಂಗಳೂರಿನಿಂದ ಬಸ್‌ಗಳು ವಿವಿಧೆಡೆ ಸಂಚರಿಸಲಿವೆ. ಏ.9,10ಕ್ಕೆ ವಾಪಸ್ಸಾಗಲಿವೆ.

ವಾರಾಂತ್ಯದ ರಜೆಗಳೊಂದಿಗೆ ಸೋಮವಾರ ಒಂದು ರಜೆ ಹಾಕಿದರೆ ನಾಲ್ಕು ರಜೆಗಳು ಸಿಗುವುದರಿಂದ ಊರಿಗೆ ಹಾಗೂ ಪ್ರವಾಸಕ್ಕೆ ತೆರಳುವವರ ಸಂಖ್ಯೆ ಹೆಚ್ಚಳವಾಗುವುದರಿಂದ ವಿಶೇಷ ಬಸ್‌ಗಳು ಸಂಚರಿಸಲಿವೆ.

ಕೆಎಸ್ಆರ್‌ಟಿಸಿಯ 1,750, ವಾಯವ್ಯ ಕರ್ನಾಟಕ ಸಾರಿಗೆಯ 145, ಕಲ್ಯಾಣ ಕರ್ನಾಟಕ ಸಾರಿಗೆಯ 200 ಹಾಗೂ ಬಿಎಂಟಿಸಿಯ 180 ವಿಶೇಷ ಬಸ್‌ಗಳು ಸಂಚರಿಸಲಿವೆ ಎಂದು ಕೆಎಸ್ಆರ್‌ಟಿಸಿ ಪ್ರಕಟಣೆ ತಿಳಿಸಿದೆ.

ಬಿಐಎಎಲ್ ಒಪ್ಪಂದ ಅವಧಿ ಮತ್ತೆ 30 ವರ್ಷ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನನಿಲ್ದಾಣ (ಕೆಐಎ) ಕಾರ್ಯಾಚರಣೆಗೆ ಸಂಬಂಧಿಸಿ, ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನನಿಲ್ದಾಣ ನಿಯಮಿತ(ಬಿಐಎಎಲ್) ಜೊತೆಗಿನ ಒಪ್ಪಂದದ ಅವಧಿಯನ್ನು 2038ರ ನಂತರ ಮತ್ತೆ 30 ವರ್ಷ ವಿಸ್ತರಿಸಲಾಗಿದೆ.

ಬಿಐಎಎಲ್‌ನ ಮನವಿ ಮೇರೆಗೆ ರಾಜ್ಯ ಸರ್ಕಾರ ಈ ಕುರಿತು ಗೆಜೆಟ್ ಅಧಿಸೂಚನೆ ಪ್ರಕಟಿಸಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಇದರೊಂದಿಗೆ, ಒಪ್ಪಂದದ ಅವಧಿಯನ್ನು 2038ರ ಮೇಯಿಂದ 2068ರ ಮೇ ವರೆಗೆ ವಿಸ್ತರಿಸಲಾಗಿದೆ.

'ಒಪ್ಪಂದದ ಅವಧಿಯನ್ನು ವಿಸ್ತರಿಸುವುದಕ್ಕೆ ಸಂಬಂಧಿಸಿ ಸರ್ಕಾರ 2020ರ ಅಕ್ಟೋಬರ್‌ನಲ್ಲಿ ಆದೇಶ ಹೊರಡಿಸಿದ್ದರೂ, ಅಧಿಸೂಚನೆ ಪ್ರಕಟಿಸಿರಲಿಲ್ಲ. ಆದರೆ, ಕಾಯ್ದೆ ಅನುಸಾರ ಈ ಕುರಿತು ಗೆಜೆಟ್ ಅಧಿಸೂಚನೆ ಪ್ರಕಟಿಸಲಾಗಿದೆ' ಎಂದು ಮೂಲಸೌಕರ್ಯ ಅಭಿವೃದ್ಧಿ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ವಿಮಾನ ನಿಲ್ದಾಣ ಯೋಜನೆಯನ್ನು ಕಾರ್ಯಗತ-ಗೊಳಿಸಲು ಪಡೆದಿರುವ ಸಾಲ ಮರುಪಾವತಿಗೆ ಹೆಚ್ಚಿನ ಅವಧಿಯ ಅಗತ್ಯ ಇದೆ. ಅಲ್ಲದೇ, ವಿಮಾನ ನಿಲ್ದಾಣದ ವಿಸ್ತರಣೆ ಹಾಗೂ ಮೂಲ-ಸೌಕರ್ಯಗಳ ಅಭಿವೃದ್ಧಿ ಗಣನೀಯ ಪ್ರಮಾಣದ ಹೂಡಿಕೆ ಮಾಡಿರುವ ಕಾರಣ, ಗುತ್ತಿಗೆ ಒಪ್ಪಂದ ಅವಧಿಯ ವಿಸ್ತರಣೆ ಅಗತ್ಯವಿದೆ' ಎಂದು ಬಿಐಎಎಲ್ ಮನವಿ ಮಾಡಿತ್ತು ಎಂದು ಹೇಳಲಾಗಿದೆ.

ನಕಲಿ ರಶೀದಿ ತೋರಿಸಿ ವಂಚನೆ

ಬೆಂಗಳೂರು: ಯುಪಿಐ ಮೂಲಕ ಹಣ ಪಾವತಿಯ ನಕಲಿ ರಶೀದಿ ತೋರಿಸಿ ನಗರದ ಪಂಚತಾರಾ ಹೋಟೆಲ್‌ವೊಂದರ ಸಿಬ್ಬಂದಿಯನ್ನು ವಂಚಿಸಿದ ಆರೋಪಿ ಬೋರಾಡ ಸುನೀಲ್ (24) ಎಂಬುವವರನ್ನು ಹೈಗ್ರೌಂಡ್ಸ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ವಿಶಾಖಪಟ್ಟಣ ಮೂಲದ ಆರೋಪಿ ವಿರುದ್ಧ ಹೋಟೆಲ್ ವ್ಯವಸ್ಥಾಪಕರು ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಲಾಗಿದೆ.

ಬಿಎಂಡಬ್ಲ್ಯು ಕಾರಿನಲ್ಲಿ ಬಂದಿದ್ದ: 'ಆನ್‌ಲೈನ್ ಮೂಲಕ ಪಂಚತಾರಾ ಹೋಟೆಲ್‌ನ ಕೊಠಡಿಯನ್ನು ಮಾರ್ಚ್ 31ರಂದು ಆರೋಪಿ ಕಾಯ್ದಿರಿಸಿದ್ದ. ಹೋಟೆಲ್‌ಗೆ ಕರೆ ಮಾಡಿ, 'ವಿಮಾನ ನಿಲ್ದಾಣದಿಂದ ಹೋಟೆಲ್‌ಗೆ ಬರಲು ಬಿಎಂಡಬ್ಲ್ಯು ಕಾರು ಬೇಕು' ಎಂದಿದ್ದ. ಅದಕ್ಕೆ ಒಪ್ಪಿದ್ದ ಸಿಬ್ಬಂದಿ, ನಿಲ್ದಾಣಕ್ಕೆ ಕಾರು ಕಳುಹಿಸಿದ್ದರು. ಅದರಲ್ಲೇ ಆರೋಪಿ, ಹೋಟೆಲ್‌ಗೆ ಬಂದಿದ್ದ' ಎಂದು ಪೊಲೀಸರು ಹೇಳಿದರು.

'ಕೊಠಡಿ ನೀಡುವ ಮುನ್ನ ಹಣ ಪಾವತಿ ಮಾಡುವಂತೆ ಹೋಟೆಲ್ ಸಿಬ್ಬಂದಿ ಹೇಳಿದ್ದರು. ಯುಪಿಐ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿದ್ದ ಆರೋಪಿ, ₹17,346 ಪಾವತಿ ಮಾಡಿದ್ದಾಗಿ ನಕಲಿ ರಶೀದಿ ತೋರಿಸಿದ್ದ. ಆದರೆ, ಹಣ ಬಂದಿಲ್ಲವೆಂದು ಸಿಬ್ಬಂದಿ ಹೇಳಿದ್ದರು. ತಾಂತ್ರಿಕ ಸಮಸ್ಯೆ ಇರಬಹುದೆಂದು ಆರೋಪಿ ತಿಳಿಸಿದ್ದ. ನಂತರ, ಕೊಠಡಿಗೆ ಹೋಗಿದ್ದ. ಕೆಲ ಹೊತ್ತಿನ ನಂತರ ನಗರದಲ್ಲಿ ಸಂಚರಿಸಲು ಬಿಎಂಡಬ್ಲ್ಯು ಕಾರು ಬೇಕು ಎಂದಿದ್ದ. ಸಿಬ್ಬಂದಿ ಕಾರಿನ ವ್ಯವಸ್ಥೆ ಮಾಡಿದ್ದರು. ಅದೇ ಕಾರಿನಲ್ಲಿ ಆರೋಪಿ, ಮತ್ತೊಂದು ಹೋಟೆಲ್‌ಗೆ ಹೋಗಿದ್ದ. ನಂತರ, ವಿಮಾನ ನಿಲ್ದಾಣಕ್ಕೆ ಕರೆದೊಯ್ಯುವಂತೆ ಕಾರಿನ ಚಾಲಕನಿಗೆ ತಿಳಿಸಿದ್ದ. ಅದಕ್ಕೆ ಒಪ್ಪದ ಚಾಲಕ, ಆರೋಪಿಯನ್ನು ಹೋಟೆಲ್‌ಗೆ ಕರೆದುಕೊಂಡು ಬಂದಿದ್ದ' ಎಂದು ಪೊಲೀಸರು ತಿಳಿಸಿದರು.

'ಹೋಟೆಲ್ ಸಿಬ್ಬಂದಿ, ಕೊಠಡಿ ಹಾಗೂ ಕಾರು ಬಳಕೆಗಾಗಿ ₹ 80 ಸಾವಿರ ಪಾವತಿಸುವಂತೆ ಹೇಳಿದ್ದರು. ಆರೋಪಿ ತನ್ನ ಕ್ರೆಡಿಟ್ ಕಾರ್ಡ್ ಕೊಟ್ಟಿದ್ದ. ಆದರೆ, ಅದರಲ್ಲಿ ಹಣವಿರಲಿಲ್ಲ. ಇದೇ ಸಂದರ್ಭದಲ್ಲಿ ಆರೋಪಿಯ ಮೊಬೈಲ್‌ಗೆ ಹಲವು ಕರೆಗಳು ಬರುತ್ತಿದ್ದವು. ಇದರಿಂದ ಅನುಮಾನಗೊಂಡ ಸಿಬ್ಬಂದಿ, ಠಾಣೆಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಹೋಗಿ ವಿಚಾರಿಸಿದಾಗ, ಆರೋಪಿಯ ವಂಚನೆ ಕೃತ್ಯ ಗಮನಕ್ಕೆ ಬಂತು' ಎಂದು ಹೇಳಿದರು.

₹4 ಲಕ್ಷ, ಚಿನ್ನಾಭರಣ ಕಿತ್ತ ತಾಯಿ–ಮಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಲಸದ ಆಮಿಷವೊಡ್ಡಿ ಯುವತಿಯೊಬ್ಬರನ್ನು ಪರಿಚಯ ಮಾಡಿಕೊಂಡಿದ್ದ ತಾಯಿ–ಮಗ, ವಿಶೇಷ ಪೂಜೆ ಹೆಸರಿನಲ್ಲಿ ₹ 4 ಲಕ್ಷ ನಗದು ಹಾಗೂ ಚಿನ್ನಾಭರಣ ಪಡೆದು ವಂಚಿಸಿರುವ ಬಗ್ಗೆ ಬನಶಂಕರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ತ್ಯಾಗರಾಜನಗರದ 23 ವರ್ಷದ ಯುವತಿ ದೂರು ನೀಡಿದ್ದಾರೆ. ಆರೋಪಿಗಳು ಎನ್ನಲಾದ ಮಹೇಶ್ ಹಾಗೂ ಈತನ ತಾಯಿ ಲತಾ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಇವರಿಬ್ಬರು ಸದ್ಯ ತಲೆಮರೆಸಿಕೊಂಡಿದ್ದಾರೆ' ಎಂದು ಪೊಲೀಸರು ಹೇಳಿದರು.

ಕೆಲಸದ ಸಂದರ್ಶನಕ್ಕೆ ಕರೆದಿದ್ದ: 'ದೂರುದಾರ ಯುವತಿ, ಕೆಲಸಕ್ಕಾಗಿ 2022ರಲ್ಲಿ ಕಂಪನಿಯೊಂದಕ್ಕೆ ಅರ್ಜಿ ಸಲ್ಲಿಸಿದ್ದರು. ಅದೇ ಸಂದರ್ಭದಲ್ಲಿ ಯುವತಿಗೆ ಕರೆ ಮಾಡಿದ್ದ ಮಹೇಶ್, ಬಿಟಿಎಂ ಲೇಔಟ್‌ನಲ್ಲಿರುವ ಕಚೇರಿಗೆ ಸಂದರ್ಶನಕ್ಕೆ ಬರುವಂತೆ ಕರೆದಿದ್ದ. ಯುವತಿ ಕಚೇರಿಗೆ ಹೋದಾಗ, ಅದು ಮಸಾಜ್ ಪಾರ್ಲರ್ ಎಂಬುದು ಗೊತ್ತಾಗಿತ್ತು. ಕೆಲಸ ಇಷ್ಟವಿಲ್ಲವೆಂದು ಹೇಳಿ ಯುವತಿ ವಾಪಸು ಬಂದಿದ್ದರು' ಎಂದು ಪೊಲೀಸರು ತಿಳಿಸಿದರು.

'2023ರ ಸೆಪ್ಟೆಂಬರ್‌ನಲ್ಲಿ ಪುನಃ ಕರೆ ಮಾಡಿದ್ದ ಮಹೇಶ್, 'ನನ್ನ ಜೊತೆ ದೈಹಿಕವಾಗಿ ಸಹಕರಿಸಬೇಕು. ಇಲ್ಲದಿದ್ದರೆ, ನೀನು ಮಸಾಜ್ ಪಾರ್ಲರ್ ಕೆಲಸ ಮಾಡುತ್ತಿದ್ದೆ ಎಂಬುದಾಗಿ ಮನೆಯವರಿಗೆ ಹೇಳುತ್ತೇನೆ' ಎಂಬುದಾಗಿ ಬೆದರಿಸಿದ್ದ. ಅದಕ್ಕೆ ಯುವತಿ ಒಪ್ಪಿರಲಿಲ್ಲ. ಇಷ್ಟಾದರೂ ಆರೋಪಿ, ಪದೇ ಪದೇ ಕರೆ ಮಾಡಿ ಯುವತಿಗೆ ಕಿರುಕುಳ ನೀಡುತ್ತಿದ್ದ' ಎಂದು ಹೇಳಿದರು.

ವಿಶೇಷ ಪೂಜೆಗೆಂದು ತಾಯಿ ಕರೆ: 'ಆರೋಪಿ ಮಹೇಶ್‌ನ ತಾಯಿ ಲತಾ ಸಹ ಯುವತಿಗೆ ಕರೆ ಮಾಡಲಾರಂಭಿಸಿದ್ದರು. ಇತ್ತೀಚೆಗೆ ಕರೆ ಮಾಡಿದ್ದ ಲತಾ, 'ನಿನ್ನಿಂದ ನನ್ನ ಮಗನ ಜೀವನ ಹಾಳಾಗಿದೆ. ನಿನ್ನಿಂದ ಆತನನ್ನು ದೂರ ಮಾಡಲು ವಿಶೇಷ ಪೂಜೆ ಮಾಡಿಸುತ್ತಿದ್ದೇನೆ. ಇದಕ್ಕೆ ನಗದು ಹಾಗೂ ಚಿನ್ನಾಭರಣ ಅಗತ್ಯವಿದೆ. ಅದನ್ನು ಕೊಡದಿದ್ದರೆ ನನ್ನ ಮಗನ ಜೊತೆಗಿನ ಸಂಬಂಧದ ಬಗ್ಗೆ ನಿನ್ನ ಮನೆಯವರಿಗೆ ವಿಷಯ ತಿಳಿಸುತ್ತೇನೆ' ಎಂಬುದಾಗಿ ಬೆದರಿಸಿದ್ದರು' ಎಂದು ಪೊಲೀಸರು ತಿಳಿಸಿದರು.

'ನಗದು ಹಾಗೂ ಚಿನ್ನಾಭರಣ ನೀಡಲು ಯುವತಿ ನಿರಾಕರಿಸಿದ್ದರು. ಸುಮ್ಮನಾಗದ ಲತಾ, ಪದೇ ಪದೇ ಕರೆ ಮಾಡಿ ಬ್ಲ್ಯಾಕ್‌ಮೇಲ್ ಮಾಡ-ಲಾರಂಭಿಸಿದ್ದರು. ಪೂಜೆ ನಂತರ, ನಗದು ಹಾಗೂ ಚಿನ್ನಾಭರಣ ವಾಪಸು ಕೊಡುವುದಾಗಿ ಭರವಸೆ ನೀಡಿದ್ದರು. ಅವಾಗಲೇ ಯುವತಿ, ಮನೆ ಬಳಿ ಬಂದಿದ್ದ ಮಹೇಶ್‌ನ ಕೈಗೆ ₹4 ಲಕ್ಷ ನಗದು, 25 ಗ್ರಾಂ ಚಿನ್ನಾಭರಣ ಹಾಗೂ 2 ಗ್ರಾಂ ಚಿನ್ನದ ಉಂಗುರ ಕೊಟ್ಟು ಕಳುಹಿಸಿದ್ದರು. ಇದಾದ ನಂತರ, ಆರೋಪಿಗಳು ನಾಪತ್ತೆಯಾಗಿದ್ದಾರೆ' ಎಂದು ಹೇಳಿದರು.

ಸಹೋದ್ಯೋಗಿ ಜೊತೆ ಮಾತನಾಡಿದ್ದಕ್ಕೆ ಹಲ್ಲೆ

ಬೆಂಗಳೂರು: 'ಸಹೋದ್ಯೋಗಿ ಜೊತೆ ಮಾತನಾಡಿದ್ದಕ್ಕೆ ನನ್ನ ಮೇಲೆ ಪತಿ ಹಲ್ಲೆ ಮಾಡಿದ್ದಾರೆ' ಎಂದು ಆರೋಪಿಸಿ ಮಹಿಳೆಯೊಬ್ಬರು ದೂರು ನೀಡಿದ್ದು, ಪುಟ್ಟೇನಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಜೆ.ಪಿ. ನಗರದ 5ನೇ ಹಂತದ ಮಹಿಳೆಯೊಬ್ಬರು ಮಾರ್ಚ್ 31ರಂದು ನಡೆದಿರುವ ಘಟನೆ ಸಂಬಂಧ ದೂರು ನೀಡಿದ್ದಾರೆ. ಆಟೊ ಚಾಲಕನಾಗಿರುವ ಪತಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಅಪರಾಧ ಸುದ್ದಿ

ಡಬಲ್ ಧಮಾಕಾ ಖುಷಿಯಲ್ಲಿ ಆಶಿಕಾ

'ಆಶಿಕಾ ರಂಗನಾಥ್ ಕನ್ನಡದ ಸಿನಿಮಾಗಳಲ್ಲಿ ಕಾಣಿಸಿಕೊಳ್ಳುತ್ತಿಲ್ಲ' ಎನ್ನುವ ಮಾತುಗಳು ಕೇಳಿಬರುತ್ತಿರುವಾಗಲೇ ಅವರು ನಟಿಸಿರುವ ಎರಡು ಕನ್ನಡ ಸಿನಿಮಾಗಳು ಈ ತಿಂಗಳಲ್ಲಿ ಬಿಡುಗಡೆಯಾಗುತ್ತಿವೆ. ಇಂದು(ಏ.5)'ಅವತಾರ ಪುರುಷ–2' ಬಿಡುಗಡೆಯಾಗುತ್ತಿದ್ದು, ಏ.19ಕ್ಕೆ ಪಿಆರ್‌ಕೆ ಪ್ರೊಡಕ್ಷನ್ಸ್‌ನ '**02**' ತೆರೆಕಾಣುತ್ತಿದೆ. ಈ ಸಂದರ್ಭದಲ್ಲಿ ಅವರು ಮಾತಿಗೆ ಸಿಕ್ಕಾಗ...

ಆಶಿಕಾ ರಂಗನಾಥ್

ಅಭಿಲಾಷ್ ಪಿ.ಎಸ್.

- **'ಅವತಾರ ಪುರುಷ–2' ಹಾಗೂ '02' ಹೀಗೆ ಒಂದೇ ತಿಂಗಳಲ್ಲಿ ಎರಡು ಸಿನಿಮಾ ಬರುತ್ತಿದೆ. ಹೇಗನಿಸುತ್ತಿದೆ?**

ಕಳೆದ ಬಾರಿ 'ರೇಮೊ' ಬಿಡುಗಡೆಯಾದ ದಿನದಂದೇ ತಮಿಳಿನ ನನ್ನ ಚೊಚ್ಚಲ ಚಿತ್ರ 'ಪಟ್ಟತ್ತು ಅರಸನ್' ಬಿಡುಗಡೆಯಾಗಿತ್ತು. ಆದರೆ ಕನ್ನಡದಲ್ಲಿ ಒಂದೇ ತಿಂಗಳಲ್ಲಿ ಎರಡು ಚಿತ್ರ ಬಿಡುಗಡೆಯಾಗುತ್ತಿರುವುದು ಇದೇ ಮೊದಲು. ಆದರೆ ಇದ್ಯಾವುದೂ ಪೂರ್ವನಿಯೋಜಿತವಲ್ಲ. ಆಯಾ ಚಿತ್ರತಂಡಗಳ ನಿರ್ಧಾರವಿದು. 'ಅವತಾರ ಪುರುಷ–2' ಮಾರ್ಚ್ ಅಂತ್ಯಕ್ಕೇ ಬಿಡುಗಡೆಯಾಗಬೇಕಿತ್ತು. ಕೊನೆಯ ಕ್ಷಣದಲ್ಲಿ ಮುಂದೂಡಲ್ಪಟ್ಟಿತು. 'ಆಶಿಕಾ ಕನ್ನಡ ಸಿನಿಮಾಗಳಲ್ಲಿ ಕಾಣಿಸಿಕೊಳ್ಳುತ್ತಿಲ್ಲ' ಎನ್ನುವ ಮಾತುಗಳು; ಪ್ರಶ್ನೆಗಳು ಕೇಳಿಬರುತ್ತಿರುವಾಗ, ಆ ಪ್ರಶ್ನೆಗಳಿಗೆಲ್ಲ ಉತ್ತರವಾಗಿ ನನ್ನ ಎರಡು ಕನ್ನಡ ಸಿನಿಮಾಗಳು ಒಂದೇ ತಿಂಗಳಲ್ಲಿ ಬಿಡುಗಡೆಯಾಗುತ್ತಿವೆ.

ಸದ್ಯ ನಾನು ಸಿಂಪಲ್ ಸುನಿ ನಿರ್ದೇಶನದ 'ಗತವೈಭವ' ಸಿನಿಮಾದ ಶೂಟಿಂಗ್‌ನಲ್ಲಿ ತೊಡಗಿಸಿಕೊಂಡಿದ್ದೇನೆ. ಹೀಗೆ ಕನ್ನಡದಲ್ಲೂ ನಟಿಸುತ್ತಿದ್ದೇನೆ. ಆದರೆ ಸಿನಿಮಾವೊಂದರ ಕಂಟೆಂಟ್ ಹೊರಬರದೇ ಇದ್ದರೆ ಅಥವಾ ತೆರೆಗಳಲ್ಲಿ ಕಾಣಿಸಿಕೊಳ್ಳದೇ ಹೋದರೆ 'ಆಶಿಕಾ ಕನ್ನಡ ಸಿನಿಮಾ ಮಾಡುತ್ತಿಲ್ಲ' ಎನ್ನುತ್ತಾರೆ. ಆದರೆ ನನ್ನ ಕೈಯಲ್ಲಿ ಏನೂ ಇಲ್ಲ. ಸಿನಿಮಾ ಎಂದರೆ ನಾನೊಬ್ಬಳಷ್ಟೇ ಅಲ್ಲವಲ್ಲ. ಯಾವಾಗ ಸಿನಿಮಾ ಬರಬೇಕು ಎನ್ನುವುದನ್ನು ತಂಡ ನಿರ್ಧರಿಸುತ್ತದೆ. ಇದರ ಮೇಲೆಯೇ ನಾವು ನಿಲ್ಲಬೇಕು. ಆ ಸಂದರ್ಭದಲ್ಲಿ ಕಲಾವಿದರಾಗಿ ಪ್ರಚಾರದ ವಿಚಾರದಲ್ಲಿ ಬೆಂಬಲಕ್ಕೆ ನಿಲ್ಲುವುದು ನಮ್ಮ ಜವಾಬ್ದಾರಿ. ಅದನ್ನು ಮಾಡುತ್ತಿದ್ದೇನೆ.

- **'ಅವತಾರ ಪುರುಷ–2'ನೇ ಭಾಗದಲ್ಲಿ 'ಸಿರಿ'ಯ ಪಾತ್ರವೇಷ್ಟಿದೆ?**

ಈ ಸಿನಿಮಾದ ಕಥೆ ಆರಂಭವಾಗಿದ್ದೇ ನನ್ನ 'ಸಿರಿ' ಎಂಬ ಪಾತ್ರದಿಂದ. ಹೀಗಾಗಿ ಮೊದಲ ಭಾಗದಲ್ಲಿ ನನ್ನ ಪಾತ್ರದ ತೆರೆ ಅವಧಿ ಹೆಚ್ಚು ಇತ್ತು. ಕಮರ್ಷಿಯಲ್ ಅಂಶಗಳ ಜೊತೆ ಸಿನಿಮಾ ಸಾಗಿ, ಕ್ಲೈಮ್ಯಾಕ್ಸ್‌ನಲ್ಲಿ ಕಥೆಯೇ ಪ್ರಾಮುಖ್ಯತೆ ಪಡೆಯಿತು. ಎರಡನೇ ಭಾಗದಲ್ಲಿ ಕಥೆಯೇ ಮುಖ್ಯಭೂಮಿಕೆಯಲ್ಲಿದೆ. ಎಂದರೆ ಕಂಟೆಂಟ್ ಇಲ್ಲಿನ ಪ್ರಮುಖ ಅಂಶ. ನಾನು ಸಿನಿಮಾದಲ್ಲಿ ಇದ್ದೇನೆ ಎಂದು ನನ್ನ ದೃಶ್ಯಗಳನ್ನಾಗಲಿ ಅಥವಾ ನನ್ನ–ಶರಣ್ ಅವರ ದೃಶ್ಯಗಳನ್ನು ಅನಗತ್ಯವಾಗಿ ಇಲ್ಲಿ ಬಳಸಿಲ್ಲ. ಇದು ಟ್ರೇಲರ್‌ನಲ್ಲೇ ಸ್ಪಷ್ಟವಾಗುತ್ತದೆ. ಎರಡನೇ ಭಾಗದಲ್ಲಿ 'ಸಿರಿ' ಒಂದು ರೀತಿ ಪೋಷಕ ಪಾತ್ರವಾಗಿ ಬದಲಾಗುತ್ತದೆ. ಈ ಭಾಗದಲ್ಲಿ ಹೆಚ್ಚಿನ ಪಾತ್ರಗಳಿದ್ದು, ನಾನು ಒಂದು ಡ್ರೈವಿಂಗ್ ಫೋರ್ಸ್ ಆಗಿ ಇರುತ್ತೇನೆ. ಒಂದು ರೀತಿ ಮೂರನೇ ಪಾತ್ರವಾಗಿ ನಾನಿಲ್ಲಿದ್ದೇನೆ.

ಎರಡನೇ ಭಾಗದಲ್ಲಿ ವಿಎಫ್‌ಎಕ್ಸ್, ಗ್ರಾಫಿಕ್ಸ್ ಹೆಚ್ಚಿನ ಪ್ರಮಾಣದಲ್ಲಿದೆ. ಈ ರೀತಿಯ ಜಾನರ್‌ನ ಸಿನಿಮಾವನ್ನು ಯಾರೂ ಪ್ರಯತ್ನಿಸಿಲ್ಲ. ತಾಂತ್ರಿಕವಾಗಿ ಹೆಚ್ಚು ಕೆಲಸವಿದ್ದ ಸಿನಿಮಾವಿದು. ಇಂತಹ ಸಿನಿಮಾಗಳಿಗೆ ಅದರದ್ದೇ ಆದ ಸಂಶೋಧನೆ, ಪ್ರಯತ್ನದ ಅಗತ್ಯವಿದೆ. ಹೀಗಾಗಿ ಸಿನಿಮಾ ತೆರೆಗೆ ಬರಲು ತಡವಾಯಿತು. ಸಿನಿಮಾ ಬಹಳ ಪರಿಣಾಮಕಾರಿಯಾಗಿ ಬಂದಿದೆ. ಹೀಗಾಗಿ 'ಸಿನಿಮಾ ತಡವಾಯಿತು' ಎನ್ನುವ ಮಾತುಗಳ ಬಗ್ಗೆ ಜನ ಹೆಚ್ಚು ಯೋಚನೆ ಮಾಡುತ್ತಾರೆ ಎಂದೆನಿಸುವುದಿಲ್ಲ.

- **'02' ಸಿನಿಮಾದಲ್ಲಿನ 'ಶ್ರದ್ಧಾ' ಯಾರು?**

ಕೋವಿಡ್ ಲಾಕ್‌ಡೌನ್ ಅಂತ್ಯವಾದ ಸಂದರ್ಭದಲ್ಲಿ ಈ ಸಿನಿಮಾದ ಸ್ಕ್ರಿಪ್ಟ್ ನನ್ನ ಕೈಗೆ ಬಂತು. 'ಶ್ರದ್ಧಾ' ಪಾತ್ರಕ್ಕೆ ಹೆಚ್ಚಿನ ಹುಡುಕಾಟ ನಡೆದಿತ್ತಂತೆ. ಪಿಆರ್‌ಕೆ ಸಂಸ್ಥೆಯ ಸಿನಿಮಾವಾದ ಕಾರಣ ನನಗೂ ಹೆಚ್ಚಿನ ಆಸಕ್ತಿಯಿತ್ತು. ಪುನೀತ್ ರಾಜ್‌ಕುಮಾರ್ ಅವರು ಒಪ್ಪಿದ್ದ ಸ್ಕ್ರಿಪ್ಟ್ ಅದಾಗಿತ್ತು. ಕಥೆ ಓದಿದಾಗ 'ಶ್ರದ್ಧಾ' ಎಂಬ ಪಾತ್ರ ಬೀರುವ ಪರಿಣಾಮದ ಅರಿವಾಯಿತು. ಆ ಸಂದರ್ಭದಲ್ಲಿ ಯಾವ ಕಾರಣಕ್ಕೂ ಈ ಪ್ರಾಜೆಕ್ಟ್ ಬಿಟ್ಟುಕೊಡಬಾರದು ಎಂದು ನಿರ್ಧರಿಸಿದೆ. ಇಂತಹ ಅವಕಾಶಗಳು ಬರುವುದು ಬಹಳ ಅಪರೂಪ. ನಾನು ಹಿಂದೆಂದೂ ಈ ರೀತಿಯ ಪಾತ್ರ ಮಾಡಿಲ್ಲ. ನನಗೆ ಹೆಚ್ಚಿನ ಪ್ರಾಮುಖ್ಯತೆ ಸಿಗುವ ಪಾತ್ರ ಹಾಗೂ ನಟಿಯಾಗಿ ನನ್ನ ಸಾಮರ್ಥ್ಯವನ್ನು ಜನರಿಗೆ ತೋರ್ಪಡಿಸುವ ಅವಕಾಶ ಈ ಪಾತ್ರದಲ್ಲಿತ್ತು. ಜೊತೆಗೆ ಪುನೀತ್ ಅವರ ಮಾರ್ಗದರ್ಶನದ ತಂಡದ ಮೇಲಿದ್ದ ನಂಬಿಕೆಯಿಂದ ಪ್ರಾಜೆಕ್ಟ್ ಒಪ್ಪಿಕೊಂಡೆ. ನಾನು ಇಲ್ಲಿಯವರೆಗೂ ಹೆಸರಾಂತ ನಿರ್ದೇಶಕರು ಹಾಗೂ ಸ್ಟಾರ್ ನಿರ್ದೇಶಕರ ಜೊತೆಯಷ್ಟೇ ಕೆಲಸ ಮಾಡಿದ್ದೆ. '02'ನಲ್ಲಿ ನಿರ್ದೇಶಕರಿಬ್ಬರೂ ಹೊಸಬರು. ಆದರೆ ಇವರ ಬೆನ್ನಿಗೆ ಪಿಆರ್‌ಕೆ ಇತ್ತು. ನನಗೂ ಹೊಸ ಜನರೇಷನ್ ನಿರ್ದೇಶಕರ ಜೊತೆ ಕೆಲಸ ಮಾಡಿ ಭಿನ್ನ ಪಾತ್ರಗಳನ್ನು ನಿಭಾಯಿಸುವ ಆಸೆ ಇತ್ತು.

ಪ್ರಸ್ತುತ ವಿಶ್ವದೆಲ್ಲೆಡೆ ಮಹಿಳೆಯ ಶ್ರಮಕ್ಕೆ ತಕ್ಕ ಪ್ರತಿಫಲ ಸಿಗುತ್ತಿದೆ. ಸಾಕಷ್ಟು ಸಿನಿಮಾಗಳು ಇಂತಹ ವಿಷಯದ ಮೇಲೆಯೇ ಬಂದಿವೆ. '02' ಸಿನಿಮಾ ಕೇವಲ ಮಹಿಳಾ ಪ್ರಧಾನ ಚಿತ್ರವಲ್ಲ. ಹಲವು ವಿಷಯಗಳು ಚಿತ್ರದಲ್ಲಿವೆ. ಇದೊಂದು ರೀತಿಯ ಪ್ರಯೋಗಾತ್ಮಕ ವಿಷಯವಿರುವ ಸಿನಿಮಾ. 'ಡಾಕ್ಟರ್ ಶ್ರದ್ಧಾ' ಸಂಶೋಧನೆ ನಡೆಸಿ '02' ಎಂಬ ಔಷಧದ ಮೂಲಕ ಸಾವು-ಬದುಕಿನ ಮಧ್ಯೆ ಹೋರಾಡುತ್ತಿರುವವರನ್ನು ಬದುಕಿಸುವ ಪ್ರಯತ್ನಕ್ಕೆ ಮುಂದಾಗುತ್ತಾಳೆ. ಆಗ ಎದುರಾಗುವ ಅಡೆತಡೆಗಳನ್ನು ಮೀರಿ ಗುರಿ ತಲುಪಲು ಆಕೆಗೆ ಸಾಧ್ಯವೇ ಎನ್ನುವುದು ಚಿತ್ರದ ಕಥೆ.

- **ಹೊಸ ಪ್ರಾಜೆಕ್ಟ್‌ಗಳು...**

ಸಿದ್ಧಾರ್ಥ್ ಅವರ ಜೊತೆ ನಟಿಸಿರುವ ತಮಿಳು ಸಿನಿಮಾವೊಂದು ಬಿಡುಗಡೆಗೆ ಸಜ್ಜಾಗಿದೆ. ಲವ್‌ಸ್ಟೋರಿ ಜಾನರ್‌ನ ಈ ಸಿನಿಮಾದ ಶೀರ್ಷಿಕೆ ಇನ್ನಷ್ಟೇ ಘೋಷಣೆಯಾಗಬೇಕಿದೆ. 'ನಾ ಸಾಮಿ ರಂಗ' ಬಳಿಕ ಹೊಸ ತೆಲುಗು ಸಿನಿಮಾವೊಂದನ್ನು ಒಪ್ಪಿಕೊಂಡಿದ್ದೇನೆ. ಕನ್ನಡ ಹಾಗೂ ತಮಿಳಿನಲ್ಲಿ ಕಥೆಗಳನ್ನು ಕೇಳುತ್ತಿದ್ದೇನೆ.

ಒಂದೇ ಮಾದರಿಯ ಪಾತ್ರಗಳನ್ನು ಮಾಡಿದರೆ ಯಾವುದೇ ಪರಿಣಾಮ ಬೀರಲು ಸಾಧ್ಯವಿಲ್ಲ. ಮನಸ್ಸಿಗೆ ಖುಷಿ ತರುವ ಪಾತ್ರಗಳು ಸದ್ಯ ಕನ್ನಡದಲ್ಲಿ ಬಂದಿಲ್ಲ. ಬಂದರೆ ಖಂಡಿತವಾಗಿಯೂ ಮಾಡುತ್ತೇನೆ. '02'ನಂತಹ ಭಿನ್ನವಾದ ಮಾದರಿ ಸಿನಿಮಾಗಳು ಬಂದರೆ ಒಪ್ಪಿಕೊಳ್ಳುತ್ತೇನೆ. ಗ್ಲ್ಯಾಮರಸ್ ನಟಿ ಎನ್ನುವುದನ್ನು ನಾನು ಸಾಬೀತುಪಡಿಸಿದ್ದೇನೆ. ಓರ್ವ ನಟಿಯಾಗಿ, ಗ್ಲ್ಯಾಮರಸ್ ಪಾತ್ರಗಳನ್ನು ಹಾಗೂ ಪಾತ್ರಕ್ಕೆ ಹೆಚ್ಚು ಒತ್ತು ನೀಡುವ ಕಥೆಗಳನ್ನು ಸಮಾನವಾಗಿ ಮಾಡಿಕೊಳ್ಳುತ್ತಾ ಹೋಗುತ್ತೇನೆ. ನಾನು ಒಂದು ಜಾನರ್‌ನ ಸಿನಿಮಾಗಳಿಗೆ ಅಂಟಿಕೊಂಡಿಲ್ಲ. ಹಲವು ಸಿನಿಮಾಗಳನ್ನು ಮಾಡಿರುವ ಕಾರಣ, ಪಾತ್ರದ ಬಗೆಗಿನ ನನ್ನ ನಿರೀಕ್ಷೆಗಳು ಜಾಸ್ತಿ ಇವೆ. ಹೀಗಾಗಿ ಕೊಂಚ ಸಮಯ ತೆಗೆದುಕೊಳ್ಳುತ್ತಿದ್ದೇನೆ ಅಷ್ಟೆ.

ಪ್ರಜಾವಾಣಿ ನೋಡಿಯಾ

ಸಿನಿಮಾತು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ರೂಪಾಲಿ

'ವೆಂಕ್ಯಾ' ಅಂಗಳಕ್ಕೆ ಶಿಮ್ಲಾ ಸುಂದರಿ

ರಾಷ್ಟ್ರ ಪ್ರಶಸ್ತಿ ವಿಜೇತ 'ಡೊಳ್ಳು' ಸಿನಿಮಾ ನಿರ್ದೇಶಿಸಿದ್ದ ಸಾಗರ್ ಪುರಾಣಿಕ್ ನಟಿಸಿ, ನಿರ್ದೇಶಿಸುತ್ತಿರುವ ಹೊಸ ಸಿನಿಮಾಗೆ ಶಿಮ್ಲಾ ಬೆಡಗಿಯ ಪ್ರವೇಶವಾಗಿದೆ.

'ಡೊಳ್ಳು' ಸಿನಿಮಾ ನಿರ್ಮಾಣ ಮಾಡಿದ್ದ ಪವನ್ ಒಡೆಯರ್ ಅವರೇ 'ವೆಂಕ್ಯಾ' ಸಿನಿಮಾವನ್ನು ನಿರ್ಮಾಣ ಮಾಡುತ್ತಿದ್ದಾರೆ. ಸಿನಿಮಾದ ಚಿತ್ರೀಕರಣ ಭರದಿಂದ ಸಾಗುತ್ತಿದೆ. ಸಾಗರ್, ನಿರ್ದೇಶನದ ಜೊತೆಗೆ ನಾಯಕನಾಗಿಯೂ ಈ ಸಿನಿಮಾದಲ್ಲಿ ಬಣ್ಣಹಚ್ಚಿದ್ದು, ಇದೀಗ ಚಿತ್ರತಂಡಕ್ಕೆ ಯುವ ನಟಿಯರೊಬ್ಬರ ಆಗಮನವಾಗಿದೆ. ರೂಪಾಲಿ ಸೂದ್ ಈ ಚಿತ್ರದಲ್ಲಿ ನಟಿಸುತ್ತಿದ್ದು, ಈ ಮೂಲಕ ಕನ್ನಡ ಚಿತ್ರರಂಗ ಪ್ರವೇಶಿಸಿದ್ದಾರೆ.

ಮೂಲತಃ ಶಿಮ್ಲಾದವರಾದ ರೂಪಾಲಿ ಕಾಲೇಜು ದಿನಗಳಲ್ಲಿದ್ದಾಗಲೇ ಮಾಡೆಲಿಂಗ್ ಕ್ಷೇತ್ರಕ್ಕೆ ಇಳಿದಿದ್ದರು. ಮಾಡೆಲಿಂಗ್ ಜೊತೆಗೆ ಹಲವು ಮ್ಯೂಸಿಕ್ ಆಲ್ಬಂಗಳಲ್ಲಿ ನಟಿಸಿರುವ ರೂಪಾಲಿ ಇದೀಗ 'ವೆಂಕ್ಯಾ' ಸಿನಿಮಾದ ಪ್ರಮುಖ ಪಾತ್ರವೊಂದರಲ್ಲಿ ಕಾಣಿಸಿಕೊಳ್ಳಲಿದ್ದಾರೆ. 'ರೂಪಾಲಿ ಈಗಾಗಲೇ ಶೂಟಿಂಗ್‌ನಲ್ಲಿ ಭಾಗಿಯಾಗಿದ್ದಾರೆ. ಅವರು ಹಿಮಾಚಲದ ಪಹಾಡಿ ಹುಡುಗಿಯಾಗಿ ನಟಿಸುತ್ತಿದ್ದಾರೆ' ಎಂದಿದೆ ಚಿತ್ರತಂಡ. 'ನಾವು ಇತ್ತೀಚೆಗೆ ಮನಾಲಿಯ ಮುಂದೆ ಕೈಲಾಂಗ್‌ನಲ್ಲಿ, ಪರ್ವತಗಳ ನಡುವೆ ಸುಂದರವಾದ ಸ್ಥಳದಲ್ಲಿ ಕೆಲವು ದೃಶ್ಯಗಳನ್ನು ಚಿತ್ರೀಕರಿಸಿದ್ದೆವು. ಇದು ನನ್ನ ಸಿನಿಮಾ ವೃತ್ತಿಜೀವನಕ್ಕೆ ಅದ್ಭುತ ಆರಂಭ' ಎಂದಿದ್ದಾರೆ ರೂಪಾಲಿ. ಉತ್ತರ ಕರ್ನಾಟಕದ ಕಥೆ ಆಧಾರಿಸಿ ಮೂಡಿಬರುತ್ತಿರುವ 'ವೆಂಕ್ಯಾ' ಚಿತ್ರದ ಚಿತ್ರಕಥೆ ಮತ್ತು ಸಂಭಾಷಣೆಯನ್ನು ಶ್ರೀನಿಧಿ ಡಿ.ಎಸ್. ಬರೆದಿದ್ದಾರೆ.

ಏ.15ರಿಂದ 'ಉತ್ತರಕಾಂಡ' ಪ್ರವೇಶ

ಧನಂಜಯ

'ರತ್ನನ್ ಪ್ರಪಂಚ' ಸಿನಿಮಾ ಯಶಸ್ಸಿನ ಬಳಿಕ ಕೆ.ಆರ್.ಜಿ ಸ್ಟುಡಿಯೋಸ್, ನಟ ಡಾಲಿ ಧನಂಜಯ ಮತ್ತು ರೋಹಿತ್ ಪದಕಿ ಕಾಂಬಿನೇಷನ್‌ನಲ್ಲಿ ಸೆಟ್ಟೇರಿರುವ ಸಿನಿಮಾ 'ಉತ್ತರಕಾಂಡ'. ಸಿನಿಮಾದ ಪಾತ್ರಗಳಿಗೆ ಇತ್ತೀಚೆಗಷ್ಟೇ ಆಡಿಷನ್ ನಡೆದಿದ್ದು, ಸಿನಿಮಾದ ಚಿತ್ರೀಕರಣ ಏ.15ರಿಂದ ಆರಂಭವಾಗಲಿದೆ.

ಖ್ಯಾತ ಹಿಂದಿ ಗಾಯಕ, ಸಂಗೀತ ನಿರ್ದೇಶಕ ಅಮಿತ್ ತ್ರಿವೇದಿ 'ಉತ್ತರಕಾಂಡ' ಚಿತ್ರಕ್ಕೆ ಸಂಗೀತ ಸಂಯೋಜನೆ ಮಾಡಲಿದ್ದಾರೆ ಎಂದು ಚಿತ್ರತಂಡ ಘೋಷಿಸಿದೆ. 'ದೇವ್ ಡಿ', 'ಕ್ವೀನ್', 'ವೇಕ್ ಅಪ್ ಸಿಡ್', 'ಕೈ ಪೋ ಚೆ', 'ಲೂಟೇರಾ', 'ಉಡ್ತಾ ಪಂಜಾಬ್', 'ಅಂಧಾದುನ್', 'ಸೈ ರಾ ನರಸಿಂಹ ರೆಡ್ಡಿ' ಮುಂತಾದ ಚಿತ್ರಗಳಿಗೆ ಅಮಿತ್ ಸಂಗೀತ ನೀಡಿದ್ದಾರೆ.

''ಉತ್ತರಕಾಂಡ' ಚಿತ್ರದ ಮೂಲಕ ನಾವು ಉತ್ತರ ಕರ್ನಾಟಕದ ನಾಟಿ ಮತ್ತು ಹಳ್ಳಿಗಾಡಿನ ಕಥೆಯನ್ನು ಹೇಳುತ್ತಿದ್ದೇವೆ. ಇಂತಹಾ ಸ್ಥಳೀಯ ಭಾವನೆಯನ್ನು ಉಂಟು ಮಾಡುವ ಕಥೆಗೆ ಅಮಿತ್ ಸಂಗೀತ ಸಾಥ್ ನೀಡಲಿದೆ' ಎನ್ನುತ್ತಾರೆ ರೋಹಿತ್. ಆ್ಯಕ್ಷನ್ ಡ್ರಾಮಾ ಕಥಾಹಂದರದ ಈ ಚಿತ್ರದಲ್ಲಿ ಸೆಂಚುರಿ ಸ್ಟಾರ್ ಶಿವರಾಜ್‌ಕುಮಾರ್ ಮತ್ತು ಡಾಲಿ ಧನಂಜಯ ಮುಖ್ಯ ಭೂಮಿಕೆಯಲ್ಲಿ ಕಾಣಿಸಿಕೊಳ್ಳಲಿದ್ದಾರೆ. ನಾಯಕಿ ಸ್ಥಾನದಿಂದ ರಮ್ಯಾ ಹೊರನಡೆದ ಬಳಿಕ, ಆ ಪಾತ್ರಕ್ಕೆ ಪರ್ಯಾಯದ ಹುಡುಕಾಟ ನಡೆಸುತ್ತಿದೆ ಚಿತ್ರತಂಡ.

ಕೆ.ಜಿ.ರಸ್ತೆ-ಬೆಂಗಳೂರು ನರ್ತಕಿ
ಮಾಗಡಿ ರಸ್ತೆ ಪ್ರಸನ್ನ
ರಾಜಾಜಿನಗರ ನವರಂಗ್
ಜೆ.ಪಿ.ನಗರ ಸಿದ್ದಲಿಂಗೇಶ್ವರ
ಆವಲಹಳ್ಳಿ ವೆಂಕಟೇಶ್ವರ
ಕತ್ರಿಗುಪ್ಪೆ ಕಾಮಾಕ್ಯ
ಸಂಜಯನಗರ ವೈಭವ್
ತಾವರಕೆರೆ ಬಾಲಾಜಿ
ಸುಂಕದಕಟ್ಟೆ ಮೋಹನ್
ಕೆಂಗೇರಿ ವೆಂಕಟೇಶ್ವರ
ಕಮಲಾನಗರ ವೀರಭದ್ರೇಶ್ವರ
ಪೀಣ್ಯ ಭಾರತಿ
ಯಶವಂತಪುರ ಉಲ್ಲಾಸ್
ಲಗ್ಗೆರೆ ಆಕಾಶ್
ಮಲ್ಲತ್ತಹಳ್ಳಿ VR
ಗೊಲ್ಲರಹಟ್ಟಿ ವೆಂಕಟೇಶ್ವರ
ಕೋಣನಕುಂಟೆ ಮಾನಸ
ಕದಿರೇನಹಳ್ಳಿ ಮಹದೇಶ್ವರ
ಕೊಡಿಗೆಹಳ್ಳಿ ರಾಜ್‌ಮುರಳಿ
ತಿರುಮಲ
ಕಾಡುಗೋಡಿ ಶ್ರೀನಿವಾಸ
ಬೊಮ್ಮನಹಳ್ಳಿ ಕೃಷ್ಣ
ಯಲಹಂಕ ಗಣೇಶ್
ಚಿಕ್ಕಬಾಣಾವರ ಅಶೋಕ
ಹೆಸರಘಟ್ಟ ಎಸ್.ಎಲ್.ಎನ್
Swagath
PVR INOX: NEXUS | ORION | VAISHNAVI | REGALIA | MARKETCITY | AURA | VEGACITY | SPIRIT | UOTOWN | BHARATIYA | REX | GT | VR MALL | GLOBAL | FALCONCITY | SWAGATH | LIDO | MANTRI | RMZ | GARUDA | YELAHANKA | NEXUS NEIGBOURHOOD | SBR | BROOKFIELD
Cinépolis: ETA | MEENAKSHI | ORION EAST | LULU | SHANTINIKETAN | SJR
GOPALAN CINEMAS: ARCH | INNOVATION | GRAND | SIGNATURE | LEGACY
ROCKLINE cinemas JALAHALLI
MIRAJ SUNKADAKATTE
KIN CINEMAS SEEGEHALLI
CINEPHILE HSR LAYOUT
INNOVATIVE
MUKTA A2 VAIBHAVI VAISHNAVI
ಜಿಗಣಿ ನಂದೀಶ್ವರ
ತುಮಕೂರು ಗಾಯತ್ರಿ, PVR INOX
ಕೋಲಾರ ಶಾರದಾ
ಸಿರಾ ಸಪ್ತಗಿರಿ
ದೊಡ್ಡಬಳ್ಳಾಪುರ ಸೌಂದರ್ಯಮಹಲ್
ತಿಪಟೂರು ತ್ರಿಮೂರ್ತಿ
ಕುಣಿಗಲ್ ಆಕಾಶ್
ಚನ್ನಪಟ್ಟಣ ಲಕ್ಷ್ಮೀ
ತುರುವೆಕೆರೆ ಪೂರ್ಣಿಮಾ
ಕನಕಪುರ ಗೋಪಾಲಕೃಷ್ಣ
ನೆಲಮಂಗಲ ರೂಪಾ
ಮುಳಬಾಗಿಲು ವರ್ಧರಾಜ
ಚಿಂತಾಮಣಿ ಆದರ್ಶ್
ಮೈಸೂರು ಸಂಗಮ, PVR INOX (PVR INOX GARUDA MALL, PVR FORUM MALL, INOX CENTRO, INOX SATYAM COMPLEX), DRC, MYSURU VISION CINEMAS
ಮಂಡ್ಯ ಸಂಜಯ್
ಹಾಸನ ಸಹ್ಯಾದ್ರಿ
ನಂಜನಗೂಡು ಶಾರದ
ಚಾಮರಾಜನಗರ ಬ್ರಹ್ಮರಾಂಭ
ನಂಜನಗೂಡು ಶಾರದ
ಕೊಳ್ಳೇಗಾಲ ಶ್ರೀನಿವಾಸ
ಕೆ.ಆರ್.ನಗರ ವೆಂಕಟೇಶ್ವರ
ಕೆ. ಆರ್. ಪೇಟೆ ಕೆ.ಜೆ.ಬಿ
ಗುಂಡ್ಲುಪೇಟೆ ವೆಂಕಟೇಶ್ವರ
ಚೆನ್ನರಾಯಪಟ್ಟಣ ಬಾಲಾಜಿ
ಹೊಳೆನರಸೀಪುರ ಎಸ್.ಎಲ್.ಎನ್
ಅರಸೀಕೆರೆ ರತ್ನ
ಪಾಂಡವಪುರ ಕೋಕಿಲಾ
ಪಿರಿಯಾಪಟ್ಟಣ ಮಹದೇಶ್ವರ
ಮದ್ದೂರು ಸಂಜಯ
ಟಿ.ನರಸೀಪುರ ಮುರುಗನ್
ಹುಣಸೂರು ಲೀಲಾ
ಕೆ.ಎಂ.ದೊಡ್ಡಿ ಸುಮಾ
ಬೆಳ್ಳೂರುಕ್ರಾಸ್ ಮಾರುತಿ
ಕುಶಾಲನಗರ ಕೂರ್ಗ್ ಸಿನಿಪ್ಲೆಕ್ಸ್
ಸಿದ್ದಾಪುರ ವುಡ್‌ಲ್ಯಾಂಡ್
ಶನಿವಾರಸಂತೆ ಯಶಸ್ವಿನಿ
ಸುಂಟಿಕೊಪ್ಪ ಗಣೇಶ್
ಹುಲ್ಲಹಳ್ಳಿ ಯಜಮಾನ
ಬಾಣಾವರ ವೆಂಕಟೇಶ್ವರ
ದಾವಣಗೆರೆ ತ್ರಿನೇತ್ರ, MOVIETIME
ಚಿತ್ರದುರ್ಗ ಬಸವೇಶ್ವರ
ಬಳ್ಳಾರಿ ನಟರಾಜ ಕಾಂಪ್ಲೆಕ್ಸ್
ಹೊಸಪೇಟೆ ಲಕ್ಷ್ಮೀ
ಹಗರಿಬೊಮ್ಮನಹಳ್ಳಿ ಕೊಟ್ಟುರೇಶ್ವರ
ಕೂಡ್ಲಿಗಿ ಬಸವೇಶ್ವರ
ಶಿವಮೊಗ್ಗ ವೀರಭದ್ರೇಶ್ವರ, Bharath Cinemas
ಚಿಕ್ಕಮಗಳೂರು ಶ್ರೀಲೇಖ
ಭದ್ರಾವತಿ ವೀರಬದ್ರೇಶ್ವರ
ಕಡೂರು ಅನ್ನಪೂರ್ಣ
ಶಿಕಾರಿಪುರ ಜಯಶ್ರೀ
ಚನ್ನಗಿರಿ ಲಕ್ಷ್ಮೀ
ಹುಬ್ಬಳ್ಳಿ ಸುಧಾ, PVR INOX, Cinépolis
ಧಾರವಾಡ ವಿಜಯ್, PVR INOX
ಬೆಳಗಾವಿ ನರ್ತಕಿ, PVR INOX
ನಿಪ್ಪಾಣಿ MAGNUM CINEMAS
ಬಿಜಾಪುರ ಲಕ್ಷ್ಮೀ
ಗದಗ ಶಾಂತಿ
ಬಾಗಲಕೋಟೆ ವಾಸವಿ
ರಾಣೆಬೆನ್ನೂರು ಶಿವಶಕ್ತಿ
ಇಳಕಲ್ ನಾರಾಯಣ
ಸಿಂದಗಿ ಆನಂದ್
ಲಕ್ಷ್ಮೇಶ್ವರ ಕೃಷ್ಣ
ಹಾವೇರಿ ಸರಸ್ವತಿ
ಮುಧೋಳ್ ಶುಭಾಷಿಣಿ
ಅಂಕೋಲ ಮಯೂರ
ಜಮಖಂಡಿ ಶ್ರೀನಿವಾಸ
ಗೋಕಾಕ್ ಅನಂದ
ರಬಕವಿ ಶ್ರೀನಿವಾಸ
ರೋಣ ಮಲ್ಲಿಕಾರ್ಜುನ
ರಾಮದುರ್ಗ ವೆಂಕಟೇಶ್ವರ
ಗುಲ್ಬರ್ಗಾ ತ್ರಿವೇಣಿ, MIRAJ, PVR INOX
ರಾಯಚೂರು MIRAJ
ಗಂಗಾವತಿ ಅಮರ್
ಕೊಪ್ಪಳ ಶಾರದ
ಬೀದರ್ ಸ್ವಪ್ನ
ಶಹಾಪುರ ಜಯಶ್ರೀ
ಕುಷ್ಟಗಿ ಮಾರುತಿ
ಸಿಂಧನೂರು ಶರಣಬಸವೇಶ್ವರ
ಕನಕಗಿರಿ ನಂದಿ
ದೇವದುರ್ಗಾ ಆನಂದ್
ಮಸ್ಕಿ ಶರಣಬಸವೇಶ್ವರ
ಯಲಬುರ್ಗಾ ಪ್ರವೀಣ್
ಮಂಗಳೂರು PVR INOX, Cinépolis, Bharath Cinemas, SP
ಮಣಿಪಾಲ್ Bharath Cinemas, PVR INOX
ಉಡುಪಿ ಅಲಂಕಾರ್
ಕಾರ್ಕಳ ರಾಧಿಕಾ
ಬೆಳ್ತಂಗಡಿ ಭರತ್
ಕುಂದಾಪುರ Bharath Cinemas
ಸುರತ್ಕಲ್ Cine Galaxy
ಪಡುಬಿದ್ರೆ Bharath Cinemas
ಪುತ್ತೂರು Bharath Cinemas
ಹಾಗೂ ರಾಜ್ಯಾದ್ಯಂತ ಇತರ ಚಿತ್ರಮಂದಿರಗಳಲ್ಲಿ

ಶೀಘ್ರದಲ್ಲೇ ಬರ್ತಾನೆ 'ಲಾಫಿಂಗ್ ಬುದ್ಧ'

ನಟ ರಿಷಬ್ ಶೆಟ್ಟಿ ನಿರ್ಮಾಣ ಮಾಡುತ್ತಿರುವ 'ಲಾಫಿಂಗ್ ಬುದ್ಧ' ಸಿನಿಮಾದ ಚಿತ್ರೀಕರಣ ಪೂರ್ಣಗೊಂಡಿದ್ದು, ಜೂನ್‌ನಲ್ಲಿ ಸಿನಿಮಾ ಬಿಡುಗಡೆಗೆ ಚಿತ್ರತಂಡ ನಿರ್ಧರಿಸಿದೆ.

ರಿಷಬ್ ಶೆಟ್ಟಿ ಫಿಲಂಸ್ ಬ್ಯಾನರ್‌ನಲ್ಲಿ ನಿರ್ಮಾಣವಾಗಿರುವ ಈ ಚಿತ್ರಕ್ಕೆ ಭರತ್ ರಾಜ್ ಎಂ. ಆ್ಯಕ್ಷನ್ ಕಟ್ ಹೇಳಿದ್ದಾರೆ. ಚಿತ್ರದಲ್ಲಿ ಪ್ರಮೋದ್ ಶೆಟ್ಟಿ ನಾಯಕನಾಗಿ ನಟಿಸುತ್ತಿದ್ದು, ತೇಜು ಬೆಳವಾಡಿ, ಸುಂದರ್ ರಾಜ್ ಸೇರಿ ಇನ್ನೂ ಹಲವು ಕಲಾವಿದರಿದ್ದಾರೆ. ಭದ್ರಾವತಿ, ಜೋಗ, ಸಾಗರ, ಬೆಂಗಳೂರು ಸುತ್ತಮುತ್ತ ಚಿತ್ರದ ಶೂಟಿಂಗ್ ನಡೆಸಲಾಗಿದ್ದು, ಸದ್ಯ ಚಿತ್ರದ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ನಡೆಯುತ್ತಿವೆ.

ಚಿತ್ರಕ್ಕೆ 30 ಕೆ.ಜಿ. ತೂಕ ಏರಿಕೆ!

'ಈ ಚಿತ್ರ 'ಹೀರೋ' ಚಿತ್ರಕ್ಕೂ ಮೊದಲೇ ಬರಬೇಕಿತ್ತು.

'ಲಾಫಿಂಗ್ ಬುದ್ಧ' ಚಿತ್ರತಂಡ

'ಲಾಫಿಂಗ್ ಬುದ್ಧ' ದೊಡ್ಡ ಪ್ರಾಜೆಕ್ಟ್. ಕೋವಿಡ್ ಲಾಕ್‌ಡೌನ್ ಕಾರಣದಿಂದ ಈ ಪ್ರಾಜೆಕ್ಟ್ ಸ್ಥಗಿತಗೊಂಡಿತ್ತು. ಆ ಸಂದರ್ಭದಲ್ಲಿ ಸಣ್ಣದೊಂದು ಪ್ರಾಜೆಕ್ಟ್ ಯೋಜನೆ ಹಾಕಿಕೊಂಡೆವು. ಅದೇ 'ಹೀರೋ'. ಈ ಸಿನಿಮಾ ಬಳಿಕ ನಾನು ತೂಕ ಕಳೆದುಕೊಂಡಿದ್ದೆ. ಚಿತ್ರಕ್ಕಾಗಿ ತೂಕ ಹೆಚ್ಚಿಸಿಕೊಳ್ಳಬೇಕಿದ್ದ ಕಾರಣ ಮತ್ತೆ 'ಲಾಫಿಂಗ್ ಬುದ್ಧ' ಮುಂದೂಡಲ್ಪಟ್ಟಿತ್ತು. ಸಿನಿಮಾದಲ್ಲಿ ನಾನು ದಪ್ಪ ಇರುವ ಪೊಲೀಸ್ ಆಗಿ ಕಾಣಿಸಿಕೊಳ್ಳುತ್ತಿದ್ದೇನೆ. ಮೊದಲಿಗೆ ಸಿಂಥೆಟಿಕ್ ವಸ್ತುಗಳನ್ನು ಬಳಸಿ ಹೊಟ್ಟೆ ದಪ್ಪ ಮಾಡುವ ಕುರಿತು ತಂಡ ಯೋಚಿಸಿತು. ಆದರೆ ಪಾತ್ರದಲ್ಲಿ ನೈಜತೆ ಇರಬೇಕು ಎನ್ನುವ ಉದ್ದೇಶದಿಂದ ಈ ಸಿನಿಮಾಗಾಗಿ ನಾನು 30 ಕೆ.ಜಿ. ತೂಕ ಏರಿಸಿಕೊಂಡೆ. ಸಿಕ್ಕಿದ್ದೆಲ್ಲ ತಿನ್ನುವ ಅವಕಾಶ ಆವಾಗ ಲಭಿಸಿತ್ತು' ಎಂದು ಅನುಭವ ಹಂಚಿಕೊಂಡರು ಪ್ರಮೋದ್.

ರಕ್ಷಿತ್ ಶೆಟ್ಟಿ–ಪ್ರಮೋದ್ ಶೆಟ್ಟಿ ಸ್ಪರ್ಧೆ!

''ಲಾಫಿಂಗ್ ಬುದ್ಧ' ಬಳಿಕ ನಾನು ಹಾಗೂ 'ಸಪ್ತ ಸಾಗರದಾಚೆ ಎಲ್ಲೋ' ಸಿನಿಮಾದ ಬಳಿಕ ರಕ್ಷಿತ್ ತೂಕ ಇಳಿಸಿಕೊಳ್ಳುವ ಸವಾಲು ತೆಗೆದುಕೊಂಡಿದ್ದೆವು. ಸದ್ಯ ನಾನು 20 ಕೆ.ಜಿ. ಇಳಿಸಿಕೊಂಡಿದ್ದೇನೆ. 'ಉಳಿದವರು ಕಂಡಂತೆ' ಸಿನಿಮಾದಲ್ಲಿ ಕಾಣಿಸಿಕೊಂಡಂತೆ ನಾನು ಕಾಣಿಸಿಕೊಳ್ಳಬೇಕಿದೆ. 'ರಿಚರ್ಡ್ ಆ್ಯಂಟನಿ' ಸಿನಿಮಾದಲ್ಲೂ ನಾನು ನಟಿಸುತ್ತಿದ್ದೇನೆ. ಇತ್ತೀಚೆಗೆ ರಕ್ಷಿತ್ ನನ್ನನ್ನು ನೋಡಿ 'ಇಷ್ಟು ಬೇಗ ತೂಕ ಇಳಿಸಿಕೊಂಡಿದ್ದೀಯಾ' ಎಂದ. ಇನ್ನೂ 10 ಕೆ.ಜಿ. ತೂಕ ಇಳಿಸಿಕೊಳ್ಳಬೇಕು' ಎಂದರು ಪ್ರಮೋದ್.

ಐದು ಸಿನಿಮಾಗಳು ಬೆಳ್ಳಿತೆರೆಗೆ

ರಾಜ್ಯದ ಚಿತ್ರಮಂದಿರಗಳ ತೆರೆಗಳಲ್ಲಿ ಇಂದು(ಏ.5) ಐದು ಸಿನಿಮಾಗಳು ಬಿಡುಗಡೆಯಾಗುತ್ತಿವೆ. ಶರಣ್ ಅಭಿನಯದ 'ಅವತಾರ ಪುರುಷ–2', ಸತೀಶ್ ನೀನಾಸಂ ನಟನೆಯ 'ಮ್ಯಾಟ್ನಿ', ದಿಗಂತ್ ಅವರ 'ಮಾರಿಗೋಲ್ಡ್', ಕಿರುತೆರೆಯಿಂದ ಬೆಳ್ಳಿತೆರೆಗೆ ಹೆಜ್ಜೆ ಇಟ್ಟಿರುವ ಕಿರಣ್ ರಾಜ್ ನಟನೆಯ 'ಭರ್ಜರಿ ಗಂಡು', ಕಿರಣ್ ಸ್ವಾಮಿ ನಿರ್ದೇಶನದ 'ದಿ ಡಾರ್ಕ್ ವೆಬ್' ಸಿನಿಮಾಗಳು ಪ್ರೇಕ್ಷಕರೆದುರಿಗೆ ಬಂದಿವೆ.

ಭರ್ಜರಿ ಗಂಡು

ಕಿರಣ್ ರಾಜ್

'ಕನ್ನಡತಿ' ಧಾರಾವಾಹಿ ಮೂಲಕ ಬಣ್ಣದ ಲೋಕಕ್ಕೆ ಕಾಲಿಟ್ಟು, 'ಬಡ್ಡೀಸ್' ಚಿತ್ರದ ಮೂಲಕ ನಾಯಕನಾಗಿ ಬೆಳ್ಳಿತೆರೆ ಪ್ರವೇಶಿಸಿದ್ದ ನಟ ಕಿರಣ್ ರಾಜ್ ಅಭಿನಯದ ಚಿತ್ರವಿದು. ಈ ಚಿತ್ರದಲ್ಲಿ ಕಿರಣ್ ರಾಜ್ ಎರಡು ಲುಕ್‌ಗಳಲ್ಲಿ ಕಾಣಿಸಿಕೊಂಡಿದ್ದಾರೆ. ಮದನ್ ಗೌಡ ಹಾಗೂ ಅನಿಲ್ ಕುಮಾರ್ ನಿರ್ಮಿಸಿರುವ ಈ ಚಿತ್ರವನ್ನು ಪ್ರಸಿದ್ಧ್ ನಿರ್ದೇಶಿಸಿದ್ದಾರೆ. ಕಿರಣ್ ರಾಜ್ ಅವರಿಗೆ ನಾಯಕಿಯಾಗಿ ಯಶಾ ಶಿವಕುಮಾರ್ ನಟಿಸಿದ್ದು, ರಮೇಶ್ ಭಟ್, ರಾಕೇಶ್ ರಾಜ್, ಸುರೇಖ, ವೀಣಾ ಸುಂದರ್, ಜಯಶ್ರೀ, ನಾಗೇಶ್ ರೋಹಿತ್, ಸೌರಭ್ ಕುಲಕರ್ಣಿ ಮುಂತಾದವರು ತಾರಾಬಳಗದಲ್ಲಿದ್ದಾರೆ. ಚಿತ್ರಕ್ಕೆ ಗುಮ್ಮಿನೇನಿ ವಿಜಯ್ ಸಂಗೀತ ಸಂಯೋಜನೆ ಮಾಡಿದ್ದಾರೆ. ಕಿಟ್ಟಿ ಕೌಶಿಕ್ ಛಾಯಾಚಿತ್ರಗ್ರಹಣ ಹಾಗೂ ವೆಂಕಿ ಯುಡಿವಿ ಸಂಕಲನ ಚಿತ್ರಕ್ಕಿದೆ.

ದಿ ಡಾರ್ಕ್ ವೆಬ್

ಪತ್ರಕರ್ತ ಮಂಜು ಬನವಾಸೆ ಹಾಗೂ ಹೆತ್ತೂರು ನಾಗರಾಜ್ ಎಂಎನ್ ಸಿನಿಮಾಸ್ ಬ್ಯಾನರ್ ಅಡಿಯಲ್ಲಿ ನಿರ್ಮಾಣ ಮಾಡಿರುವ ಈ ಸಿನಿಮಾ ಸೈಬರ್ ಕ್ರೈಂ ಆಧಾರಿತ ಕಥಾಹಂದರ ಹೊಂದಿದೆ. ಈ ಸಿನಿಮಾದಲ್ಲಿ ನಾಯಕನಾಗಿ ಚೇತನ್ ನಟಿಸಿದ್ದಾರೆ. ನಾಯಕಿಯಾಗಿ ಮೇಘನಾ ಬಣ್ಣಚ್ಚಿದ್ದು, ಚಿತ್ರದಲ್ಲಿ ಬಹುತೇಕ ಪತ್ರಕರ್ತರೇ ಅಭಿನಯ ಮಾಡಿರುವುದು ವಿಶೇಷ. ಮಂಜು ಬನವಾಸೆ ಅವರು ನಿರ್ಮಾಣದ ಜೊತೆಗೆ ಪೊಲೀಸ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಚಿತ್ರಕ್ಕೆ ಕಿರಣ್ ಸ್ವಾಮಿ ಆ್ಯಕ್ಷನ್ ಕಟ್ ಹೇಳಿದ್ದಾರೆ.

ಮಾರಿಗೋಲ್ಡ್

ಗೋಲ್ಡ್ ಬಿಸ್ಕತ್ ಮಾರಲು ಹೊರಟ ನಾಲ್ವರು ಹುಡುಗರ ಕಥೆ ಈ ಸಿನಿಮಾ. ಆ್ಯಕ್ಷನ್ ಥ್ರಿಲ್ಲರ್ ಜಾನರ್‌ನ ಈ ಸಿನಿಮಾವನ್ನು ಆರ್.ವಿ. ಕ್ರಿಯೇಶನ್ಸ್ ಬ್ಯಾನರ್ ಅಡಿ ರಘುವರ್ಧನ್ ನಿರ್ಮಿಸಿ, ರಾಘವೇಂದ್ರ ಎಂ. ನಾಯ್ಕ ನಿರ್ದೇಶಿಸಿದ್ದಾರೆ.

ದಿಗಂತ್, ಸಂಗೀತಾ

ದಿಗಂತ್ ನಾಯಕನಾಗಿ ಸಂಗೀತ ಶೃಂಗೇರಿ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಕೆ.ಎಸ್. ಚಂದ್ರಶೇಖರ್ ಛಾಯಾಚಿತ್ರಗ್ರಹಣ, ವೀರ್ ಸಮರ್ಥ್ ಸಂಗೀತ, ಯೋಗರಾಜ್ ಭಟ್, ವಿಜಯ್ ಭರಮಸಾಗರ, ಕವಿರಾಜ್ ಗೀತ ಸಾಹಿತ್ಯ, ರಘು ನಿಡವಳ್ಳಿ ಸಂಭಾಷಣೆ ಚಿತ್ರಕ್ಕಿದೆ. ಸಂಪತ್ ಮೈತ್ರೇಯ, ಯಶ್ ಶೆಟ್ಟಿ, ಕಾಕ್ರೋಚ್ ಸುಧಿ, ವಜ್ರಾಂಗ್ ಶೆಟ್ಟಿ ಮತ್ತಿತರರು ತಾರಾಬಳಗದಲ್ಲಿ ಇದ್ದಾರೆ.

ಮ್ಯಾಟ್ನಿ

'ಅಯೋಗ್ಯ' ಸಿನಿಮಾ ಬಳಿಕ ನೀನಾಸಂ ಸತೀಶ್, ರಚಿತಾ ರಾಮ್ ಜೊತೆಯಾಗಿ ನಟಿಸಿರುವ ಸಿನಿಮಾವಿದು. ಎಫ್3 ಪ್ರೊಡಕ್ಷನ್ಸ್ ಲಾಂಛನದಲ್ಲಿ ಪಾರ್ವತಿ ಎಸ್. ಗೌಡ ನಿರ್ಮಿಸಿರುವ ಹಾಗೂ ಮನೋಹರ್ ಕಾಂಪಲ್ಲಿ ನಿರ್ದೇಶನದ ಈ ಚಿತ್ರಕ್ಕೆ ಪೂರ್ಣಚಂದ್ರ ತೇಜಸ್ವಿ ಸಂಗೀತ ನಿರ್ದೇಶನ, ಸುಧಾಕರ್ ಎಸ್. ರಾಜ್ ಛಾಯಾಚಿತ್ರಗ್ರಹಣ, ಕೆ.ಎಂ. ಪ್ರಕಾಶ್ ಸಂಕಲನವಿದೆ. ಅದಿತಿ ಪ್ರಭುದೇವ, ನಾಗಭೂಷಣ, ಶಿವರಾಜ್ ಕೆ.ಆರ್ ಪೇಟೆ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ.

ಅತ್ಯಾಚಾರ ದೂರು ಪಾದ್ರಿ ಬಂಧನ

ದಾವಣಗೆರೆ: ಮಹಿಳೆಯೊಬ್ಬರ ಮೇಲೆ ಅತ್ಯಾಚಾರ ಎಸಗಿದ ಪ್ರಕರಣದಲ್ಲಿ ಇಲ್ಲಿನ ಜಯನಗರದಲ್ಲಿನ ಚರ್ಚ್ ಒಂದರ ಪಾದ್ರಿ ಬಿ.ರಾಜಶೇಖರ್ ಅವರನ್ನು ಪೊಲೀಸರು ಬಂಧಿಸಿದ್ದಾರೆ.

'ಚರ್ಚ್‌ಗೆ ಹೋಗುತ್ತಿದ್ದಾಗ ನನ್ನ ಮೇಲೆ ಅತ್ಯಾಚಾರ ಎಸಗಿದ್ದ ಆರೋಪಿ, ಬಳಿಕ ಮದುವೆಯಾಗುವುದಾಗಿ ನಂಬಿಸಿ ದೈಹಿಕ ಸಂಬಂಧ ಇರಿಸಿಕೊಂಡಿದ್ದ. ಅಲ್ಲದೇ ನನ್ನಿಂದ ₹ 25ಲಕ್ಷದಿಂದ ₹ 30 ಲಕ್ಷ ಹಣ ಪಡೆದು ವಂಚಿಸಿದ್ದಾನೆ. ಹಣ ವಾಪಸ್ ಕೇಳಿದ್ದಕ್ಕೆ ಜಾತಿ ನಿಂದನೆ ಮಾಡಿ, ಹಲ್ಲೆ ನಡೆಸಿದ್ದಾನೆ' ಎಂದು ಸಂತ್ರಸ್ತ ಮಹಿಳೆ ದೂರು ನೀಡಿದ್ದರು.

ಕೇಂದ್ರ–ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶ

ಎಸ್ಸಿ ಪಟ್ಟಿಯಿಂದ ಕೈಬಿಡಲು ಕೋರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲಂಬಾಣಿ (ಬಂಜಾರ), ಭೋವಿ, ಕೊರಮ ಮತ್ತು ಕೊರಚ ಜಾತಿಗಳನ್ನು ಕರ್ನಾಟಕದ ಪರಿಶಿಷ್ಟ ಜಾತಿ (ಎಸ್ಸಿ) ಪಟ್ಟಿಯಿಂದ ಕೈಬಿಡಲು ಆದೇಶಿಸಬೇಕು' ಎಂದು ಕೋರಿ ಸಲ್ಲಿಸಲಾದ ಅರ್ಜಿಗೆ ಸಂಬಂಧಿಸಿದಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ರಾಯಚೂರು ಜಿಲ್ಲೆಯ ಸಾಮಾಜಿಕ ಕಾರ್ಯಕರ್ತ ಮಹೇಂದ್ರ ಕುಮಾರ್ ಮಿತ್ರಾ ಸೇರಿದಂತೆ ನಾಲ್ವರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ. ಅಂಜಾರಿಯಾ ಮತ್ತು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ಪೀಠ ಗುರುವಾರ ವಿಚಾರಣೆ ನಡೆಸಿತು.

ಪ್ರತಿವಾದಿಗಳಾದ ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವಾಲಯದ ಕಾರ್ಯದರ್ಶಿ, ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ಕಾರ್ಯದರ್ಶಿ, ಭಾರತೀಯ ಜನಗಣತಿ ಆಯುಕ್ತ ಮತ್ತು ಪ್ರಧಾನ ರಿಜಿಸ್ಟ್ರಾರ್, ರಾಷ್ಟ್ರೀಯ ಪರಿಶಿಷ್ಟ ಜಾತಿಗಳ ಆಯೋಗದ ಕಾರ್ಯದರ್ಶಿ, ಕೇಂದ್ರ ಚುನಾವಣಾ ಆಯೋಗದ ಆಯುಕ್ತ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಮತ್ತು ರಾಜ್ಯ ಚುನಾವಣಾ ಆಯೋಗದ ಕಾರ್ಯದರ್ಶಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆಯನ್ನು ಜೂನ್ 26ಕ್ಕೆ ಮುಂದೂಡಿದೆ.

ಆಕ್ಷೇಪ: 'ಸ್ಪೃಶ್ಯ ಜಾತಿಗಳಾಗಿರುವ ಹಾಗೂ ಪರಿಶಿಷ್ಟ ಜಾತಿಗಳಲ್ಲದ ಲಂಬಾಣಿ, ಕೊರಮ, ಕೊರಚ ಮತ್ತು ಭೋವಿ ಜಾತಿಗಳನ್ನು ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿ ಸೇರಿಸಲಾಗಿದೆ. ಇದು ಸಂವಿಧಾನದ 14, 16, 17 46, 243 (ಝಡ್), 330, 332, 341 ಮತ್ತು 366ನೇ ವಿಧಿಗಳ ಉಲ್ಲಂಘನೆಯಾಗಿದೆ' ಎಂದು ಅರ್ಜಿದಾರರು ಆಕ್ಷೇಪಿಸಿದ್ದಾರೆ.

ವಿಜಯಪುರ ಜಿಲ್ಲೆಯ ಲಚ್ಯಾಣ ಗ್ರಾಮದ ತೋಟದ ವಸ್ತಿಯ ತೆರೆದ ಕೊಳವೆಬಾವಿಯೊಳಗೆ ಬಿದ್ದಿದ್ದ ಮಗುವಿನ ರಕ್ಷಣಾ ಕಾರ್ಯಾಚರಣೆಯನ್ನು ವೀಕ್ಷಿಸಿದ ಸಾರ್ವಜನಿಕರು –ಪ್ರಜಾವಾಣಿ ಚಿತ್ರ

ಸಾವು ಗೆದ್ದ ಸಾತ್ವಿಕ್

ಒಂದನೇ ಪುಟದಿಂದ...

ಮಗುವನ್ನು ತಕ್ಷಣವೇ ಆಂಬುಲೆನ್ಸ್‌ನಲ್ಲಿ ಇಂಡಿ ತಾಲ್ಲೂಕು ಆಸ್ಪತ್ರೆಗೆ ಒಯ್ದು ಪ್ರಾಥಮಿಕ ಚಿಕಿತ್ಸೆ ನೀಡಲಾಯಿತು. ನಂತರ ಹೆಚ್ಚಿನ ಚಿಕಿತ್ಸೆಗೆ ವಿಜಯಪುರ ಜಿಲ್ಲಾಸ್ಪತ್ರೆಗೆ ಕರೆದೊಯ್ಯಲಾಯಿತು.

'ಇಷ್ಟು ದೀರ್ಘಕಾಲ ಮಗು ಕೊಳವೆ ಬಾವಿಯೊಳಗೆ ಸಿಲುಕಿ, ಸುರಕ್ಷಿತವಾಗಿ ಹೊರಬಂದಿರುವುದು 'ಲಚ್ಯಾಣ ಸಿದ್ದಲಿಂಗ ಮಹಾರಾಜರ ಪವಾಡವೇ ಸರಿ' ಎಂದು ಅಲ್ಲಿದ್ದವರು ಮಾತನಾಡಿಕೊಂಡು ಹರ್ಷ ವ್ಯಕ್ತಪಡಿಸಿದರು.

ರಕ್ಷಣಾ ಕಾರ್ಯಾಚರಣೆ ವೀಕ್ಷಣೆಗೆ ಜಿಲ್ಲೆಯ ಮೂಲೆ ಮೂಲೆಗಳಿಂದ ಬಂದಿದ್ದ ಜನರು ಖುಷಿಯಿಂದ ಮನೆಗೆ ಮರಳಿದರು. ಕಾರ್ಯಾಚರಣೆ ಪೂರ್ಣಗೊಂಡು ಮಗು ಸುರಕ್ಷಿತವಾಗಿ ಬದುಕಿ ಬರುವವರೆಗೆ ಎಲ್ಲರೂ ಪ್ರಾರ್ಥಿಸಿದರು.

ಯಶಸ್ವಿ ರಕ್ಷಣಾ ಕಾರ್ಯಾಚರಣೆ ನಡೆಸಿದ ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್, ಅಗ್ನಿಶಾಮಕ ಮತ್ತು ಪೊಲೀಸ್ ಸಿಬ್ಬಂದಿಯನ್ನು ಇಂಡಿ ಶಾಸಕ ಯಶವಂತರಾಯಗೌಡ ಪಾಟೀಲ, ಜಿಲ್ಲಾಧಿಕಾರಿ ಟಿ.ಭೂಬಾಲನ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಋಷಿಕೇಶ ಸೋನಾವಣೆ ಅಭಿನಂದಿಸಿದರು.

ಇದೇ ಮೊದಲಲ್ಲ

ಜಿಲ್ಲೆಯಲ್ಲಿ ಕೊಳವೆಬಾವಿ ಅವಘಡ ಸಂಭವಿಸಿದ್ದು ಇದೇ ಮೊದಲಲ್ಲ. 2008ರಲ್ಲಿ ಇಂಡಿ ತಾಲ್ಲೂಕಿನ ದೇವರ ನಿಂಬರಗಿ ಗ್ರಾಮದಲ್ಲಿ ಬಾಲಕಿ ಕಾಂಚನಾ, 2014ರಲ್ಲಿ ನಾಗಠಾಣ ಸಮೀಪದ ದ್ಯಾಬೇರಿ ಗ್ರಾಮದಲ್ಲಿ, ಯಾದಗಿರಿ ಜಿಲ್ಲೆಯಿಂದ ಕೂಲಿಗೆ ಬಂದಿದ್ದ ಹನುಮಂತ ಪಾಟೀಲ ಎಂಬವರ ಮೂರು ವರ್ಷದ ಹೆಣ್ಣು ಮಗು ಅಕ್ಷತಾ ಕೊಳವೆಬಾವಿಗೆ ಆಕಸ್ಮಿಕವಾಗಿ ಬಿದ್ದಿದ್ದರು.

ಆಗ ಜಿಲ್ಲಾಡಳಿತದ ನೇತೃತ್ವದಲ್ಲಿ ವಾರಗಟ್ಟಲೇ ರಕ್ಷಣಾ ಕಾರ್ಯಾಚರಣೆ ನಡೆಸಿದರೂ ಮಕ್ಕಳನ್ನು ಜೀವಂತ ಹೊರತರಲು ಸಾಧ್ಯವಾಗಿರಲಿಲ್ಲ.

ಎಚ್ಚರಿಕೆ: ತೆರೆದ ಕೊಳವೆಬಾವಿಗಳಿಗೆ ಮಕ್ಕಳು ಬಿದ್ದು ಅವಘಡ ಸಂಭವಿಸಿದ ಬಳಿಕ ಜಿಲ್ಲಾಡಳಿತ ಜನರಲ್ಲಿ ಈ ಕುರಿತು ಜಾಗೃತಿ ಮೂಡಿಸಿತ್ತು. ನೀರು ಬರದೇ ವಿಫಲವಾದ ಕೊಳವೆ ಬಾವಿಗಳನ್ನು ಮುಚ್ಚಬೇಕು. ಒಂದು ವೇಳೆ ತೆರೆದಿಟ್ಟರೆ ಕ್ರಮ ಕೈಗೊಳ್ಳಲಾಗುವುದು' ಎಂದು ಎಚ್ಚರಿಕೆಯನ್ನೂ ನೀಡಿತ್ತು.

ಕಾರ್ಯಾಚರಣೆಯಲ್ಲಿ ತೊಡಗಿದ್ದ ಬೃಹತ್ ಯಂತ್ರವನ್ನೇ ಏರಿ ಕುಳಿತು ವೀಕ್ಷಿಸಿದ ಜನರು

ಯಶಸ್ವಿಯಾಗಿದ್ದು ಹೇಗೆ?

ಒಂದನೇ ಪುಟದಿಂದ...

10 ಅಡಿ ತೋಡಿದ ಬಳಿಕ ಬಂಡೆಗಲ್ಲುಗಳು ಸಿಕ್ಕ ಕಾರಣ ಕಾರ್ಯಾಚರಣೆ ಸ್ವಲ್ಪ ನಿಧಾನಗತಿಯಲ್ಲಿ ನಡೆಯಿತು.

21 ಅಡಿ ಆಳ ಗುಂಡಿ ತೋಡಿದ ಬಳಿಕ ಕೊಳವೆಬಾವಿಗೆ ಅಡ್ಡಲಾಗಿ ಸುರಂಗ ಕೊರೆದು, ಮಗು ಇರುವ ಸ್ಥಳಕ್ಕೆ ರಕ್ಷಣಾ ಸಿಬ್ಬಂದಿ ತಲುಪಿದರು. ಮಗು ಅಳುವುದು ಕೇಳಿದ ಬಳಿಕ ಕಾರ್ಯಾಚರಣೆಯನ್ನು ಮತ್ತಷ್ಟು ಸೂಕ್ಷ್ಮವಾಗಿ ಮುಂದುವರಿಸಿದರು. ನಂತರ ಸುರಕ್ಷಿತವಾಗಿ ಮಗುವನ್ನು ಹೊರತರಲಾಯಿತು.

14 ಕ್ಷೇತ್ರ; ಸವಾಲಿನ ಸ್ಪಷ್ಟಚಿತ್ರ

ಒಂದನೇ ಪುಟದಿಂದ...

ಕಾಂಗ್ರೆಸ್ ಕೂಡ ಮೈಸೂರು, ಚಾಮರಾಜಗರ, ಕೋಲಾರ, ಚಿಕ್ಕಬಳ್ಳಾಪುರ ಕ್ಷೇತ್ರಗಳ ಹೆಸರನ್ನು ಪ್ರಕಟಿಸಿರಲಿಲ್ಲ. ಕೊನೆಕ್ಷಣದವರೆಗೂ ಅಭ್ಯರ್ಥಿ ಯಾರೆಂಬುದು ನಿರ್ಧಾರ ಆಗಿರಲಿಲ್ಲ. ಹೀಗಾಗಿ, ದಿನಕ್ಕೊಂದು ಹೆಸರುಗಳನ್ನು ಹರಿಬಿಡಲಾಗುತ್ತಿತ್ತು. ಅವೆಲ್ಲಕ್ಕೂ, ಕೊನೆ ಬಿದ್ದಿದ್ದು, ಕಣ ಚಿತ್ರ ಸ್ಪಷ್ಟರೂಪ ಪಡೆದಿದೆ.

ಬಿಜೆಪಿ–ಜೆಡಿಎಸ್ ಮೈತ್ರಿಕೂಟ 28 ಕ್ಷೇತ್ರಗಳಲ್ಲೂ ಗೆಲ್ಲುವ ಪಣಹೊತ್ತು ಅಖಾಡಕ್ಕೆ ಇಳಿದಿದೆ. ತಮ್ಮಲ್ಲಿ ಯಾವುದೇ ಭಿನ್ನಮತವಿಲ್ಲ ಎಂದು ಪ್ರದರ್ಶಿಸಲು ಮುಂದಾದ ನಾಯಕರು, ಅಭ್ಯರ್ಥಿಗಳು ಕಣಕ್ಕೆ ಇಳಿದಿರುವ ಕ್ಷೇತ್ರಗಳಲ್ಲಿ ನಾಮಪತ್ರ ಸಲ್ಲಿಸುವ ಜತೆ ನಿಂತು ಒಗ್ಗಟ್ಟು ಪ್ರದರ್ಶಿಸಿದರು. ಮಂಡ್ಯದಲ್ಲಿ ಎಚ್.ಡಿ. ಕುಮಾರಸ್ವಾಮಿ ನಾಮಪತ್ರ ಸಲ್ಲಿಸುವಾಗ ಬಿ.ಎಸ್. ಯಡಿಯೂರಪ್ಪ, ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಜತೆಗಿದ್ದರು. ಹಾಸನದಲ್ಲಿ ಪ್ರಜ್ವಲ್ ರೇವಣ್ಣ ನಾಮಪತ್ರ ಸಲ್ಲಿಸುವಾಗ ಬಿ.ವೈ. ವಿಜಯೇಂದ್ರ, ಎಚ್.ಡಿ. ದೇವೇಗೌಡ, ಡಿ.ವಿ. ಸದಾನಂದ ಗೌಡ ಹಾಜರಿದ್ದರು. ತುಮಕೂರಿನಲ್ಲಿ ವಿ. ಸೋಮಣ್ಣ ನಾಮಪತ್ರ ಸಲ್ಲಿಸುವಾಗ ಎಚ್.ಡಿ. ಕುಮಾರಸ್ವಾಮಿ, ಬಿ.ಎಸ್. ಯಡಿಯೂರಪ್ಪ ಭಾಗಿಯಾಗಿದ್ದರು. ಬೆಂಗಳೂರು ದಕ್ಷಿಣದಲ್ಲಿ ತೇಜಸ್ವಿ ಸೂರ್ಯ ನಾಮಪತ್ರ ಸಲ್ಲಿಸುವಾಗ ಕೇಂದ್ರ ಸಚಿವ ಅನುರಾಗ್ ಸಿಂಗ್ ಠಾಕೂರ್ ಉಪಸ್ಥಿತರಿದ್ದರು.

ಮೈತ್ರಿ ಒಗ್ಗಟ್ಟು ಪ್ರದರ್ಶಿಸಿದಂತೆಯೇ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಹ ತಾವು ಒಗ್ಗೂಡಿ ಚುನಾವಣೆ ಕಣಕ್ಕೆ ಇಳಿದಿದ್ದೇವೆ ಎಂಬುದನ್ನು ಬಿಂಬಿಸಲು ಜತೆಯಾಗಿಯೇ ಹೋದರು. ಬೆಂಗಳೂರು ಗ್ರಾಮಾಂತರ, ಮಂಡ್ಯ, ಚಾಮರಾಜನಗರ, ಮೈಸೂರು ಸೇರಿದಂತೆ ವಿವಿಧೆಡೆ ಕಾಂಗ್ರೆಸ್ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸುವಾಗ ಹಾಜರಿದ್ದು, ಉತ್ಸಾಹ ತಂಬಿದರು.

ಬರ ಪರಿಹಾರ: ಎ.ಸಿ.ಗಳೇ ಅಧ್ಯಕ್ಷರು

ಬೆಂಗಳೂರು:ಬರ ಪೀಡಿತ ಪ್ರದೇಶಗಳಲ್ಲಿ ತುರ್ತುಪರಿಹಾರ ಕಾರ್ಯಗಳನ್ನು ಕೈಗೊಳ್ಳಲು ಇರುವ ತಾಲ್ಲೂಕು ಮಟ್ಟದ ಕಾರ್ಯಪಡೆಗಳ ಅಧ್ಯಕ್ಷ ಸ್ಥಾನದ ಜವಾಬ್ದಾರಿಯನ್ನು ಸಂಬಂಧಿಸಿದ ಉಪವಿಭಾಗಾಧಿಕಾರಿಗಳಿಗೆ ವಹಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ರಾಜ್ಯದಲ್ಲಿ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದು, ಮಾ.16 ರಿಂದ ಸ್ಥಳೀಯ ಶಾಸಕರ ಅಧ್ಯಕ್ಷತೆಯ ಕಾರ್ಯಪಡೆಗಳ ಚಟುವಟಿಕೆಗಳು ಕಾರ್ಯನಿರ್ವಹಿಸುತ್ತಿಲ್ಲ. ಆದರೆ, ಬರ ತೀವ್ರಗೊಂಡಿರುವುದು ಮಾತ್ರವಲ್ಲದೇ ಕುಡಿಯುವ ನೀರಿನ ಸಮಸ್ಯೆಯೂ ತಾರಕಕ್ಕೇ ಏರಿದೆ. ಈ ಹಿನ್ನೆಲೆಯಲ್ಲಿ ಜವಾಬ್ದಾರಿಯನ್ನು ಎ.ಸಿ.ಗಳಿಗೆ ವಹಿಸಲಾಗಿದೆ.

ಗುಡಿಸಲಲ್ಲೇ ಪುರಸಭೆ ಸದಸ್ಯೆ ವಾಸ

• ಶಾಂತೂ ಹಿರೇಮಠ

ಸಿಂದಗಿ (ವಿಜಯಪುರ ಜಿಲ್ಲೆ): ವಾಸಿಸಲು ಮನೆಯಿಲ್ಲ, ಉಪಜೀವನಕ್ಕೆ ಕೂಲಿ ಕೆಲಸ. ನಿತ್ಯ ಬೆಳಿಗ್ಗೆ ಸಿಕ್ಕರೆ ಕೂಲಿಗೆಲಸಕ್ಕೆ ಹೋಗುವುದು, ಇಲ್ಲದಿದ್ದರೆ ಗುಡಿಸಲಲ್ಲೇ ವಾಸ. ನೈವೇದ್ಯದ ಪ್ರಸಾದ ಅಥವಾ ಯಾರಾದರೂ ಆಹಾರ ಕೊಟ್ಟರೆ ಅದೇ ಊಟ. ಇಲ್ಲದಿದ್ದರೆ, ಉಪವಾಸ. ವೃದ್ಧಾಪ್ಯವೇತನ ಕೂಡ ಅವರ ಕೈಸೇರಿಲ್ಲ...

ಇದು ವಿಜಯಪುರ ಜಿಲ್ಲೆ ಸಿಂದಗಿಯಲ್ಲಿರುವ 23ನೇ ವಾರ್ಡ್‌ನ ಪುರಸಭೆ ಕಾಂಗ್ರೆಸ್ ಸದಸ್ಯೆ ಮಹಾದೇವಿ ಭೀಮಶ್ಯಾ ನಾಯ್ಕೋಡಿ (80) ಅವರ ಸ್ಥಿತಿ.

ಮಹಾದೇವಿ ನಾಯ್ಕೋಡಿ ಅವರನ್ನು ಅವರ ಪುತ್ರ ಮಹಾಂತೇಶ ನಾಯ್ಕೋಡಿ ಚುನಾವಣೆಗೆ ನಿಲ್ಲಿಸಿ, 23ನೇ ವಾರ್ಡ್‌ನಿಂದ ಸ್ಪರ್ಧಿಸುವಂತೆ ಮಾಡಿ, ಗೆಲುವಿಗೆ ಶ್ರಮಿಸಿದ್ದ. ಸದ್ಯ ಮಹಾಂತೇಶ ಮಹಾರಾಷ್ಟ್ರಕ್ಕೆ ದುಡಿಯಲು ಗುಳೆ ಹೋಗಿದ್ದಾರೆ.

'23ನೇ ವಾರ್ಡ್‌ನಲ್ಲಿ ಅನಕ್ಷರಸ್ಥರೇ ಹೆಚ್ಚಿದ್ದಾರೆ. ಅವರ ಮತಗಳಿಂದ ಮಹಾದೇವಿ ಜಯಗಳಿಸಿದರು. ಪುರಸಭೆಯಿಂದ ಆಶ್ರಯ ಯೋಜನೆಯಡಿ ನಿರ್ಗತಿಕರಿಗೆ ನಿವೇಶನ ನೀಡುವ ಸದಸ್ಯೆಗೆ ನಿವೇಶನ ಇಲ್ಲ. ಪುರಸಭೆ ಸಾಮಾನ್ಯ ಸಭೆ ಇದ್ದಾಗ ಸಿಗುವ ಗೌರವಧನವೂ ಈಗ ವರ್ಷದಿಂದ ಸ್ಥಗಿತಗೊಂಡಿದೆ.

'ನನಗೆ ಮೂವರು ಪುತ್ರರು ಇದ್ದರೂ ಒಬ್ಬರೂ ಜೊತೆಗಿಲ್ಲ. ಒಬ್ಬ ಮಗ ಸಾಲ ಮಾಡಿ ಮಹಾರಾಷ್ಟ್ರಕ್ಕೆ ಗುಳೆ ಹೋದರೆ, ಇನ್ನೊಬ್ಬ ಬೇರೊಂದು ಊರಲ್ಲಿದ್ದಾನೆ. ಮತ್ತೊಬ್ಬ ಅತ್ತೆ ಮನೆಯಲ್ಲಿದ್ದಾನೆ' ಎಂದು ಮಹಾದೇವಿ ತಿಳಿಸಿದರು.

'ಮಹಾದೇವಿ ವಾಸವಿರುವ ಗುಡಿಸಲು ಲೇಔಟ್ ರಸ್ತೆಯಲ್ಲಿದೆ. ಸಂಬಂಧಿಸಿದವರು ಗುಡಿಸಲು ಖಾಲಿ ಮಾಡಲು ಒತ್ತಾಯಿಸಿದ್ದಾರೆ. ಪುರಸಭೆಯಿಂದ ನಿರ್ಗತಿಕರಿಗೆ ಮನೆ ಕಟ್ಟಿಸಿಕೊಡುವ ಹಲವಾರು ಸರ್ಕಾರಿ ಯೋಜನೆಗಳಲ್ಲಿ ಸದಸ್ಯೆಗೆ ಒಂದು ಮನೆ ಮಂಜೂರು ಮಾಡಿಕೊಡಬೇಕು' ಎಂದು ಇದೇ ವಾರ್ಡ್‌ನ ನಿವಾಸಿ ಈರಣ್ಣ ಮೇತ್ರಿ ಒತ್ತಾಯಿಸಿದರು.

ಸಿಂದಗಿಯ ಬಂದಾಳ ರಸ್ತೆ ಬದಿ ಗುಡಿಸಲಲ್ಲಿ ವಾಸವಿರುವ ಪುರಸಭೆ ಸದಸ್ಯೆ ಮಹಾದೇವಿ ನಾಯ್ಕೋಡಿ

> **ಮಹಾದೇವಿ ಗುಡಿಸಲಲ್ಲಿ ವಾಸವಿರುವುದು ಗೊತ್ತಿರಲಿಲ್ಲ. ಅವರು ಸದಸ್ಯೆಯಾದ್ದರಿಂದ ಆಶ್ರಯ ಯೋಜನೆಯಲ್ಲಿ ನಿವೇಶನ ಸಿಗಲಿಕ್ಕಿಲ್ಲ. ಆದರೂ ಎ.ಸಿ ಜೊತೆ ಚರ್ಚಿಸುವೆ.**
> **ಗುರುರಾಜ ಚೌಕಿಮಠ,**
> ಮುಖ್ಯಾಧಿಕಾರಿ, ಸಿಂದಗಿ ಪುರಸಭೆ

ಬಿಎಂಟಿಸಿ: 2,500 ನಿರ್ವಾಹಕರ ಹುದ್ದೆ ಭರ್ತಿಗೆ ಅರ್ಜಿ

ಬೆಂಗಳೂರು: ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (ಬಿಎಂಟಿಸಿ) ಹಾಗೂ ಸರ್ಕಾರಿ ಉಪಕರಣಗಾರ ಮತ್ತು ತರಬೇತಿ ಕೇಂದ್ರಗಳಲ್ಲಿ (ಜಿಟಿಟಿಸಿ) ಖಾಲಿ ಇರುವ ಹುದ್ದೆಗಳ ಭರ್ತಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಅಧಿಸೂಚನೆ ಹೊರಡಿಸಿದೆ.

ಜಿಟಿಟಿಸಿಯ 76 ಹಾಗೂ ಬಿಎಂಟಿಸಿಯ 2,500 ನಿರ್ವಾಹಕ ಹುದ್ದೆಗಳಿಗೆ ಏ. 19ರಿಂದ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಮೇ 18 ಕೊನೆ ದಿನ. ವಿವರಗಳಿಗೆ ಕೆಇಎ ವೆಬ್‌ಸೈಟ್ http://kea.nic.in ಸಂಪರ್ಕಿಸಬಹುದು.

ಕರ್ನಾಟಕ ಉಚ್ಚ ನ್ಯಾಯಾಲಯ,
ಉಚ್ಚ ನ್ಯಾಯಾಲಯ ಕಟ್ಟಡಗಳು, ಬೆಂಗಳೂರು-1

ಹೆಚ್‌ಸಿಸಿ ಸಂ. 26/2022 ದಿನಾಂಕ : 03.04.2024

ಸಂಕ್ಷಿಪ್ತ ಕಿರುಟೆಂಡರ್ ಅಧಿಸೂಚನೆ

ಕರ್ನಾಟಕ ಉಚ್ಚ ನ್ಯಾಯಾಲಯವು, ಹೊರಗುತ್ತಿಗೆ ಸಂಸ್ಥೆಯ ಮುಖಾಂತರ ಅಸ್ತಿತ್ವದಲ್ಲಿರುವ ತಾಂತ್ರಿಕ ಮಾನವಶಕ್ತಿಯ (Technical Manpower) ಸೇವೆಗಳನ್ನು ಮುಂದುವರೆಸಲು ಹಾಗೂ ICT and e-Courts ನ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು, ಪೀಠಗಳಾದ ಧಾರವಾಡ ಮತ್ತು ಕಲಬುರಗಿ ನ್ಯಾಯಾಲಯಗಳಿಗೆ ಮತ್ತು ತನ್ನ ಅಧೀನ ನ್ಯಾಯಾಲಯಗಳಿಗೆ ತಾಂತ್ರಿಕ ಮಾನವಶಕ್ತಿಯನ್ನು (Technical Manpower) ನೇಮಿಸಿಕೊಳ್ಳಲು ಟೆಂಡರನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ.

ಟೆಂಡರನ್ನು **ದಿನಾಂಕ: 23.04.2024ರ ಸಂಜೆ 4.00 ಗಂಟೆಯೊಳಗೆ** ಆಸಕ್ತ ಹೊರಗುತ್ತಿಗೆ ಸಂಸ್ಥೆಗಳು ಅಪ್‌ಲೋಡ್ ಮಾಡಬಹುದಾಗಿದೆ. ಹೆಚ್ಚಿನ ವಿವರಗಳನ್ನು **https://kppp.karnataka.gov.in/#/portal/searchTender/live** ಜಾಲತಾಣದ ಮೂಲಕ ಪಡೆದುಕೊಳ್ಳಬಹುದು.

ಸಹಿ/- (ಎನ್.ಜಿ. ದಿನೇಶ್) ರಿಜಿಸ್ಟ್ರಾರ್ (ಗಣಕ) ಮತ್ತು
ಟೆಂಡರ್ ಆಹ್ವಾನಿಸುವ ಪ್ರಾಧಿಕಾರ, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು
ವಾಸಾಸಂಇ/ಉನಿ-ಸಿ.ಪಿ/04/ಕೆಎಸ್‌ಎಂಸಿಎ/2024-25

Central Bangalore: **RM Trading Corp–9590222262;** Manish Electricals – 9986419127; Paramjyothi Electricals – 8310334850; Bharat Radio & Electric Co. – 9740314200 • **North Bangalore**: **Abirami B2b Trading Co. – 9972873609;** Lighting Palace – 9845355005; Varalakshmi Electricals – 9880186113; Sri Manjunatha Electricals – 9845932212; IK Enterprises – 9513263111; Kaveri Electronics – 7975761611; Chamundeshwari Electricals – 9008058407; Kavery Electricals – 9571174009; Light Source – 9845083494; Krishna Electricals – 8073550861; Mutha Electricals and Appliances – 8553331030 • **West Bangalore**: Maharudra Lights – 7411100074; Shiva Sai Marketing – 8747886925; Rajesh Electricals – 9448974401; Bright Lights – 9945195911; SLV Electricals and Hardware – 9986052498; Sri Venkateshwara Electricals – 9845462695; Shri Shyam Electricals and Electronics – 9844787819; Prem Light House – 9945409031 • **East Bangalore**: **S D N Electricals – 9972215422;** Jagadamba Electricals – 9663268685; S Prakash Electricals – 9902640020; Essay Lamps and Engineering Co. – 8431923019; Hindustan Electric Bazar – 9590910003; Seema Electrical - 9448851078 • **South Bangalore**: **Bangalore Electrical Distributors – 9886422916;** Minchu – 8105733339; Saini World – 7795581106; Arambh Studio – 9986365669; Priority Concepts – 9900044811; Dhurga Build Pro– 9591447861; JV Electricals – 9886846157; Rajkamal Electricals and Lightings – 9886428307; Jayshree Enterprises – 9845047048; Sunlight – 9886033866; Lighting Emporio – 9900035618; New SK Light House – 9880132398; Mathaji Electricals – 8197889656; Suresh Electric Co - 9845108940 • **Mysore**: **Sandhya Enterprises – 9740029224;** Arihant Electricals – 8197077706; Mangaldeep – 9900630007; Kaveri Appliances and Lightings – 9448978346; Shree Mahaveer Distributors – 9845353626; Manipal Electronics – 9448274300; Sri Mookambika Enterprises – 8660599454; Rajadhani Home Appliances – 7899124261; Rajans Appliances – 9886222020; Manoj Electricals – 9448273368; GR Electricals – 7829987717; Mysore Electrical and Appliances – 6366504602; Prithvi Sales Corporation – 9663365799 • **Belgaum - Enerzi Innotek Solutions Pvt ltd - 9606487817 • Gulbarga**: **Solar City Enterprises – 7829867765 • Dharwad: Mark Marketing Corporation – 9845213354 • Bijapur**: **Raj Electronics – 7795183163 • Shimoga: G R Enterprises – 6364437861; • Kumta - Jayashree Inc – 9449955955**; **Rajankunte -** Eco Shades - 9008302595.

Scan to know more

ಕಣದಲ್ಲಿ ಕೆಣಕುವ ಮಾತಿನ ಅಬ್ಬರ

ರಾಜ್ಯದಲ್ಲಿ ಮೊದಲ ಹಂತದ ಚುನಾವಣೆಗೆ ನಾಮಪತ್ರ ಸಲ್ಲಿಕೆ ಕೊನೆಗೊಳ್ಳುತ್ತಿದ್ದಂತೆ ಪ್ರಚಾರದ ಆರ್ಭಟ ಜೋರಾಗಿದ್ದು, ನಾಯಕರುಗಳ ಮಾತು ಎಲ್ಲೆ ಮೀರುತ್ತಿದೆ. ಗೃಹಸಚಿವ ಪರಮೇಶ್ವರ ತುಮಕೂರು ಜಿಲ್ಲೆಯ ಬಿಜೆಪಿಯಲ್ಲಿ ಗಂಡಸರಿಲ್ಲವೆ ಎಂದು ಕೆಣಕಿದರೆ, ಸಚಿವ ರಾಜಣ್ಣ 'ಸಾಯುವ ವಯಸ್ಸಿನಲ್ಲಿ ಗೌಡರಿಗೆ ಹೊಂದಾಣಿಕೆ ಬೇಕಿತ್ತಾ?' ಎಂಬ ಪ್ರಶ್ನೆ ಎತ್ತಿದ್ದಾರೆ...

ಮತ ಸುನೀತ

ಮತದಾನ ಮಾಡಲೇ ಬೇಕು

ಮತದಾನಕ್ಕಾಗಿ ಬೀದಿ ಬೀದಿ ಅಲೆ-
ಯುತ್ತ, ಬೇಡುತ್ತಾರೆ ಇಂದು, ನಾಳೆ
ನಮ್ಮ ನಾಳೆಗಳ ರೂಪಿಸುವ ಮಂದಿ.
[illegible] ಅವರಿಗೆ. [illegible]
ನೀವೇ ನೀಡಿ. ನಗು ನಗುತ್ತ, ಶುಭ ಹಾರೈಸಿ.

ಮತದಾನ ಪ್ರಜಾಪ್ರಭುತ್ವ ಪ್ರಜೆಗಳಿಗೆ
ನೀಡಿರುವ ಹಕ್ಕು. ತಪ್ಪದೆ ಮತದಾನ
ಮಾಡಿ. [illegible]
[illegible]
[illegible]

[illegible]
[illegible]
[illegible]
[illegible]

— ಎಚ್. ಎಸ್. ವೆಂಕಟೇಶಮೂರ್ತಿ

ಮತ ಆಮಿಷ: ಆಯೋಗದ ವಶ

₹30.19 ಕೋಟಿ ನಗದು

ಉಚಿತ ಉಡುಗೊರೆ	₹ 12.78 ಕೋಟಿ
ಮದ್ಯ	₹ 131.92 ಕೋಟಿ (1.32 ಕೋಟಿ ಲೀ)
ಮಾದಕವಸ್ತು	₹ 3.13 ಕೋಟಿ (287.18 ಕೆ.ಜಿ.)
ಚಿನ್ನ	₹ 9.43 ಕೋಟಿ (16.02 ಕೆ.ಜಿ.)
ಬೆಳ್ಳಿ	₹27.23 ಲಕ್ಷ (59.04 ಕೆ.ಜಿ.)

ಎಂಥಾ ಮಾತು!

ನನಗೆ ರಾಜಕೀಯ ಹೊಸದಲ್ಲ. ಇಷ್ಟು ದಿನ ತೆರೆಯ ಹಿಂದೆ ಇದ್ದೆ. ಈಗ ನೇರವಾಗಿ ಕಣಕ್ಕಿಳಿದಿದ್ದೇನೆ. ಜನ ಸೇವೆ ಮಾಡಲೆಂದು ಬಂದಿದ್ದೇನೆ. ಯುವಕರಿಗೆ ಸ್ಥಳೀಯವಾಗಿ ಉದ್ಯೋಗ ಸೃಷ್ಟಿ, ಕೈಗಾರಿಕೆಗಳ ಸ್ಥಾಪನೆ, ನೀರಾವರಿ ಯೋಜನೆಗಳಿಗೆ ಕೇಂದ್ರದಿಂದ ಅನುದಾನ ತಂದು ನೀರಾವರಿ ಸಮಸ್ಯೆ ನಿವಾರಣೆಗೆ ಯತ್ನಿಸುವೆ. ನನ್ನ ಆತ್ಮವಿಶ್ವಾಸ ಡಬಲ್ ಆಗಿದೆ. ನಾನು ಮಂಡ್ಯದ ಮಣ್ಣಿನ ಮಗ. ನನ್ನ ಗೆಲುವು ರೈತರ ಗೆಲುವು. ಇದು ನನ್ನ ಕರ್ಮಭೂಮಿ

ವೆಂಕಟರಮಣೇಗೌಡ (ಸ್ಟಾರ್ ಚಂದ್ರು)
ಮಂಡ್ಯ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ

ಕಣ ಸ್ವಾರಸ್ಯ

ಆರು ವೈದ್ಯರು

ಲೋಕಸಭಾ ಚುನಾವಣೆಯ 28 ಕ್ಷೇತ್ರಗಳಲ್ಲಿ ಆರು ವೈದ್ಯರು ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ. ಅವರಲ್ಲಿ ಕಲಬುರಗಿಯ ಉಮೇಶ್ ಜಾಧವ್ ಹಾಲಿ ಸಂಸದರು. ಉಳಿದವರು ಮೊದಲ ಬಾರಿ 'ಲೋಕ' ಕಣದಲ್ಲಿ ಅದೃಷ್ಟ ಪರೀಕ್ಷೆಗೆ ಒಡ್ಡಿದ್ದಾರೆ.

- **ಸಿ.ಎನ್.ಮಂಜುನಾಥ್** — ಬೆಂಗಳೂರು ಗ್ರಾಮಾಂತರ — ಬಿಜೆಪಿ
- **ಉಮೇಶ್ ಜಾಧವ್** — ಕಲಬುರಗಿ — ಬಿಜೆಪಿ
- **ಕೆ.ಸುಧಾಕರ್** — ಚಿಕ್ಕಬಳ್ಳಾಪುರ — ಬಿಜೆಪಿ
- **ಬಸವರಾಜ ಕ್ಯಾವಟರ್** — ಕೊಪ್ಪಳ — ಬಿಜೆಪಿ
- **ಪ್ರಭಾ ಮಲ್ಲಿಕಾರ್ಜುನ್** — ದಾವಣಗೆರೆ — ಕಾಂಗ್ರೆಸ್
- **ಅಂಜಲಿ ನಿಂಬಾಳ್ಕರ್** — ಉತ್ತರ ಕನ್ನಡ — ಕಾಂಗ್ರೆಸ್

ಮೂವರು ಸುರೇಶ್, ಐವರು ಮಂಜುನಾಥ್

• ಓದೇಶ ಸಕಲೇಶಪುರ

ಮಂಜುನಾಥ್ ಸಿ.ಎನ್; ಬಹುಜನ್ ಭಾರತ್ ಪಾರ್ಟಿ


ಸುರೇಶ್ ಎಂ.ಎನ್; ಪಕ್ಷೇತರ

ಸುರೇಶ್ ಎಸ್; ಕರುನಾಡು ಪಾರ್ಟಿ

ರಾಮನಗರ: ದಿನದಿಂದ ದಿನಕ್ಕೆ ರಂಗೇರುತ್ತಿರುವ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದಲ್ಲಿ ಸುರೇಶ್ ಹೆಸರಿನ ಮೂವರು ಹಾಗೂ ಮಂಜುನಾಥ್ ಹೆಸರಿನ ಐವರು ಕಣದಲ್ಲಿದ್ದಾರೆ! ಇನಿಷಿಯಲ್ ಮತ್ತು ಪದನಾಮದಲ್ಲಿ ಮಾತ್ರ ಅಲ್ಪಸ್ವಲ್ಪ ಬದಲಾವಣೆ ಇದ್ದು, ಉಳಿದಂತೆ ಹೆಸರು ಒಂದೇ ರಿತಿ ಇದೆ.

ಕಾಂಗ್ರೆಸ್ ಅಭ್ಯರ್ಥಿಯಾಗಿ ಡಿ.ಕೆ. ಸುರೇಶ್ ನಾಮಪತ್ರ ಸಲ್ಲಿಸಿದ್ದಾರೆ. ಅದೇ ಹೆಸರಿನಲ್ಲಿ ಕರುನಾಡು ಪಾರ್ಟಿಯಿಂದ ಆನೇಕಲ್ ತಾಲ್ಲೂಕಿನ ಮುತ್ತಾನಲ್ಲೂರಿನ ಸುರೇಶ್ ಎಸ್. ಹಾಗೂ ಪಕ್ಷೇತರರಾಗಿ ಕನಕಪುರ ತಾಲ್ಲೂಕಿನ ಮರಳೆ ಗ್ರಾಮದ ಸುರೇಶ್ ಎಂ.ಎನ್ ನಾಮಪತ್ರ ಸಲ್ಲಿಸಿದ್ದಾರೆ.

ಬಿಜೆಪಿ–ಜೆಡಿಎಸ್ ಮೈತ್ರಿಕೂಟದಿಂದ ಬಿಜೆಪಿ ಅಭ್ಯರ್ಥಿಯಾಗಿ ಡಾ. ಸಿ.ಎನ್. ಮಂಜುನಾಥ್ ಗುರುವಾರ ನಾಮಪತ್ರ ಸಲ್ಲಿಸಿದರೆ, ಅದೇ ಹೆಸರಿನ ಇತರ ನಾಲ್ವರು ಉಮೇದುವಾರಿಕೆ ಸಲ್ಲಿಸಿರುವುದು ವಿಶೇಷವಾಗಿದೆ.

ಬಹುಜನ್ ಭಾರತ್ ಪಾರ್ಟಿಯಿಂದ ಮಂಜುನಾಥ ಸಿ.ಎನ್. ಬುಧವಾರ ನಾಮಪತ್ರ ಸಲ್ಲಿಸಿದ್ದರು. ಪಕ್ಷೇತರರಾಗಿ ಮಂಜುನಾಥ್ ಸಿ., ಮಂಜುನಾಥ್ ಎನ್. ಹಾಗೂ ಮಂಜುನಾಥ್ ಕೆ. ಎಂಬುವರು ಗುರುವಾರ ನಾಮಪತ್ರ ಸಲ್ಲಿಸುವ ಮೂಲಕ ಗಮನ ಸೆಳೆದಿದ್ದಾರೆ.

ಈ ಪೈಕಿ ಮಂಜುನಾಥ್ ಸಿ.ಎನ್ ಅವರು ಡಾ. ಮಂಜುನಾಥ್ ಅವರ ಸ್ವಂತ ಊರು ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನವರು. ಪಕ್ಷೇತರರಾದ ಮಂಜುನಾಥ್ ಸಿ. ಬೆಂಗಳೂರಿನ ಮೂಡಲಪಾಳ್ಯದವರಾದರೆ, ಮಂಜುನಾಥ್ ಎನ್. ರಾಜಾಜಿನಗರ ಹಾಗೂ ಮಂಜುನಾಥ್ ಕೆ. ಪಾಪರೆಡ್ಡಿಪಾಳ್ಯದವರು.

ಬಿಜೆಪಿಯ ಡಾ. ಮಂಜುನಾಥ್ ಮತ್ತು ಕಾಂಗ್ರೆಸ್‌ನ ಡಿ.ಕೆ. ಸುರೇಶ್ ಅವರ ಹೆಸರಿನ ಕುರಿತು ಮತದಾರರಲ್ಲಿ ಗೊಂದಲ ಮೂಡಿಸಿ, ಎದುರಾಳಿಗಳ ವಿರುದ್ಧ ಲಾಭ ಪಡೆಯುವುದಕ್ಕಾಗಿ ಒಂದೇ ರೀತಿಯ ಹೆಸರಿನವರನ್ನು ಕರೆತಂದು ನಾಮಪತ್ರ ಸಲ್ಲಿಸಲಾಗಿದೆ ಎಂಬ ಆರೋಪ ರಾಜಕೀಯ ವಲಯದಲ್ಲಿ ಕೇಳಿ ಬರುತ್ತಿದೆ.

'ಬಿಜೆಪಿಯಲ್ಲಿ ಗಂಡಸರಿಲ್ಲವೆ'

ಪ್ರಜಾವಾಣಿ ವಾರ್ತೆ

ತುಮಕೂರು: 'ಲೋಕಸಭೆ ಚುನಾವಣೆಗೆ ಸ್ಪರ್ಧಿಸಲು ತುಮಕೂರು ಜಿಲ್ಲೆಯ ಬಿಜೆಪಿಯಲ್ಲಿ ಯಾವ ಗಂಡಸರೂ ಇರಲಿಲ್ಲವೆ' ಎಂದು ಗೃಹ ಸಚಿವ ಜಿ.ಪರಮೇಶ್ವರ ಪ್ರಶ್ನಿಸಿದ್ದಾರೆ.

ನಗರದಲ್ಲಿ ಗುರುವಾರ ಲೋಕಸಭೆ ಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿ ಎಸ್.ಪಿ.ಮುದ್ದಹನುಮೇಗೌಡ ನಾಮಪತ್ರ ಸಲ್ಲಿಸುವ ಸಂದರ್ಭದಲ್ಲಿ ಹಮ್ಮಿಕೊಂಡಿದ್ದ ಮೆರವಣಿಗೆಯಲ್ಲಿ ಅವರು ಮಾತನಾಡಿದರು.

'ಜಿಲ್ಲೆಯ ಬಿಜೆಪಿಯಲ್ಲಿ ಗಂಡಸರು ಇಲ್ಲದೆ ಹೊರಗಿನವರನ್ನು ಕರೆತಂದು ನಿಲ್ಲಿಸಲಾಗಿದೆ. ಇದಕ್ಕೆ ಜನರು ತಕ್ಕ ಉತ್ತರ ನೀಡಬೇಕು. ಕಾಂಗ್ರೆಸ್ ಅಭ್ಯರ್ಥಿ ಗೆಲ್ಲಿಸದಿದ್ದರೆ ಜಿಲ್ಲೆಯ ಜನರನ್ನು ನರ ಸತ್ತವರು ಎನ್ನುತ್ತಾರೆ' ಎಂದು ಹೇಳಿದರು.

'ಕಣದಲ್ಲಿ ಮನೆಯ ಮಗ ಹಾಗೂ ಆಚೆ ಮನೆಯ ಮಗ ಇದ್ದಾರೆ. ಅವರಲ್ಲಿ ಯಾರು ಬೇಕು ಎಂಬುದನ್ನು ಆಯ್ಕೆ ಮಾಡಿಕೊಳ್ಳಬೇಕು. ಜಿಲ್ಲೆಯಲ್ಲಿ ಗಂಡಸರು ಹಾಗೂ ಗಂಡಸುತನ ಇದ್ದರೆ ಜಿಲ್ಲೆಯ ಅಭ್ಯರ್ಥಿಯನ್ನು ಗೆಲ್ಲಿಸಿ, ಹೊರಗಿನ ಅಭ್ಯರ್ಥಿಯನ್ನು ಸೋಲಿಸಬೇಕು' ಎಂದರು. ಸಂಸದ ಜಿ.ಎಸ್. ಬಸವರಾಜು ಸಂಸತ್‌ನಲ್ಲಿ ಒಮ್ಮೆಯೂ ಬಾಯಿ ಬಿಡಲಿಲ್ಲ. ಜಿಲ್ಲೆ, ರಾಜ್ಯಕ್ಕೆ ಅವರಿಂದ ಏನೂ ಉಪಯೋಗ ಆಗಲಿಲ್ಲ. ಮತ್ತೆ ಚುನಾವಣೆಯಲ್ಲಿ ನಿಂತರೆ ಜನ ಛೀಮಾರಿ ಹಾಕುತ್ತಾರೆ ಎಂದು ಹೆದರಿಕೊಂಡು ಬೆಂಗಳೂರಿನಿಂದ ಕರೆತಂದು ಅಭ್ಯರ್ಥಿಯನ್ನಾಗಿ ಮಾಡಿದ್ದಾರೆ ಎಂದು ಟೀಕಿಸಿದರು.

'ರಾಹುಲ್ ಎದುರು ಸೊಂಟ ಬಗ್ಗಿಸುವ ಸಿದ್ದರಾಮಯ್ಯ'

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಸಿದ್ದರಾಮಯ್ಯ ಜೆಡಿಎಸ್‌ನಲ್ಲಿದ್ದಾಗ ಸೋನಿಯಾ ಗಾಂಧಿಗೆ ಬೈಯ್ದಿದ್ದು ನೋಡಿದರೆ ಇವರು ಅವರ ಮುಖವನ್ನೂ ನೋಡುವುದು ಸಾಧ್ಯವಾಗಬಾರದಿತ್ತು. ಆದರೆ ಈಗ ರಾಹುಲ್ ಗಾಂಧಿ ಎದುರು ಸೊಂಟ ಬಗ್ಗಿಸಿ ನಿಲ್ಲುತ್ತಾರೆ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಲೇವಡಿ ಮಾಡಿದರು.

'ಪ್ರಧಾನಿ, ರಾಷ್ಟ್ರಪತಿ ಮಾಡಿದರೂ ಬಿಜೆಪಿಗೆ ಹೋಗಲ್ಲ' ಎಂಬ ಸಿದ್ದರಾಮಯ್ಯ ಹೇಳಿಕೆಗೆ ಗುರುವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, 'ಅವರನ್ನು ನಮ್ಮ ಪಕ್ಷಕ್ಕೆ ಕರೆದಿಲ್ಲ. ಅವರಿಗೆ ನೀತಿ, ಸಿದ್ಧಾಂತವೂ ಇಲ್ಲ. ಮುಖ್ಯಮಂತ್ರಿ ಆಗಿರದಿದ್ದರೆ ಅವರ ಬಣ್ಣ ಬಯಲಾಗುತ್ತಿತ್ತು' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ವ್ಯಂಗ್ಯವಾಡಿದರು.

'ಡಿ.ಕೆ.ಶಿವಕುಮಾರ್ ಮತ್ತು ಸಿದ್ದರಾಮಯ್ಯ ನಡುವೆ ಏನು ನಡೆದಿದೆ ಎಂಬುದು ಇಡೀ ಜಗತ್ತಿಗೆ ಗೊತ್ತು. ಕಾಂಗ್ರೆಸ್‌ನ ಆಂತರಿಕ ಭಿನ್ನಮತ ಮತ್ತು ಅಧಿಕಾರಕ್ಕೆ ಇರುವ ಪೈಪೋಟಿಯಿಂದ ಸಾಕಷ್ಟು ಸಮಸ್ಯೆ ಸೃಷ್ಟಿಯಾಗಲಿವೆ' ಎಂದರು.

'ದೆಹಲಿಯಲ್ಲಿ ಅಮಿತ್ ಶಾ ಮತ್ತು ಕೆ.ಎಸ್.ಈಶ್ವರಪ್ಪ ಅವರ ಭೇಟಿ ಆಗದಿರುವ ಅಂಶ ಮಾಧ್ಯಮದಿಂದ ಗೊತ್ತಾಯಿತು. ಈಶ್ವರಪ್ಪ ಬಿಜೆಪಿಯ ಕರ್ಮಠ ಕಾರ್ಯಕರ್ತ. ಅವರು ಪಕ್ಷದ ಪರ ಇರುತ್ತಾರೆ ಎಂಬ ವಿಶ್ವಾಸ ಇದೆ' ಎಂದರು.

ಆಪರೇಷನ್ ಕಮಲಕ್ಕೆ ಹಣ ಎಲ್ಲಿಂದ ಬಂದಿತ್ತು: ಸಿ.ಎಂ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: 'ಪ್ರಜಾತಾಂತ್ರಿಕವಾಗಿ ಅಧಿಕಾರಕ್ಕೆ ಬಂದಿದ್ದ ಸರ್ಕಾರವನ್ನು ಉರುಳಿಸಲು ಬಿಜೆಪಿ ನಡೆಸಿದ 'ಆಪರೇಷನ್ ಕಮಲ'ಕ್ಕೆ ಸಾವಿರಾರು ಕೋಟಿ ಖರ್ಚು ಮಾಡಲಾಗಿದೆ. ಈ ಹಣ ಎಲ್ಲಿಂದ ಬಂದಿತ್ತು ಎಂಬುದನ್ನು ಪ್ರಧಾನಿ ನರೇಂದ್ರ ಮೋದಿ ದೇಶದ ಜನರಿಗೆ ತಿಳಿಸಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಒತ್ತಾಯಿಸಿದರು.

ಚಿತ್ರದುರ್ಗದಲ್ಲಿ ಗುರುವಾರ ನಡೆದ 'ಪ್ರಜಾಧ್ವನಿ-2' ಸಮಾವೇಶದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಬಿ.ಎನ್.ಚಂದ್ರಪ್ಪ ಪರ ಮತಯಾಚನೆ ಮಾಡಿ ಅವರು ಮಾತನಾಡಿದರು.

'ತನ್ನನ್ನು ಚೌಕಿದಾರ ಎಂದು ಹೇಳಿಕೊಳ್ಳುವ ನರೇಂದ್ರ ಮೋದಿ, 'ಹಣ ಮುಟ್ಟಲ್ಲ' ಎಂಬುದಾಗಿ ನಂಬಿಸಿದ್ದಾರೆ. ಪಕ್ಷಾಂತರಗೊಂಡ ಪ್ರತಿ ಶಾಸಕರಿಗೆ ಕನಿಷ್ಠ ₹ 25 ಕೋಟಿ ಕೊಟ್ಟು, ಚುನಾವಣಾ ಖರ್ಚಿಗೂ ಹಣ ನೀಡಲಾಗಿತ್ತು. ಈ ಹಣವನ್ನು ಎಲ್ಲಿಂದ ತಂದಿದ್ದೀರಿ ಎಂಬ ಅನುಮಾನ ಜನರಲ್ಲಿದೆ. ಜನಾಶೀರ್ವಾದ ಇಲ್ಲದಿದ್ದರೂ ಬಿ.ಎಸ್.ಯಡಿಯೂರಪ್ಪ ಹಾಗೂ ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿ ಆಗಿದ್ದು ಹೇಗೆ ಎಂಬ ಬಗ್ಗೆ ಮಾಹಿತಿ ನೀಡಿ' ಎಂದರು.

ಶಿವಮೊಗ್ಗ ಕ್ಷೇತ್ರದಲ್ಲಿ ಕೆ.ಎಸ್.ಈಶ್ವರಪ್ಪ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿದರೆ ಬಿಜೆಪಿ ಸುಮ್ಮನೆ ಬಿಡುವುದಿಲ್ಲ. ಅವರ ವಿರುದ್ಧ ಆದಾಯ ತೆರಿಗೆ, ಇ.ಡಿ ಛೂಬಿಟ್ಟು ಬಲಿಹಾಕಿಬಿಡುತ್ತಾರೆ ಎಂದು ಸಿದ್ದರಾಮ್ಯ ಹೇಳಿದರು.

> **ಶಿವಮೊಗ್ಗ ಕ್ಷೇತ್ರದಲ್ಲಿ ಕೆ.ಎಸ್.ಈಶ್ವರಪ್ಪ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿದರೆ ಬಿಜೆಪಿ ಸುಮ್ಮನೆ ಬಿಡುವುದಿಲ್ಲ. ಅವರ ವಿರುದ್ಧ ಆದಾಯ ತೆರಿಗೆ, ಇ.ಡಿ ಛೂಬಿಟ್ಟು ಬಲಿಹಾಕಿಬಿಡುತ್ತಾರೆ.**
> **ಸಿದ್ದರಾಮಯ್ಯ, ಮುಖ್ಯಮಂತ್ರಿ**

'ಸಾಯುವ ವಯಸ್ಸಿನಲ್ಲಿ ಗೌಡರಿಗೆ ಹೊಂದಾಣಿಕೆ ಬೇಕಿತ್ತಾ?'

ಪ್ರಜಾವಾಣಿ ವಾರ್ತೆ

ತುಮಕೂರು: ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಅವರು ಸಾಯುವ ವಯಸ್ಸಿನಲ್ಲಿ ಬಿಜೆಪಿ ಜತೆ ಅಪವಿತ್ರ ಮೈತ್ರಿ ಮಾಡಿಕೊಂಡಿದ್ದಾರೆ ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ವಾಗ್ದಾಳಿ ನಡೆಸಿದರು.

ನಗರದಲ್ಲಿ ಗುರುವಾರ ಲೋಕಸಭೆ ಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿ ಎಸ್.ಪಿ.ಮುದ್ದಹನುಮೇಗೌಡ ನಾಮಪತ್ರ ಸಲ್ಲಿಸುವ ಸಂರ್ಭದಲ್ಲಿ ಹಮ್ಮಿಕೊಂಡಿದ್ದ ಮೆರವಣಿಗೆಯಲ್ಲಿ ಅವರು ಮಾತನಾಡಿದರು.

ದೇವೇಗೌಡರಿಗೆ ಸಾಯುವ ವಯಸ್ಸಾಗಿದೆ. ಜೀವನದ ಅಂತ್ಯ ಕಾಲದಲ್ಲಿ ಇಂತಹ ಹೊಂದಾಣಿಕೆ ಬೇಕಿತ್ತೇ ಎಂದು ರಾಜಣ್ಣ ಕೇಳಿದರು.

'ಕಳೆದ ಲೋಕಸಭೆ ಚುನಾವಣೆಯಲ್ಲಿ ನನ್ನನ್ನು ಸೋಲಿಸಿದವರನ್ನು ಸೋಲಿಸಿ' ಎಂದು ದೇವೇಗೌಡರು ತಮ್ಮ ಅಕ್ಕಪಕ್ಕ ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ, ಸಂಸದ ಜಿ.ಎಸ್. ಬಸವರಾಜು ಅವರನ್ನು ಕೂರಿಸಿಕೊಂಡು ಹೇಳುತ್ತಿದ್ದಾರೆ. ಕಳೆದ ಬಾರಿ ಅವರನ್ನು ಸೋಲಿಸಿದವರು ಪಕ್ಕದಲ್ಲೇ ಇರಬೇಕಾದರೆ, ಇನ್ನು ಮತದಾರರು ಯಾರನ್ನು ಸೋಲಿಸಬೇಕು ಎಂದು ಪ್ರಶ್ನಿಸಿದರು.

'ಪುಲ್ವಾಮಾ: ತನಿಖೆ ಏಕಿಲ್ಲ?'

ಪ್ರಜಾವಾಣಿ ವಾರ್ತೆ

ತುಮಕೂರು: ಭಾರತೀಯ ವೀರ ಯೋಧರನ್ನು ಬಲಿ ಪಡೆದ ಪುಲ್ವಾಮಾ ಘಟನೆ ನಡೆದು ಇಷ್ಟು ವರ್ಷವಾದರೂ ಪ್ರಧಾನಿ ನರೇಂದ್ರ ಮೋದಿ ಇನ್ನೂ ಏಕೆ ತನಿಖೆ ನಡೆಸಲಿಲ್ಲ ಎಂದು ಕೆಎಸ್‌ಆರ್‌ಟಿಸಿ ನಿಗಮದ ಅಧ್ಯಕ್ಷ ಎಸ್.ಆರ್.ಶ್ರೀನಿವಾಸ್ ಪ್ರಶ್ನಿಸಿದ್ದಾರೆ.

ನಗರದಲ್ಲಿ ಗುರುವಾರ ಕಾಂಗ್ರೆಸ್ ಸಭೆಯಲ್ಲಿ ಮಾತನಾಡಿದ ಅವರು, ಪುಲ್ವಾಮಾ ಘಟನೆಯ ತನಿಖೆ ನಡೆಸದೆ ಇಡೀ ಪ್ರಕರಣ ಮುಚ್ಚಿ ಹಾಕಿದರು. ತಪ್ಪತಸ್ಥರಿಗೆ ಶಿಕ್ಷೆಯೇ ಆಗಲಿಲ್ಲ ಎಂದು ವಾಗ್ದಾಳಿ ನಡೆಸಿದರು.

ಪುಲ್ವಾಮಾ ದಾಳಿಯ ತನಿಖೆ ನಡೆಸಿದ್ದರೆ ದಾಳಿಯ ಹಿಂದೆ ಯಾರಿದ್ದರು? ದುಷ್ಕೃತ್ಯ ಏಕೆ ನಡೆಯಿತು? ಯಾರು ನಡೆಸಿದರು? ಏನೆಲ್ಲಾ ತಪ್ಪುಗಳಾಗಿದ್ದವು, ಯಾರು ತಪ್ಪು ಮಾಡಿದ್ದರು? ಎಲ್ಲಿ ಲೋಪ ದೋಷಗಳಾಗಿದ್ದವು ಎಂಬ ವಿಚಾರ ತಿಳಿಯುತಿತ್ತು. ಆಗ ತಪ್ಪು ಮಾಡಿದವರ ವಿರುದ್ಧ ಕ್ರಮ ಕೈಗೊಳ್ಳಬಹುದಿತ್ತಲ್ಲ. ತನಿಖೆಯೂ ಇಲ್ಲ, ಕ್ರಮವೂ ಇಲ್ಲ ಎಂದು ಹರಿಹಾಯ್ದರು.

ದೇಶದಲ್ಲಿ ಇಂತಹ ಹಲವು ಘಟನೆಗಳು ಪದೇ ಪದೇ ನಡೆಯುತ್ತಿದ್ದರೂ ಮೋದಿ ಎಲ್ಲವನ್ನೂ ಮರೆ ಮಾಚುತ್ತಿದ್ದಾರೆ ಎಂದು ಅವರು ತರಾಟೆಗೆ ತೆಗೆದುಕೊಂಡರು.



ವಿವಾದ ಹುಟ್ಟು ಹಾಕಿದ ವಾಟ್ಸ್‌ಆ್ಯಪ್ ಸಂದೇಶ

ಬೆಂಗಳೂರು: ಬೆಂಗಳೂರು ದಕ್ಷಿಣ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ತೇಜಸ್ವಿ ಸೂರ್ಯ ಅವರು ಗುರುವಾರ ನಾಮಪತ್ರ ಸಲ್ಲಿಸುವ ಮುನ್ನ ನಡೆಯುವ ಸಮಾವೇಶದಲ್ಲಿ ಕಡ್ಡಾಯವಾಗಿ ಹಾಜರಿಬೇಕು ಎಂದು ವಿ.ವಿ. ಪುರಂನ ಜೈನ್ ಕಾಲೇಜು ವಿದ್ಯಾರ್ಥಿಗಳಿಗೆ ಕಳುಹಿಸಿದ್ದ ಸಂದೇಶ ವಿವಾದದ ಸ್ವರೂಪ ಪಡೆದಿದೆ.

ಕಾಲೇಜಿನ ಇಂತಹ ನಡೆ ಖಂಡಿಸಿ ಎನ್‌ಎಸ್‌ಯುಐ ಮುಖಂಡರು ಚುನಾವಣಾ ಆಯೋಗಕ್ಕೆ ದೂರು ಸಲ್ಲಿಸಿದ್ದಾರೆ.

ಹಾಲಿ ಸಂಸದರೂ ಆಗಿರುವ ತೇಜಸ್ವಿ ಸೂರ್ಯ ಅವರ ಸಮಾವೇಶದಲ್ಲಿ ಭಾಗವಹಿಸುವಂತೆ ಕಾಲೇಜಿನ ವಿದ್ಯಾರ್ಥಿಗಳ ತರಗತಿವಾರು ವಾಟ್ಸ್‌ಆ್ಯಪ್ ಗುಂಪುಗಳಲ್ಲಿ ಬುಧವಾರ ಸಂದೇಶ ಹಾಕಲಾಗಿತ್ತು. ಭಾಗವಹಿಸುವ ವಿದ್ಯಾರ್ಥಿಗಳಿಗೆ ಅಂದಿನ ಹಾಜರಾತಿ ನೀಡುವ ಭರವಸೆಯನ್ನೂ ನೀಡಲಾಗಿತ್ತು. ಈ ಬಗ್ಗೆ ಹಲವು ವಿದ್ಯಾರ್ಥಿಗಳು ಸಾಮಾಜಿಕ ಜಾಲ ತಾಣಗಳಲ್ಲೇ ಆಕ್ಷೇಪ ವ್ಯಕ್ತಪಡಿಸಿದ್ದರು. ಪ್ರಾಂಶುಪಾಲರನ್ನೂ ಪ್ರಶ್ನಿಸಿದ್ದರು.

'ತೇಜಸ್ವಿ ಸೂರ್ಯ ಅವರು ಹಿಂದೆ ನಮ್ಮ ಕಾಲೇಜಿನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕಾಲೇಜಿನ ಬಗ್ಗೆ ಅಭಿಮಾನ ಇಟ್ಟುಕೊಂಡಿದ್ದಾರೆ. ಹಾಗಾಗಿ, ಅವರನ್ನು ಬೆಂಬಲಿಸಬೇಕು. ಎಲ್ಲ ವಿದ್ಯಾರ್ಥಿಗಳು ಗುರುವಾರ ಬೆಳಿಗ್ಗೆ 9ಕ್ಕೆ ಜಯನಗರದ ಹೋಟೆಲ್ ಬಳಿ ಸೇರಬೇಕು. ಸಮಯಕ್ಕೆ ಸರಿಯಾಗಿ ಬಂದವರಿಗೆ ಟೀ–ಶರ್ಟ್‌ಗಳನ್ನು ನೀಡಲಾಗುವುದು. ಯಾರೂ ಗೈರು ಹಾಜರಾಗಬಾರದು' ಎಂದು ಸಂದೇಶ ನೀಡಲಾಗಿತ್ತು.

ಈ ಸಂದೇಶಗಳನ್ನು 'ಎಕ್ಸ್' ಖಾತೆಯಲ್ಲಿ ಹಂಚಿಕೊಂಡಿರುವ ಕೆಪಿಸಿಸಿ ಹಾಗೂ ಬೆಂಗಳೂರು ದಕ್ಷಿಣದ ಕಾಂಗ್ರೆಸ್ ಅಭ್ಯರ್ಥಿ ಸೌಮ್ಯಾ ರೆಡ್ಡಿ, ಕಾಲೇಜು ಹಾಗೂ ತೇಜಸ್ವಿ ಸೂರ್ಯ ವಿರುದ್ಧ ಕ್ರಮಕ್ಕೆ ಆಗ್ರಹಿಸಿದೆ. ಈ ಕುರಿತು ಪ್ರತಿಕ್ರಿಯೆ ನೀಡಿರುವ ಕಾಲೇಜು ಆಡಳಿತ ಮಂಡಳಿ, 'ಕೆಲ ವಿದ್ಯಾರ್ಥಿಗಳು ಇಂತಹ ಸಂದೇಶ ಕಳುಹಿಸಿದ್ದಾರೆ. ಈ ಕುರಿತು ಮಾಹಿತಿ ಪಡೆಯುತ್ತಿದ್ದೇವೆ' ಎಂದಿದೆ.

₹155 ಕೋಟಿ ಒಡತಿ ಅನಿತಾ ಪತಿಗಿಂತ ಶ್ರೀಮಂತೆ

20 ಹಸು, 52 ಬಂಡೂರು ಕುರಿ ಒಡೆಯ ಎಚ್‌ಡಿಕೆ

ಎಚ್.ಡಿ.ಕುಮಾರಸ್ವಾಮಿ | ಜೆಡಿಎಸ್

₹56 ಕೋಟಿ ಒಟ್ಟು ಆಸ್ತಿಯ ಮೌಲ್ಯ
₹19.12 ಕೋಟಿ ಸಾಲ

ಮಂಡ್ಯ

ಎಚ್‌ಡಿಕೆ ಪತ್ನಿಯ ಬಳಿ ಇದೆ 51 ಕ್ಯಾರೆಟ್ ವಜ್ರ, 3.85 ಕೆ.ಜಿ ಚಿನ್ನ, 17 ಕೆ.ಜಿ ಬೆಳ್ಳಿ

ಮಂಡ್ಯ: ಮೈತ್ರಿ ಅಭ್ಯರ್ಥಿಯಾಗಿ ಗುರುವಾರ ನಾಮಪತ್ರ ಸಲ್ಲಿಸಿದ ಎಚ್.ಡಿ.ಕುಮಾರಸ್ವಾಮಿ ಅವರು ಪ್ರಮಾಣ ಪತ್ರದಲ್ಲಿ ₹ 56 ಕೋಟಿ ಆಸ್ತಿ ಘೋಷಣೆ ಮಾಡಿದ್ದಾರೆ. ಕೇತಗಾನಹಳ್ಳಿಯ ತೋಟದಲ್ಲಿ 20 ಹಸು, 52 ಬಂಡೂರು ಕುರಿಗಳ ಲೆಕ್ಕವನ್ನೂ ಪ್ರಮಾಣಪತ್ರದಲ್ಲಿ ತೋರಿಸಿದ್ದಾರೆ. ₹6.40 ಲಕ್ಷ ಮೌಲ್ಯದ 20 ಹಸು, ₹ 6.14 ಲಕ್ಷ ಮೌಲ್ಯದ 52 ಬಂಡೂರು ಕುರಿ, ₹ 1.49 ಕೋಟಿ ಮೌಲ್ಯದ ಡೇರಿ ಉಪಕರಣಗಳ ಮಾಹಿತಿ ನೀಡಿದ್ದಾರೆ. ಅವರ ಬಳಿ ಕಾರು ಇಲ್ಲ. ಕುಮಾರಸ್ವಾಮಿ ಅವರಿಗಿಂತ ಪತ್ನಿ ಅನಿತಾ ಅವರೇ ಶ್ರೀಮಂತೆ. ಅವರ ಬಳಿ ₹ 155 ಕೋಟಿ ಆಸ್ತಿ ಇದೆ. 3 ಪ್ರಕರಣಗಳಲ್ಲಿ ಎಚ್‌ಡಿಕೆ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಸಾಲವಿಲ್ಲದ ಕಾರಜೋಳ ಸ್ವಂತ ವಾಹನವೂ ಇಲ್ಲ

ಗೋವಿಂದ ಎಂ.ಕಾರಜೋಳ | ಬಿಜೆಪಿ

₹2.96 ಕೋಟಿ ಒಟ್ಟು ಆಸ್ತಿಯ ಮೌಲ್ಯ

ಚಿತ್ರದುರ್ಗ

ಪತ್ನಿ ಶಾಂತಾದೇವಿ ಆಸ್ತಿಯ ಮೌಲ್ಯ ₹ 1.46 ಕೋಟಿ. ಅವರ ಬಳಿ ಇದೆ ಚಿನ್ನ 1 ಕೆ.ಜಿ. 50 ಗ್ರಾಂ

ಗೌಡರಿಗೂ ಕಾರಿಲ್ಲ

ಎಸ್.ಪಿ.ಮುದ್ದಹನುಮೇಗೌಡ | ಕಾಂಗ್ರೆಸ್

₹8.55 ಕೋಟಿ ಒಟ್ಟು ಆಸ್ತಿಯ ಮೌಲ್ಯ

ತುಮಕೂರು

ಮುದ್ದಹನುಮೇಗೌಡ ಎರಡು ಬಾರಿ ಶಾಸಕ, ಒಮ್ಮೆ ಸಂಸದರಾಗಿದ್ದರು. ಅವರ ಬಳಿ ಯಾವುದೇ ವಾಹನ, ಚಿನ್ನಾಭರಣ ಇಲ್ಲ. ಸಾಲ ಕೂಡ ಇಲ್ಲ.

ಡಾಕ್ಟ್ರ ಬಳಿ ಲಕ್ಷ ಮೌಲ್ಯದ ಪುಸ್ತಕ

ಡಾ. ಸಿ.ಎನ್. ಮಂಜುನಾಥ್ | ಬಿಜೆಪಿ

₹43.64 ಕೋಟಿ, ಆಸ್ತಿ ಮೌಲ್ಯ
₹3.74 ಕೋಟಿ, ಸಾಲ
ವೈದ್ಯಕೀಯ ಕ್ಷೇತ್ರಕ್ಕೆ ಸಂಬಂಧಿಸಿದ ₹1 ಲಕ್ಷ ಮೌಲ್ಯದ 100 ಪುಸ್ತಕಗಳಿವೆ

ಬೆಂಗಳೂರು ಗ್ರಾಮಾಂತರ

ಪತ್ನಿ ಅನುಸೂಯ ಆಸ್ತಿಯ ಮೌಲ್ಯ ₹52.93 ಕೋಟಿ. ಅವರ ಬಳಿ ಇದೆ 6,079 ಗ್ರಾಂ ಚಿನ್ನ, 51 ಕ್ಯಾರಟ್ ವಜ್ರ, 340 ಗ್ರಾಂ ಅಪೂರ್ವ ಹರಳು, 38.50 ಕೆ.ಜಿ ಬೆಳ್ಳಿ ಆಭರಣ

ಗೌತಮ್ ಬಳಿಯಿವೆ ನಾಲ್ಕು ಕಾರು

ಕೆ.ವಿ.ಗೌತಮ್ | ಕಾಂಗ್ರೆಸ್

₹13.04 ಕೋಟಿ ಒಟ್ಟು ಆಸ್ತಿಯ ಮೌಲ್ಯ
₹3.57 ಕೋಟಿ ಸಾಲ

ಕೋಲಾರ

ಏನೆಲ್ಲಾ ವಾಹನ: ಇನೋವಾ ಹೈಕ್ರಾಸ್, ಮಾರುತಿ ಜೆನ್, ಟ್ರಯಂಫ್ –400, ಹುಂಡೈ ವೆನ್ಯೂ ಕಾರು, ಹೋಂಡಾ ಆ್ಯಕ್ಟಿವಾ

ಮ್ಯುಚುವಲ್ ಫಂಡ್ ಪ್ರೇಮಿ ತೇಜಸ್ವಿ ಸೂರ್ಯ

ತೇಜಸ್ವಿ ಸೂರ್ಯ | ಬಿಜೆಪಿ

₹7.80 ಕೋಟಿ ಒಟ್ಟು ಆಸ್ತಿಯ ಮೌಲ್ಯ
₹4.10 ಕೋಟಿ ಮ್ಯುಚುವಲ್ ಫಂಡ್

ಬೆಂಗಳೂರು ದಕ್ಷಿಣ

ಅಪರಾಧ ಪ್ರಕರಣ: 3 (ಜನರ ಮಧ್ಯೆ ದ್ವೇಷ ಮತ್ತು ಕೋಮು ಪ್ರಚೋದನೆ ನೀಡಿದ ಪ್ರಕರಣಗಳು)

ಕಣದತ್ತ ಕಿರುನೋಟ

ಚಾಮರಾಜನಗರ

ಅಭ್ಯರ್ಥಿಗಳು

ಎಸ್.ಬಾಲರಾಜ್
ಬಿಜೆಪಿ

ಸುನಿಲ್ ಬೋಸ್
ಕಾಂಗ್ರೆಸ್

'ಕೈ'–'ಕಮಲ' ಸಮಬಲದ ಹೋರಾಟ ನಿರೀಕ್ಷೆ

ಕಾಂಗ್ರೆಸ್ 'ಭದ್ರಕೋಟೆ' ಎನ್ನಲಾಗುತ್ತಿದ್ದ ಕ್ಷೇತ್ರದಲ್ಲಿ ಕಳೆದ ಬಾರಿ ಬಿಜೆಪಿ ಗೆದ್ದು ಖಾತೆ ತೆರೆದಿತ್ತು. ಈ ಬಾರಿ ಕಾಂಗ್ರೆಸ್, ಸಚಿವ ಎಚ್.ಸಿ.ಮಹದೇವಪ್ಪ ಅವರ ಮಗ ಸುನಿಲ್ ಬೋಸ್‌ಗೆ ಟಿಕೆಟ್ ನೀಡಿದೆ. ಎನ್‌ಡಿಎ ಅಭ್ಯರ್ಥಿಯಾಗಿ ಬಿಜೆಪಿಯ ಎಸ್.ಬಾಲರಾಜು ಕಣಕ್ಕಿಳಿದಿದ್ದಾರೆ. ಬಿಎಸ್‌ಪಿಯಿಂದ ಕೃಷ್ಣಮೂರ್ತಿ ಸ್ಪರ್ಧಿಸಿದ್ದಾರೆ

ಕಾಂಗ್ರೆಸ್– ಬಿಜೆಪಿ ನಡುವೆ ಸಮಬಲದ ಹೋರಾಟ ಏರ್ಪಟ್ಟಿದೆ. ಬಾಲರಾಜು ಮಾಜಿ ಶಾಸಕ. ರಾಜಕೀಯ ಅನುಭವಿ. ಸುನಿಲ್ ಬೋಸ್ ಚುನಾವಣಾ ರಾಜಕೀಯಕ್ಕೆ ಹೊಸಬರು. ಕ್ಷೇತ್ರದಾದ್ಯಂತ ಈಗಷ್ಟೇ ಪರಿಚಯವಾಗುತ್ತಿದ್ದಾರೆ. ತಂದೆ ಮಹದೇವಪ್ಪ ವರ್ಚಸ್ಸಿನ ನೆರಳಿನಲ್ಲೇ ನಡೆಯಬೇಕು. ಸಿ.ಎಂ ಸಿದ್ದರಾಮಯ್ಯನವರಿಗೂ ಪ್ರತಿಷ್ಠೆಯ ಕಣವಾಗಿದ್ದು, ಗೆಲುವಿಗೆ ಕಾರ್ಯತಂತ್ರ ರೂಪಿಸುತ್ತಿದ್ದಾರೆ.

ಸಂಸದ ವಿ.ಶ್ರೀನಿವಾಸ ಪ್ರಸಾದ್ ಬೆಂಬಲಿಗರು ಕಾಂಗ್ರೆಸ್‌ನತ್ತ ಮುಖ ಮಾಡಿರುವುದು ಬಿಜೆಪಿಗೆ ತಲೆನೋವು ತಂದಿದೆ. ಟಿಕೆಟ್ ಆಕಾಂಕ್ಷಿಯಾಗಿದ್ದ ಎಡಗೈ ಸಮುದಾಯದ ಎಂ.ಶಿವಣ್ಣ ಹಾಗೂ ಅವರ ಬೆಂಬಲಿಗರು ಕಾಂಗ್ರೆಸ್‌ಗೆ ಸೇರ್ಪಡೆಯಾಗಿದ್ದಾರೆ.

ಮೋದಿ ವರ್ಚಸ್ಸು, ಬಿಎಸ್‌ವೈ ಪ್ರಭಾವ, ಜೆಡಿಎಸ್ ಮೈತ್ರಿ ಬಾಲರಾಜು ಶಕ್ತಿಯಾಗಿದ್ದರೆ, ಕ್ಷೇತ್ರದಲ್ಲಿ 7 ಶಾಸಕರು ಇರುವುದು, ಗ್ಯಾರಂಟಿಗಳ ಬಲ, ತಂದೆ ಮಹದೇವಪ್ಪ ಪ್ರಭಾವದ ಬಲ ಬೋಸ್ ಬೆನ್ನಿಗಿದೆ.

ವಿಧಾನಸಭೆ ಕ್ಷೇತ್ರಗಳ ಪಕ್ಷವಾರು ಪ್ರಾತಿನಿಧ್ಯ: ಕಾಂಗ್ರೆಸ್ 7 | ಜೆಡಿಎಸ್ 1 | ಬಿಜೆಪಿ 0

ಮತದಾರರ ಸಂಖ್ಯೆ: 8,69,389 ಪುರುಷರು | 8,88,113 ಮಹಿಳೆಯರು | 114 ಲಿಂಗತ್ವ ಅಲ್ಪಸಂಖ್ಯಾತರು
ಒಟ್ಟು 17,57,616

2019	ಹೆಸರು	ಪಕ್ಷ	ಪಡೆದ ಮತಗಳು
ಗೆದ್ದವರು	ವಿ.ಶ್ರೀನಿವಾಸ ಪ್ರಸಾದ್	ಬಿಜೆಪಿ	5,68,537
ಸಮೀಪದ ಪ್ರತಿಸ್ಪರ್ಧಿ	ಆರ್.ಧ್ರುವನಾರಾಯಣ	ಕಾಂಗ್ರೆಸ್	5,66,720

ಬೆಂಗಳೂರು ಉತ್ತರ

ಅಭ್ಯರ್ಥಿಗಳು

ಎಂ.ವಿ. ರಾಜೀವ್ ಗೌಡ
ಕಾಂಗ್ರೆಸ್

ಶೋಭಾ ಕರಂದ್ಲಾಜೆ
ಬಿಜೆಪಿ

'ಕಮಲ' ಕೀಳಲು 'ಕೈ' ಲೆಕ್ಕಾಚಾರ

ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಎರಡು ಬಾರಿ ಗೆದ್ದು, ಕೇಂದ್ರ ಸಚಿವರಾಗಿದ್ದ ಡಿ.ವಿ. ಸದಾನಂದಗೌಡರು ಚುನಾವಣಾ ರಾಜಕೀಯದಿಂದ ನಿವೃತ್ತಿ ಘೋಷಣೆ ಮಾಡುತ್ತಿದ್ದಂತೆ, ಈ ಬಾರಿ ಬಿಜೆಪಿಯಿಂದ ಯಾರು? ಎಂಬ ಚರ್ಚೆ ಆರಂಭವಾಗಿತ್ತು. ಕೆಲ ದಿನಗಳ ಬಳಿಕ ಮತ್ತೆ ಸ್ಪರ್ಧಿಸುವ ಬಯಕೆ ವ್ಯಕ್ತಪಡಿಸಿ ಟಿಕೆಟ್ ಗಿಟ್ಟಿಸಿಕೊಳ್ಳಲು ಗೌಡರು ಯತ್ನಿಸಿದ್ದರು. ಆದರೆ, ಪಕ್ಷದ ವರಿಷ್ಠರು ಅವರಿಗೆ 'ನಿವೃತ್ತಿ' ನೀಡಿ, ಉಡುಪಿ– ಚಿಕ್ಕಮಗಳೂರು ಕ್ಷೇತ್ರದ ಸಂಸದೆ, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರಿಗೆ ಟಿಕೆಟ್ ನೀಡಿದ್ದಾರೆ. ಕರಂದ್ಲಾಜೆಗೆ ಎದುರಾಳಿಯಾಗಿ ಕಾಂಗ್ರೆಸ್‌ನಿಂದ ಕೆಲವು ಹೆಸರುಗಳು ಚರ್ಚೆಗೆ ಬಂದರೂ ಅದೃಷ್ಟ ಒಲಿದದ್ದು 'ಪ್ರೊಫೆಸರ್' ಎಂ.ವಿ. ರಾಜೀವ್ ಗೌಡರಿಗೆ. 1952ರ ಮೊದಲ ಚುನಾವಣೆಯಿಂದ ಕೆಂಗಲ್ ಹನುಮಂತಯ್ಯ, ಸಿ. ಕೆ. ಜಾಫರ್ ಷರೀಫ್ ಅವರಂಥ ಘಟಾನುಘಟಿ ನಾಯಕರನ್ನು ಚುನಾಯಿಸುವ ಮೂಲಕ ಕಾಂಗ್ರೆಸ್ ಭದ್ರಕೋಟೆಯನ್ನಾಗಿಸಿದ್ದ ಈ ಕ್ಷೇತ್ರದ ಮತದಾರರು, 2008ರಿಂದ ಸತತ ನಾಲ್ಕು ಬಾರಿ ಚುನಾವಣೆಗಳಿಂದ ಕಮಲ ಪಕ್ಷದ ಅಭ್ಯರ್ಥಿಗಳಿಗೆ ಮಣೆ ಹಾಕುತ್ತಿದ್ದಾರೆ. ಬಿಜೆಪಿ ಈ ಬಾರಿಯೂ ಜಯಭೇರಿ ಬಾರಿಸುವ ಉತ್ಸಾಹದಲ್ಲಿದೆ. ಜೊತೆಗೆ, ಜೆಡಿಎಸ್ ಜೊತೆಗಿನ 'ಮೈತ್ರಿ'ಯೂ ಅನುಕೂಲ ಆಗಬಹುದು ಎನ್ನುವುದು ಬಿಜೆಪಿಗರ ನಿರೀಕ್ಷೆ. ಮೋದಿ ವರ್ಚಸ್ಸನ್ನೇ ನಂಬಿರುವ ಬಿಜೆಪಿಯಿಂದ ಈ ಬಾರಿ ಕ್ಷೇತ್ರವನ್ನು ಕಸಿದುಕೊಳ್ಳಲು ಕಾಂಗ್ರೆಸ್ ನಾಯಕರು ಲೆಕ್ಕಾಚಾರ ಹಾಕುತ್ತಿದ್ದಾರೆ. ರಾಜ್ಯದಲ್ಲಿ ಅಧಿಕಾರದ ಸೂತ್ರ ಹಿಡಿದಿರುವುದು, ಪಂಚ 'ಗ್ಯಾರಂಟಿ'ಗಳು ನೆರವಾಗಬಹುದು ಎನ್ನುವುದು 'ಕೈ' ನಾಯಕರ ವಿಶ್ವಾಸ.

ವಿಧಾನಸಭೆ ಕ್ಷೇತ್ರಗಳ ಪಕ್ಷವಾರು ಪ್ರಾತಿನಿಧ್ಯ: ಕಾಂಗ್ರೆಸ್ 3 | ಬಿಜೆಪಿ 5

ಮತದಾರರ ಸಂಖ್ಯೆ: 16,29,089 ಪುರುಷರು | 15,44,415 ಮಹಿಳೆಯರು | 594 ಲಿಂಗತ್ವ ಅಲ್ಪಸಂಖ್ಯಾತರು
ಒಟ್ಟು 31,74,098

2019	ಹೆಸರು	ಪಕ್ಷ	ಪಡೆದ ಮತಗಳು
ಗೆದ್ದವರು	ಡಿ.ವಿ. ಸದಾನಂದ ಗೌಡ	ಬಿಜೆಪಿ	8,24,500
ಸಮೀಪದ ಪ್ರತಿಸ್ಪರ್ಧಿ	ಕೃಷ್ಣ ಬೈರೇಗೌಡ	ಕಾಂಗ್ರೆಸ್	6,76,982

ಮಿತ್ರರ ಸೀಟಿನ ಆಟ: ಕಾಂಗ್ರೆಸ್ ಪೇಚಾಟ

ಲೋಕಸಭಾ ಚುನಾವಣೆಗೆ 'ಇಂಡಿಯಾ' ಮೈತ್ರಿಕೂಟದ ಪಕ್ಷಗಳು ಸೀಟು ಹಂಚಿಕೆಯ ಕಸರತ್ತನ್ನು ಬಹುತೇಕ ಪೂರ್ಣಗೊಳಿಸಿವೆ. ಆದರೆ, ಬಿಹಾರದಿಂದ ಮಹಾರಾಷ್ಟ್ರದ ವರೆಗೆ, ತಮಿಳುನಾಡಿನಿಂದ ಉತ್ತರ ಪ್ರದೇಶದವರೆಗೆ ಕಾಂಗ್ರೆಸ್‌ಗೆ ಸೀಟುಗಳನ್ನು ಬಿಟ್ಟುಕೊಡಲು ಪ್ರಾದೇಶಿಕ ಪಕ್ಷಗಳು ಚೌಕಾಸಿ ಮಾಡಿವೆ. ಈ ಪಕ್ಷಗಳು 'ಕೈ' ಪಾಳಯದ ನೆಚ್ಚಿನ ಕ್ಷೇತ್ರಗಳನ್ನು ಕಿತ್ತುಕೊಳ್ಳುವಲ್ಲಿ ಯಶಸ್ವಿಯಾಗಿವೆ. ಈ ಮೂಲಕ 'ಕಿರಿಯ ಪಾಲುದಾರ' ಎಂಬ ಸಂದೇಶವನ್ನು ರವಾನಿಸಿವೆ

● ಮಂಜುನಾಥ ಹೆಬ್ಬಾರ್

'ಕೈ' ಮೈತ್ರಿ ಎಲ್ಲೆಲ್ಲಿ?

1. ತಮಿಳುನಾಡು; ಡಿಎಂಕೆ
2. ಬಿಹಾರ; ಆರ್‌ಜೆಡಿ, ಎಡ ಪಕ್ಷಗಳು
3. ಮಹಾರಾಷ್ಟ್ರ; ಎನ್‌ಸಿಪಿ (ಶರದ್ ಪವಾರ್ ಬಣ), ಶಿವಸೇನಾ (ಉದ್ಧವ್ ಠಾಕ್ರೆ ಬಣ)
4. ಉತ್ತರ ಪ್ರದೇಶ; ಸಮಾಜವಾದಿ ಪಕ್ಷ
5. ರಾಜಸ್ಥಾನ; ಆರ್‌ಎಲ್‌ಪಿ, ಸಿಪಿಎಂ
6. ಮಧ್ಯಪ್ರದೇಶ; ಸಮಾಜವಾದಿ ಪಕ್ಷ
7. ದೆಹಲಿ, ಹರಿಯಾಣ, ಗುಜರಾತ್; ಎಎಪಿ
8. ಪಶ್ಚಿಮ ಬಂಗಾಳ: ಎಡ ಪಕ್ಷಗಳು
9. ಜಾರ್ಖಂಡ್: ಜೆಎಂಎಂ



300 ಕ್ಷೇತ್ರಗಳಲ್ಲಿ 'ಕೈ' ಸ್ಪರ್ಧೆ?

ಕಾಂಗ್ರೆಸ್ ಪಕ್ಷವು ಈ ಸಲ ಸುಮಾರು 300 ಕ್ಷೇತ್ರಗಳಲ್ಲಷ್ಟೇ ಸ್ಪರ್ಧಿಸುವ ಸಾಧ್ಯತೆ ದಟ್ಟವಾಗಿದೆ

- 1996ರಲ್ಲಿ ಪಕ್ಷವು 529 ಕ್ಷೇತ್ರಗಳಲ್ಲಿ ಸ್ಪರ್ಧಿಸಿತ್ತು. ಇದು ಗರಿಷ್ಠ ಸ್ಪರ್ಧೆಯ ದಾಖಲೆ. 2004ರಲ್ಲಿ 417 ಕ್ಷೇತ್ರಗಳಲ್ಲಿ ಸ್ಪರ್ಧೆ ಮಾಡಿತ್ತು. ಇದು ಇಲ್ಲಿಯವರೆಗಿನ ಕನಿಷ್ಠ ಸ್ಪರ್ಧೆಯ ದಾಖಲೆ
- 233 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಅಂತಿಮಗೊಳಿಸಿರುವ ಪಕ್ಷ. ಮುಂದಿನ ದಿನಗಳಲ್ಲಿ 70–80 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರು ಪ್ರಕಟಿಸಲಿದೆ
- ಉತ್ತರ ಪ್ರದೇಶದ ರಾಯ್‌ಬರೇಲಿ ಹಾಗೂ ಅಮೇಠಿ ಕ್ಷೇತ್ರಗಳ ಅಭ್ಯರ್ಥಿಗಳ ಕುರಿತು ಅಂತಿಮ ತೀರ್ಮಾನಕ್ಕೆ ಬಾರದ ಪಕ್ಷ. ರಾಯ್‌ಬರೇಲಿಯಿಂದ ಪ್ರಿಯಾಂಕಾ ಗಾಂಧಿ ವಾದ್ರಾ ಹಾಗೂ ಅಮೇಠಿಯಿಂದ ರಾಹುಲ್ ಗಾಂಧಿ ಸ್ಪರ್ಧೆ ಮಾಡಲಿದ್ದಾರೆ ಎಂಬ ವಿಶ್ವಾಸದಲ್ಲಿ ಕಾಂಗ್ರೆಸ್ ನಾಯಕರಿದ್ದಾರೆ
- ಪಂಜಾಬ್, ಹರಿಯಾಣ, ದೆಹಲಿ, ಗೋವಾ, ಹಿಮಾಚಲ ಪ್ರದೇಶ, ದಾದ್ರಾ ಮತ್ತು ನಗರ್ ಹವೇಲಿ, ಚಂಡೀಗಢ ಹಾಗೂ ಲಡಾಕ್‌ಗೆ ಅಭ್ಯರ್ಥಿಗಳನ್ನು ಕಾಂಗ್ರೆಸ್ ಘೋಷಿಸಿಲ್ಲ
- ಜನವರಿ 4ರಂದು ನಡೆದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಪಕ್ಷವು ಈ ಸಲ 255 ಕ್ಷೇತ್ರಗಳ ಮೇಲೆ ಗಮನ ಕೇಂದ್ರೀಕರಿಸಲಿದೆ ಎಂದು ಸೂಚ್ಯವಾಗಿ ಹೇಳಿದ್ದರು
- ಗೆಲ್ಲುವ ಸಾಧ್ಯತೆ ಇರುವ ಕ್ಷೇತ್ರಗಳತ್ತ ಹೆಚ್ಚಿನ ಗಮನ ಹರಿಸುವ ಹಾಗೂ ಸೀಮಿತ ಸಂಪನ್ಮೂಲದ ಗರಿಷ್ಠ ಬಳಕೆ ಮಾಡುವ ಯೋಚನೆ ಪಕ್ಷ ನಾಯಕರದ್ದು

ಪಪ್ಪು– ಕನ್ಹಯ್ಯಗಿಲ್ಲ 'ಜಾಗ'

- ಬಿಹಾರದಲ್ಲಿ 'ಮಹಾಘಟಬಂಧನ್'ನ ಪಾಲುದಾರರಾದ ಆರ್‌ಜೆಡಿ 26, ಕಾಂಗ್ರೆಸ್ 9, ಸಿಪಿಐ (ಎಂಎಲ್) 3, ಸಿಪಿಐ ಮತ್ತು ಸಿಪಿಎಂ ತಲಾ ಒಂದು ಸ್ಥಾನಗಳಲ್ಲಿ ಸ್ಪರ್ಧಿಸಲಿವೆ. ಕಾಂಗ್ರೆಸ್ ಹಟ ಹಿಡಿದ ಮೂರೂ ಕ್ಷೇತ್ರಗಳನ್ನು ಆರ್‌ಜೆಡಿ ಬಿಟ್ಟುಕೊಟ್ಟಿಲ್ಲ
- ಪೂರ್ಣಿಯಾ ಕ್ಷೇತ್ರವನ್ನು ಬಿಟ್ಟುಕೊಡಲು ನಿರಾಕರಿಸಿದ್ದು ಕಾಂಗ್ರೆಸ್‌ಗೆ ದೊಡ್ಡ ಹಿನ್ನಡೆ. 2019ರಲ್ಲಿ ಈ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಕಣಕ್ಕಿಳಿದಿದ್ದರು. ಈ ಕ್ಷೇತ್ರದಲ್ಲಿ ಅದೃಷ್ಟ ಪರೀಕ್ಷೆ ನಡೆಸುವ ಹಂಬಲದಿಂದ ಅವರು ಮಾಜಿ ಸಂಸದ ಪಪ್ಪು ಯಾದವ್ 'ಹಸ್ತ' ಪಾಳಯಕ್ಕೆ ಸೇರ್ಪಡೆಯಾಗಿದ್ದರು
- ಮಧೇಪುರ ಅಥವಾ ಸುಪೌಲ್ ಕ್ಷೇತ್ರದಿಂದ ಪಪ್ಪು ಯಾದವ್ ಅವರನ್ನು ಹುರಿಯಾಳುವನ್ನಾಗಿ ಮಾಡಲು ಕಾಂಗ್ರೆಸ್ ಹೈಕಮಾಂಡ್ ಯೋಜಿಸಿತ್ತು. ಈ ಎರಡೂ ಕ್ಷೇತ್ರಗಳು ಆರ್‌ಜೆಡಿ ಪಾಲಾಗಿವೆ. ಮಧೇಪುರ ಕ್ಷೇತ್ರದಲ್ಲಿ ಪಪ್ಪು ಯಾದವ್ 2014ರಲ್ಲಿ ಜಯಿಸಿದ್ದರು
- ಯಾದವ್ ಪತ್ನಿ ರಂಜೀತಾ ರಂಜನ್ ಅವರು 2004 ಹಾಗೂ 2014ರಲ್ಲಿ ಸುಪೌಲ್ ಕ್ಷೇತ್ರವನ್ನು ಪ್ರತಿನಿಧಿಸಿದ್ದರು. 2019ರ ಚುನಾವಣೆಯಲ್ಲಿ ಅವರು ಸೋತಿದ್ದರು
- ಯುವ ನಾಯಕ ಕನ್ಹಯ್ಯ ಕುಮಾರ್ ಅವರು 2019ರಲ್ಲಿ ಬೇಗುಸರಾಯ್ ಕ್ಷೇತ್ರದಲ್ಲಿ ಸಿಪಿಐ ಪಕ್ಷದಿಂದ ಸ್ಪರ್ಧಿಸಿದ್ದರು. ಅವರು 2021ರಲ್ಲಿ ಕಾಂಗ್ರೆಸ್‌ಗೆ ಸೇರ್ಪಡೆಯಾಗಿದ್ದರು. ಕನ್ಹಯ್ಯ ಅವರಿಗೆ ಟಿಕೆಟ್ ನೀಡಲು ಹೈಕಮಾಂಡ್ ಬಯಸಿತ್ತು. ಆದರೆ, ಈ ಕ್ಷೇತ್ರವನ್ನು ಸಿಪಿಐಗೆ ಆರ್‌ಜೆಡಿ ನೀಡಿದೆ. ಹೀಗಾಗಿ, ಕನ್ಹಯ್ಯ ಅವರು ದೆಹಲಿಯ ಕ್ಷೇತ್ರವೊಂದಕ್ಕೆ ವಲಸೆ ಹೋಗಬೇಕಿದೆ
- ಔರಂಗಾಬಾದ್ ಕ್ಷೇತ್ರವನ್ನು ಕಾಂಗ್ರೆಸ್‌ಗೆ ನೀಡಲು ಆರ್‌ಜೆಡಿ ನಿರಾಕರಿಸಿದೆ. ಮಾಜಿ ಗವರ್ನರ್ ನಿಖಿಲ್ ಕುಮಾರ್ ಅವರನ್ನು ಹುರಿಯಾಳುವನ್ನಾಗಿ ಮಾಡಲು ಕಾಂಗ್ರೆಸ್ ನಾಯಕರು ಯೋಜಿಸಿದ್ದರು

ತಮಿಳುನಾಡು: ಗೆದ್ದ ಕ್ಷೇತ್ರಗಳೂ ಸಿಕ್ಕಿಲ್ಲ

- ಡಿಎಂಕೆ ಹಟಕ್ಕೆ ಮಣಿದಿರುವ ಕಾಂಗ್ರೆಸ್ ಪಕ್ಷವು 2019ರಲ್ಲಿ ಸ್ಪರ್ಧಿಸಿದ ಮೂರು ಕ್ಷೇತ್ರಗಳನ್ನೇ ಮಿತ್ರಪಕ್ಷಕ್ಕೆ ಬಿಟ್ಟುಕೊಟ್ಟಿದೆ. ಗೆಲ್ಲುವ ಸಾಧ್ಯತೆ ಹೆಚ್ಚಿರುವ 4–5 ಕ್ಷೇತ್ರಗಳನ್ನು ಮಿತ್ರ ಪಕ್ಷದಿಂದ ಕಿತ್ತುಕೊಳ್ಳಲು ಡಿಎಂಕೆ ಬಯಸಿತ್ತು. ಮಾತುಕತೆಯ ನಂತರ 3 ಕ್ಷೇತ್ರಗಳಿಗೆ ಡಿಎಂಕೆ ಒಪ್ಪಿತು. 2019ರಲ್ಲಿ ಅರಣಿ ಹಾಗೂ ತಿರುಚಿರಾಪಳ್ಳಿಯಲ್ಲಿ ಪಕ್ಷ ಗೆದ್ದಿತ್ತು. ಈ ಸಲ ಈ ಎರಡೂ ಕ್ಷೇತ್ರಗಳ ಜತೆಗೆ ಥೇಣಿಯನ್ನು ಮಿತ್ರಪಕ್ಷಕ್ಕೆ ನೀಡಿದೆ. ಬದಲಿಯಾಗಿ ತಿರುನೆಲ್ವೇಲಿ, ಕಡಲೂರ್ ಮತ್ತು ಮಯಿಲಾಡುತುರೈ ಕ್ಷೇತ್ರಗಳನ್ನು ಪಡೆದಿದೆ
- ಅರಣಿಯಲ್ಲಿ 2019ರಲ್ಲಿ ಎಂ.ಕೆ. ವಿಷ್ಣುಪ್ರಸಾದ್ ಜಯಿಸಿದ್ದರು. ಈ ಸಲ ಅವರು ಕಡಲೂರ್‌ಗೆ ಸ್ಥಳಾಂತರಗೊಂಡಿದ್ದಾರೆ. ತಿರುಚಿರಾಪಳ್ಳಿಯಲ್ಲಿ ಹಾಲಿ ಸಂಸದ ಸು. ತಿರುನಾವುಕ್ಕರಸರ್ ಅವರು ಟಿಕೆಟ್ ವಂಚಿತರಾಗಿದ್ದಾರೆ. ಈ ಕ್ಷೇತ್ರವು ವೈಕೋ ನೇತೃತ್ವದ ಎಂಡಿಎಂಕೆ ಪಾಲಾಗಿದೆ.

ಮಹಾರಾಷ್ಟ್ರ: ಮುಗಿಯದ ಕಿತ್ತಾಟ

- ರಾಜ್ಯದಲ್ಲಿ ಕಾಂಗ್ರೆಸ್, ಶಿವಸೇನಾ (ಉದ್ಧವ್ ಠಾಕ್ರೆ ಬಣ) ಹಾಗೂ ಎನ್‌ಸಿಪಿ (ಶರದ್ ಪವಾರ್ ಬಣ) ನಡುವೆ ಸೀಟು ಹಂಚಿಕೆ ಪ್ರಕ್ರಿಯೆ ಇನ್ನೂ ಅಂತಿಮಗೊಂಡಿಲ್ಲ. ಅದಕ್ಕೆ ಮುನ್ನವೇ ಮಿತ್ರ ಪಕ್ಷಗಳು ಹಲವು ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಆಖೈರುಗೊಳಿಸಿವೆ
- ಸಾಂಗ್ಲಿ, ಭೀವಂಡಿ, ಮುಂಬೈ ದಕ್ಷಿಣ ಮಧ್ಯ ಹಾಗೂ ಮುಂಬೈ ವಾಯವ್ಯ ಕ್ಷೇತ್ರಗಳ ಮೇಲೆ ಕಾಂಗ್ರೆಸ್ ಕಣ್ಣಿಟ್ಟಿದೆ. ಆದರೆ, ಸಾಂಗ್ಲಿ ಹಾಗೂ ಮುಂಬೈ ದಕ್ಷಿಣ ಕೇಂದ್ರ ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಶಿವಸೇನಾ ಪ್ರಕಟಿಸಿದೆ. ಇದು ಕಾಂಗ್ರೆಸ್‌ನ ಅಸಮಾಧಾನಕ್ಕೆ ಕಾರಣವಾಗಿದೆ
- ಶಾಸಕರ ಪಕ್ಷಾಂತರದಿಂದ ಚೂರಾದ ಎನ್‌ಸಿಪಿ ಹಾಗೂ ಶಿವಸೇನಾಗೆ ಹೋಲಿಸಿದರೆ ಕಾಂಗ್ರೆಸ್‌ಗೆ ರಾಜ್ಯದಲ್ಲಿ ಹೆಚ್ಚಿನ ನೆಲೆ ಇದೆ. ರಾಜ್ಯದಲ್ಲಿ ಮೈತ್ರಿಕೂಟದ ನಾಯಕತ್ವವನ್ನು ಪಕ್ಷ ವಹಿಸಬೇಕು ಎಂಬುದು ರಾಜ್ಯದ ಕಾಂಗ್ರೆಸ್ ನಾಯಕರ ಬೇಡಿಕೆ. ಮಿತ್ರ ಪಕ್ಷಗಳ ಜತೆಗೆ ರಗಳೆ ಮಾಡಿಕೊಳ್ಳಲು ಹೈಕಮಾಂಡ್‌ಗೆ ಇಷ್ಟವಿಲ್ಲ

ಉತ್ತರ ಪ್ರದೇಶ: ಎಸ್‌ಪಿ 'ಏಕಪಕ್ಷೀಯ' ತೀರ್ಮಾನ

- ರಾಜ್ಯದಲ್ಲಿ 2019ರಲ್ಲಿ ಕಾಂಗ್ರೆಸ್ 67 ಕ್ಷೇತ್ರಗಳಲ್ಲಿ ಸ್ಪರ್ಧೆ ಮಾಡಿತ್ತು. ಈ ಸಲ 17 ಕ್ಷೇತ್ರಗಳಲ್ಲಿ ಸ್ಪರ್ಧಿಸುತ್ತಿದೆ. ಸಮಾಜವಾದಿ ಪಕ್ಷವು (ಎಸ್‌ಪಿ) ಏಕಪಕ್ಷೀಯವಾಗಿ 17 ಕ್ಷೇತ್ರಗಳನ್ನು ಬಿಟ್ಟುಕೊಡುವುದಾಗಿ ಪ್ರಕಟಿಸಿತು. ಕಾಂಗ್ರೆಸ್ ನಾಯಕರು ಇದಕ್ಕೆ ತಕರಾರು ಎತ್ತಲಿಲ್ಲ.
- ಕೈ ಪಾಳಯಕ್ಕೆ ಆರರಿಂದ ಎಂಟು ಕ್ಷೇತ್ರಗಳನ್ನು ನೀಡುವುದಾಗಿ ಎಸ್‌ಪಿ ಷರತ್ತು ಒಡ್ಡಿತ್ತು. ಬಳಿಕ 11 ಕ್ಷೇತ್ರಗಳನ್ನು ನೀಡುವುದಾಗಿ ಹೇಳಿತು. ಕನಿಷ್ಠ 25 ಸ್ಥಾನಗಳನ್ನು ಬಿಟ್ಟುಕೊಡಬೇಕು ಎಂದು ರಾಜ್ಯ ಕಾಂಗ್ರೆಸ್ ನಾಯಕರು ಪಟ್ಟು ಹಿಡಿದರು. ನಂತರ 17 ಕ್ಷೇತ್ರಗಳಿಗೆ ಏರಿಸಿತು. ಈ ಪ್ರಸ್ತಾವಕ್ಕೆ ಒಪ್ಪದಿದ್ದರೆ 'ಭಾರತ್ ಜೋಡೋ ನ್ಯಾಯ ಯಾತ್ರೆ'ಯಲ್ಲಿ ಭಾಗಿಯಾಗುವುದಿಲ್ಲ ಎಂದು ಎಸ್‌ಪಿ ನಾಯಕರು ಬೆದರಿಕೆ ಒಡ್ಡಿದರು. ಕಾಂಗ್ರೆಸ್ ಮತ್ತೆ ತಕರಾರು ಎತ್ತಲಿಲ್ಲ

ಪಶ್ಚಿಮ ಬಂಗಾಳ: 'ಮಮತೆ' ತೋರದ ಟಿಎಂಸಿ

- ಟಿಎಂಸಿ 'ಇಂಡಿಯಾ' ಮೈತ್ರಿಕೂಟದ ಪ್ರಮುಖ ಪಕ್ಷ. ಆದರೆ, ಆ ಪಕ್ಷವು ಏಕಾಂಗಿಯಾಗಿ ಸ್ಪರ್ಧಿಸುತ್ತಿದೆ
- ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್ ಕಳೆದ ಸಲ ಗೆದ್ದಿರುವ ಎರಡು ಕ್ಷೇತ್ರಗಳನ್ನು ನೀಡುವುದಾಗಿ ಟಿಎಂಸಿ ಹೇಳಿತ್ತು. ಪಕ್ಷಕ್ಕೆ ಕನಿಷ್ಠ 10 ಕ್ಷೇತ್ರಗಳನ್ನು ನೀಡಬೇಕು ಎಂದು ರಾಜ್ಯ ಕಾಂಗ್ರೆಸ್ ನಾಯಕರು ಹಟ ಹಿಡಿದರು. ಇದಕ್ಕೆ ಟಿಎಂಸಿ ಒಪ್ಪಲಿಲ್ಲ. ರಾಜ್ಯದಲ್ಲಿ ಏಕಾಂಗಿಯಾಗಿ ಸ್ಪರ್ಧಿಸಲಿದೆ ಎಂದು ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಪ್ರಕಟಿಸಿದರು. ಕೆಲವು 'ಕೈ' ನಾಯಕರು ಕಾಡಿ ಬೇಡಿದರೂ ಅವರು ನಿಲುವು ಬದಲಿಸಲಿಲ್ಲ

ಮತದಾನ ಜಾಗೃತಿ

ಮತದಾನದ ಬಗ್ಗೆ ಜಾಗೃತಿ ಮೂಡಿಸಲು ರಾಜಸ್ಥಾನದ ಬೀಕಾನೇರ್‌ನಲ್ಲಿ ಸ್ಥಾಪಿಸಿದ್ದ ಸೆಲ್ಫಿ ಪಾಯಿಂಟ್‌ನಲ್ಲಿ ಕಲಾವಿದರು ಗುರುವಾರ ಫೋಟೊ ತೆಗೆಸಿಕೊಂಡರು -ಪಿಟಿಐ ಚಿತ್ರ

ಪಶ್ಚಿಮ ಬಂಗಾಳದ ಕೂಚ್ ಬಿಹಾರ್‌ನಲ್ಲಿ ಪ್ರಧಾನಿ, ಮಮತಾ ಪ್ರಚಾರ

'ಪೌರತ್ವ ನೀಡುವುದು ಮೋದಿ ಗ್ಯಾರಂಟಿ'

ಕೂಚ್ ಬಿಹಾರ್ (ಪಿಟಿಐ): ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ವಿಚಾರದಲ್ಲಿ ಸುಳ್ಳು ಹಬ್ಬಿಸುತ್ತಿರುವ ವಿರೋಧ ಪಕ್ಷಗಳ ವಿರುದ್ಧ ಹರಿಹಾಯ್ದಿರುವ ಪ್ರಧಾನಿ ನರೇಂದ್ರ ಮೋದಿ, 'ಭಾರತ ಮಾತೆಯ ಮೇಲೆ ನಂಬಿಕೆ ಇರಿಸಿದವರಿಗೆ ಪೌರತ್ವ ನೀಡುವುದು ಮೋದಿ ಕಿ ಗ್ಯಾರಂಟಿ' ಎಂದು ಒತ್ತಿ ಹೇಳಿದರು.

ಪಶ್ಚಿಮ ಬಂಗಾಳದ ಕೂಚ್ ಬಿಹಾರ್‌ನಲ್ಲಿ ಗುರುವಾರ ಚುನಾವಣಾ ರ‍್ಯಾಲಿಯನ್ನು ದ್ದೇಶಿಸಿ ಮಾತನಾಡಿದ ಅವರು, 'ದೌರ್ಜನ್ಯಕ್ಕೆ ಒಳಗಾದ ಸಮುದಾಯಗಳನ್ನು ಅವರು (ಇಂಡಿಯಾ ಒಕ್ಕೂಟ) ಕಡೆಗಣಿಸಿದ್ದಾರೆ. ನಾವು ತಂದಿರುವ ಸಿಎಎ ವಿರುದ್ಧ ಅವರು ಸುಳ್ಳು ಹರಡುತ್ತಿದ್ದಾರೆ' ಎಂದು ದೂರಿದರು.

ಸಂದೇಶ್‌ಖಾಲಿ ಘಟನೆಯನ್ನು ಉಲ್ಲೇಖಿಸಿದ ಪ್ರಧಾನಿ, 'ಸಂದೇಶ್‌ಖಾಲಿ ಪ್ರಕರಣದ ತಪ್ಪಿತಸ್ಥರು ತಮ್ಮ ಜೀವನದ ಇನ್ನುಳಿದ ಅವಧಿಯನ್ನು ಜೈಲಿನಲ್ಲಿ ಕಳೆಯಲಿದ್ದಾರೆ' ಎಂದರು.

'ಬಂಗಾಳದಲ್ಲಿ ಮಹಿಳೆಯರು ಎದುರಿಸುತ್ತಿರುವ ದೌರ್ಜನ್ಯವನ್ನು ಕೊನೆಗಾಣಿಸಲು ಬಿಜೆಪಿಯಿಂದ ಮಾತ್ರ ಸಾಧ್ಯ. ಸಂದೇಶ್‌ಖಾಲಿ ಘಟನೆಯ ಹಿಂದಿರುವವರನ್ನು ರಕ್ಷಿಸಲು ಟಿಎಂಸಿ ಹೇಗೆ ಪ್ರಯತ್ನಿಸಿದೆ ಎಂಬುದನ್ನು ಇಡೀ ದೇಶವೇ ನೋಡಿದೆ. ಸಂದೇಶ್‌ಖಾಲಿ ಮಹಿಳೆಯರಿಗೆ ಇಂತಹ ಸ್ಥಿತಿ ಎದುರಾಗಲು ಟಿಎಂಸಿಯ ದುರಾಡಳಿತವೇ ಕಾರಣ' ಎಂದು ಟೀಕಿಸಿದರು.

'ಭ್ರಷ್ಟರಿಗೆ ಶಿಕ್ಷೆಯಾಗುವುದನ್ನು ನಾನು ಖಾತರಿಪಡಿಸುತ್ತೇನೆ. ಬಡವರಿಗೆ ನ್ಯಾಯ ಸಿಗಬೇಕು. ಮುಂದಿನ ಐದು ವರ್ಷಗಳಲ್ಲಿ ಭ್ರಷ್ಟರ ವಿರುದ್ಧ ಇನ್ನಷ್ಟು ಕಠಿಣ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು' ಎಂದು ಎಚ್ಚರಿಕೆ ನೀಡಿದರು.

'ವಿಷಕಾರಿ ಹಾವನ್ನು ನಂಬಬಹುದು; ಬಿಜೆಪಿಯನ್ನಲ್ಲ'

ಕೂಚ್ ಬಿಹಾರ್/ ಮಾಲ್ ಬಜಾರ್: ಬಿಜೆಪಿಯು ಚುನಾವಣಾ ನೀತಿ ಸಂಹಿತೆಯನ್ನು ಉಲ್ಲಂಘಿಸುತ್ತಿದೆ ಎಂದು ಆರೋಪಿಸಿರುವ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, 'ವಿಷಕಾರಿ ಹಾವನ್ನಾದರೂ ನಂಬಬಹುದು; ಬಿಜೆಪಿಯನ್ನಲ್ಲ' ಎಂದು ಕಿಡಿಕಾರಿದರು.

ಕೂಚ್ ಬಿಹಾರ್‌ನಲ್ಲಿ ಚುನಾವಣಾ ಪ್ರಚಾರ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, 'ಆವಾಸ್ ಯೋಜನೆಗೆ ಹೆಸರು ನೋಂದಾಯಿಸುವಂತೆ ಬಿಜೆಪಿ ಹೇಳುತ್ತಿದೆ. ಹೆಸರನ್ನು ಮತ್ತೊಮ್ಮೆ ನೋಂದಾಯಿಸುವುದು ಏಕೆ? ನೀವು ಹೆಸರು ನೋಂದಾಯಿಸಿದರೆ ಮತ್ತೆ ಕೈಬಿಡುತ್ತಾರೆ. ಬಿಜೆಪಿಯವರನ್ನು ನಂಬಬೇಡಿ. ಅವರು ದೇಶವನ್ನು ನಾಶಮಾಡಲು ಹೊರಟಿದ್ದಾರೆ' ಎಂದು ವಾಗ್ದಾಳಿ ನಡೆಸಿದರು.

ಬಿಜೆಪಿ ಸರ್ಕಾರವು ಕೇಂದ್ರದ ಸಂಸ್ಥೆಗಳ ಮೂಲಕ ಹಾಕುತ್ತಿರುವ ಬೆದರಿಕೆಗೆ ಟಿಎಂಸಿ ಬಗ್ಗುವುದಿಲ್ಲ ಎಂಬುದನ್ನು ಪುನರುಚ್ಚರಿಸಿದ ಮಮತಾ, 'ಗಡಿ ಭದ್ರತಾ ಪಡೆಯವರು ಸ್ಥಳೀಯರ ಮೇಲೆ ದಬ್ಬಾಳಿಕೆ ನಡೆಸಿದರೆ ಪೊಲೀಸರಿಗೆ ದೂರು ಕೊಡಿ' ಎಂದು ಮಹಿಳೆಯರಿಗೆ ಸೂಚಿಸಿದರು.

'ಹಲವು ಪ್ರಕರಣಗಳನ್ನು ಎದುರಿಸುತ್ತಿರುವ ಒಬ್ಬ ವ್ಯಕ್ತಿಯನ್ನು ಕೇಂದ್ರ ಗೃಹ ಖಾತೆ ರಾಜ್ಯ ಸಚಿವರನ್ನಾಗಿ ಮಾಡಿರುವುದು ನಾಚಿಕೆಗೇಡಿನ ಸಂಗತಿ' ಎಂದು ಕೂಚ್ ಬಿಹಾರ್ ಕ್ಷೇತ್ರದಿಂದ ಪುನರಾಯ್ಕೆ ಬಯಸಿರುವ ಬಿಜೆಪಿ ಅಭ್ಯರ್ಥಿ ನಿಶಿತ್ ಪ್ರಮಾಣಿಕ್ ಅವರ ಹೆಸರು ಹೇಳದೆಯೇ ಟೀಕಿಸಿದರು. 'ನಮ್ಮ ಪಕ್ಷದಿಂದ ಉಚ್ಚಾಟನೆಯಾಗಿರುವ ವ್ಯಕ್ತಿ, ಈಗ ಬಿಜೆಪಿಯವರಿಗೆ ಆಸ್ತಿ' ಎಂದು ವ್ಯಂಗ್ಯವಾಡಿದರು.

ಆದೇಶಕ್ಕೆ ಬದ್ಧರಾಗಿ: ಎನ್‌ಸಿಪಿ ಬಣಗಳಿಗೆ 'ಸುಪ್ರೀಂ' ಸೂಚನೆ

ನವದೆಹಲಿ (ಪಿಟಿಐ): ಚುನಾವಣಾ ಪ್ರಚಾರ ಸಾಮಗ್ರಿಗಳ ಮೇಲೆ ನಮೂದಿಸಲಾಗುವ ಪಕ್ಷದ ಚಿಹ್ನೆ, ಹೆಸರು ಮತ್ತು ಘೋಷವಾಕ್ಯದ ವಿಚಾರದಲ್ಲಿ ತಾನು ನೀಡಿರುವ ನಿರ್ದೇಶನಗಳಿಗೆ ಬದ್ಧರಾಗಿರುವಂತೆ ರಾಷ್ಟ್ರೀಯವಾದಿ ಕಾಂಗ್ರೆಸ್ ಪಕ್ಷದ (ಎನ್‌ಸಿಪಿ) ಎರಡೂ ಬಣಗಳಿಗೆ ಸುಪ್ರೀಂ ಕೋರ್ಟ್ ಗುರವಾರ ಹೇಳಿದೆ.

ಮಾರ್ಚ್ 19ರಂದು ಸುಪ್ರೀಂ ಕೋರ್ಟ್ ಹೊರಡಿಸಿದ್ದ ಆದೇಶವನ್ನು ಪಾಲಿಸಿಲ್ಲ ಎಂದು ಆರೋಪಿಸಿ ಉಭಯ ಬಣಗಳು ಪರಸ್ಪರರ ವಿರುದ್ಧ ಅರ್ಜಿ ಸಲ್ಲಿಸಿದ್ದವು. ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಕೆ.ವಿ. ವಿಶ್ವನಾಥನ್ ಅವರಿದ್ದ ನ್ಯಾಯಪೀಠವು ಅರ್ಜಿಗಳ ವಿಚಾರಣೆ ನಡೆಸಿತು.

ಚುನಾವಣಾ ಸಮಯದಲ್ಲಿ ಉಭಯ ಬಣಗಳ ನಾಯಕರು ಕೋರ್ಟ್ ಹೊರಗಡೆ ಇರಬೇಕೇ ಹೊರತು ಕೋರ್ಟ್ ಒಳಗೆ ಅಲ್ಲ ಎಂದು ನ್ಯಾಯಪೀಠ ಹೇಳಿತು.

ಮಾರ್ಚ್ 19ರಂದು ನಿರ್ದೇಶನ ನೀಡಿದ್ದ ಸುಪ್ರೀಂ ಕೋರ್ಟ್, 'ರಾಷ್ಟ್ರೀಯವಾದಿ ಕಾಂಗ್ರೆಸ್ ಪಾರ್ಟಿ– ಶರದ್‌ಚಂದ್ರ ಪವಾರ್' ಎಂಬ ಹೆಸರು ಮತ್ತು 'ತುತ್ತೂರಿ ಊದುತ್ತಿರುವ ಪುರುಷ'ನ ಚಿಹ್ನೆಯನ್ನು ಮಾತ್ರ ಚುನಾವಣಾ ಪ್ರಚಾರದಲ್ಲಿ ಬಳಸಬೇಕು ಎಂದು ಕಾರ್ಯಕರ್ತರಿಗೆ ತಿಳಿಸಿಕೊಡಬೇಕು ಎಂದು ಶರದ್ ಬಣಕ್ಕೆ ಹೇಳಿತ್ತು. ಇದೇ ವೇಳೆ, ಗಡಿಯಾರ ಚಿಹ್ನೆಯನ್ನು ತಮ್ಮ ಪಕ್ಷಕ್ಕೆ ನೀಡಿರುವ ಕುರಿತು ಸುದ್ದಿಪತ್ರಿಕೆಗಳಲ್ಲಿ ಎದ್ದುಕಾಣುವ ರೀತಿ ಜಾಹೀರಾತು ಪ್ರಕಟಿಸಬೇಕು. ಅದರೊಟ್ಟಿಗೆ ಇದೇ ಚಿಹ್ನೆ ಎನ್ನುವುದರ ಕುರಿತ ಒಕ್ಕಣೆಯೂ ದೊಡ್ಡದಾಗಿ ಕಾಣಬೇಕು ಎಂದು ಅಜಿತ್ ಪವಾರ್ ಬಣಕ್ಕೆ ಹೇಳಿತ್ತು.

ಅಮೇಠಿಯಿಂದ ಸ್ಪರ್ಧೆ: ವಾದ್ರಾ ಇಂಗಿತ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರ ಪತಿ, ಉದ್ಯಮಿ ರಾಬರ್ಟ್ ವಾದ್ರಾ ಅವರು ಅಮೇಠಿ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸುವ ಇಂಗಿತ ವ್ಯಕ್ತಪಡಿಸಿದ್ದಾರೆ.

ಅಮೇಠಿಯ ಜನರು ಹಾಲಿ ಸಂಸದೆ ಸ್ಮೃತಿ ಇರಾನಿ ಅವರ ಕಾರ್ಯವೈಖರಿಯಿಂದ ಬೇಸತ್ತಿದ್ದು, ಗಾಂಧಿ ಕುಟುಂಬದ ಸದಸ್ಯರೊಬ್ಬರು ಸ್ಪರ್ಧಿಸುವುದನ್ನು ಬಯಸುತ್ತಿದ್ದಾರೆ ಎಂದು ಅವರು ಗುರುವಾರ ತಿಳಿಸಿದ್ದಾರೆ.

'ನಾನು ಸಂಸದನಾಗಲು ನಿರ್ಧರಿಸಿದರೆ, ಅಮೇಠಿ ಕ್ಷೇತ್ರವನ್ನು ಪ್ರತಿನಿಧಿಸಬೇಕೆಂದು ಅಲ್ಲಿಯ ಜನರು ನಿರೀಕ್ಷಿಸುತ್ತಾರೆ. ರಾಯಬರೇಲಿ, ಅಮೇಠಿ ಮತ್ತು ಸುಲ್ತಾನ್‌ಪುರದ ಅಭಿವೃದ್ಧಿಗಾಗಿ ಗಾಂಧಿ ಕುಟುಂಬ ಹಲವು ವರ್ಷಗಳಿಂದ ಕಠಿಣವಾಗಿ ದುಡಿದಿದೆ. ಹಾಲಿ ಸಂಸದರಿಂದಾಗಿ ಅಮೇಠಿಯ ಜನರು ತೊಂದರೆಗೆ ಸಿಲುಕಿದ್ದಾರೆ. ಅವರನ್ನು ಆಯ್ಕೆ ಮಾಡಿ ತಪ್ಪು ಮಾಡಿದ್ದೇವೆ ಎಂದು ಮತದಾರರ ಭಾವಿಸಿದ್ದಾರೆ. ನಾನು ಅಲ್ಲಿಂದ ಸ್ಪರ್ಧಿಸಬೇಕು ಎಂದು ಬಯಸಿದ್ದಾರೆ' ಎಂದು ಹೇಳಿದ್ದಾರೆ.

ರಾಹುಲ್ ಗಾಂಧಿ ಬಳಿ ₹ 20 ಕೋಟಿ ಆಸ್ತಿ

ವಯನಾಡ್ (ಪಿಟಿಐ): ಕೇರಳದ ವಯನಾಡ್ ಲೋಕಸಭಾ ಕ್ಷೇತ್ರದ ಅಭ್ಯರ್ಥಿ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಒಟ್ಟು ₹ 20 ಕೋಟಿ ಮೌಲ್ಯದ ಆಸ್ತಿ ಹೊಂದಿದ್ದಾರೆ.

ಬುಧವಾರ ನಾಮಪತ್ರ ಸಲ್ಲಿಸಿದ್ದ ರಾಹುಲ್, 9.24 ಕೋಟಿ ಮೌಲ್ಯದ ಚರಾಸ್ತಿ ಮತ್ತು 9.04 ಕೋಟಿ ಮೊತ್ತದ ಸ್ಥಿರಾಸ್ತಿ ಇರುವುದಾಗಿ ಪ್ರಮಾಣಪತ್ರದಲ್ಲಿ ಘೋಷಿಸಿಕೊಂಡಿದ್ದಾರೆ. ₹ 2.10 ಕೋಟಿ ಮೌಲ್ಯದ ಪಿತ್ರಾರ್ಜಿತ ಆಸ್ತಿ, ₹ 55 ಸಾವಿರ ನಗದು ಮತ್ತು ₹ 49.79 ಲಕ್ಷ ಸಾಲ ಇರುವುದಾಗಿ ಹೇಳಿಕೊಂಡಿದ್ದಾರೆ. 2019ರ ಲೋಕಸಭಾ ಚುನಾವಣೆ ವೇಳೆ ರಾಹುಲ್ ಅವರ ಆಸ್ತಿ ₹ 15.88 ಕೋಟಿಯಷ್ಟಿದ್ದರೆ, 2014ರ ಚುನಾವಣೆ ಸಮಯದಲ್ಲಿ ₹ 9.4 ಕೋಟಿಯಷ್ಟಿತ್ತು.

ದುಮ್ಕಾದಿಂದ ಲೋಕಸಭೆಗೆ ಹೇಮಂತ್ ಸ್ಪರ್ಧೆ ಇಲ್ಲ

ರಾಂಚಿ (ಪಿಟಿಐ): ಜೈಲಿನಲ್ಲಿರುವ, ಜಾರ್ಖಂಡ್‌ನ ಮಾಜಿ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರು ಲೋಕಸಭೆ ಚುನಾವಣೆಗೆ ಸ್ಪರ್ಧಿಸಲಿದ್ದಾರೆ ಎನ್ನಲಾಗಿದ್ದ ದುಮ್ಕಾ ಲೋಕಸಭಾ ಕ್ಷೇತ್ರಕ್ಕೆ ಬೇರೊಬ್ಬ ಶಾಸಕರನ್ನು ಅಭ್ಯರ್ಥಿಯಾಗಿ ಘೋಷಿಸಲಾಗಿದೆ.

ಶಿಕಾರಿಪಾಡಾದ ಶಾಸಕರಾಗಿರುವ ನಳಿನ್ ಸೊರೇನ್ ಅವರನ್ನು ದುಮ್ಕಾ ಕ್ಷೇತ್ರದ ಲೋಕಸಭೆ ಅಭ್ಯರ್ಥಿಯನ್ನಾಗಿ ಜಾರ್ಖಂಡ್ ಮುಕ್ತಿ ಮೋರ್ಚಾ (ಜೆಎಂಎಂ) ನಾಮ ನಿರ್ದೇಶನ ಮಾಡಿದೆ. ಹೀಗಾಗಿ ನಿರೀಕ್ಷೆಯಂತೆ ಹೇಮಂತ್ ದುಮ್ಕಾ ಕ್ಷೇತ್ರದಿಂದ ಸ್ಪರ್ಧಿಸುವುದಿಲ್ಲ ಎಂಬುದು ಸ್ಪಷ್ಟವಾಗಿದೆ.

'ಕರಾಳ' ಕಾನೂನು ರದ್ದು: ಸಿಪಿಎಂ ಭರವಸೆ

ನವದೆಹಲಿ (ಪಿಟಿಐ): ಕಾನೂನುಬಾಹಿರ ಚಟುವಟಿಕೆಗಳ ನಿಗ್ರಹ ಕಾಯ್ದೆ (ಯುಎಪಿಎ), ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಂತಹ (ಪಿಎಂಎಲ್‌ಎ) ಕಠಿಣ ಕಾನೂನುಗಳನ್ನು ರದ್ದು ಗೊಳಿಸುವ ಭರವಸೆ ನೀಡಿರುವ ಚುನಾವಣಾ ಪ್ರಣಾಳಿಕೆಯನ್ನು ಸಿಪಿಎಂ ಗುರುವಾರ ಬಿಡುಗಡೆ ಮಾಡಿದೆ.

ಬಿಜೆಪಿಯನ್ನು ಸೋಲಿಸಿ ಎಡರಂಗವನ್ನು ಬಲಪಡಿಸಬೇಕು ಮತ್ತು ಕೇಂದ್ರದಲ್ಲಿ ಪರ್ಯಾಯ ಜಾತ್ಯತೀತ ಸರ್ಕಾರ ಆಡಳಿತಕ್ಕೆ ಬರುವುದನ್ನು ಖಾತರಿಪಡಿಸಿಕೊಳ್ಳಿ ಎಂದು ಸಿಪಿಎಂ ಜನರಿಗೆ ಕರೆ ನೀಡಿದೆ. ನರೇಗಾ ಯೋಜನೆಯನ್ನು ಸದೃಢಗೊಳಿಸುವ ಮತ್ತು ಪೌರತ್ವ ನೋಂದಣಿ ಕಾಯ್ದೆಯನ್ನು (ಸಿಎಎ) ರದ್ದುಗೊಳಿಸುವ ಭರವಸೆಯನ್ನೂ ಪ್ರಣಾಳಿಕೆಯಲ್ಲಿ ನೀಡಲಾಗಿದೆ.

ಐಯುಎಂಎಲ್ ಬಾವುಟಕ್ಕಿಲ್ಲ ಸ್ಥಾನ: ಪಿಣರಾಯಿ ಟೀಕೆ

ತಿರುವನಂತಪುರ (ಪಿಟಿಐ): 'ವಯನಾಡ್ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ರಾಹುಲ್ ಗಾಂಧಿ ಅವರು ರೋಡ್ ಶೋ ನಡೆಸುವ ವೇಳೆ ಮಿತ್ರ ಪಕ್ಷವಾದ ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್‌ನ (ಐಯುಎಂಎಲ್) ಬಾವುಟಗಳನ್ನು ಪ್ರದರ್ಶಿಸದಿರುವುದಕ್ಕೆ ಬಿಜೆಪಿಯ ಭಯ ಕಾರಣ' ಎಂದು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಗುರುವಾರ ಹೇಳಿದರು.

ಅವರದೇ ಪಕ್ಷದ ಬಾವುಟವನ್ನು ಸಾರ್ವಜನಿಕವಾಗಿ ಪ್ರದರ್ಶಿಸಲು ರಾಹುಲ್ ಅವರಿಗೆ ಧೈರ್ಯವಿಲ್ಲ ಎಂದೂ ಅವರು ಟೀಕಿಸಿದರು.

ಕಾಂಗ್ರೆಸ್ ನಾಯಕತ್ವಕ್ಕೆ ದುರಹಂಕಾರ: ನಿರುಪಮ್

ಮುಂಬೈ (ಪಿಟಿಐ): 'ಕಾಂಗ್ರೆಸ್ ನಾಯಕತ್ವಕ್ಕೆ ಅಪಾರ ದುರಹಂಕಾರ ಇದೆ' ಎಂದು ಪಕ್ಷದಿಂದ ಉಚ್ಚಾಟನೆಗೊಂಡಿರುವ ಮಾಜಿ ಸಂಸದ ಸಂಜಯ್ ನಿರುಪಮ್ ಟೀಕಿಸಿದ್ದಾರೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ನೆಹರೂ ಅವರ ಜಾತ್ಯತೀತತೆಯ ಅವಧಿ ಈಗ ಮುಗಿದಿದೆ. ಕಾಂಗ್ರೆಸ್‌ಗೆ ಯಾವುದೇ ಭವಿಷ್ಯವಿಲ್ಲ' ಎಂದರು.

'ಕಾಂಗ್ರೆಸ್‌ನಲ್ಲಿ ಈಗ ಐದು ಶಕ್ತಿ ಕೇಂದ್ರಗಳಿವೆ. ಗಾಂಧಿ ಕುಟುಂಬಕ್ಕೆ ಸೇರಿದ ಮೂವರು, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರೇ ಆ ಶಕ್ತಿಕೇಂದ್ರಗಳು' ಎಂದರು.

ನಿರುಪಮ್ ಅವರನ್ನು ಪಕ್ಷದಿಂದ ಆರು ವರ್ಷಗಳ ಅವಧಿಗೆ ಬುಧವಾರ ಉಚ್ಚಾಟಿಸಲಾಗಿದೆ.

ಚುಟುಕು

ಕೇರಳ: ಎಸ್‌ಡಿಪಿಐ ಬೆಂಬಲ ತಿರಸ್ಕರಿಸಿದ ಕಾಂಗ್ರೆಸ್

ತಿರುವನಂತಪುರ (ಪಿಟಿಐ): ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿಪಿಐ) ಕೇರಳದಲ್ಲಿ ತನಗೆ ನೀಡಿರುವ ಬೆಂಬಲವನ್ನು ಕಾಂಗ್ರೆಸ್ ತಿರಸ್ಕರಿಸಿದೆ.

'ಅಲ್ಪಸಂಖ್ಯಾತ ಮತ್ತು ಬಹುಸಂಖ್ಯಾತ ಕೋಮುವಾದವನ್ನು ನಾವು ವಿರೋಧಿಸುತ್ತೇವೆ. ಲೋಕಸಭಾ ಚುನಾವಣೆಯಲ್ಲಿ ಎಸ್‌ಡಿಪಿಐ, ಯುಡಿಎಫ್‌ಗೆ ನೀಡಿರುವ ಬೆಂಬಲವನ್ನು ನಾವು ಇದೇ ದೃಷ್ಟಿಕೋನದಿಂದ ನೋಡುತ್ತೇವೆ. ಪ್ರತಿಯೊಬ್ಬರೂ ತಮ್ಮ ಇಚ್ಛೆಯಂತೆ ಮತ ಚಲಾಯಿಸಬಹುದು. ಎಲ್ಲರೂ ಯುಡಿಎಫ್‌ಗೆ ಮತ ಹಾಕಬೇಕೆಂಬುದು ನಮ್ಮ ಬಯಕೆ. ಆದರೆ ಸಂಘಟನೆಯ (ಎಸ್‌ಡಿಪಿಐ) ವಿಷಯದಲ್ಲಿ ನಮ್ಮ ನಿಲುವು ಇದು' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ವಿ.ಡಿ.ಸತೀಶನ್ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಈ ಬಗ್ಗೆ ಹೆಚ್ಚಿನ ವಿವರ ನೀಡಲು ಅವರು ನಿರಾಕರಿಸಿದರು. ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಅನ್ನು ಬೆಂಬಲಿಸುತ್ತೇವೆ ಎಂದು ನಿಷೇಧಿತ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ ರಾಜಕೀಯ ಸಂಘಟನೆಯಾಗಿರುವ ಎಸ್‌ಡಿಪಿಐ, ಸೋಮವಾರ ಹೇಳಿತ್ತು. ಎಸ್‌ಡಿಪಿಐ ಬೆಂಬಲ ಸೂಚಿಸಿದ್ದರ ಬಗ್ಗೆ ರಾಹುಲ್ ಗಾಂಧಿ ತಮ್ಮ ನಿಲುವು ತಿಳಿಸಬೇಕು ಎಂದು ಬಿಜೆಪಿ ಒತ್ತಾಯಿಸಿತ್ತು.

ಜಿಗಿ–ನೆಗೆದಾಟ

ಕಾಂಗ್ರೆಸ್ ವಕ್ತಾರ ಗೌರವ್ ಬಿಜೆಪಿಗೆ

ನವದೆಹಲಿ (ಪಿಟಿಐ): ಕಾಂಗ್ರೆಸ್ ವಕ್ತಾರರ 'ಪಕ್ಷಾಂತರ' ಸರಣಿ ಮುಂದುವರಿದಿದ್ದು, ಗೌರವ್ ವಲ್ಲಭ್ ಅವರು ಗುರುವಾರ ಬಿಜೆಪಿ ಸೇರಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಬರೆದ ರಾಜೀನಾಮೆ ಪತ್ರವನ್ನು, ಗೌರವ್ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದರು. ಅದರ ಬೆನ್ನಲ್ಲೇ ಬಿಜೆಪಿ ಸೇರ್ಪಡೆಗೊಂಡರು.

'ಸನಾತನ ವಿರೋಧಿ ಘೋಷಣೆಗಳನ್ನು ಮೊಳಗಿಸಲು ನನ್ನಿಂದ ಸಾಧ್ಯವಿಲ್ಲ. ಅದೇ ರೀತಿ, ಸಂಪತ್ತು ಸೃಷ್ಟಿಸುವವರನ್ನು ಪ್ರತಿ ದಿನವೂ ತೆಗಳಲು ಆಗದು. ಹೀಗಾಗಿ ಪಕ್ಷದ ಎಲ್ಲ ಹುದ್ದೆಗಳಿಗೆ ಹಾಗೂ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡುತ್ತೇನೆ' ಎಂದು ರಾಜೀನಾಮೆ ಪತ್ರದಲ್ಲಿ ಹೇಳಿದ್ದಾರೆ.

ಬಿಹಾರ ಕಾಂಗ್ರೆಸ್ ಘಟಕದ ಮಾಜಿ ಅಧ್ಯಕ್ಷ ಅನಿಲ್ ಶರ್ಮಾ ಮತ್ತು ಆರ್‌ಜೆಡಿ ಮುಖಂಡ ಉಪೇಂದ್ರ ಪ್ರಸಾದ್ ಅವರೂ ಗುರುವಾರ ನವದೆಹಲಿಯಲ್ಲಿ ನಡೆದ ಸಮಾರಂಭದಲ್ಲಿ ಬಿಜೆಪಿ ಸೇರಿದರು.

ಎಂಥಾ ಮಾತು!

ಭಾರತವು ಸೂಪರ್ ಪವರ್ ಆಗಲು ನರೇಂದ್ರ ಮೋದಿ ಅವರು ಮತ್ತೊಮ್ಮೆ ಪ್ರಧಾನಿಯಾಗುವ ಅಗತ್ಯವಿದೆ. ಅವರು ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಿಸುವ ಧೈರ್ಯ ತೋರಿದ್ದಾರೆ. ವಿರೋಧ ಪಕ್ಷಗಳ 'ಇಂಡಿಯಾ' ಒಕ್ಕೂಟವು ಪ್ರಧಾನಿ ಅಭ್ಯರ್ಥಿಯನ್ನು ಘೋಷಿಸಲು ವಿಫಲವಾಗಿದೆ ಮತ್ತು ಅದಕ್ಕೆ ಯಾವುದೇ ಕಾರ್ಯಸೂಚಿ ಇಲ್ಲ. ಮೋದಿ ಅವರು ದೇಶದ ಅಭಿವೃದ್ಧಿಗಾಗಿ ಮಹತ್ವದ ನಿರ್ಧಾರಗಳನ್ನು ಕೈಗೊಳ್ಳುತ್ತಿದ್ದಾರೆ. ಆದರೆ, ವಿರೋಧ ಪಕ್ಷಗಳು ಭ್ರಷ್ಟಾಚಾರದಲ್ಲಿ ಮುಳುಗಿವೆ

ಏಕನಾಥ ಶಿಂದೆ, ಮಹಾರಾಷ್ಟ್ರ ಮುಖ್ಯಮಂತ್ರಿ

ಭ್ರಷ್ಟಾಚಾರ, ನಿರುದ್ಯೋಗ ಮತ್ತು ಹಣದುಬ್ಬರದಿಂದ ಬೇಸತ್ತಿರುವ ಜನರು ದೇಶದಲ್ಲಿ ಬದಲಾವಣೆ ಬಯಸಿದ್ದಾರೆ. ಕೇಂದ್ರ ಸರ್ಕಾರವು ಮಹಿಳೆಯರು ಮತ್ತು ರೈತರ ವಿರುದ್ಧವಾಗಿದ್ದು, ಕೇಂದ್ರದ ಬಿಜೆಪಿ ಆಡಳಿತವನ್ನು ಬದಲಾಯಿಸಲು ಜನರು ಇಚ್ಛಿಸಿದ್ದಾರೆ. ಬಾಂಬೆ ಐಐಟಿಯಂತಹ ಸಂಸ್ಥೆಗಳ ವಿದ್ಯಾರ್ಥಿಗಳನ್ನು ಉದ್ಯೋಗಕ್ಕೆ ನಿಯೋಜನೆ ಮಾಡಿಕೊಳ್ಳಲು ಕಂಪನಿಗಳು ಮುಂದೆ ಬರುತ್ತಿಲ್ಲ. ಉದ್ಯೋಗ ಸೃಷ್ಟಿಯ ಕುರಿತು ಬಿಜೆಪಿ ಸರ್ಕಾರಕ್ಕಿರುವ ನಿರ್ಲಕ್ಷ್ಯವನ್ನು ಇದು ಎತ್ತಿ ತೋರಿಸುತ್ತಿದೆ

ಸುಪ್ರಿಯಾ ಸುಳೆ, ಎನ್‌ಸಿಪಿ ಶರದ್ ಪವಾರ್ ಬಣದ ನಾಯಕಿ

ಕ್ಷೇತ್ರ ಮಹಾತ್ಮೆ

ಜನರಲ್ ವಿ.ಕೆ. ಸಿಂಗ್ ಅವರು ಎರಡು ಬಾರಿ ಗೆಲುವಿನ ನಗೆ ಬೀರಿದ್ದ ಉತ್ತರ ಪ್ರದೇಶದ ಗಾಜಿಯಾಬಾದ್ ಲೋಕಸಭಾ ಕೇತ್ರದಿಂದ ಬಿಜೆಪಿಯು ಈ ಬಾರಿ ರಾಜ್ಯ ಸಚಿವ ಅತುಲ್ ಗರ್ಗ್ ಅವರನ್ನು ಸ್ಪರ್ಧೆಗಿಳಿಸಿದೆ. ಗರ್ಗ್ ಅವರು ಗಾಜಿಯಾಬಾದ್ ವಿಧಾನಸಭಾ ಕ್ಷೇತ್ರದ ಶಾಸಕರಾಗಿದ್ದಾರೆ. ಸ್ಥಳೀಯವಾಗಿಯೂ ಪ್ರಭಾವ ಹೊಂದಿರುವ ಮುಖಂಡರಾಗಿರುವುದರಿಂದ ಗರ್ಗ್ ಅವರ ಗೆಲುವು ನಿಶ್ಚಿತ ಎಂಬ ವಿಶ್ವಾಸದಲ್ಲಿದೆ ಬಿಜೆಪಿ. ಅತುಲ್ ಅವರು ಗಾಜಿಯಾಬಾದ್‌ನ ಮೊದಲ ಮೇಯರ್ ದಿನೇಶ್‌ಚಂದ್ರ ಗರ್ಗ್ ಅವರ ಪುತ್ರ. ಈ ಕ್ಷೇತ್ರದಿಂದ 'ಇಂಡಿಯಾ' ಒಕ್ಕೂಟದ ಅಭ್ಯರ್ಥಿಯಾಗಿ ಕಾಂಗ್ರೆಸ್‌ನ ಡಾಲಿ ಶರ್ಮಾ ಅವರನ್ನು ಕಣಕ್ಕಿಳಿಸಲಾಗಿದೆ. ಇವರು ಕೂಡ ಸ್ಥಳೀಯರಾಗಿರುವುದರಿಂದ ಮತ್ತು ಸಮಾಜವಾದಿ ಪಕ್ಷದ (ಎಸ್‌ಪಿ) ಬೆಂಬಲವೂ ಇರುವುದರಿಂದ ಈ ಬಾರಿ ಡಾಲಿ ಅವರು ಗೆದ್ದೇ ಗೆಲ್ಲುತ್ತಾರೆಂಬ ವಿಶ್ವಾಸ ಕಾಂಗ್ರೆಸ್‌ನದ್ದು. 2019ರ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಜನರಲ್ ವಿ.ಕೆ. ಸಿಂಗ್ ಅವರು 5,01,500 ಮತಗಳ ಅಂತರದಿಂದ ಎಸ್‌ಪಿ ಅಭ್ಯರ್ಥಿ ಸುರೇಶ್ ಬನ್ಸಲ್ ಅವರನ್ನು ಸೋಲಿಸಿದ್ದರು. ಡಾಲಿ ಅವರನ್ನು ಕಳೆದ ಚುನಾಣೆಯಲ್ಲೂ ಕಾಂಗ್ರೆಸ್ ಕಣಕ್ಕಿಳಿಸಿತ್ತು. ಆದರೆ ಅವರು ಮೂರನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಳ್ಳಬೇಕಾಯಿತು. ಡಾಲಿ ಅವರು ಎಐಸಿಸಿ ಸದಸ್ಯೆಯೂ ಹೌದು. 2009ರಲ್ಲಿ ಬಿಜೆಪಿ ಮುಖಂಡ ರಾಜನಾಥ ಸಿಂಗ್ ಅವರು ಈ ಕ್ಷೇತ್ರವನ್ನು ಪ್ರತಿನಿಧಿಸಿದ್ದರು. ಬಳಿಕ ಅವರು ಲಖನೌ ಕ್ಷೇತ್ರಕ್ಕೆ ತಮ್ಮ ಸ್ಪರ್ಧಾ ಕಣವನ್ನು ಬದಲಿಸಿದ್ದರು.

ಮುಖಾಮುಖಿ

ಬಾಲೂರ್‌ಘಾಟ್ (ಪಶ್ಚಿಮ ಬಂಗಾಳ)

ಸುಕಾಂತಾ ಮಜುಂದಾರ್
(ಬಿಜೆಪಿ)

ಪಶ್ಚಿಮ ಬಂಗಾಳದ ದಕ್ಷಿಣ ದಿನಜ್‌ಪುರ ಜಿಲ್ಲೆಯ ಬಾಲೂರ್‌ಘಾಟ್ ಲೋಕಸಭಾ ಕ್ಷೇತ್ರವು ಬಿಜೆಪಿ ಮತ್ತು ಟಿಎಂಸಿಯ ಘಟಾನುಘಟಿ ನಾಯಕರ ನಡುವಿನ ಹಣಾಹಣಿಗೆ ಸಾಕ್ಷಿಯಾಗಲಿದೆ. ಬಿಜೆಪಿಯು ಈ ಬಾರಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸುಕಾಂತಾ ಮಜುಂದಾರ್ ಅವರನ್ನು ಕಣಕ್ಕಿಳಿಸಿದೆ. ಸುಕಾಂತಾ ಅವರು ಕಳೆದ ಚುನಾವಣೆಯಲ್ಲಿ ಈ ಕ್ಷೇತ್ರದಿಂದ ಸ್ಪರ್ಧಿಸಿ, 5,39,317 ಮತಗಳನ್ನು ಪಡೆದು ತೃಣಮೂಲ (ಟಿಎಂಸಿ) ಕಾಂಗ್ರೆಸ್‌ನ ಅರ್ಪಿತಾ ಘೋಷ್ ಅವರನ್ನು ಪರಾಭವಗೊಳಿಸಿದ್ದರು. ಸಂದೇಶ್‌ಖಾಲಿಯಲ್ಲಿ ಟಿಎಂಸಿ ಮುಖಂಡನ ಮೇಲೆ ದೌರ್ಜನ್ಯ ಆರೋಪ ಕೇಳಿ ಬಂದ ಬಳಿಕ ಜನರು ಟಿಎಂಸಿಯ ವಿರುದ್ಧ ತಿರುಗಿ ಬಿದ್ದಿದ್ದಾರೆ ಎಂದು ಬಿಜೆಪಿ ನಂಬಿದೆ. ಇದು ಈ ಬಾರಿಯ ಚುನಾವಣೆಯಲ್ಲಿ ತಮಗೂ ವರದಾನವಾಗಲಿದೆ ಎಂಬುದು ಸುಕಾಂತಾ ಅವರ ವಿಶ್ವಾಸ. 2009ಕ್ಕೂ ಮೊದಲು ಈ ಕ್ಷೇತ್ರವು ಆರ್‌ಎಸ್‌ಪಿಯ ಭದ್ರಕೋಟೆಯಾಗಿತ್ತು.

v/s

ವಿಪ್ಲವ್ ಮಿತ್ರಾ
(ತೃಣಮೂಲ ಕಾಂಗ್ರೆಸ್)

ಸುಕಾಂತಾ ಮಜುಂದಾರ್ ಅವರನ್ನು ಮಣಿಸಲೇಬೇಕೆಂದು ತೃಣಮೂಲ ಕಾಂಗ್ರೆಸ್, ಈ ಬಾರಿ ಪಕ್ಷದ ಪ್ರಮುಖ ನಾಯಕ ಹಾಗೂ ರಾಜ್ಯ ಸಚಿವ ವಿಪ್ಲವ್ ಮಿತ್ರಾ ಅವರನ್ನು ಅಖಾಡಕ್ಕಿಳಿಸಿದೆ. ಇವರು 2021ರ ವಿಧಾನಸಭಾ ಚುನಾವಣೆಯಲ್ಲಿ ಹರಿರಾಮಪುರದಿಂದ ಶಾಸಕರಾಗಿ ಆಯ್ಕೆಯಾಗಿದ್ದರು. ಪಶ್ಚಿಮ ಬಂಗಾಳಕ್ಕೆ ನೀಡಬೇಕಿರುವ ನರೇಗಾ ಅನುದಾನವನ್ನು ಕೇಂದ್ರ ಸರ್ಕಾರವು ತಡೆಹಿಡಿದಿರುವ ವಿಚಾರವನ್ನು ಪ್ರಮುಖ ಪ್ರಚಾರ ವಿಷಯವನ್ನಾಗಿಸಿ ಬಿಜೆಪಿ ಅಭ್ಯರ್ಥಿಯನ್ನು ಪರಾಭವಗೊಳಿಸಲು ವಿಪ್ಲವ್ ಅವರು ತಂತ್ರಗಾರಿಕೆ ಹೆಣೆದಿದ್ದಾರೆ. ಜೊತೆಗೆ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ನೇತೃತ್ವದ ಸರ್ಕಾರವು ರಾಜ್ಯದಲ್ಲಿ ಮಾಡಿರುವ ಅಭಿವೃದ್ಧಿ ಕಾರ್ಯಗಳು ಈ ಬಾರಿ ಚುನಾವಣೆಯ ಫಲಿತಾಂಶದಲ್ಲಿ ಪ್ರತಿಫಲಿಸಲಿದೆ ಎಂಬ ವಿಶ್ವಾಸವೂ ಇವರದ್ದಾಗಿದೆ. ಇವರು 2019ರಲ್ಲಿ ಟಿಎಂಸಿ ತೊರೆದು ಬಿಜೆಪಿಗೆ ಸೇರ್ಪಡೆಗೊಂಡಿದ್ದರು. 2020ರಲ್ಲಿ ಬಿಜೆಪಿ ತೊರೆದು ಮರಳಿ ಟಿಎಂಸಿಗೆ ಬಂದಿದ್ದರು.

ಸುಭಾಷಿತ

ನಿನ್ನೆ ನಾನು ಬುದ್ಧಿವಂತನಾಗಿದ್ದೆ, ಹಾಗಾಗಿ ಈ ಜಗತ್ತನ್ನು ಬದಲಾವಣೆ ಮಾಡಲು ಬಯಸಿದ್ದೆ. ಇಂದು ನಾನು ವಿವೇಕಿಯಾಗಿದ್ದೇನೆ, ಹಾಗಾಗಿ ನನ್ನಲ್ಲಿ ನಾನು ಬದಲಾವಣೆ ತಂದುಕೊಳ್ಳುತ್ತಿದ್ದೇನೆ. -ರೂಮಿ

ಕ್ಷಯರೋಗದ ವಿರುದ್ಧ ಸಮರ ಮೊನಚು ಕಳೆದುಕೊಳ್ಳದಿರಲಿ

ಭಾರತದಲ್ಲಿ ಕ್ಷಯರೋಗಕ್ಕೆ ಸಂಬಂಧಿಸಿದಂತೆ ಈಚೆಗೆ ಬಿಡುಗಡೆ ಮಾಡಲಾದ ವರದಿಯು ಈ ರೋಗದ ವಿರುದ್ಧ ದೇಶ ನಡೆಸಿರುವ ಹೋರಾಟದ ವಿಚಾರವಾಗಿ ಒಂದಿಷ್ಟು ಆಶಾದಾಯಕ ಚಿತ್ರಣವನ್ನು ನೀಡಿದೆ. ಹೀಗಿದ್ದರೂ ಕಳವಳಕ್ಕೆ ಕಾರಣ ಆಗುವ ಕೆಲವಷ್ಟು ಅಂಶಗಳು ಉಳಿದಿವೆ ಎಂಬುದನ್ನು ಅದು ತೋರಿಸಿಕೊಟ್ಟಿದೆ. ಕ್ಷಯರೋಗ ಪತ್ತೆಯಾಗಿರುವ ರೋಗಿಗಳ ಪೈಕಿ ಶೇಕಡ 95ರಷ್ಟು ಮಂದಿಗೆ 2023ರ ವೇಳೆಗೆ ಚಿಕಿತ್ಸೆ ಒದಗಿಸಬೇಕು ಎಂಬ ಗುರಿಯನ್ನು ದೇಶ ತಲುಪಿದೆ ಎಂಬುದನ್ನು ವರದಿಯು ಹೇಳಿದೆ. ಆದರೆ, ಕ್ಷಯರೋಗ ಪ್ರಕರಣಗಳು ದೇಶದಲ್ಲಿ ವರದಿಯಾಗುವುದೇ ಕಡಿಮೆ ಎಂಬ ಸಂಗತಿಯು ಚಿಂತೆಗೆ ಈಡುಮಾಡುವ ಒಂದು ವಿಚಾರ. ಇದು ಈ ರೋಗದ ವಿರುದ್ಧದ ಸಮರದಲ್ಲಿ ಒಂದು ಸಮಸ್ಯೆ. ಚಿಕಿತ್ಸೆಗೆ ಒಳಗಾಗದ ರೋಗಿಗಳು ತಮಗೂ ಸಮಸ್ಯೆ ತಂದುಕೊಳ್ಳುತ್ತಾರೆ, ಇತರರಿಗೂ ಈ ಸೋಂಕು ಹರಡಲು ಕಾರಣರಾಗುತ್ತಾರೆ. ಆದರೆ ದೇಶದಲ್ಲಿ ಕ್ಷಯರೋಗದ ಅಂದಾಜು ಪ್ರಕರಣಗಳ ಸಂಖ್ಯೆ ಹಾಗೂ ವಾಸ್ತವ ಪ್ರಕರಣಗಳ ಸಂಖ್ಯೆಯ ನಡುವಿನ ಅಂತರ ಕಡಿಮೆ ಆಗುತ್ತಿರುವುದು ಒಂದು ಆಶಾದಾಯಕ ಬೆಳವಣಿಗೆ. ಖಾಸಗಿ ವಲಯದ ಪಾಲುದಾರಿಕೆ, ಉತ್ತರಪ್ರದೇಶ ಮತ್ತು ಬಿಹಾರದಲ್ಲಿ ಸುಧಾರಣೆ ಕಂಡುಬಂದಿರುವುದು ಇದಕ್ಕೆ ಪ್ರಮುಖ ಕಾರಣಗಳು. ಈಗ ಹೆಚ್ಚಿನ ಸಂಖ್ಯೆಯ ರೋಗಿಗಳಿಗೆ ಚಿಕಿತ್ಸೆ ಒದಗಿಸುವ ಸಾಮರ್ಥ್ಯವು ದೇಶಕ್ಕಿದೆ. ಇದರ ಪರಿಣಾಮವಾಗಿ ಸಾವಿನ ಸಂಖ್ಯೆ ಕಡಿಮೆ ಆಗುತ್ತದೆ, ರೋಗ ಹರಡುವುದನ್ನು ಕಡಿಮೆ ಮಾಡಲು ಸಾಧ್ಯವಾಗುತ್ತದೆ ಮತ್ತು ಇನ್ನಷ್ಟು ಬಲಿಷ್ಠವಾದ ರೋಗಕಾರಕವು ವಿಕಾಸ ಹೊಂದುವುದನ್ನು ತಡೆಯಲು ಸಾಧ್ಯವಾಗುತ್ತದೆ.

ಕ್ಷಯರೋಗ ನಿವಾರಣೆಯ ಗುರಿ ಸಾಧನೆಯನ್ನು ಸರ್ಕಾರ ಸವಾಲಾಗಿ ಸ್ವೀಕರಿಸಬೇಕು

ಕ್ಷಯರೋಗದ ನಿರ್ಮೂಲನೆಯು 2025ರ ವೇಳೆಗೆ ಆಗಬೇಕು ಎಂಬುದು ದೇಶ ಹೊಂದಿರುವ ಗುರಿ. ಈಚಿನ ವರ್ಷಗಳಲ್ಲಿ ಕ್ಷಯರೋಗದ ವಿರುದ್ಧ ರೂಪಿಸಿದ ಯೋಜನೆಗಳು ಒಳ್ಳೆಯ ಫಲಿತಾಂಶ ನೀಡಿವೆಯಾದರೂ ದೇಶವು ಈ ಗುರಿಯನ್ನು ಸಾಧಿಸುವ ಸಾಧ್ಯತೆ ಕಡಿಮೆ ಇದೆ. ಏಕೆಂದರೆ, ಹಲವು ಔಷಧಗಳಿಗೆ ಪ್ರತಿರೋಧ ಶಕ್ತಿಯನ್ನು ಬೆಳೆಸಿಕೊಂಡಿರುವ (ಎಂಡಿಆರ್) ಕ್ಷಯ ರೋಗಕಾರಕವು ಗಂಭೀರ ಸವಾಲಾಗಿ ಪರಿಣಮಿಸಿದೆ. ಈ ರೋಗಕಾರಕವನ್ನು ಗುರುತಿಸುವಲ್ಲಿ ಒಂದಿಷ್ಟು ಪ್ರಗತಿ ಆಗಿದೆ ಎಂಬುದನ್ನು ವರದಿಯು ತೋರಿಸಿಕೊಟ್ಟಿದೆ. ಕ್ಷಯರೋಗ ಪತ್ತೆಯಾದ ಶೇಕಡ 60ರಷ್ಟು ರೋಗಿಗಳನ್ನು ಮತ್ತೆ ಪರೀಕ್ಷೆಗೆ ಒಳಪಡಿಸಿ, ಅವರಲ್ಲಿನ ರೋಗಕಾರಕವು ಆರಂಭಿಕ ಹಂತದಲ್ಲಿ ನೀಡುವ ಔಷಧಗಳಿಗೆ ಪ್ರತಿರೋಧ ಶಕ್ತಿಯನ್ನು ಬೆಳೆಸಿಕೊಂಡಿದೆಯೇ ಎಂಬುದನ್ನು ಪರಿಶೀಲಿಸಲಾಗಿದೆ. ಮುಂದೆ ಈ ಪರೀಕ್ಷೆಯನ್ನು ಇನ್ನಷ್ಟು ಹೆಚ್ಚಿನ ಸಂಖ್ಯೆಯ ರೋಗಿಗಳಲ್ಲಿ ನಡೆಸಲಾಗುತ್ತದೆ. ಆಗ, ಎರಡನೆಯ ಹಂತದಲ್ಲಿ ನೀಡುವ ಔಷಧಗಳ ಅಗತ್ಯವಿರುವ ರೋಗಿಗಳ ಸಂಖ್ಯೆ ಎಷ್ಟು ಎಂಬುದನ್ನು ಗುರುತಿಸಲು ಸಾಧ್ಯವಾಗುತ್ತದೆ. ಪರೀಕ್ಷೆಯನ್ನು ಇನ್ನಷ್ಟು ಉತ್ತಮಪಡಿಸಿ, ಎಲ್ಲ ಎಂಡಿಆರ್ ಕ್ಷಯ ಪ್ರಕರಣಗಳನ್ನು ಗುರುತಿಸುವ ಗುರಿ ಹೊಂದಲಾಗಿದೆ. ಎಂಡಿಆರ್ ಕ್ಷಯರೋಗದ ಸಂಖ್ಯೆಯು ಕೋವಿಡ್‌ಗೂ ಮೊದಲು ದೇಶದಲ್ಲಿ ಕಡಿಮೆ ಆಗುತ್ತಿತ್ತು. ಆದರೆ ಕೋವಿಡ್ ಸಾಂಕ್ರಾಮಿಕದ ನಂತರದಲ್ಲಿ ವರದಿಯಾಗುತ್ತಿರುವ ಈ ಬಗೆಯ ಕ್ಷಯ ಪ್ರಕರಣಗಳ ಸಂಖ್ಯೆಯಲ್ಲಿ ಹೆಚ್ಚಳವಾಗಿದೆ.

ಎಂಡಿಆರ್ ಕ್ಷಯಕ್ಕೆ ಚಿಕಿತ್ಸೆ ಬಹಳ ಕಷ್ಟದ ಕೆಲಸ. ಏಕೆಂದರೆ ಹಲವು ಔಷಧಿಗಳು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿಲ್ಲ. ಅಲ್ಲದೆ, ಎರಡನೆಯ ಹಂತದ ಔಷಧಗಳನ್ನು ನೀಡಲಾದ ರೋಗಿಗಳ ಪೈಕಿ ಹಲವರು ಚಿಕಿತ್ಸೆಯನ್ನು ಪೂರ್ಣಗೊಳಿಸಲೇ ಇಲ್ಲ. ಈ ನಡುವೆ, ಅಲ್ಪಾವಧಿಗೆ ನೀಡುವ ಅಂತಿಮ ಹಂತದ ಒಂದು ಔಷಧಿಯು ಪರಿಣಾಮಕಾರಿಯಾಗಿ ಕಂಡುಬಂದಿದೆ. ಈ ಔಷಧದ ಮೇಲಿನ ಹಕ್ಕುಸ್ವಾಮ್ಯವನ್ನು ವಿಸ್ತರಿಸದೇ ಇರಲು ತೀರ್ಮಾನಿಸಿರುವುದರ ಪರಿಣಾಮವಾಗಿ, ಕಡಿಮೆ ವೆಚ್ಚದ ಜೆನರಿಕ್ ಮಾದರಿಯು ಬಹಳ ಬೇಗ ಲಭ್ಯವಾಗಬಹುದು. ಮಹಿಳೆಯರಲ್ಲಿ ವ್ಯಾಪಕವಾಗಿರುವ, ಶ್ವಾಸಕೋಶಕ್ಕೆ ಸಂಬಂಧಿಸದೇ ಇರುವ ಕ್ಷಯರೋಗಕ್ಕೆ ಹೆಚ್ಚಿನ ಗಮನ ನೀಡುವುದು ಕೂಡ ಬಹಳ ಮಹತ್ವದ್ದು. 2015ರ ನಂತರದಲ್ಲಿ ಭಾರತದಲ್ಲಿ ವರದಿಯಾಗುವ ಹೊಸ ಕ್ಷಯರೋಗ ಪ್ರಕರಣಗಳ ಪ್ರಮಾಣವು ಶೇ 16ರಷ್ಟು ಕಡಿಮೆ ಆಗಿದೆ, ಮರಣ ಸಂಖ್ಯೆಯಲ್ಲಿ ಶೇ 18ರಷ್ಟು ಕಡಿಮೆ ಆಗಿದೆ ಎಂದು ವರದಿಯಲ್ಲಿ ಹೇಳಲಾಗಿದೆ. ಆದರೆ ಕ್ಷಯರೋಗದ ಹೊರೆಯು ಅತ್ಯಂತ ಹೆಚ್ಚು ಇರುವುದು ಭಾರತದಲ್ಲಿ ಎಂಬುದು ಕೂಡ ಇಲ್ಲಿ ಉಲ್ಲೇಖಿಸಬೇಕಾದ ಸಂಗತಿ. ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದೆ ಉಳಿದಿರುವ ಸಮುದಾಯಗಳಲ್ಲಿ ಕ್ಷಯರೋಗ ಹೆಚ್ಚಿದೆ. ಹೀಗಾಗಿ, ದೇಶದಲ್ಲಿ ಕ್ಷಯರೋಗದ ವಿರುದ್ಧ ನಡೆದಿರುವ ಹೋರಾಟಕ್ಕೆ ವಿಶೇಷ ಮಹತ್ವ ಇದೆ.

ಯಾಂತ್ರಿಕ ಬುದ್ಧಿಮತ್ತೆಯು ಮತ್ತೇರಿದ ಗೂಳಿಯಂತೆ ನುಗ್ಗುತ್ತಿದೆ...

ಯಾಂಬು ತಂತ್ರಜ್ಞಾನ ಮತ್ತು ಚುನಾವಣೆ

ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

ಇದೇ ಜನವರಿ ತಿಂಗಳಿನಲ್ಲಿ ಅಮೆರಿಕದ ನ್ಯೂ ಹ್ಯಾಂಪ್‌ಶೈರ್‌ನ ನಿವಾಸಿಗಳು ಬೆಳ್ಳಂಬೆಳಗ್ಗೆ ಅಚ್ಚರಿಯ ಮಡುವಿನಲ್ಲಿ ಬಿದ್ದಿದ್ದರು. ಅದಕ್ಕೆ ಕಾರಣ, ಅಧ್ಯಕ್ಷ ಜೋ ಬೈಡನ್ ಅವರು ಜನರಿಗೆ ಫೋನ್ ಮಾಡಿ ಕ್ಷೇಮ ವಿಚಾರಿಸಿ 'ವೈಟ್‌ಹೌಸ್‌ನಿಂದ ಮಾತನಾಡುತ್ತಿದ್ದೇನೆ. ಚುನಾವಣೆಯ ದಿನ ಮತಗಟ್ಟೆಗೆ ಬರಬೇಡಿ. ನಿಮಗೆಲ್ಲ ಶುಭವಾಗಲಿ' ಎಂದು ಮಾತು ಮುಗಿಸಿದ್ದರು. ದೇಶದ ಅಧ್ಯಕ್ಷರೇ ಖುದ್ದು ಫೋನ್ ಮಾಡಿದ್ದಾರೆ ಎಂಬ ಖುಷಿ, ಉದ್ವೇಗ, ಅನುಮಾನದ ಜೊತೆ, 'ಅರೆ, ಇದೇನಿದು, ಅಧ್ಯಕ್ಷರಾದವರು ಹೀಗೆಲ್ಲ ಹೇಳುತ್ತಾರಾ?' ಎಂಬ ಪ್ರಶ್ನೆ ಮನಸ್ಸಿನಲ್ಲಿ ಮೊಳೆತು ಜನ ವಾಸ್ತವಕ್ಕೆ ಬಂದಂತೆ, ಅದು ಯಾಂಬು (ಯಾಂತ್ರಿಕ ಬುದ್ಧಿಮತ್ತೆ- ಎ.ಐ) ಆಧಾರಿತ ರೊಬಾಟ್ ಮಾಡಿದ ಕಿತಾಪತಿ ಎಂದು ಗೊತ್ತಾಗಿ ನಿರಾಳರಾದರು.

ಹಿಂದಿನ ಸೆಪ್ಟೆಂಬರ್‌ನಲ್ಲಿ ಸ್ಲೊವಾಕಿಯಾದ ನ್ಯಾಟೊ ನಾಯಕರೊಬ್ಬರು ಮತ್ತು ಪತ್ರಕರ್ತನ ನಡುವೆ ನಡೆದ 'ಚುನಾವಣೆಗಳಲ್ಲಿ ಹೇಗೆ ಮೋಸ ಮಾಡಬಹುದು?' ಎಂಬ ಸಂಭಾಷಣೆಯೊಂದು ಫೇಸ್‌ಬುಕ್‌ನಲ್ಲಿ ಪ್ರಕಟಗೊಂಡು ರಾಜಕೀಯದ ದೊಡ್ಡ ಬಿರುಗಾಳಿಯನ್ನೇ ಹುಟ್ಟುಹಾಕಿತ್ತು. ಚುನಾವಣೆಗೆ ಎರಡು ದಿನ ಬಾಕಿ ಇದ್ದಾಗ ಈ ಆಡಿಯೊ ತುಣುಕು ದೇಶದಾದ್ಯಂತ ಪ್ರಜೆಗಳ ಮನಸ್ಸಿನಲ್ಲಿ ತಲ್ಲಣ ಸೃಷ್ಟಿಸಿತು. ಇದಕ್ಕಿಂತ ಗಂಭೀರವಾದ ಪ್ರಮಾದವೆಸಗಿದ್ದ ಯಾಂಬು, ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಬಂಧನಕ್ಕೆ ಒಳಗಾದಂತಹ ನಕಲಿ ಚಿತ್ರವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಯಬಿಟ್ಟು ವಿಶ್ವದ ನಾಯಕರನ್ನೆಲ್ಲ ಬೆಚ್ಚಿಬೀಳಿಸಿತ್ತು. ಪಾಕಿಸ್ತಾನ ಮತ್ತು ಬಾಂಗ್ಲಾದೇಶದ ಇತ್ತೀಚಿನ ಚುನಾವಣೆಗಳಲ್ಲಿ 'ಮತಗಟ್ಟೆಗಳನ್ನು ನಮ್ಮ ವಿರೋಧಿಗಳು ವಶಪಡಿಸಿಕೊಂಡಿದ್ದಾರೆ. ನಮ್ಮ ಬೆಂಬಲಿಗರು ಯಾರೂ ಮತ ಹಾಕಲು ಮತಗಟ್ಟೆಗೆ ಬರಬೇಡಿ' ಎಂಬ ನಕಲಿ ವಿಡಿಯೊಗಳು ಮತದಾರರ ಮೊಬೈಲಿನಲ್ಲಿ ಕಾಣಿಸಿಕೊಂಡು ಅವರಲ್ಲಿ ದೊಡ್ಡ ಗೊಂದಲ ಸೃಷ್ಟಿಸಿದ್ದವು.

ಮಧ್ಯಪ್ರದೇಶ ಮತ್ತು ತೆಲಂಗಾಣ ರಾಜ್ಯಗಳ ಈ ಬಾರಿಯ ವಿಧಾನಸಭೆ ಚುನಾವಣೆಗಳಲ್ಲಿ 'ಕೌನ್ ಬನೇಗಾ ಕರೋಡ್‌ಪತಿ?' ಮಾದರಿಯ ವಿಡಿಯೊ ತುಣುಕುಗಳಲ್ಲಿ, ಅಭ್ಯರ್ಥಿಗಳು ತಮ್ಮ ಎದುರಾಳಿಗಳನ್ನು ಬೆಂಬಲಿಸುವಂತೆ ಚಿತ್ರೀಕರಿಸಿ ಅವನ್ನು ಸಾಮಾಜಿಕ ಜಾಲತಾಣ ಮತ್ತು ಮತದಾರರ ಮೊಬೈಲುಗಳಿಗೆ ನೇರವಾಗಿ ಕಳುಹಿಸಿದ್ದರು. ವಿಡಿಯೊಗಳು ನಕಲಿ ಎಂಬುದು ಜನರಿಗೆ ಗೊತ್ತಾಗಿದ್ದು ತುಂಬಾ ತಡವಾಗಿ. ಅಷ್ಟರಲ್ಲಾಗಲೇ ಚುನಾವಣೆಗೆ ಕೆಲವೇ ಗಂಟೆಗಳು ಬಾಕಿ ಇದ್ದವು. ದಿನಕ್ಕೊಂದು ಹೊಸ ಅವತಾರದೊಂದಿಗೆ ಶಿಕ್ಷಣ, ಆರೋಗ್ಯ, ಸಂವಹನ, ಉತ್ಪಾದನಾ ಕ್ಷೇತ್ರಗಳಲ್ಲೆಲ್ಲಾ ದಾಂಗುಡಿ ಇಡುತ್ತಿರುವ ಯಾಂಬು, 2024ರ ಎಲ್ಲ ಚುನಾವಣೆಗಳ ಮೇಲೆ ಗಾಢ ಪ್ರಭಾವ ಬೀರಲಿದೆ. ದೇಶದ ಎಲ್ಲ ರಾಷ್ಟ್ರೀಯ ಹಾಗೂ ಪ್ರಾದೇಶಿಕ ಪಕ್ಷಗಳು ತಮ್ಮ ಎದುರಾಳಿಗಳನ್ನು ಮಣಿಸಲು ಮತ್ತು ಬೆಂಬಲಿಗರನ್ನು ತಮ್ಮ ಪ್ರಭಾವದಲ್ಲೇ ಇರಿಸಿಕೊಳ್ಳಲು ಯಾಂಬು ಸಹಾಯದಿಂದ ಸಾಮಾಜಿಕ ಜಾಲತಾಣಗಳಲ್ಲಿ ತೀವ್ರಗತಿಯ ಚಟುವಟಿಕೆ ನಡೆಸುತ್ತಿವೆ. ಈ ಬಾರಿಯ ಲೋಕಸಭೆ ಚುನಾವಣೆಯನ್ನು 'ಎ.ಐ. ಎಲೆಕ್ಷನ್' (ಯಾಂತ್ರಿಕ ಬುದ್ಧಿಮತ್ತೆ ಎಲೆಕ್ಷನ್) ಎಂದು ಕರೆಯುವಷ್ಟರ ಮಟ್ಟಿಗೆ ಯಾಂಬುವಿನ ಬಳಕೆ ಹೆಚ್ಚಾಗಿದೆ.

ಹಿಂದಿನ ಮೂರು ದಶಕಗಳಿಂದ ನಮ್ಮ ಚುನಾವಣೆಗಳಲ್ಲಿ ಆಧುನಿಕ ತಂತ್ರಜ್ಞಾನ ಯಥೇಚ್ಛವಾಗಿ ಬಳಕೆಯಾಗುತ್ತಿದೆ. ತೊಂಬತ್ತರ ದಶಕದಲ್ಲಿ ಮನೆ ಮನೆಗೂ ಫೋನ್ ಮಾಡುತ್ತಿದ್ದ ರಾಜಕೀಯ ಧುರೀಣರು, ಮತದಾರರ ಬಳಿ ವೋಟಿಗಾಗಿ ಮೊರೆ ಇಡುತ್ತಿದ್ದರು. 2007ರ ಉತ್ತರಪ್ರದೇಶದ ವಿಧಾನಸಭಾ ಚುನಾವಣೆಯಲ್ಲಿ ಮೊದಲ ಸಲ ಮೊಬೈಲ್ ಫೋನ್‌ಗಳಲ್ಲಿ ಲಕ್ಷಾಂತರ ಜನರಿಗೆ ಬರಹ ರೂಪದ ಸಂದೇಶ ಮತ್ತು ಪಕ್ಷಗಳ ಚಿಹ್ನೆಯ ಹಾಲೊಗ್ರಾಂ ಕಳಿಸುವ ಮೂಲಕ ಮತಯಾಚನೆ ನಡೆದಿತ್ತು. 2014ರ ಚುನಾವಣೆಗೆ ಫೇಸ್‌ಬುಕ್ ಬಳಕೆ ಮಾಡಿಕೊಂಡಿದ್ದ ಪಕ್ಷಗಳು ಅದಕ್ಕಾಗಿ ₹ 500 ಕೋಟಿ ವ್ಯಯಿಸಿದ್ದವು. 2015ರಲ್ಲಿ ಏಷ್ಯನ್ ಜರ್ನಲ್ ಆಫ್ ಪೊಲಿಟಿಕಲ್ ಸೈನ್ಸ್‌ನಲ್ಲಿ ಪ್ರಕಟಗೊಂಡ ಲೇಖನವೊಂದು ಚುನಾವಣಾ ಅಭ್ಯರ್ಥಿಯ ಹೇಳಿಕೆ, ಚಿತ್ರಗಳಿಗೆ ಫೇಸ್‌ಬುಕ್‌ನಲ್ಲಿ ಸಿಕ್ಕ ಲೈಕು ಮತ್ತು ಚುನಾವಣೆಯಲ್ಲಿ ಆತ ಗಳಿಸಿದ ಮತಗಳ ಪ್ರಮಾಣದ ತೌಲನಿಕ ಅಧ್ಯಯನ ನಡೆಸಿತ್ತು. ಅಭ್ಯರ್ಥಿಗೆ ಸಿಕ್ಕ ಫೇಸ್‌ಬುಕ್ ಮೆಚ್ಚುಗೆಗಳಿಗೂ ಮತ್ತು ಮತಗಳಿಗೂ ಹೆಚ್ಚಿನ ಅಂತರವಿರಲಿಲ್ಲ ಎಂಬುದು ಸಂಶೋಧನಾ ಬರಹದಲ್ಲಿ ಎದ್ದು ಕಂಡಿತ್ತು.

2019ರ ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗಳಿಗೆ ವಾಟ್ಸ್‌ಆ್ಯಪ್ ಬಳಕೆ ವ್ಯಾಪಕವಾಗಿತ್ತು. ವಾಟ್ಸ್‌ಆ್ಯಪ್ ಬಳಕೆಯಿಂದ ರಾಜಕೀಯ ಪಕ್ಷಗಳು ಮತದಾರರೊಂದಿಗೆ ನೇರ ಸಂವಾದಕ್ಕೆ ಇಳಿಯಬಹುದು ಮತ್ತು ಅಭ್ಯರ್ಥಿಗಳು ತಮ್ಮ ಕಾರ್ಯಕರ್ತರ ನೇರ ಅಭಿಪ್ರಾಯ, ಸಲಹೆ ಪಡೆದು ಮುನ್ನಡೆಯಬಹುದು. ಬೇರೆ ಸಾಮಾಜಿಕ ಜಾಲತಾಣ ಬಳಕೆಗೆ ಹೋಲಿಸಿದಲ್ಲಿ ವಾಟ್ಸ್‌ಆ್ಯಪ್ ಬಳಕೆ ಸುಲಭ ಮತ್ತು ಈಗ ವಾಟ್ಸ್‌ಆ್ಯಪ್ ಮೂಲಕ ಹಣವನ್ನೂ ಕಳಿಸಬಹುದಾದ್ದರಿಂದ, ಕಾರ್ಯಕರ್ತರ ಖರ್ಚನ್ನು ನೇರವಾಗಿ ನಿಭಾಯಿಸುವ ಅವಕಾಶಗಳೂ ಲಭ್ಯವಾಗಿವೆ.

ಮತ್ತೇರಿದ ಗೂಳಿಯಂತೆ ಎಲ್ಲೆಂದರಲ್ಲಿ ನುಗ್ಗುತ್ತಿರುವ ಯಾಂಬುವನ್ನು ನಿಯಂತ್ರಿಸಲು ಸರ್ಕಾರಗಳು ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತಿವೆ. ಯಾಂತ್ರಿಕ ಬುದ್ಧಿಮತ್ತೆ ಉತ್ಪಾದನೆಗಳನ್ನು ನಿರ್ವಹಿಸುವ ಕಂಪನಿಗಳಿಗೆ ಮಾರ್ಗದರ್ಶಿ ಸೂತ್ರಗಳನ್ನು ನೀಡಿರುವ ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವಾಲಯವು ಪರೀಕ್ಷಾ ಹಂತದಲ್ಲಿರುವ ಮತ್ತು ಪ್ರಮಾಣೀಕರಿಸಲಾಗದ ಯಾವುದೇ ಉತ್ಪನ್ನವನ್ನು ಜನರಿಗೆ ನೀಡಕೂಡದು ಎಂದಿದೆ. ಭಾರತದ ಕಾನೂನಿಗೆ ವಿರುದ್ಧವಾಗಿ ಯಾಂತ್ರಿಕ ಬುದ್ಧಿಮತ್ತೆಯು ಯಾವುದೇ ಪ್ರತಿಕ್ರಿಯೆಗಳನ್ನು ನೀಡುವುದಾಗಲೀ ಚುನಾವಣಾ ವ್ಯವಸ್ಥೆಗೆ ಧಕ್ಕೆ ತರುವ ಕೆಲಸಗಳನ್ನಾಗಲೀ ಮಾಡಕೂಡದು ಎಂದು ನಿರ್ದಾಕ್ಷಿಣ್ಯವಾಗಿ ಹೇಳಿದೆ. ಅನೇಕ ಕಂಪನಿಗಳು ಇದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದ್ದರಿಂದ ಸ್ಟಾರ್ಟ್‌ಅಪ್ ಕಂಪನಿಗಳಿಗೆ ಇದು ಅನ್ವಯಿಸುವುದಿಲ್ಲ ಎಂದು ಸಚಿವಾಲಯ ಸ್ಪಷ್ಟಪಡಿಸಿದೆ.

ಅಮೆರಿಕ ಸರ್ಕಾರವು ಎ.ಐ. ಆಧಾರಿತ ರೋಬೊ ಟೆಲಿಫೋನ್ ಕರೆಗಳನ್ನು ಕಾನೂನುಬಾಹಿರಗೊಳಿಸಿದೆ. ಯಾಂಬು ನಿರ್ಮಾಣದ ಹಿಂದಿರುವ ಓಪನ್ ಎ.ಐ., ಮೈಕ್ರೊಸಾಫ್ಟ್, ಗೂಗಲ್ ಮತ್ತು ಮೆಟಾ ಕಂಪನಿಗಳು ಯಾಂಬುವಿನಿಂದ ಜನರಿಗಾಗುತ್ತಿರುವ ತೊಂದರೆ ನಿಗ್ರಹಿಸಲು ಪಣ ತೊಟ್ಟಿವೆ. ತಾವೇ ಸೃಷ್ಟಿಸಿದ ತಂತ್ರಜ್ಞಾನವೊಂದು ಕೈಮೀರಿ ವರ್ತಿಸುತ್ತಿರುವುದು ಕಂಪನಿಗಳಲ್ಲಿ ಆತಂಕ ಸೃಷ್ಟಿಸಿದೆ.

ಸಂಸ್ಕರಿಸಲಾದ ಇಲ್ಲವೇ ನಕಲಿ ವಿಡಿಯೊಗಳನ್ನು ಸೃಷ್ಟಿಸುವುದು ಈಗ ಅತ್ಯಂತ ಸುಲಭ ಮತ್ತು ಕಡಿಮೆ ಖರ್ಚು ತಗಲುವುದರಿಂದ ಅವುಗಳ ಹಾವಳಿ ಜೋರಾಗಿದೆ. ಇಂಡಿಯನ್ 'ಡೀಪ್ ಫೇಕರ್' ಎಂಬ ಸಂಸ್ಥೆಯ ಹೆಸರಿನಲ್ಲಿ ಚುನಾವಣೆ ಮತ್ತಿತರ ಪ್ರಚಾರ ಕೆಲಸಗಳಲ್ಲಿ ನಿರತರಾಗಿರುವ ದಿವ್ಯೇಂದ್ರ ಸಿಂಗ್ ಜಾಡೂನ್ 'ಎದುರಾಳಿ ಪಕ್ಷದವರನ್ನು ಕೆಟ್ಟದಾಗಿ ಬಿಂಬಿಸುವ ವಿಡಿಯೊಗಳನ್ನು ಮಾಡಿಕೊಡುವಂತೆ ನಮ್ಮನ್ನು ಕೇಳುವವರು ಕಡಿಮೆಯೇ. ಮುಂದೊಂದು ದಿನ ಅದು ತಮಗೆ ವಿರುದ್ಧವಾಗಬಹುದು ಎಂಬ ಕಾರಣದಿಂದ ಅಂತಹ ವಿಡಿಯೊಗಳನ್ನು ತಾವೇ ಮಾಡಿಕೊಳ್ಳುತ್ತಿದ್ದಾರೆ. ನಾವೇನಿದ್ದರೂ ಚಾಟ್‌ಬಾಟ್ ಬಳಸಿ ಜನಪ್ರಿಯ ನಾಯಕರು ಭಾಷಣ ಮಾಡಿದಂತೆ, ಟೆಲಿಫೋನ್ ಕರೆ ಮಾಡಿದಂತೆ ಮತ್ತು ದಿವಂಗತರಾದ ನಾಯಕರು ಮತ್ತೆ ಜೀವತಳೆದು ಮಾತನಾಡುವಂತಹ ವಿಡಿಯೊಗಳನ್ನು ಸೃಷ್ಟಿಸಿ ಜನರಿಗೆ ತಲುಪಿಸುತ್ತೇವೆ. ಆದ್ದರಿಂದ, ಯಾಂತ್ರಿಕ ಬುದ್ಧಿಮತ್ತೆಯ ಬಳಕೆ ಸಂಪೂರ್ಣ ಕೆಡುಕಿನದು ಎಂದು ಹೇಳಲಾಗುವುದಿಲ್ಲ' ಎನ್ನುತ್ತಾರೆ.

ಸುದ್ದಿಯ ಸತ್ಯಾಸತ್ಯತೆಯನ್ನು ಪತ್ತೆ ಮಾಡುವ 'ಆಲ್ಟ್ ನ್ಯೂಸ್' ಸಂಸ್ಥೆಯ ಪ್ರತೀಕ್ ಸಿನ್ಹಾ, 'ಈಗ ಬಳಕೆಯಲ್ಲಿರುವ ಯಾಂಬು ಅಷ್ಟೊಂದು ಸಮರ್ಥವಾಗಿಲ್ಲ, ಹಳೆಯ ಪ್ರಚಾರದ ವೈಖರಿಗಳೇ ಈಗಲೂ ಜನಪ್ರಿಯವಾಗಿವೆ. ಹಿಂದಿನ ವರ್ಷ ಪ್ರಧಾನಿಯವರು ಮಾಡಿದ ಭಾಷಣವನ್ನು 'ಭಾಷಿಣಿ' ಎಂಬ ಆ್ಯಪ್ ಬಳಸಿ ಅದೇ ಸಮಯದಲ್ಲಿ ಕೆಲವು ಪ್ರಾದೇಶಿಕ ಭಾಷೆಗಳಿಗೆ ತರ್ಜುಮೆ ಮಾಡುವ ಪ್ರಯತ್ನ ಮಾಡಲಾಯಿತು. ಅದು ಅಷ್ಟೊಂದು ಯಶಸ್ವಿಯಾಗಲಿಲ್ಲ' ಎಂದು ದಾಖಲೆ ನೀಡುತ್ತಾರೆ.

ಸಾಮಾಜಿಕ ಜಾಲತಾಣಗಳಲ್ಲಿ ಬಿತ್ತರಗೊಳ್ಳುವ ವಿಷಯಗಳು ನಕಲಿಯೋ ಅಸಲಿಯೋ ಎಂಬುದನ್ನು ಪತ್ತೆ ಮಾಡುವ 'ಬೂಮ್' ವೆಬ್‌ಸೈಟ್‌ನ ಕರೆನ್ ರೆಬೆಲೊ, 'ಲ್ಯಾಪ್‌ಟಾಪ್ ಇರುವ ಯಾರು ಬೇಕಾದರೂ ಯಾಂಬು ಬಳಸಿಕೊಂಡು ನಕಲಿ ವಿಡಿಯೊ ಸೃಷ್ಟಿಸಬಹುದು, ಚುನಾವಣೆಗೆ ಸಂಬಂಧಿಸಿದಂತೆ ಯಾಂಬು ದುರ್ಬಳಕೆಯಾಗುತ್ತಿದೆ ಎಂಬುದನ್ನು ಒಪ್ಪಿಕೊಳ್ಳುತ್ತಾರೆ. ಒಟ್ಟಿನಲ್ಲಿ, ಯಾಂಬು ತನ್ನ ವಿರಾಟದರ್ಶನ ತೋರಲು ಅಣಿಯಾಗುತ್ತಿದೆ.

ಚುರುಮುರಿ



ಮ್ಯಾಚ್ ಫಿಕ್ಸಿಂಗ್!

• ಬಿ.ಎನ್.ಮಲ್ಲೇಶ್

'ದುಬ್ಬೀರ, ಈ ಮ್ಯಾಚ್ ಫಿಕ್ಸಿಂಗ್ ಅಂದ್ರ ಏನ್ಲೆ?' ಕೊಟ್ರೇಶಿ ಕೇಳಿದ.

'ಅದೂ ಗೊತ್ತಿಲ್ವಾ? ಅಂಪೈರ್‌ನ ಫಿಕ್ಸ್ ಮಾಡ್ಕಂಡು ಆಟ ಗೆಲ್ಲಾದು ಅಥ್ವ ಬೇಕಂತ ಔಟಾಗಿ ಆಟ ಸೋಲೋದು. ದುಡ್ಡಿಗಾಗಿ ಅಡ್ಡದಾರಿ ಆಟ' ದುಬ್ಬೀರ ವಿವರಿಸಿದ.

'ಅದು ಹಂಗೇಳಿದ್ರ ಅರ್ಥ ಆಗಲ್ಲ ದುಬ್ಬೀರ, ಎದುರಾಳಿ ಪಕ್ಷಗಳ ಜೊತೆ ಅಡ್ಜಸ್ಟ್ ಮಾಡ್ಕಂಡು ಎಲೆಕ್ಷನ್ ಗೆಲ್ಲಾದು ಅನ್ನು' ಗುಡ್ಡೆ ಮಂಜಮ್ಮನ ಮುಖ ನೋಡಿ ನಕ್ಕ.

'ಏಯ್ ಯಾಕೋ... ನನ್ ಮುಖ ನೋಡಿ ಯಾಕ್ ನಗ್ತೀಯ?' ಮಂಜಮ್ಮಗೆ ಸಿಟ್ಟು ಬಂತು.

'ಇದೊಳ್ಳೆ ಕತಿಯಾತಪ, ನಾನ್ಯಾಕೆ ನಿನ್ ಮುಖ ನೋಡಿ ನಗ್ಲಿ? ನಿನ್ನ ಈ ಡಬ್ಬಾ ಹೋಟ್ಲು ಮುಚ್ಚಿ ನಮ್ ಕ್ಯಾಂಡೇಟ್ ಪರ ಪ್ರಚಾರಕ್ಕೆ ಬಾ, ದಿನಕ್ಕೆ ಸಾವಿರ ರೂಪಾಯಿ ಕೊಡಿಸ್ತೀನಿ' ಎಂದ ಗುಡ್ಡೆ.

'ನಿಮ್ ಪಾರ್ಟೀಲಿ ಚಾ ಕುಡಿಯಾಕೂ ರೊಕ್ಕಿಲ್ಲಂತಲ್ಲೋ, ಇನ್ನು ನಮಿಗೇನು ಕೊಡಿಸ್ತೀಯ ಬದ್ನೇಕಾಯಿ?' ತೆಪರೇಸಿ ಮಂಜಮ್ಮನ ಪರ ವಾದಿಸಿದ.

'ಪಾರ್ಟೀಲಿ ರೊಕ್ಕಿಲ್ಲದಿದ್ರೇನಂತೆ, ಕ್ಯಾಂಡೇಟ್‌ಗಳತ್ರ ಇಲ್ವಾ? ಹೋದ ಎಲೆಕ್ಷನ್‌ನಲ್ಲಿ ಐವತ್ತು ಕೋಟಿ, ಈ ಸಲ ಐನೂರು ಕೋಟಿ ಡಿಕ್ಲೇರ್ ಮಾಡಿರಾದು, ಗೊತ್ತಾ?'

'ಅಲ್ಲಲೆ, ಐದು ವರ್ಷದಾಗೆ ಐವತ್ತು ಕೋಟಿಯು ಐನೂರು ಕೋಟಿ ಹೆಂಗಾಗ್ತತಲೆ? ಹೆಂಗ್ ದುಡಿದ್ರು ಅಂತ' ದುಬ್ಬೀರನಿಗೆ ಆಶ್ಚರ್ಯ.

'ಹೆಂಗ್ ದುಡಿದ್ರಪ, ಎಲ್ಲ ಪಾರ್ಟೀಲು ಕ್ಯಾಂಡೇಟ್‌ಗಳು ಕೋಟಿ ಕೋಟಿ ಆಸ್ತಿ ಡಿಕ್ಲೇರ್ ಮಾಡ್ತಿದಾರೆ. ಆದ್ರೆ ಪಾಪ ನಮ್ ಮೈಸೂರು ಯುವರಾಜರಿಗೆ ಸ್ವಂತಕ್ಕೊಂದು ಮನಿ ಇಲ್ಲಂತೆ'.

'ಲೇಯ್, ಅವರಿಗೆ ಅರಮನಿನೇ ಐತಲ್ಲೋ. ಈಗ ಅದೆಲ್ಲ ಬಿಟ್ಟಾಕು, ಮಂಜಮ್ಮ ನನ್ ಲೆಕ್ಕದಲ್ಲಿ ಎಲ್ರಿಗೂ ಚಾ ಹಾಕು' ಎಂದ ಗುಡ್ಡೆ, ಮಂಜಮ್ಮ ಮಾತಾಡಲಿಲ್ಲ.

'ಓ... ಸಿಟ್ಟು ಬಂತಾ? ಎಂತೆಂಥೋರ ಮುನಿಸು, ಸಿಟ್ಟನ್ನೇ ಶಮನ ಮಾಡೀವಂತೆ, ನಿನ್ ಸಿಟ್ಟು ಇಳ್ಸಾಕೆ ಆ ಬ್ರಹ್ಮನ್ನೇನಾದ್ರೂ ಕರೆಸ್ಬೇಕಾ?' ಗುಡ್ಡೆ ಮಾತಿಗೆ ಮಂಜಮ್ಮಗೂ ನಗು ತಡೆಯಲಾಗಲಿಲ್ಲ.

ದಿನದ ಟ್ವೀಟ್

ಬದುಕುವ ಸುಂದರ ಮಾರ್ಗ

ನಾನು ರಾಜಕಾರಣದ ಬಗ್ಗೆ ಹೆಚ್ಚು ಗಮನಹರಿಸುವುದಿಲ್ಲವಾದರೂ ಕಾಶ್ಮೀರದ ಕುರಿತು ವಿಶ್ವಸಂಸ್ಥೆಯಲ್ಲಿ ನಡೆಯಲಿದ್ದ ಮಹತ್ವದ ಚರ್ಚೆಯಲ್ಲಿ ಭಾಗವಹಿಸುವ ಭಾರತ ತಂಡದ ನೇತೃತ್ವ ವಹಿಸುವಂತೆ ಪಿ.ವಿ.ನರಸಿಂಹ ರಾವ್ ಅವರು ಪ್ರಧಾನಿಯಾಗಿ ಆಗಿನ ವಿರೋಧ ಪಕ್ಷದ ನಾಯಕ ಅಟಲ್ ಬಿಹಾರಿ ವಾಜಪೇಯಿ ಅವರಲ್ಲಿ ಮನವಿ ಮಾಡಿದ್ದ ಪ್ರಕರಣ ನನಗೆ ತುಂಬಾ ಪ್ರಿಯ. ಈ ಆಹ್ವಾನವನ್ನು ವಾಜಪೇಯಿ ಒಪ್ಪಿಕೊಂಡಿದ್ದರು ಮತ್ತು ದೇಶದ ಒಳಿತಿಗಾಗಿ ಅವರಿಬ್ಬರೂ ರಾಜಕೀಯ ಭಿನ್ನಾಭಿಪ್ರಾಯ ಬದಿಗಿರಿಸಿದ್ದರು. ಎಲ್ಲ ಭಿನ್ನಾಭಿಪ್ರಾಯಗಳ ನಡುವೆಯೂ ಘನತೆ ಮತ್ತು ಗೌರವದಿಂದ ಬದುಕುವ ಸುಂದರವಾದ ಮಾರ್ಗ ಅದು.

ಹರ್ಷ ಭೋಗ್ಲೆ, ಕ್ರಿಕೆಟ್ ವೀಕ್ಷಕ ವಿವರಣೆಗಾರ, ಪತ್ರಕರ್ತ

ಕಿಡಿನುಡಿ



ಕಾಂಗ್ರೆಸ್‌ನ ಭವಿಷ್ಯದ ಬಗ್ಗೆ ಸೋನಿಯಾ ಗಾಂಧಿ, ಪ್ರಿಯಾಂಕಾ ಗಾಂಧಿ ಮತ್ತು ರಾಹುಲ್ ಗಾಂಧಿ ಅವರಿಗೆ ಕಾಳಜಿ ಇರುವುದೇ ಆದರೆ, ತನ್ನ ರಾಜಕೀಯ ಆಕಾಂಕ್ಷೆಯ ಬಗ್ಗೆ ಬಾಯಿಮುಚ್ಚಿಕೊಂಡು ಇರುವಂತೆ ಈ ವ್ಯಕ್ತಿಗೆ ಹೇಳಬೇಕು. ಅವರು ಹಾಗೆ ಮಾಡದಿದ್ದರೆ ಜನರ ಮೂಡ್ ಬಗ್ಗೆ ಅವರಿಗೆ ತಿಳಿದಿಲ್ಲ ಎಂದೇ ಅರ್ಥ– ಮತ್ತು ಇದು ಪಕ್ಷದ ಅವನತಿಗೆ ಮುಖ್ಯ ಕಾರಣ.

(ಪ್ರಿಯಾಂಕಾ ಗಾಂಧಿ ಅವರ ಪತಿ ರಾಬರ್ಟ್ ವಾದ್ರಾ ಅವರು ಅಮೇಠಿಯಿಂದ ಲೋಕಸಭಾ ಚುನಾವಣೆಗೆ ಸ್ಪರ್ಧಿಸುವ ಇಂಗಿತ ವ್ಯಕ್ತಪಡಿಸಿರುವುದಕ್ಕೆ ಪ್ರತಿಕ್ರಿಯೆ)

ಸುಧೀಂದ್ರ ಕುಲಕರ್ಣಿ, ಲೇಖಕ, ರಾಜಕೀಯ ವಿಶ್ಲೇಷಕ

25 ವರ್ಷಗಳ ಹಿಂದೆ

ಸೋಮವಾರ, 5-4-1999

• **ಪ್ರತ್ಯೇಕ ಉತ್ತರ ಕರ್ನಾಟಕ ರಾಜ್ಯ ಬೇಡಿಕೆ: ವೇದಿಕೆ ನಿರ್ಣಯ**

ಹುಬ್ಬಳ್ಳಿ, ಏ. 4– ಹದಿನಾಲ್ಕು ಜಿಲ್ಲೆಗಳನ್ನು ಒಳಗೊಂಡ ಪ್ರತ್ಯೇಕ ಉತ್ತರ ಕರ್ನಾಟಕ ರಾಜ್ಯ ಸ್ಥಾಪನೆಗಾಗಿ ತೀವ್ರ ಹೋರಾಟ ಮಾಡಲು ಇಂದು ಹಿರಿಯ ಪತ್ರಕರ್ತ ಪಾಟೀಲ ಪುಟ್ಟಪ್ಪನವರ ಅಧ್ಯಕ್ಷತೆಯಲ್ಲಿ ಸೇರಿದ ಉತ್ತರ ಕರ್ನಾಟಕ ಅಭಿವೃದ್ಧಿ ವೇದಿಕೆಯ ಸಭೆ ನಿರ್ಣಯಿಸಿತು.

ಇದಕ್ಕೂ ಮೊದಲು ಸಭೆಯಲ್ಲಿ ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತಿನ (ಎಬಿವಿಪಿ) ಸದಸ್ಯರು ಪ್ರತ್ಯೇಕ ರಾಜ್ಯ ಸ್ಥಾಪನೆಗೆ ತೀವ್ರ ವಿರೋಧ ವ್ಯಕ್ತಪಡಿಸಿ, ಇದಕ್ಕೆ ತಮ್ಮ ಬೆಂಬಲ ಇಲ್ಲ ಎಂದು ಹೇಳಿದಾಗ, ಎಬಿವಿಪಿ ಸದಸ್ಯರು ಮತ್ತು ವೇದಿಕೆ ಕಾರ್ಯಕರ್ತರ ನಡುವೆ ತಳ್ಳಾಟ, ಹೊಡೆದಾಟ ನಡೆಯಿತು. ಎಬಿವಿಪಿ ಹುಬ್ಬಳ್ಳಿ ಘಟಕದ ಜಂಟಿ ಕಾರ್ಯದರ್ಶಿ ಉಮೇಶ ಜೋಶಿ ಘರ್ಷಣೆಯಲ್ಲಿ ಗಾಯಗೊಂಡರು.

• **ಬಲಾಬಲ ಪರೀಕ್ಷೆಗೆ ಸಿದ್ಧ ವಾಜಪೇಯಿ ಘೋಷಣೆ**

ಪಣಜಿ, ಏ. 4 (ಪಿಟಿಐ, ಯುಎನ್‌ಐ)– ಲೋಕಸಭೆಯಲ್ಲಿ ಬಲಾಬಲ ಪರೀಕ್ಷೆಗೆ ತಾವು ಸಿದ್ಧ ಎಂದು ಪ್ರಧಾನಮಂತ್ರಿ ಅಟಲ್ ಬಿಹಾರಿ ವಾಜಪೇಯಿ ಅವರು ಇಂದು ಇಲ್ಲಿ ಹೇಳಿದರು.

'ನಮ್ಮ ಸರ್ಕಾರದ ವಿರುದ್ಧ ಅವಿಶ್ವಾಸ ಗೊತ್ತುವಳಿ ಮಂಡಿಸುವ ಯತ್ನ ನಡೆದಿದೆ ಎಂದು ನಮಗೆ ಗೊತ್ತು; ನಾವು ಅದನ್ನು ಸ್ವಾಗತಿಸುತ್ತೇವೆ. ಏಕೆಂದರೆ ನಮ್ಮ ಬಲವನ್ನು ಸಾಬೀತುಪಡಿಸಲು ಅದು ನಮಗೆ ಅವಕಾಶ ಒದಗಿಸುವುದು' ಎಂದು ಅವರು ಬಿಜೆಪಿಯ ಮೂರು ದಿನಗಳ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯ ಸಭೆ ನಂತರ ಪತ್ರಕರ್ತರಿಗೆ ತಿಳಿಸಿದರು.

50 ವರ್ಷಗಳ ಹಿಂದೆ

ಶುಕ್ರವಾರ, 5-4-1974

• **ಹಣ ದುರುಪಯೋಗ ದೂರು ಜಾಗೃತ ಆಯೋಗದ ತನಿಖೆ**

ಬೆಂಗಳೂರು, ಏ. 4– ಕೃಷ್ಣಾ ಮೇಲ್ದಂಡೆ, ಹೇಮಾವತಿ ಮತ್ತು ಇತರ ನಾಲ್ಕು ನೀರಾವರಿ ಯೋಜನೆಗಳ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹಣ ದುರುಪಯೋಗದ ಬಗ್ಗೆ ಬಂದಿರುವ ದೂರುಗಳನ್ನು ಗಮನಿಸಿ ತನಿಖೆ ಮಾಡಲು ಜಾಗೃತ ಆಯೋಗಕ್ಕೆ ವಹಿಸಲಾಗಿದ್ದು, ಅದರ ವರದಿಗಳನ್ನು ನಿರೀಕ್ಷಿಸಲಾಗಿದೆ ಎಂದು ಮುಖ್ಯಮಂತ್ರಿ ಶ್ರೀ ಡಿ. ದೇವರಾಜ ಅರಸು ಅವರು ಇಂದು ವಿಧಾನಸಭೆಯಲ್ಲಿ ತಿಳಿಸಿದರು.

ಕೃಷ್ಣಾ ಮೇಲ್ದಂಡೆಗೆ ಸಂಬಂಧಿಸಿದ ಕಾಮಗಾರಿಗಳಲ್ಲಿ ಕೆಲಸದ ಮೊಬಲಗಿಗಿಂತ ಹೆಚ್ಚಾಗಿ ಐದು ಲಕ್ಷದ ಆರು ಸಾವಿರ ರೂ.ಗಳನ್ನು, ಕಪಿಲಾ ಕಾಮಗಾರಿಗಳಲ್ಲಿ ಮೂರು ಲಕ್ಷದ ಐದು ಸಾವಿರ ರೂಪಾಯಿಗಳನ್ನು ಪಾವತಿಸಲಾಗಿದೆಯೆಂದು ತಿಳಿದುಬಂದಿದೆ ಎಂದು ಅವರು ಹೇಳಿದರು.

ದೂರುಗಳು ಬಂದಿರುವ ಇತರ ಯೋಜನೆಗಳು; ಹಾರಂಗಿ, ಮಲಪ್ರಭಾ ಮತ್ತು ಘಟಪ್ರಭಾ.

ಸಂಗತ

ಆರೋಗ್ಯ ಹಕ್ಕು: ಪಂಚ ಸೂತ್ರ

ಆರೋಗ್ಯ ಸೇವೆ ಇಂದು ಸುಲಭವಾಗಿ ಜನರ ಕೈಗೆಟಕುವಂತೆ ಆಗಿದೆ. ಆದರೆ ಆರೋಗ್ಯದ ಗುಣಮಟ್ಟ ಹೆಚ್ಚಿದೆಯೇ?

• ಡಾ. ಕೆ.ಎಸ್.ಪವಿತ್ರ

ಸಾವು, ನೋವು, ಅಸಮರ್ಥತೆಯ ಭಯ ಜಗತ್ತನ್ನು ಕಾಡುತ್ತಿದೆ. ಇವುಗಳ ಹಿಂದೆ ಯಾವ ಕಾರಣಗಳಿವೆ ಎಂಬ ಪ್ರಶ್ನೆಗೆ ಇಂದು ಉತ್ತರ ವೈವಿಧ್ಯಮಯ. ಸೋಂಕು ರೋಗಗಳನ್ನು ಉಂಟುಮಾಡುವ ಬ್ಯಾಕ್ಟೀರಿಯಾ, ವೈರಸ್‌ಗಳಷ್ಟೇ ನಮ್ಮ ಜೀವನಶೈಲಿ, ಆಹಾರ, ವಾತಾವರಣ, ನಮ್ಮನ್ನು ಆವರಿಸಿರುವ ತಾಂತ್ರಿಕ ಸಾಧನಗಳು ಆರೋಗ್ಯದ ಸಮಸ್ಯೆಗಳನ್ನು ದಿಢೀರ್ ಎಂದು ತಂದು, ದೀರ್ಘಕಾಲಿಕವಾಗಿ ಅವುಗಳನ್ನು ನಮ್ಮ ಜೀವನದಲ್ಲಿ ಉಳಿಸಿಬಿಡುವ ಅಪಾಯದ ಹೊತ್ತು ಇದು. ಇಂತಹ ಪರಿಸ್ಥಿತಿಯಲ್ಲಿ ಈ ಬಾರಿಯ 'ವಿಶ್ವ ಆರೋಗ್ಯ ದಿನ'ದ (ಏ. 7) 'ನನ್ನ ಆರೋಗ್ಯ, ನನ್ನ ಹಕ್ಕು' ಎಂಬ ಧ್ಯೇಯವಾಕ್ಯವು ಆರೋಗ್ಯಕ್ಕೂ ಅದಕ್ಕಿರುವ ಸಾಮಾಜಿಕ, ಜೈವಿಕ, ಆರ್ಥಿಕ ನಂಟುಗಳಿಗೂ ಆರೋಗ್ಯದ ಚಿಂತನೆಯನ್ನು ವಿಸ್ತರಿಸುತ್ತದೆ.

ವಿಶ್ವ ಆರೋಗ್ಯ ಸಂಸ್ಥೆಯ ಒಂದು ಸಮಿತಿಯು ಆರೋಗ್ಯ ಸೇವೆ, ಮಾಹಿತಿಗಳನ್ನು ಪಡೆಯಲು ಜನರಿಗೆ ಯಾವ ಅಡ್ಡಿಗಳಿವೆ ಎಂಬ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿದೆ. ಅದು ಹೇಳಿರುವಂತೆ, ಜಗತ್ತಿನ ಕನಿಷ್ಠ 140 ದೇಶಗಳು ತಮ್ಮ ಸಂವಿಧಾನದಲ್ಲಿ ಆರೋಗ್ಯವನ್ನು 'ಮಾನವ ಹಕ್ಕು'ಗಳಲ್ಲಿ ಒಂದಾಗಿಸಿವೆ. ಆದರೆ ಹಾಗೆ ಮಾಡಿದ ಮಾತ್ರಕ್ಕೆ ಅದು ಅನುಷ್ಠಾನಗೊಂಡಿದೆ ಎಂಬುದಕ್ಕೆ ಖಾತರಿಯಿಲ್ಲ.

ಆರೋಗ್ಯ ಕ್ಷೇತ್ರದಲ್ಲಿ ಸುಧಾರಣೆಗಳು 'ಪ್ರಗತಿಪರ' ಎನ್ನುವಂತೆ ಆಗಿವೆ. ಜನರ ತಿಳಿವಳಿಕೆ ಹೆಚ್ಚಿದೆ. ಮಾಹಿತಿ ಧಾರಾಳವಾಗಿ ಲಭ್ಯವಿದೆ. ಎಷ್ಟೋ ವಿಧದ ವಿಮಾ ಯೋಜನೆಗಳು, ಕಡಿಮೆ ಬೆಲೆಗೆ ಸಿಗುವ ಔಷಧಿಗಳು ಆರೋಗ್ಯ ಸೇವೆ ಸುಲಭವಾಗಿ ಕೈಗೆಟಕುವಂತೆ ಮಾಡಿವೆ. ಆದರೆ ಆರೋಗ್ಯದ ಗುಣಮಟ್ಟ ಹೆಚ್ಚಿದೆಯೇ? ಸ್ವತಃ ಜನರು ಕೈ ಜೋಡಿಸದೆ, ಆಡಳಿತ ವ್ಯವಸ್ಥೆಗಳು ಮಾತ್ರ ತಮ್ಮ ಕೆಲಸ ಮುಂದುವರಿಸಿದರೆ 'ನ್ಯಾಯಯುತ ಸಮಾನತೆ' ಎನ್ನುವುದು ಅರ್ಥಂಬರ್ಥ ಮಾತ್ರ ಸಾಧ್ಯವಾಗಬಹುದು.

'ಆರೋಗ್ಯವೂ ಒಂದು ಹಕ್ಕು' ಎಂಬುದರ ಅರಿವು ಮೊದಲ ಹೆಜ್ಜೆಯಾಗಬೇಕು. ಇದಕ್ಕೆ ತಕ್ಕ ಸಮಯ ಮಕ್ಕಳ ಬಾಲ್ಯವೇ. ವಿಜ್ಞಾನದ ವಿಷಯದಲ್ಲಿ ಅತಿ ಹೆಚ್ಚು ಅಂಕಗಳನ್ನು ಗಳಿಸಬೇಕು ಎನ್ನುವ ಶಾಲೆಗಳು ಮತ್ತು ಪೋಷಕರು, ಮಕ್ಕಳು ಸ್ವತಃ ಆರೋಗ್ಯದ ಬಗ್ಗೆ ಗಮನಹರಿಸುವುದನ್ನು, ಪ್ರಾಯೋಗಿಕವಾಗಿ ದಿನಚರಿಯಲ್ಲಿ ಆರೋಗ್ಯಕರ ಊಟ, ನಿದ್ರೆ, ವ್ಯಾಯಾಮ, ಆಟಗಳನ್ನು ಪಾಲಿಸುವುದನ್ನು ಪ್ರೋತ್ಸಾಹಿಸದಿರುವುದು ಅಚ್ಚರಿಯ ಸಂಗತಿ.

ಮಕ್ಕಳೊಂದಿಗೆ ಸಮಯ ಕಳೆಯದಿರುವುದು, ಆಟದ ಬದಲು ಯಂತ್ರಗಳ ವ್ಯಸನವನ್ನು ಹಿಡಿಸುವುದು, ಒಂದೇ ಸಮನೆ ಓದುತ್ತಾ ಅಂಕ ಗಳಿಕೆಯ ಹಿಂದೆ ಓಡುವಂತೆ ಮಾಡುವುದು ಇವೆಲ್ಲದರ ಮೂಲಕ ಆರೋಗ್ಯದ ಹಕ್ಕನ್ನು ಪ್ರತಿನಿತ್ಯ ಮಕ್ಕಳಿಂದ ನಾವು ಕಸಿಯುತ್ತಿದ್ದೇವೆ! ಜೀವನದ ಮತ್ತೊಂದು ತುದಿಯಲ್ಲಿರುವ ಹಿರಿಯ ನಾಗರಿಕರ ಆರೋಗ್ಯದ ಹಕ್ಕುಗಳನ್ನಂತೂ ಕೇಳುವವರೇ ಇಲ್ಲ! ಹಿರಿಯರನ್ನು ಗೌರವಿಸುವ ಸಮಾಜ ನಮ್ಮದು ಎಂದು ಮೇಲ್ನೋಟಕ್ಕೆ ಅನ್ನಿಸಿದರೂ, ಆರೋಗ್ಯ ಕಾಳಜಿಯ ವಿಷಯದಲ್ಲಿ ಇದು ಕಂಡುಬರದಿರುವುದು ಸಾಮಾನ್ಯ.

ನೇರವಾಗಿ ಆರೋಗ್ಯ ಮತ್ತು ಮಾನವ ಹಕ್ಕುಗಳಿಗೆ ಸಂಬಂಧಿಸಿದ ಮತ್ತೊಂದು ನಿದರ್ಶನವೂ ನೆನಪಾಗುತ್ತಿದೆ. ಹಸಿವು ಮತ್ತು ಬಡತನದಿಂದ ನರಳುವ ಜಗತ್ತಿನಲ್ಲಿ ಸುಮಾರು 100 ಕೋಟಿ ಜನರಿಗೆ ಜನ್ಮದಾಖಲೆಯೇ ಇಲ್ಲ. ಅದೇನು ದೊಡ್ಡದು?! ಮುಂಬೈನ ಕೊಳೆಗೇರಿಯೊಂದರಲ್ಲಿ ಸಾಮಾಜಿಕ ಕಾರ್ಯಕರ್ತೆಯೊಬ್ಬರು ಪೋಲಿಯೊಪೀಡಿತ ಬಾಲಕಿಯೊಬ್ಬಳು ಬಿದ್ದಿದ್ದನ್ನು ನೋಡಿದರು. ಕತ್ತಲ ಕೋಣೆಯೊಂದರಲ್ಲಿ ತನ್ನ ಜೀವನವನ್ನು ಕಳೆಯುತ್ತಿದ್ದ ಆಕೆ ಪೌಷ್ಟಿಕ ಆಹಾರ ಕಂಡಿರಲಿಲ್ಲ. ಆರೋಗ್ಯ ಮೇಲ್ವಿಚಾರಕರಿಗೆ 'ಮೊದಲು ಇವಳ ಜನ್ಮದಾಖಲೆ ಪತ್ರವನ್ನು ನಾವು ಮಾಡಿಸಬೇಕು!' ಎಂದಾಕೆ ಹೇಳಿದರು. 'ಅರೆ ಮೊದಲು ಆಕೆಯ ಆರೋಗ್ಯ ಸಮಸ್ಯೆಗೆ ಚಿಕಿತ್ಸೆ ಕೊಡಿಸಬೇಕಲ್ಲವೇ?' ಎಂದರೆ, 'ಅದನ್ನು ಮಾಡಬೇಕೆಂದೇ ನಾನು ಜನ್ಮದಾಖಲೆ ಪತ್ರ ಬೇಕು ಅಂದದ್ದು' ಎಂದಾಕೆ ಹೇಳಿದರು! ಅಂದರೆ, ಅಧಿಕೃತವಾಗಿ ಸರ್ಕಾರಿ ದಾಖಲೆಗಳಲ್ಲಿರದ ಯಾವುದೇ ವ್ಯಕ್ತಿ ಸರ್ಕಾರದ ಆರೋಗ್ಯ ಸೌಲಭ್ಯಗಳನ್ನು ಪಡೆಯಲೂ ಅರ್ಹವಾಗುವುದಿಲ್ಲ! ಬದುಕುವುದಕ್ಕೆ ಹೋಗಲಿ, ಘನತೆಯ ಅಂತ್ಯಸಂಸ್ಕಾರ ಬೇಕೆಂದರೂ ಚಿತಾಗಾರದಲ್ಲಿ ಮೃತ ವ್ಯಕ್ತಿಯ 'ಆಧಾರ್' ಕಾರ್ಡು ಬೇಕೇ ಬೇಕು! ಮೊನ್ನೆ ಒಬ್ಬ ಆತ್ಮೀಯರು ಹೇಳಿದ್ದು 'ಒಂದೊಮ್ಮೆ ನಮ್ಮ ಅಜ್ಜಿಯ ಅಂತ್ಯಕ್ರಿಯೆಗೆ ಚಿತಾಗಾರದವರು ಆಧಾರ್ ಅಪ್‌ಡೇಟ್ ಆಗಿರಲೇಬೇಕು ಎಂದಿದ್ದರೆ ನಾನೇನು ಮಾಡಬೇಕಿತ್ತು?!'

ಆರೋಗ್ಯದ ಹಕ್ಕು ಎಲ್ಲರದ್ದಾಗಬೇಕೆಂದರೆ ನಾವು 5 ಸೂತ್ರಗಳತ್ತ ಗಮನಹರಿಸಬೇಕು. ಚಿಕಿತ್ಸೆಗೆ ಜನರು ಬರುವ ಅಂತರವನ್ನು ವಿವಿಧ ರೀತಿಗಳಲ್ಲಿ ಕಡಿಮೆ ಮಾಡಬೇಕು. ಆರೋಗ್ಯಕ್ಕೆ ಸಂಬಂಧಿಸಿದ ಬಜೆಟ್ ಏರಬೇಕು. ಪ್ರಕ್ರಿಯೆ ಸರಳವಾಗಿಸಲು ಹೊಸ ಆಲೋಚನೆಗಳು ಬೇಕು. ಆರೋಗ್ಯ ಸೇವೆಗಳಿಗೆ ಅವಶ್ಯಕವಾದ ಜನ್ಮದಾಖಲೆಯಂತಹ ದಾಖಲೀಕರಣಕ್ಕೆ ಇರುವ ವ್ಯವಸ್ಥೆಯನ್ನು ಸುಲಭವಾಗಿಸಬೇಕು. ಆರೋಗ್ಯ ಸೇವೆ ಪಡೆಯುವ ಫಲಾನುಭವಿಗಳು ತಮ್ಮ ಸಕಾರಾತ್ಮಕ ಅನುಭವಗಳನ್ನು ಇತರರೊಂದಿಗೆ ಹಂಚಿಕೊಳ್ಳಬೇಕು.

ಜನಪ್ರತಿನಿಧಿಗಳು ಸರ್ಕಾರಿ ಆಸ್ಪತ್ರೆಗಳಿಗೆ ದಿಢೀರ್ ಭೇಟಿ ನೀಡಿ ಸಿಬ್ಬಂದಿಯ ಮೇಲೆ ಹರಿಹಾಯುವ ಚಿತ್ರಣಕ್ಕೆ ಬದಲು, ಸರ್ಕಾರಿ ಆಸ್ಪತ್ರೆಗಳಲ್ಲಿ ಯಶಸ್ವಿ ಚಿಕಿತ್ಸೆ ಪಡೆದಿರುವುದು ಮಾಧ್ಯಮಗಳಲ್ಲಿ ಪ್ರಸಾರಗೊಂಡು, ಸರ್ಕಾರಿ ಆರೋಗ್ಯ ವ್ಯವಸ್ಥೆಯ ಬೇಡಿಕೆ ಹೆಚ್ಚಿಸಬೇಕು. ಆರೋಗ್ಯ ಅವರವರ ಹಕ್ಕಾಗಿ ಪ್ರತಿಯೊಬ್ಬರಿಗೂ ದೊರಕುವತ್ತ ಸಾಗಬೇಕು.

ವಾಚಕರ ವಾಣಿ

ಅರ್ಧಂಬರ್ಧ ಕೊಳವೆಬಾವಿ: ಕಠಿಣ ಶಿಕ್ಷೆಯಾಗಲಿ

ಸಣ್ಣ ಮಕ್ಕಳು ಆಗಾಗ್ಗೆ ಕೊಳವೆಬಾವಿಗೆ ಬೀಳುವ ಪ್ರಕರಣಗಳು ನಡೆಯುತ್ತಲೇ ಇವೆ. ಕೊಳವೆಬಾವಿಗಳನ್ನು ಅರ್ಧಂಬರ್ಧ ಕೊರೆಸಿ ಹಾಗೇ ಬಿಡುವಂತಿಲ್ಲ, ಒಂದುವೇಳೆ ಹಾಗೇನಾದರೂ ಬಿಟ್ಟರೆ, ಅಂತಹವರನ್ನು ದಂಡ, ಶಿಕ್ಷೆಗೆ ಗುರಿಪಡಿಸಲಾಗುವುದು ಎಂಬ ಆದೇಶವನ್ನು ಕೆಲ ವರ್ಷಗಳ ಹಿಂದೆ ಸರ್ಕಾರ ಹೊರಡಿಸಿದ್ದ ನೆನಪಿದೆ. ಕೊಳವೆ ಬಾವಿಯನ್ನು ಮುಚ್ಚದೇ ಬಿಟ್ಟವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು.

ವಿ.ಪಾಂಡುರಂಗಪ್ಪ, ಬೆಂಗಳೂರು

ಮಾದರಿಯಾಗಲಿ ಮಳೆ ನೀರು ಸಂಗ್ರಹ

ಒಡಿಶಾದಲ್ಲಿ ನಾರಿಶಕ್ತಿಯ ಮೂಲಕ ನೀರು ನಿರ್ವಹಣೆ ಕಾರ್ಯಕ್ಕೆ ಅಲ್ಲಿನ ರಾಜ್ಯ ಸರ್ಕಾರ ಮುಂದಾಗಿರುವುದು ಮಾದರಿ ಕಾರ್ಯ ಎಂದು ಬಿ.ಸಿ.ಪ್ರಭಾಕರ್ ಮತ್ತು ಕೆ.ಎನ್.ರಾಧಿಕಾ ತಮ್ಮ ಲೇಖನದಲ್ಲಿ (ಪ್ರ.ವಾ., ಏ. 3) ಶ್ಲಾಘಿಸಿದ್ದಾರೆ. ಆದರೆ ಈ ಮಾದರಿಯ ನೀರು ನಿರ್ವಹಣೆಯಲ್ಲಿ 'ಡ್ರಿಂಕ್ ಫ್ರಂ ಟ್ಯಾಪ್' ಎಂಬ ಪರಿಕಲ್ಪನೆಯಡಿ ಬಳಸುವ ನೀರಿಗೆ ಮೀಟರ್ ಅಳವಡಿಸಿ ಹೆಚ್ಚು ಹಣ ಪಡೆಯಲಾಗುತ್ತಿದೆ. ಇದರ ಬದಲು, ಉಚಿತವಾಗಿ ದೊರೆಯುವ ಪರಿಶುದ್ಧ ಮಳೆ ನೀರಿನ ಸಂಗ್ರಹವು ದೇಶಕ್ಕೆ ಮಾದರಿ. ಇದರಲ್ಲಿ ಮೀಟರ್ ಅಳವಡಿಕೆ ಇಲ್ಲ, ನೀರಿನ ಪರೀಕ್ಷೆ ಮಾಡಬೇಕಿಲ್ಲ. ಮನೆಯ ತಾರಸಿ ಮೇಲೆ ಬೀಳುವ ಮಳೆ ನೀರನ್ನು ಶೋಧಿಸಿ, ಸಂಗ್ರಹಿಸಿ ಬಳಸುವುದು. ಹೊಲದಲ್ಲಿ ಬಿದ್ದ ಮಳೆ ನೀರನ್ನು ಕೃಷಿ ಹೊಂಡದಲ್ಲಿ, ಗ್ರಾಮದ ಮಳೆ ನೀರನ್ನು ಕೆರೆಗಳಲ್ಲಿ ಸಂಗ್ರಹಿಸಿ, ಸಂರಕ್ಷಿಸಿ ಜಾಣ್ಮೆಯಿಂದ ಬಳಕೆ ಮಾಡಿದರೆ ಗ್ರಾಮಗಳ ಉದ್ಧಾರ ಸಾಧ್ಯವಾಗುತ್ತದೆ.

ಎಚ್.ಆರ್.ಪ್ರಕಾಶ್, ಕೆ.ಬಿ.ದೊಡ್ಡಿ, ಮಂಡ್ಯ

ಶಿಷ್ಯವೇತನಕ್ಕೆ ಅರ್ಜಿ: ಅವಧಿ ವಿಸ್ತರಿಸಿ

ರಾಜ್ಯದಲ್ಲಿ ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಪ್ರವೇಶಾತಿ ಹಾಗೂ ಪರೀಕ್ಷೆಗೆ ಯುಯುಸಿಎಂಎಸ್ ತಂತ್ರಾಂಶದಲ್ಲಿಯೇ ಅರ್ಜಿ ಸಲ್ಲಿಸುವುದನ್ನು ಕಡ್ಡಾಯ ಮಾಡಲಾಗಿದೆ. ಅಲ್ಲದೆ ಎಸ್.ಸಿ., ಎಸ್.ಟಿ., ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತ ವಿದ್ಯಾರ್ಥಿಗಳು ಶಿಷ್ಯವೇತನಕ್ಕೆ ಎಸ್‌ಎಸ್‌ಪಿ ಪೋರ್ಟಲ್ ಮೂಲಕವೇ ಅರ್ಜಿ ಸಲ್ಲಿಸುವುದು ಕಡ್ಡಾಯವಾಗಿದೆ. ಆದರೆ ಕೆಲವು ತಿಂಗಳುಗಳಿಂದ ಈ ಎರಡೂ ಸಾಫ್ಟ್‌ವೇರ್‌ಗಳಲ್ಲಿ ತಾಂತ್ರಿಕ ತೊಂದರೆ ಉಂಟಾಗಿದ್ದು, ಇದರಿಂದ ಹಲವಾರು ವಿದ್ಯಾರ್ಥಿಗಳು ಶಿಷ್ಯವೇತನಕ್ಕೆ ಅರ್ಜಿ ಸಲ್ಲಿಸಲು ಸಾಧ್ಯವಾಗಿಲ್ಲ. ಈಗ ಈ ಸಾಫ್ಟ್‌ವೇರ್‌ಗಳ ತಾಂತ್ರಿಕ ಸಮಸ್ಯೆಗಳನ್ನು ಪರಿಹರಿಸಲಾಗಿದೆ. ಆದರೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಶಿಷ್ಯವೇತನಗಳಿಗೆ ಅರ್ಜಿ ಸಲ್ಲಿಸುವ ದಿನಾಂಕ ಮುಕ್ತಾಯವಾಗಿರುವುದರಿಂದ ವಿದ್ಯಾರ್ಥಿಗಳು ಸಂಕಷ್ಟಕ್ಕೆ ಈಡಾಗಿದ್ದಾರೆ. ಆರ್ಥಿಕ ತೊಂದರೆಯಿಂದ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಹೊಡೆತ ಬೀಳುವಂತಾಗಿದೆ. ಹಲವು ವಿದ್ಯಾರ್ಥಿಗಳು ಶಿಷ್ಯವೇತನಕ್ಕೆ ಅರ್ಜಿ ಸಲ್ಲಿಸಲಾಗದೆ ತ್ರಿಶಂಕು ಸ್ಥಿತಿಯಲ್ಲಿದ್ದಾರೆ.

ಎಸ್.ಸಿ., ಎಸ್.ಟಿ. ವಿದ್ಯಾರ್ಥಿಗಳಿಗೆ ಅರ್ಜಿ ಸಲ್ಲಿಸುವ ಅವಧಿಯನ್ನು ಈಗಾಗಲೇ ವಿಸ್ತರಿಸಲಾಗಿದೆ. ಹಾಗೆಯೇ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಅರ್ಜಿ ಸಲ್ಲಿಕೆ ಅವಧಿಯನ್ನೂ ವಿಸ್ತರಿಸುವ ಮೂಲಕ ಅವರ ತೊಂದರೆಯನ್ನು ಸರಿಪಡಿಸಬೇಕು.

ಪ್ರೀತಿ ಮಾಳವಾದೆ, ದೀಕ್ಷಾ ಮುಚ್ಚಂಡಿ, ಲಕ್ಷ್ಮಿ ಶಿವಣ್ಣ, ಮಲ್ಲಮ್ಮ ಪೂಜಾರಿ, ಶೃತಿ ಬೇಳ್ಳುಂಡಗಿ, ಸುನಂದಾ ಪಟ್ಟಣಶೆಟ್ಟಿ, ಆಸಮಾ ಪಲ್ಲನ, ಸಮೀರಾ ಖಾನ್, ವಿಜಯಪುರ

ಮಟ್ಕಾ ಪ್ರಪಂಚಕ್ಕೆ ಇಲ್ಲ ಕಡಿವಾಣ

ಅಂಕೋಲಾದಲ್ಲಿ ಮಟ್ಕಾ ಆಟ ತಹಬಂದಿಗೆ ಬರುತ್ತಿಲ್ಲ. ಪೊಲೀಸರು ಈ ವಿಷಯದಲ್ಲಿ ನಿರ್ಲಕ್ಷ್ಯವಹಿಸಿರುವುದು ಅನುಮಾನಗಳಿಗೆ ಕಾರಣವಾಗಿದೆ. ಈಗಾಗಲೇ ಪತ್ರಿಕೆಗಳು ಹಾಗೂ ಅಧಿಕಾರಿಗಳ ಮೂಲಕ ಗಮನ ಸೆಳೆದರೂ ಓಸಿ ಬುಕ್ಕಿದಾರರು ಕ್ಯಾರೇ ಅನ್ನುತ್ತಿಲ್ಲ. ಈಗ ಚುನಾವಣೆಯ ನೀತಿ ಸಂಹಿತೆ ಜಾರಿಯಲ್ಲಿ ಇರುವುದರ ನಡುವೆಯೂ ಮಟ್ಕಾ ಬುಕ್ಕಿಗಳು ರಾಜಕೀಯ ಮಾಡಲು ಶುರು ಮಾಡಿದ್ದಾರೆ ಎನ್ನಲಾಗುತ್ತಿದೆ. ಚಿಕ್ಕಪುಟ್ಟ ಬುಕ್ಕಿಗಳಿಗೆ 'ನೀವು ಇಂತಹದೇ ಪಕ್ಷಕ್ಕೆ ಸಹಾಯ ಮಾಡಬೇಕು' ಎಂದು ಫರ್ಮಾನು ಹೊರಡಿಸಲು ಆರಂಭಿಸಿದ್ದಾರೆ ಎಂಬ ಮಾತು ಕೇಳಿಬಂದಿದ್ದು, ಇದು ಅಪಾಯಕ್ಕೆ ಕಟ್ಟಿಟ್ಟ ಬುತ್ತಿ. ಈ ಮೂಲಕ ಹಣವೂ ಅದಲುಬದಲು ಆಗುವ ಸಾಧ್ಯತೆಯಿದೆ. ಸಂಬಂಧಿಸಿದ ಅಧಿಕಾರಿಗಳು ಚುನಾವಣೆ ಮುಗಿಯುವತನಕವಾದರೂ ಮಟ್ಕಾ ಆಟಕ್ಕೆ ಕಡಿವಾಣ ಹಾಕುವುದು ಸೂಕ್ತ.

ಚಂದ್ರಕಾಂತ ನಾಮಧಾರಿ, ಅಂಕೋಲಾ

ಬರ ಪರಿಹಾರ: ಕುರುಡು ಕಾರಣ ಸಲ್ಲ

ಕರ್ನಾಟಕವು ಬರ ಪರಿಹಾರದ ವಿಷಯದಲ್ಲಿ ರಾಜಕೀಯ ಮಾಡುತ್ತಿದೆ ಎಂದು ಆರೋಪಿಸಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ, ರಾಜ್ಯ ಸರ್ಕಾರ ಈ ವಿಷಯದಲ್ಲಿ ನಿರ್ಲಕ್ಷ್ಯದಿಂದ ಇದ್ದುದಲ್ಲದೆ ಮೂರು ತಿಂಗಳು ತಡವಾಗಿ ಮನವಿ ಸಲ್ಲಿಸಿದೆ ಎಂದು ಹೇಳಿದ್ದಾರೆ. ಅಂದರೆ ಇನ್ನೂ ಪರಿಹಾರ ದೊರೆಯದೇ ಇರುವುದಕ್ಕೆ ರಾಜ್ಯ ಸರ್ಕಾರ ಕಾರಣ ಎನ್ನುವುದು ಅಮಿತ್ ಶಾ ಅವರ ಅಭಿಪ್ರಾಯ. ಹಾಗಾದರೆ ರಾಜ್ಯದಲ್ಲಿ ಬರಪೀಡಿತ ಪ್ರದೇಶಗಳ ಪರಿಸ್ಥಿತಿಯನ್ನು ಖುದ್ದಾಗಿ ಅರಿಯಲು ಕೇಂದ್ರದಿಂದ ವೀಕ್ಷಕರ ತಂಡ ಬಂದಿದ್ದು ಹೇಗೆ? ಕೇಂದ್ರವೇ ತಾನಾಗಿ ವೀಕ್ಷಕರನ್ನು ಕಳಿಸಿ ವರದಿ ತರಿಸಿಕೊಂಡಿತೇ? ರಾಜ್ಯ ಸರ್ಕಾರ ನೆರವಿಗಾಗಿ ಕೇಂದ್ರಕ್ಕೆ ಮನವಿ ಸಲ್ಲಿಸಿತ್ತು ತಾನೇ? ಸಕಾಲದಲ್ಲಿ ಮನವಿ ಸಲ್ಲಿಸದಿದ್ದಲ್ಲಿ ನೆರವು ನೀಡಬಾರದೆಂಬ ನಿಯಮ ಇರಲು ಸಾಧ್ಯವಿಲ್ಲ. ಕೇಂದ್ರದ ತಂಡ ಸಲ್ಲಿಸಿದ್ದ ವರದಿಯ ಸ್ಥಿತಿಯೇನು? ಅದರ ಶಿಫಾರಸುಗಳೇನು?

ಬರ ಪರಿಹಾರ ನಿಧಿ ಇರುವುದು ಕೇಂದ್ರವು ರಾಜ್ಯಗಳಿಗೆ ಬರ ಪರಿಸ್ಥಿತಿಯಲ್ಲಿ ನೆರವಿಗೆ ಬರಲೆಂದು. ರಾಜ್ಯ ಸರ್ಕಾರವು ಕೇಂದ್ರದ ನೆರವಿಗಾಗಿ ಮನವಿ ಸಲ್ಲಿಸಿದೆ ಎಂದು ಮುಖ್ಯಮಂತ್ರಿ ಹೇಳುತ್ತಾರೆ. ಅಲ್ಲದೆ ಈ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಮತ್ತು ಅಮಿತ್ ಶಾ ಅವರನ್ನು ಖುದ್ದಾಗಿ ಭೇಟಿಯಾಗಿದ್ದಾರೆ. ಹಿಂದಿನ ಆರೇಳು ತಿಂಗಳುಗಳಿಂದಲೂ ರಾಜ್ಯ ಸರ್ಕಾರ ಈ ಕುರಿತು ಪ್ರಸ್ತಾಪ ಮಾಡುತ್ತಲೇ ಇದೆ. ಒಂದು ವೇಳೆ ಸರ್ಕಾರ ತಡವಾಗಿ ಮನವಿ ಸಲ್ಲಿಸಿದ್ದರೂ ರಾಜ್ಯದಲ್ಲಿ ಬರ ಪರಿಸ್ಥಿತಿ ಇರುವುದನ್ನು ಕೇಂದ್ರ ಅಲ್ಲಗಳೆಯಲು ಸಾಧ್ಯವಿಲ್ಲ. ಹೀಗಿರುವಾಗ, ಕೇಂದ್ರವು ಕುರುಡು ಕಾರಣ ಕೊಟ್ಟು ಹೊಣೆಗಾರಿಕೆಯಿಂದ ಜಾರಿಕೊಳ್ಳಲು ಪ್ರಯತ್ನಿಸುವುದು ತರವಲ್ಲ. ನಮ್ಮ ಬಿಜೆಪಿ ಸಂಸದರು ಯಾರೂ ಈ ಬಗ್ಗೆ ಗಮನಹರಿಸಿಯೇ ಇಲ್ಲ. ಎಂಥ ದುರ್ದೈವ! ಈ ವಿಷಯದಲ್ಲಿ ಕೇಂದ್ರದ ನಡೆ ಅಕ್ಷಮ್ಯ.

ಸಾಮಗ ದತ್ತಾತ್ರಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಲಡಾಖ್ ನೆಲವನ್ನು ಸರ್ಕಾರ ಚೀನಾಕ್ಕೆ ಬಿಟ್ಟುಕೊಟ್ಟಿತೇ?

ಪೂರ್ವ ಲಡಾಖ್‌ನಲ್ಲಿ ಚೀನಾ ಸೇನೆಯು ಭಾರತದ ನೆಲವನ್ನು ಅತಿಕ್ರಮಿಸಿದೆ. ಭಾರತ ಸರ್ಕಾರವು ಸಾವಿರಾರು ಚದರ ಕಿ.ಮೀ. ನಷ್ಟು ಪ್ರದೇಶವನ್ನು ಚೀನಾಕ್ಕೆ ಬಿಟ್ಟುಕೊಟ್ಟಿದೆ ಎಂಬುದು ಲಡಾಖ್ ನಿವಾಸಿಗಳ ಮತ್ತು ವಿರೋಧ ಪಕ್ಷಗಳ ಆರೋಪ. ಕೇಂದ್ರ ಸರ್ಕಾರ ಇದನ್ನು ನಿರಾಕರಿಸುತ್ತಲೇ ಇದೆ. ಆದರೆ ವಾಸ್ತವದಲ್ಲಿ ಲಡಾಖ್‌ನ ಹಲವು ಪ್ರದೇಶಗಳ ಮೇಲೆ ಕೇಂದ್ರ ಸರ್ಕಾರವು ಭಾರತದ ಹಕ್ಕನ್ನು ಬಿಟ್ಟುಕೊಟ್ಟಿದೆ, ಬಫರ್ ಝೋನ್ ಹೆಸರಿನಲ್ಲಿ. ಕೇಂದ್ರ ಸರ್ಕಾರದ ಪತ್ರಿಕಾ ಪ್ರಕಟಣೆಗಳೇ ಇದನ್ನು ದೃಢಪಡಿಸುತ್ತವೆ

ಪ್ರಜಾವಾಣಿ ವಾರ್ತೆ

ಲಡಾಖ್ ಪೂರ್ಣ ಪ್ರಮಾಣದಲ್ಲಿ ಭಾರತದ ನಿಯಂತ್ರಣದಲ್ಲಿ ಇಲ್ಲ. ಸ್ವಾತಂತ್ರ್ಯಾನಂತರ ರೂಪಿಸಲಾದ ಗಡಿಗಳನ್ನು ಚೀನಾ ಒಪ್ಪಿಕೊಂಡಿಲ್ಲ. ಪೂರ್ವ ಲಡಾಖ್‌ನ 60,000 ಚದರ ಕಿ.ಮೀ.ಗಿಂತಲೂ ಹೆಚ್ಚು ಪ್ರದೇಶವು ತನ್ನದೆಂದು ಚೀನಾ ಪ್ರತಿಪಾದಿಸುತ್ತಿದೆ. ಅಲ್ಲಿ ಒಪ್ಪಿತ ಅಂತರರಾಷ್ಟ್ರೀಯ ಗಡಿ ಇಲ್ಲ. 1962ರ ಯುದ್ಧದ ನಂತರ ಎರಡೂ ದೇಶಗಳ ಸೇನೆಗಳು ತಾತ್ಕಾಲಿಕ ಕದನ ವಿರಾಮ ರೇಖೆಯನ್ನು ಘೋಷಿಸಿಕೊಂಡವು. ಅದೇ ವಾಸ್ತವ ನಿಯಂತ್ರಣ ರೇಖೆ (ಎಲ್‌ಎಸಿ). 1962ರ ನಂತರ ಈ ರೇಖೆಯಲ್ಲಿ ಗಮನಾರ್ಹ ಬದಲಾವಣೆ ಇರಲಿಲ್ಲ. ಆದರೆ 2020ರ ನಂತರ ಈ ರೇಖೆಯನ್ನು ಬದಲಿಸಲು ಚೀನಾ ಯತ್ನಿಸಿದೆ. ಅದರ ಫಲವಾಗಿಯೇ 2020ರ ಮೇ–ಜೂನ್–ಅಕ್ಟೋಬರ್‌ನಲ್ಲಿ ಗಾಲ್ವಾನ್, ಪ್ಯಾಂಗಾಂಗ್ ಸರೋವರದ ಬಳಿ ಭಾರತ–ಚೀನಾ ಸೈನಿಕರ ನಡುವೆ ಸಂಘರ್ಷ ನಡೆಯಿತು. ಸಂಘರ್ಷ ತೀವ್ರವಾದಾಗ ಎರಡೂ ಕಡೆಯಿಂದ ಭಾರಿ ಪ್ರಮಾಣದಲ್ಲಿ ಸೇನೆ ಜಮಾವಣೆ ನಡೆಸಿತ್ತು. ನಂತರದ ದಿನಗಳಲ್ಲಿ ಮಾತುಕತೆಯ ಮೂಲಕ ಸೇನೆಗಳನ್ನು ಹಿಂದಕ್ಕೆ ಕರೆಸಿಕೊಳ್ಳಲು ಒಪ್ಪಲಾಯಿತು. ಆದರೆ ವಾಸ್ತವದಲ್ಲಿ ಭಾರತವೇ ತನ್ನ ನೆಲವನ್ನು ಬಿಟ್ಟುಕೊಟ್ಟಂತಾಗಿದೆ.

ಈ ಸಂಘರ್ಷಗಳ ನಂತರ ಎರಡೂ ಸೇನೆಯ ಅಧಿಕಾರಿಗಳು ಹಲವು ಸುತ್ತಿನ ಮಾತುಕತೆ ನಡೆಸಿದ್ದರು. ಅನಂತರ ಹೆಚ್ಚಿನ ಸೈನಿಕರನ್ನು ವಾಪಸ್ ಕರೆಸಿಕೊಳ್ಳಲು ಒಪ್ಪಿದ್ದರು. ಚೀನಾ ಸೈನಿಕರು ಎಲ್‌ಎಸಿ ದಾಟಿ ಬಂದಿದ್ದರಿಂದಲೇ ಸಂಘರ್ಷ ನಡೆದಿದ್ದದ್ದು. ಆದರೆ ವಾಪಸ್ ಕರೆಸಿಕೊಳ್ಳುವಾಗ ಸಂಘರ್ಷದ ಜಾಗದಿಂದ ಹಲವು ಕಿ.ಮೀ.ವರೆಗೆ 'ಬಫರ್ ಝೋನ್' ರೂಪಿಸಬೇಕು. ಅಲ್ಲಿಗೆ ಎರಡೂ ಕಡೆಯ ಸೈನಿಕರು ಪ್ರವೇಶಿಸಬಾರದು ಎಂದು ಚೀನಾ ಷರತ್ತು ಹಾಕಿತ್ತು. ಹೀಗೆ ನಿರ್ಮಿಸಲಾದ ಬಫರ್ ಝೋನ್ ಸಂಪೂರ್ಣವಾಗಿ ಭಾರತದ ನೆಲದಲ್ಲಿ ಇತ್ತು. ಭಾರತವು ತಾನು ಈ ಹಿಂದೆ ಗಸ್ತು ನಡೆಸುತ್ತಿದ್ದ ಠಾಣೆಗೇ ಪ್ರವೇಶಿಸದಂತಹ ಪರಿಸ್ಥಿತಿ ನಿರ್ಮಾಣವಾಯಿತು. ಲಡಾಖ್‌ನ ಗೋಗ್ರಾ ನೆಲೆಯ ಸಮೀಪದ ಮತ್ತು ಪ್ಯಾಂಗಾಂಗ್ ಸರೋವರದ ಉತ್ತರ ದಂಡೆಯಲ್ಲಿನ ಹಲವು ಗಸ್ತು ಠಾಣೆಗಳನ್ನು ಕೇಂದ್ರ ಸರ್ಕಾರವು ಈ ರೂಪದಲ್ಲಿ ಬಿಟ್ಟುಕೊಟ್ಟಿದೆ.

ಈ ಬಗ್ಗೆ 2021ರ ಫೆಬ್ರುವರಿಯಲ್ಲಿ ರಾಜ್ಯಸಭೆಯಲ್ಲಿ ವಿರೋಧ ಪಕ್ಷಗಳ ಸಂಸದರು ಪ್ರಶ್ನೆ ಎತ್ತಿದ್ದಾಗ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಉತ್ತರ ನೀಡಿದ್ದರು. 'ಸಂಘರ್ಷದ ನೆಲೆಗಳಲ್ಲಿ ಮುಂದಿನ ಆದೇಶದವರೆಗೆ ಎರಡೂ ಕಡೆಯಿಂದ ಹೊಸ ತುಕಡಿಗಳನ್ನು ನಿಯೋಜಿಸುವಂತಿಲ್ಲ. ಇದು ಸಂಘರ್ಷ ಕೊನೆಯಾಗುವವರೆಗೆ ಮಾತ್ರ. ಅನಂತರ ಸೇನೆ ನಿಯೋಜಿಸಬಹುದು' ಎಂದು ರಾಜನಾಥ್ ಹೇಳಿದ್ದರು. ಆದರೆ ಈವರೆಗೆ ಆ ಪ್ರದೇಶಗಳಲ್ಲಿ ಮತ್ತೆ ಗಸ್ತು ನಡೆಸಲು ಭಾರತದ ಸೈನಿಕರಿಗೆ ಸಾಧ್ಯವಾಗಿಲ್ಲ.

ಗಸ್ತು ಠಾಣೆ 15, ಗಸ್ತು ಠಾಣೆ 17ಎ, ಕೈಲಾಶ್ ಪಾಸ್, ಗಾಲ್ವಾನ್ ಕಣಿವೆ ಬಳಿಯ ಗಸ್ತು ಠಾಣೆ 10, 11, 12, 12ಎ ಮತ್ತು 13ರನ್ನು ಹೀಗೆ ಬಿಟ್ಟುಕೊಡಲಾಗಿದೆ. ಈ ಪ್ರದೇಶಗಳಲ್ಲಿ ಚೀನಾವು ಎಲ್‌ಎಸಿಯನ್ನು ದಾಟಿ ಒಳಗೆ ಬಂದಿದೆ. ಈ ಹಿಂದೆ ಇಲ್ಲೆಲ್ಲಾ ಭಾರತದ ಸೈನಿಕರು ಗಸ್ತು ನಡೆಸುತ್ತಿದ್ದರು. ಆದರೆ ಈಗಿನ ಒಪ್ಪಂದದ ಪ್ರಕಾರ ಭಾರತದ ಸೈನಿಕರು ಈ ಗಸ್ತುಠಾಣೆಗಳಿಗೆ ಹೋಗುವಂತಿಲ್ಲ. ಈ ರೂಪದಲ್ಲಿ ಭಾರತದ ನೆಲವನ್ನು ಕೇಂದ್ರ ಸರ್ಕಾರವು ಬಿಟ್ಟುಕೊಟ್ಟಿದೆ. ಇದನ್ನೇ ಲಡಾಖ್‌ನ ಜನರು, ಸಾಮಾಜಿಕ ಕಾರ್ಯಕರ್ತರು, ಜನಪ್ರತಿನಿಧಿಗಳು, ಲಡಾಖ್‌ನ ಬಿಜೆಪಿ ಸಂಸದ ಜೆ.ಟಿ.ನಾಮಗ್ಯಲ್ ಅವರೂ ಚೀನಾವು ಭಾರತದ ನೆಲವನ್ನು ಅತಿಕ್ರಮಿಸಿದೆ ಎಂದು ಹೇಳುತ್ತಿದ್ದಾರೆ. ಆದರೆ ಕೇಂದ್ರದ ಬಿಜೆಪಿ ನೇತೃತ್ವದ ಸರ್ಕಾರ ಮಾತ್ರ ಇದನ್ನು ನಿರಾಕರಿಸುತ್ತಿದೆ.



ಪ್ಯಾಂಗಾಂಗ್ ಸರೋವರ

ಪ್ಯಾಂಗಾಂಗ್ ಸರೋವರದ ಉತ್ತರ ದಂಡೆಯಲ್ಲಿರುವ ಪರ್ವತಗಳ ಚಾಚುಗಳನ್ನು 'ಫಿಂಗರ್'ಗಳು ಎಂದು ಕರೆಯಲಾಗುತ್ತದೆ. ಭಾರತದ ನೆಲದಲ್ಲಿರುವ ಸರೋವರದ ಉತ್ತರದ ದಂಡೆಯಲ್ಲಿ ಇಂತಹ ಎಂಟು ಫಿಂಗರ್‌ಗಳನ್ನು ಗುರುತಿಸಲಾಗಿದೆ. ಈ ಎಂಟೂ ಫಿಂಗರ್‌ಗಳವರೆಗೆ ಭಾರತದ ಸೈನಿಕರು ಗಸ್ತು ನಡೆಸಬಹುದಿತ್ತು. ಆದರೆ 2020ರಲ್ಲಿನ ಸಂಘರ್ಷದ ವೇಳೆ ಚೀನಾ ಸೈನಿಕರು ಫಿಂಗರ್ 5ವರೆಗೆ ಅತಿಕ್ರಮಣ ಮಾಡಿದ್ದರು. ಒಪ್ಪಂದದ ನಂತರ ಚೀನಾ ಸೇನೆ ಅಲ್ಲಿಂದ ವಾಪಸ್ ತೆರಳಬೇಕು ಎಂದು ಭಾರತ ಷರತ್ತು ಹಾಕಿತ್ತು. ಭಾರತವು ಫಿಂಗರ್ 5ವರೆಗೆ ಮಾತ್ರ ಗಸ್ತು ನಡೆಸಬೇಕು ಎಂದು ಚೀನಾ ಷರತ್ತು ಹಾಕಿತ್ತು. ಇದಕ್ಕೆ ಕೇಂದ್ರ ಸರ್ಕಾರ ಒಪ್ಪಿಕೊಂಡಿತ್ತು. ಈ ಪ್ರಕಾರ ಫಿಂಗರ್ 4ರಿಂದ ಫಿಂಗರ್–8ರವರೆಗೆ ಸುಮಾರು 8 ಕಿ.ಮೀ. ದೂರದಷ್ಟು ಪ್ರದೇಶವನ್ನು ಭಾರತದ ಬಿಟ್ಟುಕೊಟ್ಟಂತಾಗಿದೆ. ಇದೇ ಅವಧಿಯಲ್ಲಿ ಚೀನಾ ಫಿಂಗರ್–5ರವರೆಗೆ ಸುಸಜ್ಜಿತ ಹೆದ್ದಾರಿ ಮತ್ತು ಸೇನಾಠಾಣೆಗಳನ್ನು ನಿರ್ಮಿಸಿದೆ. ಬಂಕರ್‌ಗಳನ್ನೂ ನಿರ್ಮಿಸಿದೆ.



26 ಗಸ್ತು ಠಾಣೆಗಳು....

ಲಡಾಖ್‌ನಲ್ಲಿ ಇರುವ ಎಲ್‌ಎಸಿಯ ಉದ್ದಕ್ಕೂ 65 ಗಸ್ತು ಠಾಣೆಗಳನ್ನು ಭಾರತವು ಹೊಂದಿತ್ತು. ಅವುಗಳಲ್ಲಿ ಈಗ 26ಕ್ಕೂ ಹೆಚ್ಚು ಗಸ್ತು ಠಾಣೆಗಳನ್ನು ಕಳೆದುಕೊಂಡಿದೆ ಎನ್ನುತ್ತದೆ ಲಡಾಖ್‌ನ ಎಸ್‌ಪಿ ಪಿ.ಡಿ.ನಿತ್ಯಾ ಅವರ ವರದಿ. ಕೇಂದ್ರ ಗೃಹ ಸಚಿವಾಲಯವು 2023ರ ಜನವರಿ 20–22ರಂದು ದೆಹಲಿಯಲ್ಲಿ ಆಯೋಜಿಸಿದ್ದ 57ನೇ ಅಖಿಲ ಭಾರತ ಪೊಲೀಸ್ ಮಹಾನಿರ್ದೇಶಕರ ವಾರ್ಷಿಕ ಸಮ್ಮೇಳನದಲ್ಲಿ ಆ ವರದಿಯನ್ನು ಮಂಡಿಸಲಾಗಿತ್ತು. 'ಸೇನೆಯು ಗಸ್ತು ತಿರುಗದೇ ಇರುವುದರಿಂದ ಮತ್ತು ಜನರೂ ಅತ್ತ ಸುಳಿಯದಂತೆ ನಿರ್ಬಂಧ ಹೇರಿರುವ ಕಾರಣ, ಆ ಗಸ್ತು ಠಾಣೆಗಳಿಗೆ ಮತ್ತೆ ಹೋಗಲು ಚೀನಾ ಸೇನೆ ಬಿಡುತ್ತಿಲ್ಲ. 2014ರ ನಂತರ ಸೇನೆ ಇಂತಹ ನೀತಿ ಅನುಸರಿಸುತ್ತಿದೆ. ಇದರಿಂದ ಭಾರತವು ಒಟ್ಟು 26 ಗಸ್ತು ಠಾಣೆಗಳನ್ನು ಕಳೆದುಕೊಂಡಂತಾಗಿದೆ' ಎಂದು ವರದಿಯಲ್ಲಿ ವಿವರಿಸಲಾಗಿತ್ತು.

ಅಂತಹ ಒಂದು ಗಸ್ತು ಠಾಣೆಯ ಬಗ್ಗೆ ವರದಿಯಲ್ಲಿ ವಿವರವನ್ನೂ ನೀಡಲಾಗಿತ್ತು. '2021ರ ಸೆಪ್ಟೆಂಬರ್‌ವರೆಗೂ ದೌಲತ್ ಬಾಗ್ ಓಲ್ಡಿ ಸೇನಾ ನೆಲೆಯಿಂದ 35 ಕಿ.ಮೀ. ದೂರದಲ್ಲಿರುವ ಕಾರಕೋರಂ ಪಾಸ್‌ವರೆಗೂ ಜಿಲ್ಲಾಧಿಕಾರಿಗಳು, ಸರ್ಕಾರಿ ಅಧಿಕಾರಿಗಳು ಆರಾಮವಾಗಿ ಹೋಗಬಹುದಿತ್ತು. ಆದರೆ 2021ರ ಡಿಸೆಂಬರ್‌ನಂತರ ಸೇನಾ ನೆಲೆಯಲ್ಲೇ ಅಧಿಕಾರಿಗಳನ್ನು ಮತ್ತು ನಾಗರಿಕರನ್ನು ಸೇನಾಧಿಕಾರಿಗಳು ತಡೆಯುತ್ತಾರೆ. ಇಲ್ಲಿಂದ ಮುಂದಕ್ಕೆ ಹೋದರೆ ಚೀನಾ ಸೈನಿಕರು ತಕರಾರು ತೆಗೆಯುತ್ತಾರೆ ಎಂದು ಹೇಳುತ್ತಾರೆ' ಎಂದು ವರದಿಯಲ್ಲಿ ವಿವರಿಸಲಾಗಿತ್ತು. ಆ ಸಮ್ಮೇಳನದಲ್ಲಿ ಮಂಡನೆಯಾಗಿದ್ದ ಎಲ್ಲಾ ವರದಿಗಳನ್ನು ಒಳಗೊಂಡ ಪುಸ್ತಕವನ್ನು ಗೃಹ ಸಚಿವಾಲಯವು ಪ್ರಕಟಿಸಿತ್ತು. ನಿತ್ಯಾ ಅವರ ವರದಿಯಲ್ಲಿನ ಅಂಶಗಳ ಬಗ್ಗೆ ಮಾಧ್ಯಮಗಳು ವರದಿ ಪ್ರಕಟಿಸಿದ ಬೆನ್ನಲ್ಲೇ ಆ ಪುಸ್ತಕವನ್ನು ತಡೆಹಿಡಿಯಲಾಯಿತು ಮತ್ತು ಪರಿಷ್ಕೃತ ಆವೃತ್ತಿಯನ್ನು ಬಿಡುಗಡೆ ಮಾಡಲಾಯಿತು. ಆ ಆವೃತ್ತಿಯಲ್ಲಿ ನಿತ್ಯಾ ಅವರ ವರದಿಯನ್ನು ಕೈಬಿಡಲಾಗಿದೆ.

'ನಮ್ಮ ನೆಲದಲ್ಲಿ ಚೀನಾ'

'ಚೀನಾವು ಲಡಾಖ್ ಅನ್ನು ಮುತ್ತುತ್ತಿದೆ. ಇಲ್ಲಿನ ಉತ್ತರ ದಿಕ್ಕಿನಿಂದ ಸುಮಾರು 4 ಸಾವಿರ ಚದರ ಕಿ.ಮೀ ಅನ್ನು ಚೀನಾ ಆಕ್ರಮಿಸಿದೆ. ಹೀಗೆ ಹೇಳಿದ ನನ್ನನ್ನು ದೇಶದ್ರೋಹಿ ಅನ್ನುತ್ತಾರೆ. 10 ಸಾವಿರ ಲಡಾಖ್ ಜನರೊಂದಿಗೆ 'ಗಡಿಯತ್ತ ನಡಿಗೆ' ಕಾರ್ಯಕ್ರಮವನ್ನು ಏಪ್ರಿಲ್ 7ರಂದು ಮಾಡಲಿದ್ದೇವೆ. ಚೀನಾವು ಭಾರತದ ಒಳಗೆ ಬಂದಿರುವುದನ್ನು ಅಂದು ಸಾಕ್ಷ್ಯ ಸಮೇತ ತೋರಿಸುತ್ತೇವೆ. ಭಾರತ–ಚೀನಾ ಗಡಿ ಪ್ರದೇಶದಲ್ಲಿರುವ ಲಡಾಖ್‌ನ ಅಲೆಮಾರಿ ಜನಾಂಗದವರು ನಡಿಗೆಯನ್ನು ಮುನ್ನಡೆಸಲಿದ್ದಾರೆ'

–ಇದು ಖ್ಯಾತ ಪರಿಸರ ಹೋರಾಟಗಾರ ಸೋನಮ್ ವಾಂಗ್ಚುಕ್ ಅವರ ಮಾತುಗಳು. 'ಭಾರತ–ಚೀನಾ ಗಡಿ ಪ್ರದೇಶದಲ್ಲಿನ ಜನರು ಹಾಗೂ ಅಲೆಮಾರಿ ಬುಡಕಟ್ಟು ಜನಾಂಗದವರು ನಡಿಗೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ತಮ್ಮ ಜಮೀನುಗಳನ್ನು ಚೀನಾದವರು ಹಾಗೂ ಉದ್ಯಮಿಗಳು ಕಬಳಿಸಿದ್ದಾರೆ ಎಂಬುದನ್ನು ಅವರು ಮೊದಲಿನಿಂದಲೂ ಹೇಳುತ್ತಿದ್ದಾರೆ. ಇದನ್ನು ಏಪ್ರಿಲ್ 7ರಂದು ಜಗತ್ತಿಗೇ ಅವರು ತೋರಿಸಲಿದ್ದಾರೆ. ತಮ್ಮ ಜಾಗವನ್ನೂ ಚೀನಾದವರು ಆಕ್ರಮಿಸಿದ್ದಾರೆ ಎಂದು ಸ್ಥಳೀಯ ಕುರಿಗಾಹಿಗಳು ಆರೋಪಿಸುತ್ತಲೇ ಇದ್ದಾರೆ. ತಮ್ಮ ಕುರಿಗಳನ್ನು ಮೇಯಿಸುವ ಕೆಲವು ಪ್ರದೇಶವು ಚೀನಾದ ಹಿಡಿತದಲ್ಲಿದೆ. ಕೆಲವೊಮ್ಮೆ ಕುರಿಗಾಹಿಗಳು ಹಾಗೂ ಚೀನಾದ ಗಸ್ತು ಸೈನಿಕರ ನಡುವೆ ಘರ್ಷಣೆ ಕೂಡ ನಡೆದಿದೆ ಎಂದು ಸ್ಥಳೀಯರು ಹೇಳುತ್ತಾರೆ' ಎಂದೂ ವಾಂಗ್ಚುಕ್ ಅವರು ರಾಯಿಟರ್ಸ್‌ಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

ಆಧಾರ: ರಾಯಿಟರ್ಸ್, ಡೆಕ್ಕನ್ ಹೆರಾಲ್ಡ್, ಲಡಾಖ್ ಎಸ್‌ಪಿಯಾಗಿದ್ದ ಪಿ.ಡಿ. ನಿತ್ಯಾ ಅವರು 57ನೇ ವಾರ್ಷಿಕ ಪೊಲೀಸ್ ಮಹಾನಿರ್ದೇಶಕರ ಸಮ್ಮೇಳನದಲ್ಲಿ ಮಂಡಿಸಿದ್ದ ವರದಿ, ಪಿಟಿಐ, ಸೋನಮ್ ವಾಂಗ್ಚುಕ್ ಅವರ ಸಾಮಾಜಿಕ ಜಾಲತಾಣ ಪೋಸ್ಟ್‌ಗಳು

ನಕ್ಷೆ ಕೃಪೆ: ಗೂಗಲ್ ಅರ್ಥ್

ಸಿನಿ ಬಿಟ್ಸ್

ಹೊಸಬರಿಗೆ ಶಿವರಾಜ್‌ಕುಮಾರ್ ಬೆಂಬಲ

ಬಹುತೇಕ ಹೊಸಬರಿಂದಲೇ ಕೂಡಿರುವ 'ವಿಕ್ಟೋರಿಯಾ ಮಾನ್ಷನ್' ಚಿತ್ರದ ಫಸ್ಟ್ ಲುಕ್ ಪೋಸ್ಟರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಹೊಸಬರ ಚಿತ್ರಗಳಿಗೆ ಸದಾ ಪ್ರೋತ್ಸಾಹ ನೀಡುವ ನಟ ಶಿವರಾಜ್‌ಕುಮಾರ್ ಈ ಚಿತ್ರದ ಪೋಸ್ಟರ್ ಬಿಡುಡಗೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು.

ರಾಜೇಶ್ ಬಲಿಪ ನಿರ್ದೇಶನದ ಚಿತ್ರಕ್ಕೆ ಉಮೇಶ್.ಕೆ.ಎನ್ ಅವರು ಪದ್ಮಾವತಿ ಪ್ರೊಡಕ್ಷನ್ ಮೂವೀ ಬ್ಯಾನರ್‌ದಲ್ಲಿ ಅಡಿಯಲ್ಲಿ ಬಂಡವಾಳ ಹೂಡಿದ್ದಾರೆ.

'ಚಿತ್ರರಂಗಕ್ಕೆ ಹೊಸ ಪ್ರತಿಭೆಗಳು ಬರಬೇಕು. ಆಗಲೇ ವಿನೂತನ ಕಥೆಗಳು ಬರುತ್ತವೆ. ಈ ಚಿತ್ರದ ಟೀಸರ್ ನೋಡಿದ್ದೇನೆ. ಹೊಸಬರದ್ದು ಅನ್ನಿಸುವುದಿಲ್ಲ. ಪ್ರಯತ್ನ ನಿರಂತರವಾಗಿರಲಿ' ಎಂದರು ಶಿವಣ್ಣ.

'1900ರಲ್ಲಿ ಹನುಮಗಿರಿ ಎಂಬ ಪುಟ್ಟ ಗ್ರಾಮದಲ್ಲಿ ಭೀಕರ ಘಟನೆಗಳು ನಡೆಯುತ್ತಿರುತ್ತವೆ. ಅಲ್ಲಿನ ವಿಚಿತ್ರ ಆಚರಣೆಗಳು ಎಷ್ಟೋ ಶತಮಾನಗಳಿಂದ ನಿಗೂಢ. ಇದನ್ನೇ ಕಥೆಯಾಗಿಸಿಕೊಂಡಿರುವ ಥ್ರಿಲ್ಲರ್ ಚಿತ್ರ' ಎಂದು ನಿರ್ದೇಶಕರು ತಿಳಿಸಿದರು.

ರಾಜೇಶ್‌ಗೆ ಕಾಶೀಮ ಜೋಡಿಯಾಗಿದ್ದಾರೆ. ಮಿಮಿಕ್ರಿ ಗೋಪಿ, ಮಠಕೊಪ್ಪಳ, ಶ್ರೀಧರ್, ಬಲ ರಾಜವಾಡಿ, ಗುರುದೇವ್ ನಾಗರಾಜ್ ಮುಂತಾದವರು ನಟಿಸುತ್ತಿದ್ದಾರೆ. ಸಂಗೀತ ಕಿರಣ್ ರವೀಂದ್ರನಾಥ್, ಛಾಯಾಚಿತ್ರಗ್ರಹಣ ವೀರೇಶ್ ಬುಗುಡೆ ಅವರದ್ದು. ಬೆಂಗಳೂರು, ಮಂಗಳೂರು, ಮೂಡಬಿದ್ರಿ, ಚಿಕ್ಕಮಗಳೂರು, ಬೇಲೂರಿನಲ್ಲಿ ಚಿತ್ರೀಕರಣಗೊಂಡಿದೆ.

ರಣವ್‌ಗೆ ಖಳನಾಗಿ ಬೆಳೆಯುವ ಕನಸು

'ಯುವರತ್ನ', 'ಅವತಾರ ಪುರುಷ' ಚಿತ್ರಗಳಲ್ಲಿ ಖಳನಟನಾಗಿದ್ದ ರಣವ್‌ಗೆ 'ಯುವ' ಸಿನಿಮಾದಲ್ಲಿ ಗುರುತಿಸಿಕೊಳ್ಳುವಂತಹ ಪಾತ್ರ ಸಿಕ್ಕಿದೆ. ಸದ್ಯ 'ಯುವ'ದ ಕೃಪಾಲ್ ಆಗಿ ಇವರನ್ನು ಜನ ಗುರುತಿಸುತ್ತಿದ್ದಾರೆ.

'ಪುನೀತ್ ರಾಜ್‌ಕುಮಾರ್ ಅವರ 'ಯುವರತ್ನ' ಸಿನಿಮಾದಿಂದ ಸ್ಯಾಂಡಲ್‌ವುಡ್‌ಗೆ ಕಾಲಿಟ್ಟೆ. ಸಿಕ್ಕ ಸಣ್ಣ ಅವಕಾಶಗಳಲ್ಲಿ ನಟನೆ ಸಾಬೀತುಪಡಿಸಿಕೊಂಡೆ. 'ಯುವ'ದ ಕೃಪಾಲ್ ಪಾತ್ರ ನನ್ನ ವೃತ್ತಿ ಬದುಕಿನ ತಿರುವು. ಪ್ರಮುಖ ಪಾತ್ರಗಳ ನಿರೀಕ್ಷೆಯಲ್ಲಿದ್ದೇನೆ' ಎನ್ನುತ್ತಾರೆ ಮೈಸೂರು ಮೂಲದ ರಣವ್ ಕ್ಷೀರಸಾಗರ್.

ಮೆಕ್ಯಾನಿಕಲ್ ಎಂಜಿನಿಯರಿಂಗ್ ಮುಗಿಸಿರುವ ರಣವ್, ಸಿನಿಮಾ ಕನಸಿನಿಂದ ನಟನೆ ತರಬೇತಿ ಪಡೆದುಕೊಂಡಿದ್ದಾರೆ. 'ಈಗಾಗಲೇ ನಾಲ್ಕೈದು ಸಿನಿಮಾ ಒಪ್ಪಿಕೊಂಡಿರುವೆ. ನಾವೇ ಎಲ್ಲವನ್ನೂ ಹೇಳಿಕೊಂಡರೆ ಚೆನ್ನಾಗಿರುವುದಿಲ್ಲ. ಸಿನಿಮಾ ತಂಡಗಳೇ ಅಧಿಕೃತವಾಗಿ ಘೋಷಿಸುತ್ತವೆ. ಪ್ರತಿ ನಟನ ಕನಸೂ ನಾಯಕನಾಗುವುದು. ಮೊದಲು ಖಳನಾಯಕನಾಗಿ ನೆಲಯೂರಬೇಕಿದೆ. ಸಿನಿಮಾಗಾಗಿಯೇ ಬದುಕಿನಲ್ಲಿ ಬೇರೆಲ್ಲ ದೂರ ಇಟ್ಟಿರುವೆ' ಎಂದು ತಮ್ಮೊಳಗಿನ ಸಿನಿಮಾ ಹಂಬಲ ಹಂಚಿಕೊಂಡರು.

ರಣವ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶುಕ್ರವಾರ ಏಪ್ರಿಲ್ 5, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಕೃಷ್ಣ ಏಕಾದಶಿ ಗಂ. 13-29 ನಕ್ಷತ್ರ: ಧನಿಷ್ಠ ಗಂ. 18-07 ಯೋಗ: ಸಾಧ್ಯಾ ಗಂ. 09-55 ಕರಣ: ಬಾಲವ ಗಂ. 13-29, ಮೀನ ಮಾಸದ 22 ನೇ ದಿನ, ಮಳೆನಕ್ಷತ್ರ: ರೇವತಿ 2.
ರಾಹುಕಾಲ : ಬೆಳಿಗ್ಗೆ 10-30 - 12-00, ಸೂರ್ಯೋದಯ : 06-27 ಸೂರ್ಯಾಸ್ತ : 06-39
ಮುಸ್ಲಿಂ ದಿನಾಂಕ : 25 ರಂಜಾನ್, ದಿನ ವಿಶೇಷ : ಜಮತ್-ಉಲ್-ವಿದಾ (ಮುಸ್ಲಿಂ), ಸ್ವಾಮಿ ಲೀಲಾ ಷಾಹ್ ಜನ್ಮದಿನಾಚರಣೆ(ಸಿಂಧಿ),
ಪಾಪಮೋಚಿನಿ ಏಕಾದಶಿ, ಅದೃಷ್ಟ ಸಂಖ್ಯೆ : 7, 1

ಮೇಷ: ತೋಟದ ಬೆಳೆಗಳಿಂದ ಉತ್ತಮ ಆದಾಯದೊಂದಿಗೆ ಮುಂದಿನ ಬೆಳೆಯ ವಿಸ್ತರಣೆಯ ಬಗ್ಗೆ ಯೋಚನೆ ನಡೆಸುವಿರಿ. ಸೌಂದರ್ಯ ಸಾಮಗ್ರಿಗಳ ಖರೀದಿಯ ಯೋಗವಿದೆ; ಅದಕ್ಕಾಗಿ ಅತಿಯಾಗಿ ಹಣ ವ್ಯಯವಾಗಲಿದೆ.

ವೃಷಭ: ಮುಕ್ತ ಮಾತುಕತೆ ಮೂಲಕ ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸಿಕೊಂಡು ಇರುವ ಅವಕಾಶಗಳನ್ನು ಮುಂದುವರಿಸುವಿರಿ. ಯಶಸ್ಸಿನ ಹೊಸ ಮಾರ್ಗಗಳ ಅರಿವಾಗುವುದು. ಸಂತಸದ ವಾತಾವರಣವಿರುತ್ತದೆ.

ಮಿಥುನ: ಸ್ವ ಉದ್ಯೋಗಿಗಳಿಂದ ಧನ ಸಹಾಯ ಸಿಗಲಿದೆ. ನ್ಯಾಯಾಂಗ ವಿಷಯದ ವಿದ್ಯಾರ್ಥಿಗಳು ವ್ಯಾಸಂಕ್ಕಾಗಿ ವಿದೇಶಕ್ಕೆ ತೆರಳುವ ಅವಕಾಶ ಒದಗಲಿದೆ. ಪ್ರಯಾಣದಲ್ಲಿ ವಿಳಂಬವಾಗುತ್ತದೆ.

ಕರ್ಕಾಟಕ: ಆಡಳಿತ ಕೆಲಸಗಳಿಗಾಗಿ ಸೂಕ್ತ ವ್ಯಕ್ತಿಯನ್ನು ತಿಳಿಸುವಂತೆ ಪರಿಚಿತರಲ್ಲಿ ಕೇಳಿಕೊಳ್ಳುವುದರಿಂದ ಸುಲಭವಾಗಿ ಫಲ ಸಿಗುವುದು. ರಾಜಕೀಯ ವ್ಯಕ್ತಿಗಳಿಗೆ ಓಡಾಟ ಹೆಚ್ಚಲಿದೆ. ದುರ್ಗಾಪರಮೇಶ್ವರಿಯನ್ನು ಆರಾಧಿಸಿ.

ಸಿಂಹ: ಕಟ್ಟಡ ನಿರ್ಮಾಣ ಸಾಮಗ್ರಿಗಳನ್ನು ಕೊಳ್ಳಲು ಈ ದಿನವು ಶುಭವಾಗಿ ತೋರುವುದಿಲ್ಲ. ಲೇಖಕರಿಗೆ ತಮ್ಮ ಲೇಖನಗಳಿಗೆ ಉತ್ತಮ ವಿಷಯಗಳು ಸಿಗುವುದು. ಸ್ವಪ್ರಯತ್ನದೊಂದಿಗೆ ದೈವ ಬಲವೂ ಇರುತ್ತದೆ.

ಕನ್ಯಾ: ಕುಟುಂಬದ ಸದಸ್ಯರಲ್ಲಿ ಬಾಲ್ಯದ ಕ್ಷಣಗಳನ್ನು ನೆನಪಿಸಿಕೊಳ್ಳುವ ಸಿಹಿ ಘಟನೆಗಳು ನಡೆಯಲಿವೆ. ನಿತ್ಯದ ಜೀವನಕ್ರಮವನ್ನು ಬದಲಿಸದೆ ಮುಂದುವರಿಯುವಿರಿ. ಆತ್ಮಸಾಕ್ಷಿಗೆ ವಂಚನೆ ಮಾಡದಂತೆ ನಡೆದುಕೊಳ್ಳಿ.

ತುಲಾ: ತೀರ್ಮಾನ ಅಥವಾ ಮುಂದಾಲೋಚನೆ ಇಲ್ಲದೇ ಭರವಸೆಯನ್ನೂ ನೀಡಬೇಡಿ. ಸೃಜನಶೀಲತೆಗೆ ಉತ್ತಮ ವೇದಿಕೆ ಪ್ರಾಪ್ತಿಯಾಗುವುದು. ಮಕ್ಕಳ ಜೊತೆ ಸಮಾರಂಭಗಳಲ್ಲಿ ಭಾಗವಹಿಸುವಿರಿ.

ವೃಶ್ಚಿಕ: ಅವಿವಾಹಿತರಿಗೆ ಕಂಕಣ ಬಲದ ಯೋಗವಿದ್ದು ಮಾತುಕತೆಯಿಂದ ನಿಶ್ಚಯಕ್ಕೆ ದಿನ ನಿಗದಿಗೊಳಿಸುವಿರಿ. ಇಲ್ಲವಾದಲ್ಲಿ ಮುಂದೆ ತಪ್ಪುಗಳು ನಡೆದಾವು. ಉನ್ನತ ಓದಿನೆಡೆಗೆ ಹೆಚ್ಚಿನ ಗಮನ ನೀಡುವುದು ಉತ್ತಮ.

ಧನು: ವ್ಯವಹಾರದಲ್ಲಿನ ಹೊಸ ವಿಷಯಗಳನ್ನು ತಿಳಿದುಕೊಂಡು ಅದರಂತೆ ನಡೆದು ಹೆಚ್ಚು ಆದಾಯವನ್ನು ಹೊಂದಬಹುದು. ಕಳುವಾಗಿದ್ದ ವಸ್ತುಗಳು ಪುನಃ ದೊರೆತು ಸಂತಸವಾಗಲಿದೆ. ಸಂತಾನದ ಶುಭ ಸುದ್ದಿಯನ್ನು ಕೇಳುವಿರಿ.

ಮಕರ: ಕಾತರದಿಂದ ಕಾಯುತ್ತಿದ್ದ ಸುದ್ದಿ ಕೇಳಿ ಮನಸ್ಸಿಗೆ ಹರ್ಷ ಉಂಟಾಗುವುದು. ಕುಟುಂಬದ ಸದಸ್ಯರ ಜೊತೆಗಿನ ಪ್ರವಾಸ ಸಂತೋಷವನ್ನು ಉಂಟು ಮಾಡಲಿದೆ. ಕಣ್ಣಿಗೆ ಸಂಬಂಧಿಸಿದಂತೆ ಅನಾರೋಗ್ಯಗಳು ಎದುರಾಗಬಹುದು.

ಕುಂಭ: ಸ್ಪಷ್ಟ ನಿರ್ಧಾರವನ್ನು ಮಾಡಿದ ವಿಚಾರವನ್ನು ಪುನಃ ಮತ್ತೊಮ್ಮೆ ಯೋಚಿಸಲು ಅವಕಾಶಗಳು ಒದಗಿಬರುತ್ತದೆ. ಆದರೆ ಹಿಂದೆ ತೆಗೆದುಕೊಂಡ ನಿಲುವನ್ನು ಬದಲಾಯಿಸಬೇಡಿ. ಸ್ಪರ್ಧಾತ್ಮಕ ಪರೀಕ್ಷೆಯ ಬಗ್ಗೆ ಗಮನವಹಿಸಿ.

ಮೀನ: ವ್ಯವಸ್ಥಿತವಾಗಿ ದಿನಚರಿ ರೂಪಿಸಿಕೊಂಡರೆ ಈಗಾಗಲೇ ಆರಂಭಿಸಿರುವ ಯೋಜನೆಗಳು ಪೂರ್ಣಗೊಳ್ಳಲಿವೆ. ಚಲನಚಿತ್ರ ಯಶಸ್ವಿಗೊಂಡು ನಿರೀಕ್ಷೆಗೂ ಮೀರಿದ ಲಾಭ ಗಳಿಸುವಿರಿ. ಮಹಾಗಣಪತಿಯನ್ನು ಆರಾಧಿಸಿ.

ನುಡಿ ಬೆಳಗು

ಪ್ರೊ.ಎಂ.ಕೃಷ್ಣೇಗೌಡ

ಕ್ರೋಧ ಗೆಲ್ಲದವನು ಯುದ್ಧ ಗೆದ್ದೇನು?

ಅದೊಂದು ಯುದ್ಧ- ರಾಜಾ ವಿಜಯಸಿಂಹ ಮತ್ತು ಪ್ರತಾಪರುದ್ರರ ನಡುವೆ. ಇಬ್ಬರೂ ಸಮಾನ ಬಲಶಾಲಿಗಳು. ಯಾರೂ ಗೆಲ್ಲುತ್ತಿಲ್ಲ, ಸೋಲುತ್ತಿಲ್ಲ. ಹೀಗೇ ಹಲವಾರು ವರ್ಷಗಳ ಕಾಲ ಯುದ್ಧ ಮುಗಿಯಲೇ ಇಲ್ಲ.

ಹಾ....ಯುದ್ಧ ಸಮಾಪ್ತಿಯ ದಿನ ಬಂತು. ರಾಜಾ ವಿಜಯಸಿಂಹ ಕುದುರೆಯ ಮೇಲಿಂದ ಜಾರಿ ಕೆಳಗೆ ಬಿದ್ದುಬಿಟ್ಟ. ಮಿಂಚಿನ ವೇಗದಿಂದ ಪ್ರತಾಪರುದ್ರ ಅಲ್ಲಿಗೆ ಬಂದ. ಬಿದ್ದಿದ್ದ ವಿಜಯಸಿಂಹನ ಮೇಲೆ ಹಾರಿ ಎದೆಯ ಮೇಲೆ ಕವೆಗಾಲಿನಲ್ಲಿ ಕೂತು ಸೊಂಟದ ಕಠಾರಿಯನ್ನು ತೆಗೆದು ಝಳಪಿಸಿದ. ಇನ್ನೇನು ಆ ಕಠಾರಿಯನ್ನು ವಿಜಯಸಿಂಹನ ಎದೆಗೆ ಚುಚ್ಚಬೇಕು. ಆಗ ಅವಮಾನದಿಂದ ಕನಲಿಹೋದ ವಿಜಯಸಿಂಹ ಪ್ರತಾಪರುದ್ರನ ಮುಖದ ಮೇಲೆ 'ತುಪ್ಪ್' ಅಂತ ಉಗುಳಿಬಿಟ್ಟ. ಅಹ್... ಅನಿರೀಕ್ಷಿತ ಇದು ಪ್ರತಾಪರುದ್ರನಿಗೆ.

ಏನನ್ನಿಸಿತೋ ಪ್ರತಾಪರುದ್ರ ಕಠಾರಿಯಿಂದ ವೈರಿಯೆದೆಯನ್ನು ಚುಚ್ಚದೆ ಮರಳಿ ಸೊಂಟಕ್ಕಿಟ್ಟುಕೊಂಡು ಕೂತುಬಿಟ್ಟ. ವಿಜಯಸಿಂಹನಿಗೆ ಅಚ್ಚರಿ. ಅವನು ಕೇಳಿದ, 'ಅಲ್ಲಯ್ಯಾ ರಾಜ, ಇಂಥದೊಂದು ಸಂದರ್ಭದಲ್ಲಿ ಹೀಗೆ ಮಾಡಿಬಿಟ್ಟೆ ಏಕೆ? ಇದು ನನ್ನನ್ನು ಅವಮಾನಿಸುವುದಕ್ಕಾ? ನಿನ್ನ ಪ್ರಾಣಭಿಕ್ಷೆ ನನಗೆ ಬೇಡ. ಕೊಲ್ಲು ನನ್ನನ್ನು...'

ಆಗ ಪ್ರತಾಪರುದ್ರ ಹೇಳಿದ: 'ರಾಜಾ, ಕ್ರೋಧ ದ್ವೇಷಗಳಿಲ್ಲದೆ ಯುದ್ಧ ಮಾಡಿದರೆ ಮಾತ್ರ ಯುದ್ಧಕ್ಕೆ ಒಂದು ಗೌರವ. ನೀನು ಉಗುಳಿದ್ದರಿಂದ ನನ್ನ ಮನಸ್ಸಿನಲ್ಲಿ ಒಂದು ಕ್ರೋಧ ಜನಿಸಿತು. ಕ್ರೋಧದಿಂದ ಯುದ್ಧ ಮಾಡಿದರೆ ಅದು ಧೀರರ ಯುದ್ಧವಲ್ಲ. ಅಯೋಗ್ಯರ ಯುದ್ಧ. ಕ್ರೋಧ, ದ್ವೇಷಗಳಿಂದ ಯುದ್ಧ ಮಾಡುವುದಿಲ್ಲವೆಂದು ನನಗೆ ನಾನೇ ವಚನ ಕೊಟ್ಟುಕೊಂಡಿದ್ದೇನೆ. ಕ್ರೋಧವನ್ನು ಗೆಲ್ಲದವನು ಯುದ್ಧ ಗೆದ್ದೇನು ಪ್ರಯೋಜನ? ಆದ್ದರಿಂದ, ಪ್ರಾಣಭಯದಿಂದ ಧೀರಶತ್ರುವಿನ ಮುಖಕ್ಕೆ ಉಗುಳುವಂಥ ಹತಾಶನ ಮೇಲೆ ನಾನು ಯುದ್ಧ ಮಾಡುವುದಿಲ್ಲ. ನನ್ನ ಕ್ರೋಧ ಶಮನವಾದ ಮೇಲೆ, ಬಹುಶಃ ನಾಳೆ ಯುದ್ಧವನ್ನು ಮುಂದುವರಿಸೋಣ'. ವಿಜಯಸಿಂಹನಿಗೆ ನಾಚಿಕೆಯಾಯಿತು. ಆ ನಾಳೆ ಯುದ್ಧ ನಡೆಯಲೇ ಇಲ್ಲ. ಅವರಿಬ್ಬರೂ ಗೆಳೆಯರಾದರು.

ಈ ಕತೆ ಈಗ ನೆನಪಾದದ್ದು ಏಕೆ ಅಂದರೆ, ನಮ್ಮ ದೇಶದಲ್ಲಿ ಚುನಾವಣೆ ನಡೆಯುತ್ತಿದೆ. ಧೀರರ ಸ್ಪರ್ಧೆಯಾಗಬೇಕಾಗಿದ್ದ ಇದರಲ್ಲಿ ಕ್ರೋಧದ್ವೇಷಗಳೇ ವಿಜೃಂಭಿಸುತ್ತಿವೆ. ನಾವು ಕ್ರೋಧವಿಲ್ಲದೆ ಸ್ಪರ್ಧೆ ಮಾಡುವಷ್ಟು ಪ್ರಬುದ್ಧರಾಗುವುದು ಯಾವಾಗ?

(ಓಶೋ ಹೇಳಿದ ಕತೆಯಿಂದ ಪ್ರೇರಿತ)

ಪದಬಂಧ 5642

– ವಿದ್ಯಾ ವಿನಯ್



ಎಡದಿಂದ ಬಲಕ್ಕೆ
1.ಅತಿಯಾದ ದುಃಖ (4)
3.ಗಾದೆಯಂತೆ ಓದಿ ಓದಿ ಮರುಳಾದ ಅವಿವೇಕಿ! (4)
4.ಇದು ಮತ್ತು ಬರಿಸುವಂಥದ್ದು (3)
5.ರಾಮನಚರಿತೆಯನ್ನು ಕುರಿತ ಕಾವ್ಯ (4)
7.ಬರವಿದ್ದಾಗ ನೀಡಿರುವ ಪಾನಕ (4)
9.ಮನದಲ್ಲಿಯೇ ಓಟು ನೀಡುವುದು! (4)
11.ಇಯತ್ತೆ ಈ ತರಹ ಬಂದಿದೆ (4)
12.ನಡುವೆ ಜೀ ಎನ್ನುತ್ತಿರುವ ಅಮಾತ್ಯ! (3)
14.ಶ್ರೇಷ್ಠ ನೆಲೆ ಇಲ್ಲಿಯೇ ಇದೆ (4)
15.ಮರದಲ್ಲಿರುವ ಹೆಬ್ಬಾಗಿಲು (4)

ಮೇಲಿಂದ ಕೆಳಕ್ಕೆ
1.ಹದಿನೈದು ದಿನಗಳ ಅವಧಿ (2)
2.ನಡುವೆ ಮಾರಿ ತಿರುಗಿದ್ದಾಗಿನ ಅಳತೆ! (4)
3.ಇದು ಸಮಗ್ರವಾದುದು (4)
6.ವಿಕ್ರಯಿಸು ಎಂದಾಗ ಬೀಸಿದ ಗಾಳಿ! (3)
8.ಬೆಳಗ್ಗೆಯೇ ಬಂದಿಳಿದ ನಂಟರ ಸಮೂಹ(3)
10.ಅದೇ ತಾನೆ ಅರಳಿದ ಹೂ (4)
11.ತಮ್ಮ ಈ ತರ ತೋರಿದ ಭೇದಭಾವ (4)
13.ದುಸ್ತರದಲ್ಲೇ ಪದರ ಹುಡುಕಿ! (2)

5641ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸೂಕ್ಷ್ಮಪ್ರಕೃತಿ
3.ಧ್ರುಲೀಂಶಿ 5.ರಸಕವಳ
7.ಸಫಲ 8.ನಿರಪರಾಧಿ
10.ಪರೀಕ್ಷೆ 11.ಹೊಸಜೀವನ
14.ಮಸಾಲೆ 15.ಹೆರಿಗೆಮನೆ

ಮೇಲಿಂದ ಕೆಳಕ್ಕೆ:
1.ಸೂಕರ 2.ಪ್ರತೀಕ
4.ಶಿಥಿಲ 6.ವಕ್ತಾರ
7.ಸಮಾಧಿ 8.ನಿರೀಕ್ಷೆ
9.ರಾಯಸ 10.ಪರಮ
12.ಜೇರಿಗೆ 13.ನಮೂನೆ

ಸುಡೊಕು 6027

	6			2		5		
5		4			7		2	3
	2		5			6		7
8		1		3				9
			9		8			4
9		2		5		3		6
7		3		9				
	8		7		5	9	3	
		9		8			7	5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6026 ಸುಡೊಕು

3	4	7	6	5	1	8	2	9
8	2	9	4	7	3	1	6	5
1	6	5	8	9	2	3	4	7
4	8	2	7	1	6	9	5	3
9	7	3	5	2	8	4	1	6
6	5	1	9	3	4	7	8	2
5	3	4	2	8	9	6	7	1
2	9	8	1	6	7	5	3	4
7	1	6	3	4	5	2	9	8

ಮುಂಬೈ ಧಾರಣೆ

ಶೇಂಗಾ 04-4-2024

ಜಾವಾ 70/80(ಹೊಸ)	11300-11400
ಜಾವಾ 80/90(ಹೊಸ)	10900-11000
ದಪ್ಪ ಮಧ್ಯಪ್ರದೇಶ(ಹೊಸ)	9900-10000
ದಪ್ಪ ಗುಜರಾತ್(ಹೊಸ)	10700-10800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1530 (1530)
ಒಂದು ವಾರದ ಡೆಲಿವರಿ	1525 (1525)
ಸೋಯಾ ಕಚ್ಚಾ	945 (950)
ಪಾಮ್ ವಾರದ ಡೆಲಿವರಿ	980 (990)
ಸೂರ್ಯಕಾಂತಿ ಎಣ್ಣೆ ಕಚ್ಚಾ	910 (910)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹69,500 (69,200)
ಬೆಳ್ಳಿ ಕೆ.ಜಿ ₹79,100 (77,750)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಮಾರುಕಟ್ಟೆ ಧಾರಣೆ

ಅಡಿಕೆ (ಬಂಟ್ವಾಳ)	
ಕೋಕ	18000-28500
ಹೊಸತು	28500-36000
ಪುತ್ತೂರು	
ಕೋಕ	11500-26000
ಸಾಗರ	
ಬಿಳಿಗೋಟು	15269-25489
ಚಾಲಿ	30299-33199
ಕೋಕ	16029-21989
ಕೆಂಪುಗೋಟು	14989-32469
ರಾಶಿ	38599-47699
ಸಿಪ್ಪೆಗೋಟು	15129-17709
ಶಿವಮೊಗ್ಗ	
ಬೆಟ್ಟೆ	53272-53272
ಗೊರಬಲು	20000-31619
ರಾಶಿ	31199-48009

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹9300-9300
ತಿಪಟೂರು	₹8000-9351

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,434
ಇಂದಿನ ಅಂತ್ಯ	22,514
▲	80
ದಿನದ ಗರಿಷ್ಠ	22,619

ವಿನಿಮಯ ದರ

$ ಡಾಲರ್	83.39
£ ಪೌಂಡ್	104.88
€ ಯುರೊ	89.83
¥ ಯೆನ್ (100ಕ್ಕೆ)	55

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹440
12 ಕ್ಕೆ	₹60
ಮೈಸೂರು	
100ಕ್ಕೆ	₹440

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1520 (1520)
ಸೋಯಾ (ರಿಫೈನ್ಡ್)	₹985 (990)
ಸೂರ್ಯಕಾಂತಿ (ರಿಫೈನ್ಡ್)	₹980 (980)
ಪಾಮೋಲಿನ್	₹982 (992)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹280-435
ದ್ವಿತಳಿ (ಬಿ.ವಿ) ₹277-560

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹181
ಆರ್‌ಎಸ್‌ಎಸ್-5 ₹174.50
ಗುಡ್ ಲಾಟ್ ₹164.50
(ಪ್ರತಿ ಕೆ.ಜಿಗೆ)

ಕೇಂದ್ರ ರಾಸಾಯನಿಕ, ರಸಗೊಬ್ಬರ ಸಚಿವ ಮನ್ಸುಕ್ ಮಾಂಡವೀಯ ಭರವಸೆ

ಅಗತ್ಯ ಔಷಧ ಬೆಲೆ ಏರಿಕೆ ಇಲ್ಲ

ಮನ್ಸುಕ್ ಮಾಂಡವೀಯ

ನವದೆಹಲಿ (ಪಿಟಿಐ): 'ದೇಶದಲ್ಲಿ ಸಗಟು ಹಣದುಬ್ಬರವು ಅಲ್ಪ ಪ್ರಮಾಣದಲ್ಲಿ ಏರಿಕೆಯಾಗಿದೆ. ಹಾಗಾಗಿ, 2024–25ನೇ ಆರ್ಥಿಕ ವರ್ಷದಲ್ಲಿ ಅಗತ್ಯ ಔಷಧಗಳ ಬೆಲೆ ಏರಿಕೆ ಮಾಡುವುದಿಲ್ಲ' ಎಂದು ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವ ಮನ್ಸುಕ್ ಮಾಂಡವೀಯ ಭರವಸೆ ನೀಡಿದ್ದಾರೆ.

ಪಿಟಿಐ ಸಂಪಾದಕರ ಜೊತೆ ಗುರುವಾರ ನಡೆದ ಸಂವಾದದಲ್ಲಿ ಮಾತನಾಡಿದ ಅವರು, 'ಕೇಂದ್ರ ಸರ್ಕಾರವು ಅಗತ್ಯ ಔಷಧಗಳ ಬೆಲೆಯನ್ನು ಹೆಚ್ಚಿಸಲಿದೆ ಎಂಬುದು ಶುದ್ಧ ಸುಳ್ಳು' ಎಂದು ಸ್ಪಷ್ಟಪಡಿಸಿದರು.

ರಾಷ್ಟ್ರೀಯ ಔಷಧ ಬೆಲೆ ನಿಯಂತ್ರಣ ಪ್ರಾಧಿಕಾರವು (ಎನ್‌ಪಿಪಿಎ) ಸಗಟು ಬೆಲೆ ಸೂಚ್ಯಂಕ (ಡಬ್ಲ್ಯುಪಿಐ) ಆಧಾರದ ಮೇಲೆ ಪ್ರತಿವರ್ಷವು ಶೆಡ್ಯೂಲ್ಡ್ ಔಷಧಗಳ ಬೆಲೆಯನ್ನು ಪರಿಷ್ಕರಿಸಲಿದೆ. ಸೂಚ್ಯಂಕ ಆಧಾರದ ಮೇಲೆಯೇ ಅಗತ್ಯ ಔಷಧಗಳ ಬೆಲೆ ನಿಯಂತ್ರಿಸುವ ಜೊತೆಗೆ ದರವನ್ನೂ ನಿಗದಿಪಡಿಸಲಿದೆ ಎಂದು ಹೇಳಿದರು.

ಸಗಟು ಹಣದುಬ್ಬರ ಏರಿಕೆಯಾದಾಗ ಔಷಧಗಳ ಬೆಲೆ ಏರಿಕೆಯಾಗುವುದು ಸಹಜ. ಇಳಿಕೆಯಾದ ವೇಳೆ ಬೆಲೆಯೂ ಕಡಿಮೆಯಾಗಲಿದೆ. ಈ ವರ್ಷ ಹಣದುಬ್ಬರವು ಶೇ 0.005ರಷ್ಟಿದೆ. ಹಾಗಾಗಿ, ಔಷಧ ಕಂಪನಿಗಳು ದರ ಏರಿಕೆಗೆ ಮುಂದಾಗುವುದಿಲ್ಲ. ಇದು ಪ್ರಧಾನಿ ಮೋದಿ ಅವರ ಗ್ಯಾರಂಟಿಯಾಗಿದೆ ಎಂದರು.

2013ರ ಔಷಧ ಬೆಲೆ ನಿಯಂತ್ರಣ ಆದೇಶಗಳ ಅನ್ವಯ ಔಷಧಗಳನ್ನು ಶೆಡ್ಯೂಲ್ಡ್ ಹಾಗೂ ನಾನ್ ಶೆಡ್ಯೂಲ್ಡ್ ಎಂದು ವರ್ಗೀಕರಿಸಲಾಗಿದೆ. ಶೆಡ್ಯೂಲ್ಡ್ 1ರ ಪಟ್ಟಿಯಲ್ಲಿ ಅಗತ್ಯ ಔಷಧಗಳಿವೆ. ತಯಾರಕರಿಗೆ ನಾನ್ ಶೆಡ್ಯೂಲ್ಡ್ ಪಟ್ಟಿಯಲ್ಲಿರುವ ಔಷಧಗಳ ಬೆಲೆ ಹೆಚ್ಚಿಸುವ ಸ್ವಾತಂತ್ರ್ಯವಿದೆ ಎಂದರು.

ಎನ್‌ಪಿಪಿಎ ಸಭೆಯ ನಿರ್ಧಾರ ಏನು?

ಮಾರ್ಚ್ 20ರಂದು ನಡೆದ ಎನ್‌ಪಿಪಿಎ ಸಭೆಯಲ್ಲಿ ಡಬ್ಲ್ಯುಪಿಐ ಆಧಾರದ ಮೇಲೆ ಶೆಡ್ಯೂಲ್ಡ್ ಪಟ್ಟಿಯಲ್ಲಿರುವ ಔಷಧಗಳ ಬೆಲೆಯನ್ನು ಶೇ 0.00551ರಷ್ಟು ಹೆಚ್ಚಿಸಲಾಗಿದೆ.

ಹಾಗಾಗಿ, 782 ಔಷಧಗಳ ಗರಿಷ್ಠ ಬೆಲೆ ಮಿತಿಯಲ್ಲಿ ಯಾವುದೇ ಬದಲಾವಣೆ ಮಾಡುವುದಿಲ್ಲ. 2025ರ ಮಾರ್ಚ್ 31ರ ವರೆಗೂ ಈ ದರ ಮುಂದುವರಿಯಲಿದೆ ಎಂದು ಎನ್‌ಪಿಪಿಐ ಹೇಳಿದೆ.

54 ಔಷಧಗಳ ಗರಿಷ್ಠ ಬೆಲೆಯು ₹90ರಿಂದ ₹261 ಇದ್ದು, ಅಲ್ಪ ಪ್ರಮಾಣದಲ್ಲಿ (ಶೇ 0.01) ಏರಿಕೆ ಮಾಡಲಾಗಿದೆ. ಸರ್ಕಾರವು ಇಷ್ಟು ಪ್ರಮಾಣದಲ್ಲಿ ದರ ಏರಿಕೆಗೆ ಅನುಮತಿ ನೀಡಿರುವುದರಿಂದ ಕಂಪನಿಗಳು ದರ ಏರಿಸಬಹುದು ಅಥವಾ ಏರಿಕೆ ಮಾಡದೆಯೂ ಇರಬಹುದು ಎಂದು ಹೇಳಲಾಗಿದೆ.

₹605 ಕೋಟಿ ತೆರಿಗೆ ಹೀರೊ ಮೊಟೊಕಾರ್ಪ್‌ಗೆ ನೋಟಿಸ್ ಜಾರಿ

ನವದೆಹಲಿ (ಪಿಟಿಐ): ದೇಶದಲ್ಲಿ ದ್ವಿಚಕ್ರ ವಾಹನಗಳ ತಯಾರಿಕೆಯಲ್ಲಿ ಮುಂಚೂಣಿಯಲ್ಲಿರುವ ಹೀರೊ ಮೊಟೊಕಾರ್ಪ್‌ಗೆ, ತೆರಿಗೆ ಹಾಗೂ ದಂಡ ಸೇರಿ ಒಟ್ಟು ₹605 ಕೋಟಿ ಪಾವತಿಸುವಂತೆ ಆದಾಯ ತೆರಿಗೆ ಇಲಾಖೆಯು ನೋಟಿಸ್ ನೀಡಿದೆ.

2013–14ರಿಂದ 2017–18 ಹಾಗೂ 2019–20ರ ಮೌಲ್ಯಮಾಪನ ವರ್ಷಕ್ಕೆ ಸಂಬಂಧಿಸಿದಂತೆ ತೆರಿಗೆ ಪಾವತಿಸಲು ಈ ನೋಟಿಸ್ ನೀಡಲಾಗಿದೆ. ಈ ಬಗ್ಗೆ ಮೇಲ್ಮನವಿ ಸಲ್ಲಿಕೆ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ ಎಂದು ಷೇರುಪೇಟೆಗೆ ತಿಳಿಸಿದೆ.

ಸುದ್ದಿ 2 ನಿಮಿಷ

ನವದೆಹಲಿ: ₹70 ಸಾವಿರ ದಾಟಿದ ಚಿನ್ನದ ದರ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ಮತ್ತೆ ಚಿನ್ನ ಹಾಗೂ ಬೆಳ್ಳಿ ದರ ಏರಿಕೆಯಾಗಿದ್ದು, ಸಾರ್ವಕಾಲಿಕ ಗರಿಷ್ಠಕ್ಕೆ ಮುಟ್ಟಿದೆ. ಈ ವಾರದಲ್ಲಿ ಮೂರನೇ ಬಾರಿಗೆ ಹಳದಿ ಲೋಹದ ಬೆಲೆಯಲ್ಲಿ ಏರಿಕೆಯಾಗಿದೆ.

ಚಿನ್ನದ ದರವು 10 ಗ್ರಾಂಗೆ ₹850 ಏರಿಕೆಯಾಗಿದ್ದು, ₹70,050ಕ್ಕೆ ಮಾರಾಟವಾಯಿತು. ಬೆಳ್ಳಿ ಧಾರಣೆಯು ಪ್ರತಿ ಕೆ.ಜಿಗೆ ₹1,000 ಹೆಚ್ಚಳವಾಗಿದೆ. ಪ್ರಸ್ತುತ ಒಂದು ಕೆ.ಜಿ ಬೆಳ್ಳಿ ಧಾರಣೆಯು ₹81,700ಕ್ಕೆ ತಲುಪಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ಸೌಮಿಲ್ ಗಾಂಧಿ ತಿಳಿಸಿದ್ದಾರೆ.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆ ಒಂದು ಔನ್ಸ್‌ಗೆ (28.34 ಗ್ರಾಂ) ಕ್ರಮವಾಗಿ 2,297 ಡಾಲರ್ ಮತ್ತು 27.05 ಡಾಲರ್‌ನಂತೆ ಮಾರಾಟವಾಗಿದೆ.

ಅಮೆರಿಕದ ಫೆಡರಲ್ ರಿಸರ್ವ್‌ನ ಬಡ್ಡಿದರ ಕಡಿತದ ಅನಿಶ್ಚಿತತೆ ನಡುವೆಯೇ ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಡಾಲರ್ ಮೌಲ್ಯ ದುರ್ಬಲಗೊಳ್ಳುತ್ತಿದೆ. ಇದರಿಂದ ಹೂಡಿಕೆದಾರರು ಸುರಕ್ಷಿತ ಹೂಡಿಕೆಯತ್ತ ಮುಖ ಮಾಡಿದ್ದಾರೆ. ಹಾಗಾಗಿ, ಚಿನ್ನದ ದರವು ಏರಿಕೆಯತ್ತ ಸಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಬೆಂಗಳೂರಿನಲ್ಲಿ 10 ಗ್ರಾಂ ಚಿನ್ನದ ದರವು ₹72,190ಕ್ಕೆ ಮುಟ್ಟಿದ್ದರೆ, ಒಂದು ಕೆ.ಜಿ ಬೆಳ್ಳಿಯು ₹81,200 ಆಗಿದೆ.

ಷೇರು ಸೂಚ್ಯಂಕಗಳು ಏರಿಕೆ

ಮುಂಬೈ (ಪಿಟಿಐ): ಸತತ ಎರಡು ದಿನಗಳಿಂದ ಇಳಿಕೆ ಕಂಡಿದ್ದ ಷೇರು ಸೂಚ್ಯಂಕಗಳು ಗುರುವಾರ ಏರಿಕೆ ದಾಖಲಿಸಿವೆ.

ಐ.ಟಿ, ಗ್ರಾಹಕ ವಸ್ತುಗಳು ಮತ್ತು ಹಣಕಾಸು ಷೇರುಗಳ ಖರೀದಿ ಹೆಚ್ಚಳವು ಸೂಚ್ಯಂಕಗಳ ಏರಿಕೆಗೆ ನೆರವಾಯಿತು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 350 ಅಂಶ ಹೆಚ್ಚಳವಾಗಿ 74,227ಕ್ಕೆ ಸ್ಥಿರಗೊಂಡಿದೆ. ವಹಿವಾಟಿನ ವೇಳೆ 74,501ಕ್ಕೆ ಮುಟ್ಟಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 80 ಅಂಶ ಏರಿಕೆಯಾಗಿ 22,514ಕ್ಕೆ ಅಂತ್ಯಗೊಂಡಿತು.

ಎಚ್‌ಡಿಎಫ್‌ಸಿ ಬ್ಯಾಂಕ್, ಟೈಟನ್, ಟೆಕ್ ಮಹೀಂದ್ರ, ಏಷ್ಯನ್ ಪೇಂಟ್ಸ್, ಟಿಸಿಎಸ್, ಮಾರುತಿ, ಕೋಟಕ್ ಮಹೀಂದ್ರ ಬ್ಯಾಂಕ್ ಮತ್ತು ಬಜಾಜ್ ಫಿನ್‌ಸರ್ವ್ ಷೇರಿನ ಮೌಲ್ಯ ಏರಿಕೆಯಾಗಿದೆ. ಎಸ್‌ಬಿಐ, ಭಾರ್ತಿ ಏರ್‌ಟೆಲ್, ಜೆಎಸ್‌ಡಬ್ಲ್ಯು ಸ್ಟೀಲ್, ಪವರ್‌ಗ್ರಿಡ್, ಐಟಿಸಿ ಮತ್ತು ರಿಲಯನ್ಸ್ ಷೇರಿನ ಮೌಲ್ಯ ಇಳಿಕೆ ಕಂಡಿದೆ.

ಅವೆನ್ಯು ಸೂಪರ್‌ಮಾರ್ಟ್ಸ್ ಷೇರು ಏರಿಕೆ: ಡಿ–ಮಾರ್ಟ್ ಮಳಿಗೆಗಳ ಒಡೆತನ ಹೊಂದಿರುವ ಅವೆನ್ಯು ಸೂಪರ್‌ಮಾರ್ಟ್ಸ್ ಕಂಪನಿಯ ವರಮಾನವು ಏರಿಕೆ ಕಂಡಿದೆ. ಹಾಗಾಗಿ, ಕಂಪನಿಯ ಷೇರಿನ ಮೌಲ್ಯ ಶೇ 4ಕ್ಕಿಂತಲೂ ಹೆಚ್ಚಳವಾಗಿದೆ. ಬಿಎಸ್‌ಇ ಮತ್ತು ಎನ್‌ಎಸ್‌ಇಯಲ್ಲಿ ಪ್ರತಿ ಷೇರಿನ ಮೌಲ್ಯ ಕ್ರಮವಾಗಿ ₹4,647 ಮತ್ತು ₹4,639ಕ್ಕೆ ಮುಟ್ಟಿದೆ.

'ಶಂಕಾಸ್ಪದ ಪುಡಿ' ಲೇಪಿತ ಪತ್ರ ಕುರಿತು ತನಿಖೆ– ಪ್ರಧಾನಿ ಷರೀಫ್



ಶೆಹಬಾಜ್ ಷರೀಫ್

ಇಸ್ಲಾಮಾಬಾದ್(ಪಿಟಿಐ): ಸುಪ್ರೀಂ ಕೋರ್ಟ್ ಹಾಗೂ ಇಸ್ಲಾಮಾಬಾದ್ ಮತ್ತು ಲಾಹೋರ್ ಹೈಕೋರ್ಟ್‌ಗಳ ನ್ಯಾಯಮೂರ್ತಿಗಳಿಗೆ ರವಾನಿಸಿರುವ 'ಸಂಶಯಾಸ್ಪದ ಪುಡಿ' ಲೇಪಿತ ಬೆದರಿಕೆ ಪತ್ರಗಳ ಕುರಿತು ತನಿಖೆ ನಡೆಸಲಾಗುವುದು ಎಂದು ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್ ಗುರುವಾರ ಹೇಳಿದ್ದಾರೆ.

'ಶಂಕಾಸ್ಪದ ಪುಡಿ ಲೇಪಿತ ಪತ್ರಗಳನ್ನು ನ್ಯಾಯಮೂರ್ತಿಗಳಿಗೆ ಕಳುಹಿಸಿರುವ ವಿಷಯದಲ್ಲಿ ಯಾವುದೇ ರಾಜಕಾರಣ ಬೆರೆಸದೆ, ನಿಷ್ಪಕ್ಷಪಾತ ತನಿಖೆ ನಡೆಸಲಾಗುವುದು' ಎಂಬ ಪ್ರಧಾನಿ ಷರೀಫ್ ಅವರ ಹೇಳಿಕೆಯನ್ನು ಉಲ್ಲೇಖಿಸಿ ಡಾನ್ ನ್ಯೂಸ್ ವರದಿ ಮಾಡಿದೆ.

ಇಸ್ಲಾಮಾಬಾದ್ ಹೈಕೋರ್ಟ್‌ನ 8 ನ್ಯಾಯಮೂರ್ತಿಗಳು ಹಾಗೂ ಲಾಹೋರ್ ಹೈಕೋರ್ಟ್‌ನ ಮೂವರು ನ್ಯಾಯಮೂರ್ತಿಗಳು ಈ ಬೆದರಿಕೆ ಪತ್ರಗಳನ್ನು ಸ್ವೀಕರಿಸಿದ್ದಾರೆ. ಆಂಥ್ರಾಕ್ಸ್ ಎಂಬ ಸೋಂಕು ರೋಗಕ್ಕೆ ಸಂಬಂಧಿಸಿದ ಪುಡಿಯನ್ನು ಈ ಪತ್ರಗಳಿಗೆ ಲೇಪಿಸಲಾಗಿತ್ತು ಎಂದು ಹೇಳಲಾಗಿದೆ.

ಬಿಳಿ ಬಣ್ಣದ ಲಕೋಟೆಗಳಲ್ಲಿ ಈ 'ಶಂಕಾಸ್ಪದ ಪುಡಿ' ಲೇಪಿತ ಪತ್ರಗಳನ್ನು ಹೈಕೋರ್ಟ್‌ಗಳ ವಿಳಾಸಕ್ಕೆ ಕಳುಹಿಸಲಾಗಿದೆ.

'ಪಾಕಿಸ್ತಾನದ ಪ್ರಜೆಗಳು ಎದುರಿಸುತ್ತಿರುವ ಸಮಸ್ಯೆಗಳಿಗೆ ಈ ನ್ಯಾಯಮೂರ್ತಿಗಳೇ ಜವಾಬ್ದಾರರು' ಎಂಬ ಒಕ್ಕಣೆಯೂ ಈ ಪತ್ರದಲ್ಲಿದೆ ಎನ್ನಲಾಗಿದೆ. ಈ ಕುರಿತು ಎಫ್‌ಐಆರ್ ದಾಖಲಿಸಲಾಗಿದೆ.

ಡಿ–ಮಾರ್ಟ್ ವರಮಾನ ಶೇ 20ರಷ್ಟು ಏರಿಕೆ

ನವದೆಹಲಿ (ಪಿಟಿಐ): ಡಿ–ಮಾರ್ಟ್ ಮಳಿಗೆಗಳ ಒಡೆತನ ಹೊಂದಿರುವ ಅವೆನ್ಯು ಸೂಪರ್‌ಮಾರ್ಟ್ಸ್ ಕಂಪನಿಯ ವರಮಾನವು 2023–24ರ ಹಣಕಾಸು ವರ್ಷದ ನಾಲ್ಕನೇ ತ್ರೈಮಾಸಿಕದಲ್ಲಿ ಶೇ 19.89ರಷ್ಟು ಏರಿಕೆಯಾಗಿದೆ.

ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹10,337 ಕೋಟಿ ವರಮಾನ ಕಂಡಿದ್ದ ಕಂಪನಿಯು ಜನವರಿ–ಮಾರ್ಚ್ ತ್ರೈಮಾಸಿಕದಲ್ಲಿ ₹12,393 ಕೋಟಿ ಗಳಿಸಿದೆ ಎಂದು ಕಂಪನಿಯು ಷೇರುಪೇಟೆಗೆ ತಿಳಿಸಿದೆ.

2021-22ರಲ್ಲಿ ಕಂಪನಿಯು ₹8,606 ಕೋಟಿ ನಿವ್ವಳ ವರಮಾನ ಗಳಿಸಿತ್ತು.

ಮಹಾರಾಷ್ಟ್ರ, ಗುಜರಾತ್, ಆಂಧ್ರಪ್ರದೇಶ, ಮಧ್ಯಪ್ರದೇಶ, ಕರ್ನಾಟಕ, ತೆಲಂಗಾಣ, ಛತ್ತೀಸಗಢ, ನವದೆಹಲಿ, ತಮಿಳುನಾಡು, ಪಂಜಾಬ್ ಮತ್ತು ರಾಜಸ್ಥಾನದಲ್ಲಿ ಕಂಪನಿಯ ಒಟ್ಟು 365 ಮಳಿಗೆಗಳಿವೆ.

ಸೇವಾ ಚಟುವಟಿಕೆ 13.5 ವರ್ಷದ ಗರಿಷ್ಠ

ನವದೆಹಲಿ (ಪಿಟಿಐ): ದೇಶದ ಸೇವಾ ವಲಯದ ಬೆಳವಣಿಗೆಯು ಮಾರ್ಚ್‌ನಲ್ಲಿ ಹದಿಮೂರುವರೆ ವರ್ಷಗಳ ಗರಿಷ್ಠ ಮಟ್ಟಕ್ಕೆ ಏರಿಕೆಯಾಗಿದೆ.

ಈ ತಿಂಗಳಿನಲ್ಲಿ ಸೇವೆಗಳಿಗೆ ಬೇಡಿಕೆ ಹೆಚ್ಚಿದೆ. ಹಾಗಾಗಿ, ಮಾರಾಟ ಹಾಗೂ ವ್ಯಾಪಾರಕ್ಕೆ ಉತ್ತೇಜನ ಸಿಕ್ಕಿರುವುದೇ ಈ ಏರಿಕೆಗೆ ಕಾರಣ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಇಂಡಿಯಾ ಸಂಸ್ಥೆಯ ವರದಿ ತಿಳಿಸಿದೆ.

ಸೇವಾ ವಲಯದ ಚಟುವಟಿಕೆಯನ್ನು ಸೂಚಿಸುವ ಎಚ್‌ಎಸ್‌ಬಿಸಿ ಇಂಡಿಯಾ ಸರ್ವಿಸ್ ಬ್ಯುಸಿನೆಸ್ ಸೂಚ್ಯಂಕವು ಫೆಬ್ರುವರಿಯಲ್ಲಿ 60.6 ಇತ್ತು. ಮಾರ್ಚ್‌ನಲ್ಲಿ 61.2ಕ್ಕೆ ಏರಿಕೆಯಾಗಿದೆ. 2010ರ ಜೂನ್ ತಿಂಗಳ ನಂತರದ ವೇಗದ ಬೆಳವಣಿಗೆ ಇದಾಗಿದೆ ಎಂದು ಹೇಳಿದೆ.

ಪರ್ಚೇಸಿಂಗ್ ಮ್ಯಾನೇಜರ್ಸ್ ಸೂಚ್ಯಂಕವು (ಪಿಎಂಐ) 50ರ ಮೇಲಿದ್ದರೆ ಬೆಳವಣಿಗೆಯು ಸದೃಢವಾಗಿದೆ ಎಂದರ್ಥ. 50ಕ್ಕಿಂತ ಕಡಿಮೆ ಇದ್ದರೆ ಬೆಳವಣಿಗೆಯು ಕುಂಠಿತವಾಗಿರುವ ಸೂಚಕವಾಗಿದೆ.

ಸೇವಾ ವಲಯದ ಸೂಚ್ಯಂಕ



400ಕ್ಕೂ ಹೆಚ್ಚು ಸೇವಾ ಕಂಪನಿಗಳ ಮಾಹಿತಿ ಆಧರಿಸಿ ಎಸ್ ಆ್ಯಂಡ್ ಪಿ ಈ ವರದಿ ಸಿದ್ಧಪಡಿಸಿದೆ.

ಫೆಬ್ರುವರಿಯಲ್ಲಿ ಅಲ್ಪ ಪ್ರಮಾಣದಲ್ಲಿ ಇಳಿಕೆ ಕಂಡಿದ್ದ ಸೂಚ್ಯಂಕವು ಮಾರ್ಚ್‌ನಲ್ಲಿ ಏರಿಕೆಯಾಗಿದೆ. ಈ ತಿಂಗಳಿನಲ್ಲಿ ಸೇವಾ ವಲಯದ ಕಂಪನಿಗಳಲ್ಲಿ ಉದ್ಯೋಗ ನೇಮಕಾತಿಯೂ ಹೆಚ್ಚಿದೆ. ಇದು ಹೊಸ ಆರ್ಡರ್‌ಗಳ ಸಾಮರ್ಥ್ಯ ವಿಸ್ತರಿಸಲು ನೆರವಾಗಿದೆ ಎಂದು ಎಚ್‌ಎಸ್‌ಬಿಸಿ ಅರ್ಥಶಾಸ್ತ್ರಜ್ಞ ಇನೆಸ್ ಲ್ಯಾಮ್ ಹೇಳಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಶ್ರದ್ಧಾಂಜಲಿ
ಶ್ರೀಮತಿ ಪಣಿಯಮ್ಮ ಕಲಿಗೆ (107 ವರ್ಷ)
ದಿವಂಗತ ಕೆ. ತಮ್ಮೇಗೌಡರ ಪತ್ನಿ

ಇವರು ದಿನಾಂಕ 31/03/2024ನೇ ಭಾನುವಾರ ಮಧ್ಯರಾತ್ರಿ 12:30ಕ್ಕೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ನಿಮ್ಮ ಆತ್ಮಕ್ಕೆ ಚಿರಶಾಂತಿ ಲಭಿಸಲಿ ಎಂದು ಭಗವಂತನನ್ನು ಪ್ರಾರ್ಥಿಸುತ್ತಿರುವ
ಇಂತಿ ದುಃಖತಪ್ತರು:
ಮಗ ಕೆ.ಟಿ.ಲಕ್ಷ್ಮಣ ಮತ್ತು ಸೊಸೆ ಜ್ಯೋತಿ ಹಾಗೂ ಸಹೋದರ, ಸಹೋದರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಮರಿಮಕ್ಕಳು ಮತ್ತು ಕಲಿಗೆ ಕುಟುಂಬದವರು.
ಕಲಿಗೆ, ಅಸನ ಬಾಳು ಗ್ರಾಮ, ಶೃಂಗೇರಿ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

ಚಿರಸ್ಮರಣೆ

ಶ್ರೀ ಜಿ. ರಾಮಕೃಷ್ಣಪ್ಪ ರೆಡ್ಡಿ
ನಿಧನ 5.4.1993
ನೀವು ನಮ್ಮನ್ನಗಲಿ ಇಂದಿಗೆ 31 ವರ್ಷಗಳಾದರೂ ನಿಮ್ಮ ನೆನಪು ನಮ್ಮಲ್ಲಿ ಸದಾ ಹಸಿರಾಗಿದೆ. ನಿಮ್ಮ ದಿವ್ಯಾತ್ಮಕ್ಕೆ ಶಾಂತಿಯನ್ನು ಬಯಸುವ
ಸೊಸೆ: ಶ್ರೀಮತಿ ಕೆ.ಜಿ. ಯಶೋದ, ಎಸ್.ಆರ್. ನಾಗರಾಜ ರೆಡ್ಡಿ, ಮಕ್ಕಳು, ಅಳಿಯಂದಿರು, ಮತ್ತು ಮೊಮ್ಮಕ್ಕಳು

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಡ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

'ಸತತ 120 ಗಂಟೆ ಹಸಿವಿನಿಂದ ಬಳಲಿದ್ದೆ'

ಹಳೆಯ ಘಟನೆ ಸ್ಮರಿಸಿದ ಇನ್ಫೊಸಿಸ್‌ನ ಸಹ ಸಂಸ್ಥಾಪಕ ನಾರಾಯಣಮೂರ್ತಿ

ವಿಶ್ವಸಂಸ್ಥೆ (ಪಿಟಿಐ): 'ಆ ಪಟ್ಟಣದ ಹೆಸರು ನಿಶ್. ಬಲ್ಗೇರಿಯಾ ಹಾಗೂ ಸರ್ಬಿಯಾದ ಗಡಿಭಾಗದಲ್ಲಿದೆ. ನಾನು 50 ವರ್ಷಗಳ ಹಿಂದೆ ಅಲ್ಲಿದ್ದೆ. ಅಲ್ಲಿನ ರಸ್ತೆಗಳಲ್ಲಿ ಸಂಚರಿಸುವಾಗ ಅಪರಿಚಿತ ವಾಹನಗಳ ಸಹಾಯದಿಂದ ಪ್ರಯಾಣಿಸುತ್ತಿದ್ದೆ (ಹಿಚ್‌ಹೈಕಿಂಗ್). ಆ ವೇಳೆ ಸತತ 120 ಗಂಟೆ ಕಾಲ ಹಸಿವಿನಿಂದ ಬಳಲಿದ್ದೆ'

–ಹೀಗೆಂದು ಇನ್ಫೊಸಿಸ್‌ನ ಸಹ ಸಂಸ್ಥಾಪಕ ಎನ್.ಆರ್. ನಾರಾಯಣಮೂರ್ತಿ ಅವರು, ಹಳೆಯ ದಿನಗಳನ್ನು ನೆನಪಿಸಿಕೊಂಡರು.

ಅಕ್ಷಯ ಪಾತ್ರ ಫೌಂಡೇಶನ್ ನಾಲ್ಕು ಶತಕೋಟಿ ಊಟಗಳನ್ನು ನೀಡಿದ ಹೆಗ್ಗಳಿಕೆಗೆ ಪಾತ್ರವಾಗಿದೆ. ಇದರ ಅಂಗವಾಗಿ ವಿಶ್ವಸಂಸ್ಥೆಯಲ್ಲಿರುವ ಭಾರತದ ಕಾಯಂ ಸಮಿತಿಯಿಂದ 'ಆಹಾರ ಭದ್ರತೆಯಲ್ಲಿನ ಸಾಧನೆಗಳು: ಸುಸ್ಥಿರ ಅಭಿವೃದ್ಧಿ ಗುರಿಗಳತ್ತ ಭಾರತದ ದಾಪುಗಾಲು' ವಿಷಯ ಕುರಿತು ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ನಾರಾಯಣಮೂರ್ತಿ ಅವರು ಮಾತನಾಡಿದರು.

ಅಮೆರಿಕದ ನ್ಯೂಯಾರ್ಕ್‌ನಲ್ಲಿರುವ ವಿಶ್ವಸಂಸ್ಥೆಯ ಕೇಂದ್ರ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಇನ್ಫೊಸಿಸ್‌ನ ಸಹ ಸಂಸ್ಥಾಪಕ ಎನ್‌ಆರ್ ನಾರಾಯಣಮೂರ್ತಿ ಮಾತನಾಡಿದರು –ಪಿಟಿಐ ಚಿತ್ರ

'ಬಹಳಷ್ಟು ಜನರಿಗೆ ಹಸಿವಿನ ನರಕದ ದರ್ಶನವಾಗಿಲ್ಲ. ಆದರೆ, ಯುರೋಪ್‌ನಲ್ಲಿ ಹಿಚ್‌ಹೈಕಿಂಗ್ ಮಾಡುವಾಗ ನನಗೆ ಅದರ ಅನುಭವವಾಗಿದೆ' ಎಂದರು.

'ಇಲ್ಲಿರುವ ಭಾರತೀಯರು ಹಾಗೂ ನನಗೆ ಭಾರತ ಸರ್ಕಾರದಿಂದ ಉತ್ತಮ ಗುಣಮಟ್ಟದ ಶಿಕ್ಷಣ ಸಿಕ್ಕಿದೆ. ಹಾಗಾಗಿ, ದೇಶಕ್ಕೆ ನಾವು ಕೃತಜ್ಞತೆ ಸಲ್ಲಿಸಬೇಕಿದೆ. ಬಡಮಕ್ಕಳು ಗುಣಮಟ್ಟದ ಶಿಕ್ಷಣ ಪಡೆಯಲು ನಾವೆಲ್ಲರೂ ಸಹಾಯಹಸ್ತ ಚಾಚಬೇಕಿದೆ' ಎಂದು ಸಲಹೆ ನೀಡಿದರು. ಅಶಕ್ತ ಸಮುದಾಯದ ಜನರ ಮೊಗದಲ್ಲಿ ನಗು ಮೂಡಿಸುವುದು ನಮ್ಮ ಜವಾಬ್ದಾರಿ. ಈ ನಿಟ್ಟಿನಲ್ಲಿ ಅಕ್ಷಯ ಪಾತ್ರ ಫೌಂಡೇಶನ್ ಕಾರ್ಯ ಶ್ಲಾಘನೀಯವಾದುದು ಎಂದರು.

ಸಮಾಜದ ಮೇಲೆ ಬಡಮಕ್ಕಳು ನಿರೀಕ್ಷೆ ಹಾಗೂ ನಂಬಿಕೆ ಕಳೆದುಕೊಳ್ಳದಂತೆ ನೋಡಿಕೊಳ್ಳಬೇಕು. ಒಂದು ವೇಳೆ ಅವರು ನಂಬಿಕೆ ಕಳೆದುಕೊಂಡರೆ ಸಮಾಜದಲ್ಲಿ ಸಂಘರ್ಷ ಸೃಷ್ಟಿಸುತ್ತಾರೆ. ಭಾರತ ಸಾಧಿಸಿರುವ ಹಾಗೂ ಭವಿಷ್ಯದಲ್ಲಿ ಸಾಧಿಸಬೇಕಿರುವ ಕಾರ್ಯಗಳನ್ನು ನಾಶಪಡಿಸುತ್ತಾರೆ ಎಂದು ಹೇಳಿದರು.

'ಅಕ್ಷಯ ಪಾತ್ರ' ಒಳ್ಳೆಯ ಮಾದರಿಯಾಗಿದೆ. ಬಡಮಕ್ಕಳಲ್ಲಿ ವಿಶ್ವಾಸ, ನಂಬಿಕೆ ಮೂಡಿಸಲು ವಿಶ್ವದ ಇತರೆ ದೇಶಗಳು ಈ ಮಾದರಿಯನ್ನು ಅಳವಡಿಸಿಕೊಳ್ಳಬೇಕಿದೆ ಎಂದು ಸಲಹೆ ನೀಡಿದರು.

ತೈವಾನ್: ನಾಪತ್ತೆಯಾದವರಿಗೆ ಶೋಧ

ಹುವಾಲಿಯನ್ (ತೈವಾನ್) (ಎಪಿ): ದೇಶದಲ್ಲಿ ಸಂಭವಿಸಿದ ಪ್ರಬಲ ಭೂಕಂಪದಿಂದ ಹಲವು ಕಟ್ಟಡಗಳು ಧರೆಗುರುಳಿವೆ. ದೂರದ ಪ್ರದೇಶಗಳಲ್ಲಿ ಕಟ್ಟಡಗಳ ಅವಶೇಷಗಳಡಿ ಸಿಲುಕಿರುವ ಹಲವು ಜನರ ರಕ್ಷಣೆಗೆ ಗುರುವಾರ ಕೂಡ ಕಾರ್ಯಾಚರಣೆ ಮುಂದುವರಿದಿದೆ.

ಕಣ್ಮರೆಯಾದವರ ಪತ್ತೆಗಾಗಿ ಶೋಧ ಕಾರ್ಯ ಕೂಡ ನಡೆಯುತ್ತಿದೆ. ಅತ್ಯಂತ ಪ್ರಬಲವಾದ ಈ ಭೂಕಂಪದಲ್ಲಿ ಸತ್ತವರ ಸಂಖ್ಯೆ 10ಕ್ಕೆ ತಲುಪಿದ್ದು, ಗಾಯಾಳುಗಳ ಸಂಖ್ಯೆ 1,070ಕ್ಕೆ ಮುಟ್ಟಿದೆ.

ಭೂಕಂಪದ ನಂತರ ಬುಧವಾರ ಬೆಳಿಗ್ಗೆಯಿಂದ ಗುರುವಾರದವರೆಗೆ 300ಕ್ಕೂ ಹೆಚ್ಚು ಬಾರಿ ಭೂಮಿ ಕಂಪಿಸಿರುವುದನ್ನು ಕೇಂದ್ರ ಹವಾಮಾನ ಆಡಳಿತವು ದಾಖಲಿಸಿದೆ.

ಭೂಕಂಪದಿಂದ 48 ವಸತಿ ಕಟ್ಟಡಗಳು ಹಾನಿಗೊಳಗಾಗಿವೆ. ಇದರಲ್ಲಿ ಕೆಲವು ಧರೆಗೆ ವಾಲಿದ್ದು, ನೆಲಮಹಡಿಗಳು ನಜ್ಜುಗುಜ್ಜಾಗಿವೆ ಎಂದು ಮೇಯರ್ ಹು ಚೆನ್-ವೀ ಹೇಳಿದ್ದಾರೆ.

ಭೂಕಂಪದ ಕೇಂದ್ರ ಬಿಂದುವಿದ್ದ ಪೂರ್ವ ಕರಾವಳಿ ನಗರ ಹುವಾಲಿಯನ್‌ನಲ್ಲಿನ ನಿವಾಸಿಗಳು ಟೆಂಟ್‌ಗಳಲ್ಲೇ ಉಳಿದುಕೊಂಡಿದ್ದಾರೆ. ರಾಜಧಾನಿ ತೈಪೆ ಸಂಪರ್ಕಿಸುವ ಮುಖ್ಯ ರಸ್ತೆಯನ್ನು ಗುರುವಾರ ಮಧ್ಯಾಹ್ನದವರೆಗೂ ಮುಚ್ಚಲಾಗಿತ್ತು. ಆದರೆ, ತೈವಾನ್‌ನ ಹೆಚ್ಚಿನ ಕಡೆಗಳಲ್ಲಿ ಜನಜೀವನವು ಸಾಮಾನ್ಯ ಸ್ಥಿತಿಗೆ ಮರಳುತ್ತಿದೆ.

ತೈವಾನ್‌ನ ಪೂರ್ವ ಭಾಗದಲ್ಲಿ ಸಂಭವಿಸಿದ ಪ್ರಬಲ ಭೂಕಂಪದಿಂದ ಹುವಾಲಿಯನ್ ನಗರ ಸಮೀಪ ಭೂಕುಸಿತ ಉಂಟಾಗಿ ಪ್ರಮುಖ ರಸ್ತೆ ಮುಚ್ಚಿ ಹೋಗಿದೆ – ಎಎಫ್‌ಪಿ ಚಿತ್ರ

'ಭಾರತೀಯರೊಂದಿಗೆ ಸಂಪರ್ಕ'

ನವದೆಹಲಿ(ಪಿಟಿಐ): ತೈವಾನ್‌ನಲ್ಲಿ ಸಂಭವಿಸಿರುವ ಭೂಕಂಪನದಿಂದಾಗಿ ಕಾಣೆಯಾಗಿದ್ದ ಇಬ್ಬರು ಭಾರತೀಯರೊಂದಿಗೆ ಸಂಪರ್ಕ ಸಾಧಿಸಲಾಗಿದೆ ಎಂದು ವಿದೇಶಾಂಗ ಸಚಿವಾಲಯ ಗುರುವಾರ ಹೇಳಿದೆ.

'ಭೂಕಂಪನದಿಂದಾಗಿ ಈ ಮೊದಲು ಅವರೊಂದಿಗೆ ಸಂಪರ್ಕ ಸಾಧ್ಯವಾಗಿರಲಿಲ್ಲ. ಈಗ ಅವರೊಂದಿಗೆ ಮಾತನಾಡಿದ್ದು, ಇಬ್ಬರೂ ಸುರಕ್ಷಿತವಾಗಿದ್ದಾರೆ' ಎಂದು ಸಚಿವಾಲಯದ ವಕ್ತಾರ ರಣಧೀರ ಜೈಸ್ವಾಲ್ ಹೇಳಿದ್ದಾರೆ.

ಹುವಾಲಿಯನ್‌ಗೆ ಕೆಲವು ಸ್ಥಳೀಯ ರೈಲು ಸೇವೆ ಪುನರಾರಂಭವಾಗಿದೆ. ಕಂಪ್ಯೂಟರ್ ಚಿಪ್‌ಗಳ ವಿಶ್ವದ ಪ್ರಮುಖ ತಯಾರಕರಲ್ಲಿ ಒಂದಾದ ತೈವಾನ್ ಸೆಮಿಕಂಡಕ್ಟರ್ ತಯಾರಕಾ ಕಂಪನಿ ತನ್ನ ಕಾರ್ಯಾಚರಣೆ ಪುನರಾರಂಭಿಸಿದೆ ಎಂದು ಸೆಂಟ್ರಲ್ ನ್ಯೂಸ್ ಏಜೆನ್ಸಿ ವರದಿ ಮಾಡಿದೆ.

ಸಿಲ್ಕ್ಸ್ ಪ್ಲೇಸ್ ಟರೊಕೊ ಎಂಬ ಹೋಟೆಲ್‌ನಲ್ಲಿ ಸಿಲುಕಿರುವ 600ಕ್ಕೂ ಹೆಚ್ಚು ಜನರು ಸೇರಿ ಸುಮಾರು 700 ಮಂದಿ ಇನ್ನೂ ಸಂಪರ್ಕಕ್ಕೆ ಸಿಕ್ಕಿಲ್ಲ ಎಂದು ರಾಷ್ಟ್ರೀಯ ಅಗ್ನಿಶಾಮಕ ಸಂಸ್ಥೆ ತಿಳಿಸಿದೆ. ಆದರೆ, ಈ ಹೋಟೆಲ್ ನೌಕರರು ಮತ್ತು ಅತಿಥಿಗಳು ಸುರಕ್ಷಿತವಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಔಷಧ ಘಟಕ ಸ್ಫೋಟ: ಮೃತರ ಸಂಖ್ಯೆ 6ಕ್ಕೆ ಏರಿಕೆ

ಹೈದರಾಬಾದ್ (ಪಿಟಿಐ): ತೆಲಂಗಾಣದ ಸಂಗಾರೆಡ್ಡಿ ಜಿಲ್ಲೆಯ ಔಷಧ ಕಂಪನಿ ಘಟಕದ ರಾಸಾಯನಿಕ ರಿಯಾಕ್ಟರ್‌ನಲ್ಲಿ ಸಂಭವಿಸಿದ ಸ್ಫೋಟದಲ್ಲಿ ಮೃತಪಟ್ಟವರ ಸಂಖ್ಯೆ 6ಕ್ಕೆ ಏರಿದೆ ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ.

ಜಿಲ್ಲೆಯ ಹತ್ತನೂರ ಮಂಡಲದ ಚಂದಾಪುರ ಗ್ರಾಮದಲ್ಲಿರುವ ಎಸ್‌ಬಿ ಆರ್ಗಾನಿಕ್ಸ್ ಲಿಮಿಟೆಡ್‌ನ ಕಾರ್ಖಾನೆಯಲ್ಲಿ ಬುಧವಾರ ಸಂಭವಿಸಿದ ಸ್ಫೋಟದಲ್ಲಿ ನಾಲ್ವರು ಮೃತಪಟ್ಟಿದ್ದು, 16 ಮಂದಿ ಗಾಯಗೊಂಡಿದ್ದರು.

ಗುರುವಾರ ಕಾರ್ಖಾನೆಯ ಆವರಣದಲ್ಲಿ ಅವಶೇಷಗಳಡಿ ಒಬ್ಬ ಕಾರ್ಮಿಕನ ಶವ ಪತ್ತೆಯಾಗಿದ್ದು, ಗಾಯಗೊಂಡಿದ್ದ ಮತ್ತೊಬ್ಬ ವ್ಯಕ್ತಿ ಬುಧವಾರ ರಾತ್ರಿ ಮೃತಪಟ್ಟಿದ್ದಾರೆ. ಮೃತಪಟ್ಟವರಲ್ಲಿ ಸಂಸ್ಥೆಯ ನಿರ್ದೇಶಕ ಮತ್ತು ಘಟಕದ ಕಾರ್ಮಿಕರೂ ಸೇರಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಮೃತರು ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡು ಮತ್ತು ಮಧ್ಯಪ್ರದೇಶ ಮೂಲದವರು.

ಘಟನೆಯಲ್ಲಿ ಗಾಯಗೊಂಡ 16 ಮಂದಿಯನ್ನು ಚಿಕಿತ್ಸೆಗಾಗಿ ವಿವಿಧ ಆಸ್ಪತ್ರೆಗಳಿಗೆ ಸೇರಿಸಲಾಗಿದೆ.

ಸ್ಫೋಟದ ಕಾರಣ ಪತ್ತೆಗೆ ತನಿಖೆ ನಡೆಸಲಾಗುತ್ತಿದ್ದು, ಕಂಪನಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ
General
ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673
ಕಂಪನಿಗಳಿಗೆ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ,TVS, ಕಂಪನಿಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ,ಡಿಗ್ರಿ, ITIನವರುಗಳು 18,000- 76,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930
Multiple Vacancy
REQUIRED EXPERIENCED Telecaller, Loan Recovery Supervisor. For BankLoan collection. Salary 30,000+ Incentive Contact: 9620206756.

Part-Time Jobs
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಭವಿಷ್ಯ
Astrology
★ಓಂದುರ್ಗ ಆಂಜನಂ★ ನಿಮ್ಮ ಯಾವುದೇ ಧೀರ್ಘಕಾಲದ ಎಲ್ಲೂ ಪರಿಹಾರವಾಗದ ಸ್ತ್ರೀಪುರುಷ ಸಂಬಂಧಿತ ಸರ್ವಸಮಸ್ಯೆಗಳಿಗೆ 3 ದಿನಗಳಲ್ಲಿ ಪರಿಹಾರ. ಶ್ರೀ.ದೇವಾನಂದನ್. 9845005009

ಪ್ರವಾಸ
Travel
ಸುವರ್ಣ ಯಾತ್ರ ನೇಪಾಳ ಪಶುಪತಿನಾಥ, ಅಯೋಧ್ಯ ಮುಕ್ತಿನಾಥ, ಮನೋಕಮನ ಕಠ್ಮಂಡು ಪೋಕ್ರ ಪ್ರವಾಸ 29/4/24. 9 ದಿನಗಳು 8660233673 9019462508

15.04.2024 23.06.2024 ಅಯೋಧ್ಯಾ ಕಾಶಿ,ಬುದ್ಧಗಯಾ ಅಲಹಾಬಾದ್ 28.04.2024 28.06.2024 11.07.2024 ಕಾಶ್ಮೀರ್ ಗುಲ್ಮಾರ್ಗ್ ವೈಷ್ಣೋದೇವಿ ವಾಘಬಾರ್ಡರ್ ಅಮರನಾಥ್. 11.05.2024 24.05.2024 08.06.2024 ಚಾರ್‌ಧಾಮ್ ಸಮೇತ ಪ್ರವಾಸ. ಸಂಪರ್ಕಿಸಿ. ಏಷ್ಯನ್ ಟ್ರಾವಲ್ ಏಜೆನ್ಸಿ ಕೆಳಮಹಡಿ ಬೆಂಗಳೂರು4. 26574131 8431888138 7204173686

ಕೃಷ್ಣ ಹೆರಿಟೇಜ್ ಟೂರ್ಸ್ ಊಟ ರೂಮಿನೊಂದಿಗೆ 6 ದಿನಗಳು. 27.04.2024 ಗುರುವಾಯೂರು ಕಾಲಡಿ ಮುನ್ನಾರ್ ತ್ರಿವೇಂಡ್ರಮ್ ಕೊಚ್ಚಿನ್,ಅಲಪ್ಪಿ ಚೊಟ್ಟಾಣಿಕರ. 23.05.2024 ರಾಮೇಶ್ವರ ಕನ್ಯಾಕುಮಾರಿ ಮಧುರೈ ಇತ್ಯಾದಿ. 08.06.2024 ನವಗ್ರಹ ದರ್ಶನಸೇರಿ 18ಕ್ಷೇತ್ರಗಳು. 9448390735 9449721678

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

TRAVEL CORNER
HITESH HOLIDAYS : BENGALURU
SINGAPORE AND MALAYSIA- 07 DAYS
Date: 29th April 2024 & Rs. 99990/-* P.P.
BALI - 06 DAYS
Date : 12th May 2024 & Rs. 79990/-*P.P.
Contact for other travel packages & GST 5% Extra on all the package
Contact: 9739326102 / 9036568598

13.04.2024 6ದಿನಗಳು A/Cಬಸ್ಸಿನಲ್ಲಿ ಅಯೋಧ್ಯೆ, ಕಾಶಿ,ಗಯಾ, ಪ್ರಯೋಗರಾಜ್ (ಕೆಲವೇ ಸೀಟುಗಳಿವೆ) 12.07.2024 13/17ದಿನಗಳು ಅಮರನಾಥ್, ವೈಷ್ಣೋದೇವಿ, ಕಾಶ್ಮೀರ, ಅಮೃತಸರ್, ಆಗ್ರ,ದೆಹಲಿ ಇತ್ಯಾದಿ.28000/ಏಪ್ರಿಲ್, ಮೇನಲ್ಲಿ ಹಡಗು/ವಿಮಾನದಲ್ಲಿ ಅಂಡಮಾನ್ ಹವಳದ್ವೀಪ. Royal Package 'ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್'. 9739847429/ 9845560219

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
*Conditions apply
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
9731810277
9886213331
9845114560

ಜೈಲಿನಿಂದ ಬಿಡುಗಡೆಯಾದ ಬಳಿಕ ಬಿಜೆಪಿ ವಿರುದ್ಧ ಸಂಜಯ್ ಸಿಂಗ್ ವಾಗ್ದಾಳಿ

'ಬಿಜೆಪಿಗೆ ತಕ್ಕ ಉತ್ತರ ಕೊಡುವ ಕಾಲ'

ನವದೆಹಲಿ (ಪಿಟಿಐ): ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದಂತೆ ಬಂಧಿತರಾಗಿದ್ದ ಎಎಪಿ ಸಂಸದ ಸಂಜಯ್ ಸಿಂಗ್ ಅವರು ಜಾಮೀನಿನ ಮೇಲೆ ಬುಧವಾರ ಬಿಡುಗಡೆಯಾದ ಬೆನ್ನಲ್ಲೇ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಸಂಜಯ್ ಸಿಂಗ್

ಬುಧವಾರ ತಡ ರಾತ್ರಿ ಎಎಪಿ ಕೇಂದ್ರ ಕಚೇರಿಗೆ ತೆರಳಿ ಕಾರ್ಯಕರ್ತರೊಂದಿಗೆ ಮಾತನಾಡಿದ ಅವರು, 'ದೇಶದಾದ್ಯಂತ ಬಿಜೆಪಿ ನಿರಂಕುಶ ಪ್ರಭುತ್ವ ವ್ಯಾಪಿಸಿದೆ. ರಾಷ್ಟ್ರದ ವಿವಿಧ ಭಾಗಗಳಲ್ಲಿರುವ ಭ್ರಷ್ಟ ನಾಯಕರನ್ನು ಸೇರಿಸಿಕೊಂಡಿದೆ. ಈಗ ಆ ಪಕ್ಷಕ್ಕೆ ತಕ್ಕ ಉತ್ತರ ಕೊಡುವ ಕಾಲ ಬಂದಿದೆ' ಎಂದು ಹೇಳಿದ್ದಾರೆ.

'ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್, ಮನೀಶ್ ಸಿಸೋಡಿಯಾ, ಸತ್ಯೇಂದರ್ ಜೈನ್ ಅವರು ಜೈಲಿನಲ್ಲಿದ್ದಾರೆ. ಏಕೆಂದರೆ ಇವರೆಲ್ಲರೂ ದೆಹಲಿಯ 2 ಕೋಟಿ ಜನರಿಗೆ ಸೌಲಭ್ಯಗಳನ್ನು ಕಲ್ಪಿಸಬೇಕು ಎಂದು ಬಯಸಿದ್ದರು. ಆದರೆ, ಎಎಪಿ ಇದಕ್ಕೆ ಹೆದರುವುದಿಲ್ಲ' ಎಂದಿದ್ದಾರೆ.

'ಯಾವುದೇ ಕಾರಣಕ್ಕೂ ಅರವಿಂದ ಕೇಜ್ರಿವಾಲ್ ಅವರು ರಾಜೀನಾಮೆ ನೀಡುವುದಿಲ್ಲ. ದೆಹಲಿ ಜನರಿಗಾಗಿ ಅವರು ಸೇವೆ ಮಾಡುತ್ತಲೇ ಇರುತ್ತಾರೆ' ಎಂದೂ ಅವರು ಪ್ರತಿಪಾದಿಸಿದರು.

ಜೈಲಿನಿಂದ ಬಿಡುಗಡೆಯಾದ ಬಳಿಕ ಸಂಜಯ್ ಸಿಂಗ್ ಅವರು ಕೇಜ್ರಿವಾಲ್ ಅವರ ಪತ್ನಿ ಸುನೀತಾ ಅವರನ್ನು ಭೇಟಿಯಾಗಿ ಅವರ ಕಾಲಿಗೆ ನಮಸ್ಕರಿಸಿದರು. ಈ ಕುರಿತ ವಿಡಿಯೊವನ್ನು ಎಎಪಿ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದೆ. ಮನೀಶ್ ಸಿಸೋಡಿಯಾ ಮತ್ತು ಸತ್ಯೇಂದರ್ ಜೈನ್ ಅವರ ಕುಟುಂಬದ ಸದಸ್ಯರನ್ನು ಭೇಟಿಯಾಗವುದಾಗಿಯೂ ಸಂಜಯ್ ತಿಳಿಸಿದ್ದಾರೆ.

'ಸರ್ವಾಧಿಕಾರಿಗಳ ಬಗ್ಗೆ ದೇಶದ ಜನ ಎಚ್ಚರಿಕೆಯಿಂದಿರಬೇಕು. ಏಕೆಂದರೆ ಅವರು ಜನರ ಕಣ್ಣಲ್ಲಿ ನೀರು ತರಿಸುತ್ತಾರೆ. ಆದರೆ ಕೇಜ್ರಿವಾಲ್ ಅವರು ನಿಮ್ಮ ಮುಖದಲ್ಲಿ ನಗು ತರಿಸುತ್ತಾರೆ. ಅಲ್ಲದೇ ಜನರಿಗೆ ಉಚಿತ ಆರೋಗ್ಯ ಸೇವೆ ಮತ್ತು ಉಚಿತ ಶಿಕ್ಷಣ ಸೌಲಭ್ಯವನ್ನು ಕಲ್ಪಿಸುತ್ತಾರೆ' ಎಂದೂ ಸಂಜಯ್ ಅವರು ಈ ಸಂದರ್ಭದಲ್ಲಿ ತಿಳಿಸಿದ್ದಾರೆ.

'ಉಚಿತ ಸೌಲಭ್ಯ ನಿಲ್ಲಿಸಲು ಕೇಜ್ರಿವಾಲ್ ರಾಜೀನಾಮೆಗೆ ಆಗ್ರಹ'

'ದೆಹಲಿಯ ಜನರಿಗೆ ಕಲ್ಪಿಸಲಾಗಿರುವ ಉಚಿತ ನೀರು, ವಿದ್ಯುತ್ ಮತ್ತು ಮೊಹಲ್ಲಾ ಕ್ಲಿನಿಕ್ ಸೌಲಭ್ಯಗಳನ್ನು ಸ್ಥಗಿತಗೊಳಿಸಲು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ರಾಜೀನಾಮೆ ನೀಡಬೇಕೆಂದು ಬಿಜೆಪಿ ಆಗ್ರಹಿಸುತ್ತಿದೆ' ಎಂದು ಸಂಜಯ್ ಸಿಂಗ್ ಅವರು ಪ್ರತಿಪಾದಿಸಿದ್ದಾರೆ.

'ಒಂದು ವೇಳೆ ವಿರೋಧ ಪಕ್ಷಗಳ ಆಡಳಿತವಿರುವ ರಾಜ್ಯಗಳಲ್ಲಿ ಪೊಲೀಸರು ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧವೂ ತನಿಖೆ ನಡೆಸಲು ಪ್ರಾರಂಭಿಸಿದರೆ, ಮೋದಿ ಅವರು ಅಂತಹ ತನಿಖೆಯನ್ನು ಎದುರಿಸುತ್ತಾರೆಯೇ' ಎಂದು ಅವರು ಪ್ರಶ್ನಿಸಿದ್ದಾರೆ. ಇದೇ ವೇಳೆ, 'ದೆಹಲಿ ಸಚಿವರಾದ ಆತಿಶಿ ಮತ್ತು ಸೌರಭ್ ಭಾರದ್ವಾಜ್, ರಾಜ್ಯಸಭಾ ಸದಸ್ಯರಾದ ರಾಘವ್ ಛಡ್ಡಾ ಹಾಗೂ ಶಾಸಕ ದುರ್ಗೇಶ್ ಪಾಠಕ್ ಅವರನ್ನೂ ಜೈಲಿಗೆ ಕಳುಹಿಸಲು ಬಿಜೆಪಿ ಯತ್ನಿಸುತ್ತಿದೆ' ಎಂದು ಸಂಜಯ್ ಅವರು ಆರೋಪಿಸಿದರು.

ವಜಾ ಕೋರಿದ್ದ ಅರ್ಜಿ: ವಿಚಾರಣೆಗೆ ನಕಾರ

ಒಂದನೇ ಪುಟದಿಂದ...

ಕೇಜ್ರಿವಾಲ್ ಅವರು ಜೈಲಿನಲ್ಲಿದ್ದೂ, ಮುಖ್ಯಮಂತ್ರಿ ಆಗಿ ಮುಂದುವರಿಯುವು ದರಿಂದ ಕಾನೂನು ಪ್ರಕ್ರಿಯೆಗೆ ಅಡ್ಡಿಯಾಗುತ್ತದೆ. ಅಲ್ಲದೆ ಇದು ರಾಜ್ಯದ ಸಾಂವಿಧಾನಿಕ ಸಂಸ್ಥೆಗಳ ಸ್ಥಗಿತಕ್ಕೂ ಕಾರಣವಾಗಬಹುದು. ಸಾರ್ವಜನಿಕ ಸೇವಕನಾಗಿ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿರ್ವಹಿಸುವುದಕ್ಕೆ ಅವರಿಗೆ ಆಗುವುದಿಲ್ಲ ಎಂದು ಅರ್ಜಿಯಲ್ಲಿ ಹೇಳಲಾಗಿದೆ.

ಜಾರಿ ನಿರ್ದೇಶನಾಲಯವು ಮಾರ್ಚ್ 21ರಂದು ಅರವಿಂದ ಕೇಜ್ರಿವಾಲ್ ಅವರನ್ನು ಬಂಧಿಸಿದ್ದು, ದೆಹಲಿ ಅಬಕಾರಿ ನೀತಿ ಹಗರಣದ ಮುಖ್ಯ ಸಂಚುಕೋರ ಎಂದು ಆರೋಪಿಸಿದೆ.

ರಾಜ್ಯಸಭೆ: 14 ಮಂದಿ ಪ್ರಮಾಣ ವಚನ

ಪಿಟಿಐ/ ಪ್ರಜಾವಾಣಿ ವಾರ್ತೆ

ನವದೆಹಲಿ (ಪಿಟಿಐ): ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಮತ್ತು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಸೇರಿದಂತೆ 14 ಮಂದಿ ರಾಜ್ಯಸಭೆ ಸದಸ್ಯರಾಗಿ ಗುರುವಾರ ಪ್ರಮಾಣ ವಚನ ಸ್ವೀಕರಿಸಿದರು.

ಉಪರಾಷ್ಟ್ರಪತಿ ಮತ್ತು ರಾಜ್ಯಸಭೆ ಸಭಾಪತಿಯಾದ ಜಗದೀಪ್ ಧನಕರ್ ಅವರು ನೂತನ ಸಂಸತ್ ಭವನದಲ್ಲಿ ಈ ಎಲ್ಲರಿಗೂ ಪ್ರಮಾಣ ವಚನ ಬೋಧಿಸಿದರು.

ಸೋನಿಯಾ ಅವರು ರಾಜಸ್ಥಾನದಿಂದ ರಾಜ್ಯಸಭೆಗೆ ಆಯ್ಕೆ ಆಗಿದ್ದರೆ, ವೈಷ್ಣವ್ ಅವರು ಒಡಿಶಾದಿಂದ ಆಯ್ಕೆ ಆಗಿದ್ದಾರೆ. ಕರ್ನಾಟಕದಿಂದ ರಾಜ್ಯಸಭೆಗೆ ಆಯ್ಕೆ ಆಗಿರುವ ಕಾಂಗ್ರೆಸ್ ನಾಯಕರಾದ ಅಜಯ್ ಮಾಕನ್, ಸೈಯದ್ ನಾಸಿರ್ ಹುಸೇನ್, ಉತ್ತರ ಪ್ರದೇಶದಿಂದ ಆಯ್ಕೆ ಆಗಿರುವ ಬಿಜೆಪಿ ನಾಯಕ ಆರ್.ಪಿ.ಎನ್. ಸಿಂಗ್, ಪಶ್ಚಿಮ ಬಂಗಾಳದಿಂದ ಬಿಜೆಪಿ ಚುನಾಯಿಸಿರುವ ಸಮಿಕ್ ಭಟ್ಟಾಚಾರ್ಯ ಅವರು ಪ್ರಮಾಣ ವಚನ ಸ್ವೀಕರಿಸಿರುವ ಇನ್ನಿತರ ಪ್ರಮುಖರು.

ಸಂಜಯ್ ಕುಮಾರ್ ಝಾ (ಜೆಡಿಯು, ಬಿಹಾರ), ಸುಭಾಷಿಶ್ ಖುಂಟಿಯಾ ಮತ್ತು ದೇಬಾಶಿಶ್ ಸಮಂತರೆ (ಬಿಜೆಡಿ, ಒಡಿಶಾ), ಮದನ್ ರಾಥೋಡ್ (ಬಿಜೆಪಿ, ರಾಜಸ್ಥಾನ), ಗೊಲ್ಲ ಬಾಬುರಾವ್, ಎಂ. ರಘುನಾಥ ರೆಡ್ಡಿ, ವೈ.ವಿ. ಸುಬ್ಬಾ ರೆಡ್ಡಿ (ವೈಎಸ್‌ಆರ್‌ಸಿಪಿ, ಆಂಧ್ರ ಪ್ರದೇಶ), ರವಿಚಂದ್ರ ವದ್ದಿರಾಜು (ಬಿಆರ್‌ಎಸ್, ತೆಲಂಗಾಣ) ಕೂಡ ಈ ಸಂದರ್ಭದಲ್ಲಿ ಪ್ರಮಾಣ ವಚನ ಸ್ವೀಕರಿಸಿದರು.

ಒಡಿಶಾ ಮತ್ತು ರಾಜಸ್ಥಾನ ಸದಸ್ಯರ ಕರ್ತವ್ಯಾವಧಿಯು ಗುರುವಾರದಿಂದಲೇ ಆರಂಭವಾಗಿದೆ. ಇತರ ಎಲ್ಲಾ ಸದಸ್ಯರ ಅವಧಿಯು ಬುಧವಾರದಿಂದ ಆರಂಭವಾಗಿದೆ ಎಂದು ರಾಜ್ಯಸಭೆ ಕಾರ್ಯದರ್ಶಿ ಹೇಳಿದರು.

ಪ್ರವಾಣ ವಚನ ಸ್ವೀಕಾರದ ಬಳಿಕ ಎಲ್ಲಾ ಸದಸ್ಯರು ರಾಜ್ಯಸಭೆ ಸಭಾಪತಿ ಜೊತೆ ಒಟ್ಟಾಗಿ ಫೋಟೊ ತೆಗೆಸಿಕೊಂಡರು.

ಸೋನಿಯಾ ಹೊಸ ಅಧ್ಯಾಯ

ಸೋನಿಯಾ ಗಾಂಧಿ

ರಾಜ್ಯಸಭಾ ಸದಸ್ಯರಾಗಿ ಪ್ರಮಾಣ ವಚನವನ್ನು ಗುರುವಾರ ಸ್ವೀಕರಿಸುವ ಮೂಲಕ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರು ತಮ್ಮ ಸುದೀರ್ಘ ಸಂಸದೀಯ ವೃತ್ತಿಜೀವನದ ಹೊಸ ಅಧ್ಯಾಯಕ್ಕೆ ನಾಂದಿ ಹಾಡಿದರು.

ಉತ್ತರ ಪ್ರದೇಶದ ರಾಯಬರೇಲಿ ಲೋಕಸಭಾ ಕ್ಷೇತ್ರದಿಂದ 1999ರಲ್ಲಿ ಮೊದಲಬಾರಿಗೆ ಸೋನಿಯಾ ಅವರು ಚುನಾವಣೆಗೆ ಸ್ಪರ್ಧಿಸಿದ್ದರು. ಲೋಕಸಭೆಯಲ್ಲಿ ಸತತ 25 ವರ್ಷಗಳ ಕಾಲ ರಾಯಬರೇಲಿಯನ್ನು ಪ್ರತಿನಿಧಿಸಿದ್ದ 76 ವರ್ಷ ವಯಸ್ಸಿನ ಸೋನಿಯಾ ಅವರು ಚುನಾವಣಾ ರಾಜಕೀಯದಿಂದ ಹಿಂದೆ ಸರಿಯುವ ನಿರ್ಧಾರ ಮಾಡಿದ್ದರು. ಮಾಜಿ ಪ್ರಧಾನಿ ಮನಮೋಹನ ಸಿಂಗ್ ಅವರ ನಿವೃತ್ತಿಯಿಂದ ತೆರವಾಗಲಿರುವ ರಾಜ್ಯಸಭಾ ಸದಸ್ಯ ಸ್ಥಾನಕ್ಕೆ ಸ್ಪರ್ಧಿಸಲು ನಿರ್ಧರಿಸಿದ್ದ ಅವರು, ರಾಜಸ್ಥಾನದಿಂದ ರಾಜ್ಯಸಭೆಗೆ ಅವಿರೋಧವಾಗಿ ಆಯ್ಕೆ ಆಗಿದ್ದಾರೆ.

ಅಯೋಧ್ಯೆ: ಮೂರು ದಿನಗಳ ನಿರಂತರ ದರ್ಶನ ಸಾಧ್ಯವೇ?

ಪ್ರಜಾವಾಣಿ ವಾರ್ತೆ

ಲಖನೌ: ಅಯೋಧ್ಯೆಯಲ್ಲಿರುವ ಬಾಲ ರಾಮ 72 ಗಂಟೆಗಳ ಕಾಲ ನಿದ್ರೆಯಿಲ್ಲದೆ, ಭಕ್ತರಿಗೆ ದರ್ಶನ ನೀಡಲು ಸಾಧ್ಯವೇ? ರಾಮನವಮಿ ಸಂದರ್ಭದಲ್ಲಿ ಅಯೋಧ್ಯೆಯಲ್ಲಿ ಸೇರುವ ಲಕ್ಷಾಂತರ ಭಕ್ತರ ಗುಂಪನ್ನು ನಿರ್ವಹಿಸಲು ರಾಮ ಸಹಾಯ ಮಾಡುವನೇ?– ಸಂತರ ನಡುವೆ ಹೀಗೊಂದು ಜಿಜ್ಞಾಸೆ ಮೂಡಿದೆ.

ಅಯೋಧ್ಯೆಯ ಜಿಲ್ಲಾಡಳಿತವು ಇದೇ 17ರಂದು ರಾಮನವಮಿಯಂದು ಜನದಟ್ಟಣೆ ನಿಯಂತ್ರಣ, ನಿರ್ವಹಣೆಗೆ ಯೋಜನೆಗಳನ್ನು ಸಿದ್ಧಪಡಿಸುವಲ್ಲಿ ಮಗ್ನವಾಗಿದೆ. ಅಂದಾಜು 40 ಲಕ್ಷ ಭಕ್ತರು ದೇವಾಲಯದ ಪಟ್ಟಣಕ್ಕೆ ಭೇಟಿ ನೀಡುವ ನಿರೀಕ್ಷೆಯಿದ್ದು, ಇದೇ 15ರಿಂದ 17ರವರೆಗೆ ಮೂರು ದಿನಗಳವರೆಗೆ, ದಿನದ 24 ಗಂಟೆಯೂ ರಾಮನ ದರ್ಶನಕ್ಕೆ ವ್ಯವಸ್ಥೆ ಮಾಡುವ ಯೋಜನೆಯನ್ನು ಜಿಲ್ಲಾಡಳಿತ ರೂಪಿಸುತ್ತಿದೆ. ಜಿಲ್ಲಾಡಳಿತದ ಈ ಯೋಜನೆಗೆ ಸಂತರಿಂದ ವಿರೋಧ ವ್ಯಕ್ತವಾಗಿದೆ.

'ಬಾಲ ರಾಮ ಇನ್ನೂ ಐದು ವರ್ಷದ ಬಾಲಕ. ಅವನನ್ನು ಇಷ್ಟು ಹೊತ್ತು ನಿದ್ದೆಗಡಿಸುವುದು ಸರಿಯಲ್ಲ. ಇದು ಶಾಸ್ತ್ರ ಮತ್ತು ಶಾಸ್ತ್ರ ಸಿದ್ಧಾಂತಗಳಿಗೆ ಅನುಗುಣವಾಗಿಲ್ಲ' ಎಂದು ಅಯೋಧ್ಯೆ ಮೂಲದ ಸಂತರೊಬ್ಬರು ಗುರುವಾರ ಹೇಳಿದರು.

'ಭಕ್ತರ ದರ್ಶನಕ್ಕಾಗಿ ರಾಮನ ನಿದ್ದೆಗೆಡಿಸುವುದು ಸಲ್ಲದು. ಭಕ್ತರ ಅನುಕೂಲದ ಬಗ್ಗೆ ಯೋಚಿಸುತ್ತಾ, ಸಂಪ್ರದಾಯಗಳನ್ನು ಮರೆಯಬಾರದು' ಎಂದು ರಾಮನಂದಿ ಪಂಗಡದ ಸಂತರೊಬ್ಬರು ತಿಳಿಸಿದರು.

'ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ನ ಸಭೆ ಶುಕ್ರವಾರ ನಡೆಯಲಿದ್ದು, ಅಲ್ಲಿ ಈ ಕುರಿತು ನಿರ್ಧಾರ ತೆಗೆದುಕೊಳ್ಳಲಾಗುವುದು' ಎಂದು ಟ್ರಸ್ಟ್‌ನ ಕಾರ್ಯದರ್ಶಿ ಚಂಪತ್ ರಾಯ್ ಪ್ರತಿಕ್ರಿಯಿಸಿದರು.

'ಅಗ್ನಿ ಪ್ರೈಮ್' ಕ್ಷಿಪಣಿ: ಪರೀಕ್ಷೆ ಯಶಸ್ವಿ

ನವದೆಹಲಿ (ಪಿಟಿಐ): ಅಣ್ವಸ್ತ್ರ ಸಾಮರ್ಥ್ಯದ ಹೊಸ ಪೀಳಿಗೆಯ ಗುರಿ ನಿರ್ದೇಶಿತ ಕ್ಷಿಪಣಿ 'ಅಗ್ನಿ ಪ್ರೈಮ್' ಅನ್ನು ಭಾರತವು ಒಡಿಶಾ ಕರಾವಳಿಯ ಅಬ್ದುಲ್ ಕಲಾಂ ದ್ವೀಪದಲ್ಲಿ ಬುಧವಾರ ರಾತ್ರಿ ಯಶಸ್ವಿಯಾಗಿ ಉಡಾಯಿಸಿದೆ. ಈ ಮೂಲಕ ದೇಶವು ಶತ್ರು ನಿಗ್ರಹ ಸಾಮರ್ಥ್ಯವನ್ನು ವೃದ್ಧಿಸಿಕೊಂಡಿದೆ.

ಈ ಕ್ಷಿಪಣಿಯ ಪರೀಕ್ಷಾರ್ಥ ಹಾರಾಟ ಯಶಸ್ವಿಯಾಗಿರುವುದು, ವಿವಿಧ ಸ್ಥಳಗಳಲ್ಲಿ ನಿಯೋಜಿಸಲಾಗಿದ್ದ ಹಲವು ಸಂವೇದಕಗಳ ದತ್ತಾಂಶಗಳಿಂದ ದೃಢಪಟ್ಟಿದೆ. ವಿಶ್ವಾಸಾರ್ಹ ಕಾರ್ಯಕ್ಷಮತೆಯನ್ನು ಮೌಲ್ಯೀಕರಿಸುವ ಪ್ರಯೋಗದ ಎಲ್ಲ ಉದ್ದೇಶಗಳನ್ನು ಅದು ಪೂರೈಸಿದೆ ಎಂದು ರಕ್ಷಣಾ ಸಚಿವಾಲಯ ಗುರುವಾರ ಪ್ರಕಟಣೆಯಲ್ಲಿ ತಿಳಿಸಿದೆ.

ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಜತೆಗೆ 'ಸ್ಟ್ರಾಟೆಜಿಕ್ ಫೋರ್ಸಸ್ ಕಮಾಂಡ್' (ಎಸ್‌ಎಫ್‌ಸಿ) ಈ ಉಡಾವಣಾ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಿವೆ. ಈ ಕ್ಷಿಪಣಿಯು 1,000ದಿಂದ 2,000 ಕಿ.ಮೀ. ದೂರದ ಗುರಿಯನ್ನು ಭೇದಿಸುವ ಸಾಮರ್ಥ್ಯ ಹೊಂದಿದೆ.

ಕ್ಷಿಪಣಿ ಪರೀಕ್ಷೆ ಯಶಸ್ವಿಯಾದ ಬೆನ್ನಲ್ಲೇ ಡಿಆರ್‌ಡಿಒ, ಎಸ್‌ಎಫ್‌ಸಿ ಮತ್ತು ಸಶಸ್ತ್ರ ಪಡೆಗಳನ್ನು ಅಭಿನಂದಿಸಿರುವ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು, ಇದು ದೇಶದ ಸೇನೆಯ ಸಾಮರ್ಥ್ಯವನ್ನು ಹೆಚ್ಚಿಸಿದೆ ಎಂದಿದ್ದಾರೆ.

ಸೇನಾಪಡೆಗಳ ಮುಖ್ಯಸ್ಥ ಜನರಲ್ ಅನಿಲ್ ಚೌಹಾಣ್, ಎಸ್‌ಎಫ್‌ಸಿ ಮುಖ್ಯಸ್ಥರು, ಡಿಆರ್‌ಡಿಒ ಮತ್ತು ಭಾರತೀಯ ಸೇನೆಯ ಹಿರಿಯ ಅಧಿಕಾರಿಗಳು ಕ್ಷಿಪಣಿ ಉಡಾವಣೆ ವೇಳೆ ಉಪಸ್ಥಿತರಿದ್ದರು.

ಒಡಿಶಾ ಕರಾವಳಿಯ ಅಬ್ದುಲ್ ಕಲಾಂ ದ್ವೀಪದಲ್ಲಿ ಬುಧವಾರ ರಾತ್ರಿ 'ಅಗ್ನಿ ಪ್ರೈಮ್' ಕ್ಷಿಪಣಿಯನ್ನು ಯಶಸ್ವಿಯಾಗಿ ಉಡಾಯಿಸಲಾಯಿತು –ಪಿಟಿಐ ಚಿತ್ರ

ಕಳೆದ ತಿಂಗಳು 'ಮಿಷನ್ ದಿವ್ಯಾಸ್ತ್ರ' ಯೋಜನೆಯಡಿ ದೇಶೀಯವಾಗಿ ಅಭಿವೃದ್ಧಿ ಪಡಿಸಿದ್ದ, ಹಲವು ಗುರಿಗಳನ್ನು ಸ್ವತಂತ್ರವಾಗಿ ಭೇದಿಸಿ ಮತ್ತೆ ವಾಪಸ್ಸಾಗುವ ಕ್ಷಿಪಣಿ ವಾಹಕ ತಂತ್ರಜ್ಞಾನ (ಎಂಐಆರ್‌ವಿ) ಹೊಂದಿರುವ ಅಗ್ನಿ–5 ಕ್ಷಿಪಣಿಯ ಯಶಸ್ವಿ ಪ್ರಯೋಗ ನಡೆಸಲಾಗಿತ್ತು. ಈ ಮೂಲಕ ಎಂಐಆರ್‌ವಿ ತಂತ್ರಜ್ಞಾನ ಹೊಂದಿದ ಕೆಲವೇ ದೇಶಗಳ ಸಾಲಿಗೆ ಭಾರತವೂ ಸೇರಿದಂತಾಗಿತ್ತು.

ಶಸ್ತ್ರಾಸ್ತ್ರಗಳ ಲಘು ಪರೀಕ್ಷಾ ಕೇಂದ್ರ ಸ್ಥಾಪನೆಗೆ ಚಾಲನೆ

ಭುವನೇಶ್ವರ(ಪಿಟಿಐ): ಪಶ್ಚಿಮ ಬಂಗಾಳದ ಪೂರ್ವ ಮೇದಿನಿಪುರ ಜಿಲ್ಲೆಯ ಜುನ್‌ಪುಟ್ ಗ್ರಾಮದಲ್ಲಿ ಶಸ್ತ್ರಾಸ್ತ್ರಗಳ ಲಘು ಪರೀಕ್ಷಾ ಕೇಂದ್ರ ಸ್ಥಾಪನೆಯ ಕಾರ್ಯಕ್ಕೆ ರಕ್ಷಣಾ ಸಂಶೋಧನಾ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಚಾಲನೆ ನೀಡಿದೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ರಾಜಧಾನಿ ಕೋಲ್ಕತ್ತದಿಂದ 177 ಕಿ.ಮೀ. ದೂರದಲ್ಲಿರುವ ಜುನ್‌ಪುಟ್ ಗ್ರಾಮವು, ಬಂಗಾಳ ಕೊಲ್ಲಿ ತೀರದ ಸಮೀಪವಿದ್ದು, ಪರೀಕ್ಷೆ ನಡೆಸಲು ಸೂಕ್ತ ಸ್ಥಳವಾಗಿದೆ ಎಂದಿದ್ದಾರೆ. ಈಗಾಗಲೇ, ಒಡಿಶಾದ ಚಾಂಡಿಪುರದಲ್ಲಿ ಸಮಗ್ರ ಪರೀಕ್ಷಾ ವಲಯ ಇದ್ದು, ಹೆಚ್ಚುವರಿಯಾಗಿ ಜುನ್‌ಪುಟ್ ಪರೀಕ್ಷಾ ಕೇಂದ್ರ ನಿರ್ಮಾಣಕ್ಕೆ ಚಾಲನೆ ನೀಡಲಾಗಿದೆ ಎಂದು ತಿಳಿಸಿದ್ದಾರೆ.

ದುಭಾಷಿ ನೆರವಿನಿಂದ ವಾದ...

ಒಂದನೇ ಪುಟದಿಂದ...

ಸ್ಕಾಟ್ಲೆಂಡ್‌ನಲ್ಲಿರುವ ಪತಿ ಮತ್ತು ಬೆಂಗಳೂರಿನಲ್ಲಿರುವ ಪತ್ನಿಯ ಮಧ್ಯದ ಕೌಟುಂಬಿಕ ವ್ಯಾಜ್ಯದ ಪರಿಣಾಮ ಪತಿಗೆ ಲುಕ್ ಔಟ್ ನೋಟಿಸ್ ಜಾರಿಗೊಳಿಸಲಾಗಿದೆ. ಇದನ್ನು ರದ್ದುಗೊಳಿಸಬೇಕು ಎಂದು ಕೋರಿ ಪತಿ ಹೈಕೋರ್ಟ್ ಮೆಟ್ಟಿಲೇರಿದ್ದಾರೆ. ಈ ಕುರಿತಾದ ಪ್ರಕರಣದಲ್ಲಿ ಪತ್ನಿಯ ಪರವಾಗಿ ವಾದ ಮಂಡಿಸಲು ಅವಕಾಶ ನೀಡುವಂತೆ ಕೋರಿ ಸಾರಾ ಸನ್ನಿ ಗುರುವಾರ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠಕ್ಕೆ ಮನವಿ ಮಾಡಿದರು.

ಈ ಮನವಿಗೆ ಪ್ರಕರಣದ ಪ್ರತಿವಾದಿಗಳಾದ ಕೇಂದ್ರದ ಪರ ಹೆಚ್ಚುವರಿ ಸಾಲಿಸಿಟರ್ ಜನರಲ್ ಅರವಿಂದ ಕಾಮತ್ ಮತ್ತು ಡೆಪ್ಯುಟಿ ಸಾಲಿಸಿಟರ್ ಜನರಲ್ ಎಚ್.ಶಾಂತಿಭೂಷಣ್ ಒಪ್ಪಿಗೆ ಸೂಚಿಸಿದರು.

ಇದನ್ನು ದಾಖಲಿಸಿಕೊಂಡ ನ್ಯಾಯಪೀಠ, 'ಸಾರಾ ಸನ್ನಿ ಅವರಿಗೆ ದುಭಾಷಿ ನೆರವು ನೀಡಲು ವ್ಯವಸ್ಥೆ ಕಲ್ಪಿಸಿ' ಎಂದು ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಅವರಿಗೆ ಸೂಚಿಸಿ ವಿಚಾರಣೆಯನ್ನು ಇದೇ 8ಕ್ಕೆ ನಿಗದಿಗೊಳಿಸಿದೆ.

ಪ್ರಕರಣವೇನು?: ಮುಂಬೈನ ಠಾಣೆ ಜಿಲ್ಲೆಯ ಪತಿ 2004ರಲ್ಲಿ ಉನ್ನತ ಶಿಕ್ಷಣಕ್ಕಾಗಿ ಸ್ಕಾಟ್ಲೆಂಡ್‌ಗೆ ಹೋಗಿದ್ದರು. ಸದ್ಯ ಅವರು ಅಲ್ಲಿಯೇ ಬ್ಯಾಂಕ್ ಅಧಿಕಾರಿಯಾಗಿದ್ದು ಬ್ರಿಟಿಷ್ ಪೌರತ್ವ ಪಡೆದಿದ್ದಾರೆ. ಅವರಿಗೀಗ 41 ವರ್ಷ. ಮೊದಲ ಪತ್ನಿಯಿಂದ ವಿಚ್ಛೇದನ ಪಡೆದಿದ್ದ ಅವರು ಆನ್‌ಲೈನ್ ತಾಣದ ನೆರವಿನಿಂದ ಬೆಂಗಳೂರಿನ 36 ವರ್ಷದ ಮಹಿಳೆಯನ್ನು 2023ರ ಮೇ 21ರಂದು ವಿವಾಹವಾಗಿದ್ದಾರೆ.

'ಮದುವೆ ದಿನದ ರಾತ್ರಿ ನಮ್ಮಿಬ್ಬರ ಕುಟುಂಬದ ಸದಸ್ಯರು ಔತಣ ಕೂಟದಲ್ಲಿ ಪಾಲ್ಗೊಂಡಿದ್ದರು. ಆವತ್ತು ನನ್ನ ಪತಿ ಶೌಚಾಲಯಕ್ಕೆ ತೆರಳಿದ್ದ ವೇಳೆ ಅವರ ಮೊಬೈಲ್ ಫೋನ್‌ಗೆ ಬಂದ ಸಂದೇಶವೊಂದನ್ನು ನಾನು ಗಮನಿಸಿದೆ. ಮಹಿಳೆಯೊಬ್ಬರು ಕಳುಹಿಸಿದ್ದ ಆ ಸಂದೇಶವನ್ನು ಓದಿದೆ ಮತ್ತು ಕುತೂಹಲದಿಂದ ಆಕೆಯ ಹಿಂದಿನ ಸಂದೇಶಗಳನ್ನೂ ಕೆದಕಿ ಪರಿಶೀಲಿಸಿದಾಗ ನಾನು ಆತಂಕಕ್ಕೆ ಒಳಗಾದೆ. ಕಾರಣ, ಆ ಮಹಿಳೆಯ ಜೊತೆ ನನ್ನ ಪತಿ ಮೋಹ ಮತ್ತು ಲೈಂಗಿಕ ಸಲುಗೆ ಇರಿಸಿಕೊಂಡಿರುವುದು ನನ್ನ ಅರಿವಿಗೆ ಬಂದಿತು' ಎಂದು ಪತ್ನಿ ದೂರಿದ್ದಾರೆ.

'ಸಂದೇಶದ ಬಗ್ಗೆ ವಿಚಾರಿಸಿದಾಗ ನಮ್ಮಿಬ್ಬರ ನಡುವೆ ಮಾತಿನ ಸಂಘರ್ಷ ನಡೆಯಿತು. ಈ ವೇಳೆ ಪತಿ ನನ್ನ ಮೇಲೆ ಹಲ್ಲೆ ನಡೆಸಿದ್ದಾರೆ. ಈ ಘಟನೆಯ ನಂತರ ಅವರೊಬ್ಬ ಪೀಡಕ ಮನೋವೃತ್ತಿಯ ಕುಡುಕ, ಲಂಪಟ ಎಂಬುದು ನನಗೆ ಗೊತ್ತಾಗಿದೆ. ನಂತರದಲ್ಲಿ ಅವರು ನನ್ನನ್ನು ವರದಕ್ಷಿಣೆಗಾಗಿ ಸತಾಯಿಸಿದ್ದಾರೆ' ಎಂದು ಆರೋಪಿಸಿ ಪತ್ನಿ ಬಸವನಗುಡಿ ಠಾಣೆಯಲ್ಲಿ ಪತಿ, ಅವರ ತಂದೆ, ತಾಯಿ, ಅವರ ತಂಗಿ ಹಾಗೂ ಆಕೆಯ ಗಂಡನ ವಿರುದ್ಧ ದೂರು ನೀಡಿದ್ದರು. ಭಾರತೀಯ ದಂಡ ಸಂಹಿತೆ ಮತ್ತು ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆಯ ವಿವಿಧ ಕಲಂಗಳ ಅಡಿ ಪ್ರಕರಣ ದಾಖಲಿಸಿಕೊಂಡ ಪೊಲೀಸರು ಪತಿಯ ವಿರುದ್ಧ ಲುಕ್ ಔಟ್ ನೋಟಿಸ್ ಜಾರಿಗೊಳಿಸಿದ್ದಾರೆ.

ಕೈಗಾರಿಕಾ ಮದ್ಯಸಾರ: ಹಕ್ಕು ಪ್ರತಿಪಾದನೆ

ನವದೆಹಲಿ (ಪಿಟಿಐ): ಕೈಗಾರಿಕಾ ಉದ್ದೇಶಕ್ಕೆ ಬಳಕೆಯಾಗುವ ಮದ್ಯಸಾರದ ಮೇಲೆ ಅಬಕಾರಿ ಸುಂಕ ವಿಧಿಸುವುದಕ್ಕೆ ಸಂಬಂಧಿಸಿದ ಅಧಿಕಾರವು ಸಂಸತ್ತಿಗೆ ಮಾತ್ರವೇ ಇದೆ ಎಂದು ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಹೇಳಿದೆ.

ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ನೇತೃತ್ವದ ಒಂಬತ್ತು ಮಂದಿ ನ್ಯಾಯಮೂರ್ತಿಗಳ ಸಂವಿಧಾನ ಪೀಠದ ಎದುರು ಕೇಂದ್ರ ಸರ್ಕಾರದ ಪರವಾಗಿ ವಾದ ಮಂಡಿಸಿದ ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಅವರು, 'ಮನುಷ್ಯ ಸೇವಿಸಲು ಅರ್ಹವಾಗಿರುವ ಮದ್ಯ ಹಾಗೂ ಸೇವನೆಗೆ ಅರ್ಹವಾಗಿಲ್ಲದ ಮದ್ಯವನ್ನು ಭಿನ್ನವಾಗಿ ಕಾಣುವ ತೀರ್ಮಾನವನ್ನು ಪ್ರಜ್ಞಾಪೂರ್ವಕವಾಗಿಯೇ ತೆಗೆದುಕೊಳ್ಳಲಾಗಿದೆ' ಎಂದು ತಿಳಿಸಿದರು.

'ಸೇವನೆಗೆ ಅರ್ಹವಲ್ಲದ ಮದ್ಯಸಾರದ ಮೇಲೆ ಅಬಕಾರಿ ಸುಂಕ ವಿಧಿಸುವ ವಿಚಾರವಾಗಿ ಕಾನೂನು ರೂಪಿಸುವ ಅಧಿಕಾರವು ಸಂಸತ್ತಿಗೆ ಮಾತ್ರವೇ ಇದೆ. ಸೇವನೆಗೆ ಅರ್ಹವಾದ ಮದ್ಯಸಾರದ ಮೇಲೆ ಅಬಕಾರಿ ಸುಂಕ ವಿಧಿಸುವ ವಿಚಾರವಾಗಿ ಕಾನೂನು ರೂಪಿಸುವ ಅಧಿಕಾರವು ವಿಧಾನಸಭೆಗಳಿಗೆ ಇದೆ' ಎಂದು ವೆಂಕಟರಮಣಿ ಅವರು ವಿವರಿಸಿದರು.

ಈ ಪೀಠದಲ್ಲಿ ನ್ಯಾಯಮೂರ್ತಿಗಳಾದ ಹೃಷಿಕೇಶ್ ರಾಯ್, ಅಭಯ್ ಎಸ್. ಓಕ, ಬಿ.ವಿ. ನಾಗರತ್ನ, ಜೆ.ಬಿ. ಪಾರ್ದೀವಾಲಾ, ಮನೋಜ್ ಮಿಶ್ರಾ, ಉಜ್ವಲ್ ಭುಇಯಾಂ, ಸತೀಶ್ ಚಂದ್ರ ಶರ್ಮ ಮತ್ತು ಆಗಸ್ಟೀನ್ ಜಾರ್ಜ್ ಮಸೀಹ್ ಅವರೂ ಇದ್ದಾರೆ.

ಕೈಗಾರಿಕಾ ಬಳಕೆಯ ಮದ್ಯದ ಉತ್ಪಾದನೆ, ಪೂರೈಕೆ ಹಾಗೂ ಅದಕ್ಕೆ ಸಂಬಂಧಿಸಿದ ಕಾನೂನುಗಳ ವಿಚಾರದಲ್ಲಿ ರಾಜ್ಯ, ಕೇಂದ್ರ ಸರ್ಕಾರಗಳ ಅಧಿಕಾರವ್ಯಾಪ್ತಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಪೀಠವು ವಿಚಾರಣೆ ನಡೆಸುತ್ತಿದೆ.

ಕೈಗಾರಿಕಾ ಮದ್ಯಸಾರದ ಉತ್ಪಾದನೆಯ ವಿಚಾರದಲ್ಲಿ ಶಾಸನ ರೂಪಿಸುವ ಅಧಿಕಾರವು ಕೇಂದ್ರಕ್ಕೆ ಇದೆ ಎಂದು 7 ಮಂದಿ ನ್ಯಾಯಮೂರ್ತಿಗಳು ಇರುವ ಸಂವಿಧಾನ ಪೀಠವು 1997ರಲ್ಲಿ ತೀರ್ಪು ನೀಡಿತ್ತು. ಈ ವಿಷಯವನ್ನು 2010ರಲ್ಲಿ ಒಂಬತ್ತು ಮಂದಿ ನ್ಯಾಯಮೂರ್ತಿಗಳ ವಿಸ್ತೃತ ಪೀಠಕ್ಕೆ ವರ್ಗಾಯಿಸಲಾಗಿದೆ.

ಸಿಎಎ ಪ್ರಶ್ನಿಸಿರುವ ಪಿಐಎಲ್‌ಗಳ ವಜಾಕ್ಕೆ ವಕೀಲ ಅಶ್ವಿನಿ ಉಪಾಧ್ಯಾಯ ಮನವಿ

ಸಿಎಎ ಸಮರ್ಥಿಸಿ 'ಸುಪ್ರೀಂ'ಗೆ ಅರ್ಜಿ

ನವದೆಹಲಿ(ಪಿಟಿಐ): ಪಾಕಿಸ್ತಾನ, ಅಫ್ಗಾನಿಸ್ತಾನ ಹಾಗೂ ಬಾಂಗ್ಲಾದೇಶದಲ್ಲಿ ಕಿರುಕುಳಕ್ಕೆ ಒಳಗಾಗಿರುವ ಮುಸ್ಲಿಮೇತರರ ಬದುಕುವ, ಸ್ವಾತಂತ್ರ್ಯ ಹಾಗೂ ಘನತೆಯ ಹಕ್ಕುಗಳನ್ನು ರಕ್ಷಿಸುವ ಉದ್ದೇಶದಿಂದ ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ಹಾಗೂ ಸಂಬಂಧಿತ ನಿಯಮಗಳನ್ನು ಜಾರಿಗೊಳಿಸಲಾಗಿದೆ ಎಂದು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಲಾಗಿರುವ ಹೊಸ ಅರ್ಜಿಯಲ್ಲಿ ತಿಳಿಸಲಾಗಿದೆ.

ಈ ಮೂಲಕ ಕೇಂದ್ರ ಸರ್ಕಾರ ಜಾರಿಗೊಳಿಸಿರುವ ಪೌರತ್ವ ತಿದ್ದುಪಡಿ ಕಾಯ್ದೆಯನ್ನು ಸಮರ್ಥಿಸಿಕೊಳ್ಳಲಾಗಿದೆ.

ವಕೀಲ ಅಶ್ವಿನಿ ಉಪಾಧ್ಯಾಯ ಅವರು ಈ ವಿಷಯ ಕುರಿತ ಅರ್ಜಿಗಳ ವಿಚಾರಣೆಗೆ ಸಂಬಂಧಿಸಿ ತಮ್ಮನ್ನು ಸಹ ಕಕ್ಷಿದಾರನನ್ನಾಗಿ ಮಾಡುವಂತೆ ಕೋರಿ ಸಲ್ಲಿಸಿರುವ ಅರ್ಜಿಯಲ್ಲಿ ಈ ವಿಷಯ ತಿಳಿಸಿದ್ದಾರೆ.

ಸಿಎಎ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಗಳನ್ನು ವಿಲೇವಾರಿ ಮಾಡುವವರೆಗೆ 'ಸಿಎಎ ನಿಯಮಗಳು, 2024' ಜಾರಿಗೆ ತಡೆ ನೀಡುವಂತೆ ಕೋರಿ ಸುಪ್ರೀಂ ಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು (ಪಿಐಎಲ್) ಸಲ್ಲಿಸಲಾಗಿತ್ತು. ಈ ಅರ್ಜಿಗಳ ಕುರಿತು ಪ್ರತಿಕ್ರಿಯೆ ಸಲ್ಲಿಸುವಂತೆ ಮಾರ್ಚ್ 19ರಂದು ಕೇಂದ್ರ ಸರ್ಕಾರಕ್ಕೆ ಸೂಚಿಸಿದ್ದ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಪೀಠ, ಸಿಎಎ ನಿಯಮಗಳ ಅನುಷ್ಠಾನಕ್ಕೆ ತಡೆ ನೀಡಲು ನಿರಾಕರಿಸಿತ್ತು.

ಸಿಎಎ ಅನುಷ್ಠಾನ ಪ್ರಶ್ನಿಸಿ ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ (ಐಯುಎಂಎಲ್) ಸೇರಿದಂತೆ ಇತರರು ಸಲ್ಲಿಸಿರುವ ಪಿಐಎಲ್‌ಗಳನ್ನು ವಜಾಗೊಳಿಸುವಂತೆ ಉಪಾಧ್ಯಾಯ ಕೋರಿದ್ದಾರೆ.

'ಸಿಎಎ ಅನುಷ್ಠಾನ ಪ್ರಶ್ನಿಸಿ ಐಯುಎಂಎಲ್ ಹಾಗೂ ಇತರರು ಸಲ್ಲಿಸಿರುವ ಅರ್ಜಿಗಳು ರಾಜಕೀಯ ಪ್ರೇರಿತವಾಗಿವೆ. ಈ ತಿದ್ದುಪಡಿ ಕಾಯ್ದೆ ಅನುಷ್ಠಾನದಿಂದ ಅರ್ಜಿದಾರರ ಯಾವ ಮೂಲಭೂತ ಹಕ್ಕುಗಳ ಉಲ್ಲಂಘನೆಯೂ ಆಗುವುದಿಲ್ಲ. ಹೀಗಾಗಿ, ಸಂವಿಧಾನ 32ನೇ ವಿಧಿ ಪ್ರಕಾರ, ಈ ಪಿಐಎಲ್‌ಗಳು ಸಮರ್ಥನೀಯವಲ್ಲದ ಕಾರಣ, ಅವುಗಳನ್ನು ವಜಾಗೊಳಿಸುವ ಮೂಲಕ ನ್ಯಾಯಾಲಯದ ಅಮೂಲ್ಯ ಸಮಯವನ್ನು ಉಳಿಸಬೇಕು' ಎಂದು ಉಪಾಧ್ಯಾಯ ಅವರು ಅರ್ಜಿಯಲ್ಲಿ ತಿಳಿಸಿದ್ದಾರೆ.

ಸಿಎಎ ಹಾಗೂ ಸಂಬಂಧಿತ ನಿಯಮಗಳ ಅನುಷ್ಠಾನ ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಏಪ್ರಿಲ್ 9ರಂದು ನಡೆಸಲಿದೆ.

ಬ್ಯಾಡ್ಮಿಂಟನ್: ಡಬಲ್ಸ್‌ನಲ್ಲೂ ತಂಡ ದುರ್ಬಲ

ಊಬರ್ ಕಪ್: ಹಿಂದೆಸರಿದ ಸಿಂಧು

ನವದೆಹಲಿ (ಪಿಟಿಐ): ಎರಡು ಒಲಿಂಪಿಕ್ಸ್‌ಗಳಲ್ಲಿ ಪದಕ ಗೆದ್ದಿರುವ ಪಿ.ವಿ. ಸಿಂಧು ಮತ್ತು ಎರಡು ಅಗ್ರ ಡಬಲ್ಸ್ ಜೋಡಿಗಳು ಊಬರ್ ಕಪ್‌ನಲ್ಲಿ ಭಾಗವಹಿಸುವ ಭಾರತ ತಂಡದಿಂದ ಹಿಂದೆ ಸರಿದಿವೆ. ಆದರೆ, ಥಾಮಸ್ ಕಪ್‌ಗೆ ಭಾರತದ ಪ್ರಬಲ ತಂಡ ಕಣಕ್ಕಿಳಿಯಲಿದೆ. ಚೀನಾದ ಚೆಂಗ್ಡುವಿನಲ್ಲಿ ಏ. 27 ರಿಂದ ಈ ಟೂರ್ನಿಗಳು ನಡೆಯಲಿವೆ.

ಬ್ಯಾಡ್ಮಿಂಟನ್ ಏಷ್ಯಾ ತಂಡ ಚಾಂಪಿಯನ್‌ಷಿಪ್ ವೇಳೆ ಮರಳಿ ಕಣಕ್ಕಿಳಿದಿದ್ದ ಸಿಂಧು, ಪ್ಯಾರಿಸ್ ಒಲಿಂಪಿಕ್ಸ್ ಸವಾಲಿಗೆ ಸಜ್ಜಾಗುವ ಕಾರಣದಿಂದ ಹಿಂದೆ ಸರಿದಿದ್ದಾರೆ.

ಸಿಂಧು ನಿರ್ಧಾರದ ಬೆನ್ನಲ್ಲೇ ತಂಡ ದುರ್ಬಲವಾಗಿರುವ ಕಾರಣ ಅಗರ ಡಬಲ್ಸ್ ಜೋಡಿಯಾದ ಟ್ರೀಸಾ ಜೋಳಿ – ಗಾಯತ್ರಿ ಗೋಪಿಚಂದ್ ಮತ್ತು ಅಶ್ವಿನಿ ಪೊನ್ನಪ್ಪ–ತನಿಶಾ ಕ್ರಾಸ್ಟೊ ಕೂಡ ಹಿಂದೆಸರಿಯಲು ತೀರ್ಮಾನಿಸಿದ್ದಾರೆ. ಇವರಿಬ್ಬರೂ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯುವುದಕ್ಕೆ ಉಳಿದ ಟೂರ್ನಿಗಳಲ್ಲಿ ಆಡಲು ಶ್ರಮ ಹಾಕಲಿದ್ದಾರೆ.



ಪಿ.ವಿ. ಸಿಂಧು

ಥಾಮಸ್ ಕಪ್‌ನಲ್ಲಿ ಭಾರತ ಹಾಲಿ ಚಾಂಪಿಯನ್ ಆಗಿದೆ. 2022ರಲ್ಲಿ ಥಾಯ್ಲೆಂಡ್‌ನಲ್ಲಿ ನಡೆದ ಟೂರ್ನಿಯಲ್ಲಿ ಭಾರತ 3-0 ಯಿಂದ ಇಂಡೋನೇಷ್ಯಾ ಮೇಲೆ ಜಯಗಳಿಸಿ ಮೊದಲ ಬಾರಿ ಚಾಂಪಿಯನ್ ಆಗಿತ್ತು. ಹೀಗಾಗಿ ಅನುಭವದ ಜೊತೆ ಭರವಸೆಯ ಆಟಗಾರರನ್ನು ಹೊಂದಿರುವ ಆಯ್ಕೆ ಮಾಡಲಾಗಿದೆ. 10 ಮಂದಿಯ ತಂಡದಲ್ಲಿ ಐವರು ಸಿಂಗಲ್ಸ್ ಆಟಗಾರರಿದ್ದಾರೆ.

ತಂಡ ಹೀಗಿದೆ

ಥಾಮಸ್ ಕಪ್ ತಂಡ: ಸಿಂಗಲ್ಸ್: ಎಚ್.ಎಸ್.ಪ್ರಣಯ್, ಲಕ್ಷ್ಯ ಸೇನ್, ಕಿದಂಬಿ ಶ್ರೀಕಾಂತ್, ಪ್ರಿಯಾಂಶು ರಾಜಾವತ್ ಮತ್ತು ಕಿರಣ್ ಜಾರ್ಜ್. ಡಬಲ್ಸ್: ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ, ಚಿರಾಗ್ ಶೆಟ್ಟಿ, ಎಂ.ಆರ್. ಅರ್ಜುನ್, ಧ್ರುವ ಕಪಿಲ ಮತ್ತು ಸಾಯಿ ಪ್ರತೀಕ್.

ಊಬರ್ ಕಪ್ ತಂಡ: ಸಿಂಗಲ್ಸ್: ಅನ್ಮೋಲ್ ಖಾರ್ಬ್, ತನ್ವಿ ಶರ್ಮಾ, ಅಶ್ಮಿತಾ ಚಾಲಿಹಾ ಮತ್ತು ಇಶಾರಾಣಿ ಬರೂವಾ. ಡಬಲ್ಸ್: ಶ್ರುತಿ ಮಿಶ್ರಾ, ಪ್ರಿಯಾ ಕೊಂಜೆಂಗ್‌ಬಾಮ್, ಸಿಮ್ರಾನ್ ಸಿಂಘಿ ಮತ್ತು ರಿತಿಕಾ ಥಾಕರ್.

ಎಂಟರ ಘಟ್ಟಕ್ಕೆ ಅನ್ಮೋಲ್ ಖಾರ್ಬ್

ಅಸ್ತಾನಾ (ಕಜಕಸ್ತಾನ), (ಪಿಟಿಐ): ಯುವ ಬ್ಯಾಡ್ಮಿಂಟನ್ ಆಟಗಾರ್ತಿ ಅನ್ಮೋಲ್ ಖಾರ್ಬ್ ಅವರು ಸ್ಫೂರ್ತಿದಾಯಕ ಪ್ರದರ್ಶನ ಮುಂದುವರಿಸಿ ಕಜಕಸ್ತಾನ ಇಂಟರ್‌ನ್ಯಾಷನಲ್ ಚಾಲೆಂಜ್ ಟೂರ್ನಿಯ ಸಿಂಗಲ್ಸ್ ಕ್ವಾರ್ಟರ್‌ಫೈನಲ್ ತಲುಪಿದರು. ಅವರ ಜೊತೆ ಭಾರತದ ಇನ್ನೂ ನಾಲ್ಕು ಮಂದಿ ಗುರುವಾರ ಎಂಟರ ಘಟ್ಟ ತಲುಪಿದರು.

ದೇವಿಕಾ ಸಿಹಾಗ್, ಮಾಜಿ ರಾಷ್ಟ್ರೀಯ ಚಾಂಪಿಯನ್ ಅನುಪಮಾ ಉಪಾಧ್ಯಾಯ, ಏಳನೇ ಶ್ರೇಯಾಂಕದ ತನ್ಯಾ ಹೇಮಂತ್ ಮತ್ತು ಇಶಾರಾಣಿ ಬರೂವಾ ಅವರು ಕ್ವಾರ್ಟರ್‌ಫೈನಲ್ ತಲುಪಿದ ಭಾರತದ ಇತರ ನಾಲ್ವರು.

ಹಾಲಿ ರಾಷ್ಟ್ರೀಯ ಚಾಂಪಿಯನ್ ಅನ್ಮೋಲ್ ಎರಡನೇ ಸುತ್ತಿನ ಪಂದ್ಯದಲ್ಲಿ 21-11, 21-7 ರಿಂದ ಯುಎಇಯ ನುರಾನಿ ರತು ಅಝ್ರಾ ಮೇಲೆ ಜಯಗಳಿಸಿದರು. 17 ವರ್ಷದ ಅನ್ಮೋಲ್ ಅವರ ಮುಂದಿನ ಎದುರಾಳಿ ಜಪಾನ್‌ನ ಸೊರಾನೊ ಯೊಶಿಕಾವಾ.

ಈ ಋತುವಿನಲ್ಲಿ ನಾಲ್ಕು ಇಂಟರ್‌ನ್ಯಾಷನಲ್ ಚಾಲೆಂಜ್ ಟೂರ್ನಿಗಳಲ್ಲಿ ಫೈನಲ್ ತಲುಪಿ ಎರಡರಲ್ಲಿ (ಸ್ವೀಡಿಷ್ ಓಪನ್ ಮತ್ತು ಪೋರ್ಚುಗಲ್ ಇಂಟರ್‌ನ್ಯಾಷನಲ್‌ನಲ್ಲಿ) ಪ್ರಶಸ್ತಿ ಗೆದ್ದಿರುವ ದೇವಿಕಾ 21-12, 21-12 ರಿಂದ ನಾಲ್ಕನೇ ಶ್ರೇಯಾಂಕದ ಕೀಶಾ ಫಾತಿಮಾ ಅಝ್ಹಾರಾ (ಅಜರ್‌ಬೈಜಾನ್) ಅವರನ್ನು ಹಿಮ್ಮೆಟ್ಟಿಸಿದರು.

ದೇವಿಕಾ ಮುಂದಿನ ಸುತ್ತಿನಲ್ಲಿ ಸ್ವದೇಶದ ಅನುಪಮಾ ವಿರುದ್ಧ ಆಡಲಿದ್ದಾರೆ. ಅನುಪಮಾ ಇನ್ನೊಂದು ಪಂದ್ಯದಲ್ಲಿ ಐದನೇ ಶ್ರೇಯಾಂಕದ ತೆರೇಸಾ ಸ್ವಾಬಿಕೋವಾ (ಜೆಕ್ ಗಣರಾಜ್ಯ) ಅವರನ್ನು ಪರಾಭವಗೊಳಿಸಿದರು. ಏಳನೇ ಶ್ರೇಯಾಂಕದ ತಾನ್ಯಾ 21-11, 21-18 ರಿಂದ ಕ್ಸೇನಿಯಾ ಪೊಲಿಕಾರ್ಪೊವಾ ಅವರನ್ನು ಸೋಲಿಸಿದರು. ತಾನ್ಯಾ ಕ್ವಾರ್ಟರ್‌ಫೈನಲ್‌ನಲ್ಲಿ ಸ್ವದೇಶದ ಇಶಾರಾಣಿ ಎದುರು ಆಡಲಿದ್ದಾರೆ. ಇಶಾರಾಣಿ ಇನ್ನೊಂದು ಪಂದ್ಯದಲ್ಲಿ 21-10, 21-14 ರಿಂದ ನ್ಯೂಜಿಲೆಂಡ್‌ನ ಟಿಫಾನಿ ಹೊ ಮೇಲೆ ಜಯಗಳಿಸಿದರು.

ಐಎಸ್‌ಎಲ್: 2 ಪಂದ್ಯಗಳಿಗೆ ಪ್ರೇಕ್ಷಕರಿಗೆ ನಿರ್ಬಂಧ

ಚಂಡೀಗಢ (ಪಿಟಿಐ): 'ನಿರೀಕ್ಷಿತವಲ್ಲದ ಬೆಳವಣಿಗೆ'ಯ ಕಾರಣ ಇಂಡಿಯನ್ ಸೂಪರ್‌ಲೀಗ್ (ಐಎಸ್‌ಎಲ್) ತಂಡ ಪಂಜಾಬ್ ಎಫ್‌ಸಿ ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ ನಡೆಯಲಿರುವ ತನ್ನ ಕೊನೆಯ ಎರಡು ಪಂದ್ಯಗಳನ್ನು ಪ್ರೇಕ್ಷಕರ ನಿರ್ಬಂಧದ ನಡುವೆ ಆಡಲಿದೆ ಎಂದು ಕ್ಲಬ್ ಗುರುವಾರ ಪ್ರಕಟಿಸಿದೆ.

ಕೋಲ್ಕತ್ತ ದೈತ್ಯ ಕ್ಲಬ್‌ಗಳಾದ ಮೋಹನ್ ಬಾಗನ್ ಮತ್ತು ಈಸ್ಟ್ ಬೆಂಗಾಲ್ ವಿರುದ್ಧ ಕ್ರಮವಾಗಿ ಏಪ್ರಿಲ್ 6 ಮತ್ತು 10ರಂದು ನಡೆಯುವ ಪಂದ್ಯಗಳಿಗೆ ಪ್ರೇಕ್ಷಕರಿಗೆ ಅವಕಾಶವಿರುವುದಿಲ್ಲ. ಈ ಕ್ರೀಡಾಂಗಣದ ಅಧಿಕಾರಿಗಳಿಗೆ ಮಾರ್ಚ್ 15ರಂದು ಡೆಲ್ಲಿ ಅಗ್ನಿಶಾಮಕ ಸೇವೆಗಳ ಇಲಾಖೆ, ಸೂಕ್ತ ಸುರಕ್ಷತಾ ವ್ಯವಸ್ಥೆ ಕಲ್ಪಿಸುವವರೆಗೆ ಯಾವುದೇ ಪಂದ್ಯ ನಡೆಸದಂತೆ ಸೂಚಿಸಿ ನೋಟಿಸ್ ನೀಡಿತ್ತು.

ಕ್ವಾಲಿಫೈಯರ್ ಪಂದ್ಯಗಳವರೆಗೆ ಇಗರ್ ಸ್ಟಿಮಾಚ್‌ಗೆ ಹೊಣೆ

ನವದೆಹಲಿ (ಪಿಟಿಐ): ಕುವೈತ್ ಮತ್ತು ಕತಾರ್ ವಿರುದ್ಧದ ಫೀಫಾ ವಿಶ್ವಕಪ್ ಎರಡನೇ ಸುತ್ತಿನ ಅರ್ಹತಾ ಪಂದ್ಯಗಳಿಗೂ ಇಗರ್ ಸ್ಟಿಮಾಚ್ ಅವರು ಕೋಚ್ ಹುದ್ದೆಯಲ್ಲಿ ಮುಂದುವರಿಯಲಿದ್ದಾರೆ. ಮುಂಬರುವ ಈ ಎರಡು ಪಂದ್ಯಗಳತ್ತ ಗಮನ ಕೇಂದ್ರೀಕರಿಸುವಂತೆ ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ಅವರಿಗೆ ಸೂಚಿಸಿದೆ.

ಸ್ಟಿಮಾಚ್ ಅವರ ಕಾರ್ಯನಿರ್ವಹಣೆಯ ಬಗ್ಗೆ ಫೆಡರೇಷನ್‌ಗೆ ಸಮಾಧಾನ ಇರಲಿಲ್ಲ. ಗುವಾಹಟಿಯಲ್ಲಿ ಮಾರ್ಚ್ 26ರಂದು ನಡೆದ ತವರಿನ ಲೆಗ್ ಪಂದ್ಯದಲ್ಲಿ ಅಫ್ಗಾನಿಸ್ತಾನ ತಂಡದೆದುರು ಆಘಾತಕಾರಿ ಸೋಲನುಭವಿಸಿದ ನಂತರ ಕ್ರೊವೇಷ್ಯಾದ ಈ ವಿಶ್ವಕಪ್ ಆಟಗಾರನನ್ನು ಕೋಚ್ ಸ್ಥಾನದಿಂದ ತೆಗೆದುಹಾಕುವಂತೆ ಮಾಜಿ ಅಂತರರಾಷ್ಟ್ರೀಯ ಆಟಗಾರ ಐ.ಎಂ. ವಿಜಯನ್ ನೇತೃತ್ವದ ತಾಂತ್ರಿಕ ಸಮಿತಿ ವರದಿ ನೀಡಿತ್ತು. ಇದಾಗಿ ವಾರ ಆಗುವಷ್ಟರಲ್ಲಿ ಫೆಡರೇಷನ್ ನಿರ್ಧಾರ ಕೈಗೊಂಡಿದೆ.

2019ರಲ್ಲಿ ಸ್ಟಿಮಾಚ್ ಅವರು ಭಾರತ ತಂಡದ ತರಬೇತಿಯ ಹೊಣೆ ವಹಿಸಿದ್ದರು. ಕಳೆದ ವರ್ಷ ಅವರ ಗುತ್ತಿಗೆಯನ್ನು 2026ರವರೆಗೆ ವಿಸ್ತರಿಸಲಾಗಿತ್ತು.

ಭಾರತ ವಿಶ್ವಕಪ್ ಅರ್ಹತಾ ಸುತ್ತಿನಲ್ಲಿ ಕುವೈಟ್ ವಿರುದ್ಧ ಪಂದ್ಯವನ್ನು ತವರಿನಲ್ಲಿ (ಕೋಲ್ಕತ್ತದ ಸಾಲ್ಟ್ ಲೇಕ್ ಕ್ರೀಡಾಂಗಣ) ಜೂನ್ 6ರಂದು ಆಡಲಿದೆ. ಜೂನ್ 11ರಂದು ಕತಾರ್ ವಿರುದ್ಧದ ಪಂದ್ಯವನ್ನು ಕತಾರ್‌ನಲ್ಲಿ ಆಡಲಿದೆ.

ಫಿಫಾ ರ‍್ಯಾಂಕಿಂಗ್: 121ನೇ ಸ್ಥಾನಕ್ಕೆ ಕುಸಿದ ಭಾರತ

ನವದೆಹಲಿ (ಪಿಟಿಐ): ಭಾರತ ಫುಟ್‌ಬಾಲ್ ಪುರುಷರ ತಂಡವು ಫೀಫಾ ರ‍್ಯಾಂಕಿಂಗ್‌ನಲ್ಲಿ ನಾಲ್ಕು ಸ್ಥಾನ ಕುಸಿತ ಕಂಡು 121ನೇ ಸ್ಥಾನದಲ್ಲಿದೆ.

ಭಾರತ ತಂಡವು ಕಳೆದ ತಿಂಗಳು ಗುವಾಹಟಿಯಲ್ಲಿ ನಡೆದ ಫಿಫಾ ವಿಶ್ವಕಪ್ ಕ್ವಾಲಿಫೈಯರ್‌ನ ಎರಡನೇ ಸುತ್ತಿನಲ್ಲಿ ತನಗಿಂತ ಕೆಳ ಕ್ರಮಾಂಕದ ಅಫ್ಗಾನಿಸ್ತಾನ ವಿರುದ್ಧ 1-2ರಿಂದ ಸೋತಿತ್ತು. ಅದಕ್ಕೂ ಮೊದಲು ಏಷ್ಯನ್ ಕಪ್ ಅಭಿಯಾನದಲ್ಲೂ ನೀರಸ ಪ್ರದರ್ಶನ ನೀಡಿತ್ತು.

ಹಾಲಿ ವಿಶ್ವ ಚಾಂಪಿಯನ್ ಅರ್ಜೆಂಟೀನಾ, ಫ್ರಾನ್ಸ್, ಇಂಗ್ಲೆಂಡ್, ಬೆಲ್ಜಿಯಂ ಮತ್ತು ಬ್ರೆಜಿಲ್ ತಂಡಗಳು ಕ್ರಮವಾಗಿ ಅಗ್ರ ಐದು ಸ್ಥಾನಗಳಲ್ಲಿವೆ. ನೆದರ್ಲೆಂಡ್ಸ್, ಪೋರ್ಚುಗಲ್, ಸ್ಪೇನ್, ಇಟಲಿ, ಕ್ರೊವೇಷ್ಯಾ ನಂತರದ ಸ್ಥಾನದಲ್ಲಿವೆ.

28ಕ್ಕೆ ಟೆನ್–ಕೆ ಬೆಂಗಳೂರು ಓಟ: 96 ವರ್ಷದ ದತ್ತಾತ್ರೇಯ ಸ್ಪರ್ಧೆ



ಬೆಂಗಳೂರು: 96 ವರ್ಷದ ಅಥ್ಲೀಟ್ ಎನ್.ಎಸ್. ದತ್ತಾತ್ರೇಯ ಅವರು ಏ.28ರಂದು ನಡೆಯುವ 'ಟಿಸಿಎಸ್ ವಿಶ್ವ 10ಕೆ ಬೆಂಗಳೂರು-2024' ಓಟದಲ್ಲಿ ಪಾಲ್ಗೊಳ್ಳಲು ಸಜ್ಜಾಗಿದ್ದಾರೆ.

ದೂರದ ಓಟಗಾರನಾಗಿರುವ ದತ್ತಾತ್ರೇಯ ಅವರು ಗೋಲ್ಡ್ ಲೇಬಲ್ ಓಟದಲ್ಲಿ ಭಾಗವಹಿಸಲಿದ್ದಾರೆ. 2019ರಲ್ಲಿ ದೂರದ ಓಟಗಾರನಾಗಿ ಪ್ರಯಾಣವನ್ನು ಆರಂಭಿಸಿರುವ ಅವರು, ಈಗಾಗಲೇ ಹಲವು ಮ್ಯಾರಥಾನ್ ಮತ್ತು ವಾಕಥಾನ್‌ಗಳಲ್ಲಿ ಭಾಗವಹಿಸಿದ್ದಾರೆ.

'ಮೊದಲ ಮ್ಯಾರಥಾನ್ ಓಡಿದ ನಂತರ ಅದರ ಮಹತ್ವ ಅರಿವಾಯಿತು. ಅದು ನನ್ನಲ್ಲಿ ಫಿಟ್‌ನೆಸ್ ಕಾಯ್ದುಕೊಳ್ಳಲು ನೆರವಾಯಿತು. ಈಗ ಅದೇ ನನ್ನ ಜೀವನಶೈಲಿಯಾಗಿ ಬದಲಾಗಿದೆ' ಎಂದು ದತ್ತಾತ್ರೇಯ ತಿಳಿಸಿದ್ದಾರೆ.

ಕುಂಡ್ಯೋಳಂಡ ಕಪ್ ಹಾಕಿ ಟೂರ್ನಿ

ಅಜ್ಜೆಟ್ಟಿರ, ದೇಯಂಡಕ್ಕೆ ಜಯ

ಪ್ರಜಾವಾಣಿ ವಾರ್ತೆ

ನಾಪೋಕ್ಲು (ಕೊಡಗು ಜಿಲ್ಲೆ): ಅಜ್ಜೆಟ್ಟಿರ, ಪಟ್ಟಚೆರುವಾಳಂಡ ಹಾಗೂ ದೇಯಂಡ ತಂಡಗಳು ಕುಂಡ್ಯೋಳಂಡ ಕಪ್‌ಗಾಗಿ ನಡೆಯುತ್ತಿರುವ ಹಾಕಿ ಟೂರ್ನಿಯಲ್ಲಿ ಗುರುವಾರ ಗೆಲುವು ಸಾಧಿಸಿದವು.

ಸಮೀಪದ ಚೆರಿಯಪರಂಬುವಿನ ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ, ಅಜ್ಜೆಟ್ಟಿರ ತಂಡದವರು ಬಟ್ಟಿರ ತಂಡವನ್ನು ಪೆನಾಲ್ಟಿ ಶೂಟೌಟ್‌ನಲ್ಲಿ 3–2 ಗೋಲುಗಳ ಅಂತರದಲ್ಲಿ ಮಣಿಸಿದರೆ, ಪಟ್ಟಚೆರುವಾಳಂಡ ತಂಡದವರು ಮಳವಂಡ ತಂಡದ ವಿರುದ್ಧ 5–4 ಗೋಲುಗಳಿಂದ ಜಯ ಗಳಿಸಿದರು.

ದೇಯಂಡ ತಂಡದವರು ಓಡಿಯಂಡ ತಂಡದ ವಿರುದ್ಧ 3-2 ಗೋಲುಗಳಿಂದ ಜಯ ಸಾಧಿಸಿದರು.

ಫಲಿತಾಂಶ: ತಿರುತೆರ ತಂಡವು 3-0ರಿಂದ ಮುಕ್ಕಾಟಿರ (ಕುಂಬಳದಾಳು) ತಂಡದ ವಿರುದ್ಧ; ಬೋಳಿಯಾಡಿರ ತಂಡವು 1-0ರಿಂದ ಅಲ್ಲಂಡ ವಿರುದ್ಧ; ಪೊಂಜಂಡ ತಂಡವು 1-0ರಿಂದ ಪೊನ್ನಕಚ್ಚಿರ ವಿರುದ್ಧ; ಬಡ್ಡೀರ ತಂಡವು 1-0ರಿಂದ ಚಾರಿಮಂಡದ ವಿರುದ್ಧ; ಕಾಲಚಂಡ ತಂಡವು 1-0 ಅಂತರದಿಂದ ಬೊಳ್ಳಚೆಟ್ಟೀರ ತಂಡದ ವಿರುದ್ಧ; ಮುಕ್ಕಾಟಿರ (ಕುಂಜಲಗೇರಿ) ತಂಡವು 3-1 ಅಂತರದಿಂದ ಕಳ್ಳೀರ ತಂಡದ ವಿರುದ್ಧ; ಮಾಪಂಗಡ ತಂಡವು 2-1ರಿಂದ ಕುಂಡಚ್ಚಿರ ತಂಡದ ವಿರುದ್ಧ; ಕಾಲಚಂಡ ತಂಡವು 1-0 ರಿಂದ ಬೊಳ್ಳಚೆಟ್ಟಿರ ವಿರುದ್ಧ; ದಾಸಂಡ ತಂಡವು 3-0ರಿಂದ ಅಪಾಡಂಡ ವಿರುದ್ಧ; ಮಲ್ಲಜ್ಜಿರ ತಂಡವು 5-0 ಅಂತರದಿಂದ ಪೆಬ್ಬೆಟ್ಟಿರ ವಿರುದ್ಧ ಹಾಗೂ ಮಲ್ಲಂಡ ತಂಡವು 3-0 ಗೋಲುಗಳಿಂದ ಬಾಚಿರ ವಿರುದ್ಧ ಗೆಲುವು ಸಾಧಿಸಿದವು. ನಿಡುಮಂಡ, ಕೊಟ್ಟಂಗಡ, ಮಚ್ಚಾರಂಡ ಹಾಗೂ ಪಳಂಗಿಯಂಡ ತಂಡಗಳು ವಾಕ್‌ಓವರ್ ಪಡೆದವು.

ನಾಪೋಕ್ಲುವಿನ ಚೆರಿಯಪರಂಬುವಿನ ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಕುಂಡ್ಯೋಳಂಡ ಕಪ್ ಹಾಕಿ ಪಂದ್ಯದಲ್ಲಿ ಪೆಬ್ಬಟ್ಟಿರ ಮತ್ತು ಮಲ್ಲಜ್ಜಿರ ತಂಡದ ಆಟಗಾರರ ಪೈಪೋಟಿ

ಎಸ್‌ಡಿಎಂ: ಮಂಜುಶ್ರೀ ಹೇರ್ ಆಯಿಲ್ ಕೂದಲುಗಳ ಆರೋಗ್ಯದಲ್ಲಿ ಗ್ರಾಹಕರ ಆಯ್ಕೆ

ಎಸ್‌ಡಿಎಂ ಪಾರ್ಮಸಿ ಸಂಸ್ಥೆಯು ಸುಮಾರು ಆರು ದಶಕಕ್ಕೂ ಮಿಕ್ಕಿದ ಅನುಭವ, ಪರಿಶ್ರಮದಿಂದ ಕೂದಲುಗಳ ಆರೋಗ್ಯ ಸಮಸ್ಯೆಗಳಿಗೆ ಕಂಡುಕೊಂಡಿರುವ ಮಾರ್ಗೋಪಾಯವಾಗಿದೆ. ಕೂದಲಿನ ಬೆಳವಣಿಗೆ ಉತ್ತೇಜಿಸಲು ಆರೋಗ್ಯಕರ ಕೂದಲನ್ನು ಪಡೆಯಲು ಸಾಂಪ್ರದಾಯಿಕ ಆರೋಗ್ಯ ಸೂತ್ರಗಳನ್ನು ಅನುಸರಿಸಿ 'ಮಂಜುಶ್ರೀ' ಹೇರ್ ಆಯಿಲ್ ಅಭಿವೃದ್ಧಿಪಡಿಸಲಾಗಿದೆ ಎಂದು ಪಾರ್ಮಸಿಯ ಮಹಾಪ್ರಬಂಧಕರಾದ ಡಾ. ಮುರಳೀಧರ ಬಲ್ಲಾಳ್ ತಿಳಿಸಿದರು.

ಈ ಪ್ರಕ್ರಿಯೆಯಲ್ಲಿ ಋಷಿಮುನಿ ಪ್ರಣೀತ ಸಾಂಪ್ರದಾಯಿಕ ಸೂತ್ರವನ್ನು ಅಚ್ಚುಕಟ್ಟಾಗಿ ಅನುಸರಿಸಿ, ಕಚ್ಚಾ ವಸ್ತುಗಳ ಸಂಸ್ಕರಣೆ ಹಾಗೂ ಆಧುನಿಕ ತಂತ್ರಜ್ಞಾನಗಳ ಜೊತೆಗೆ ಶಾಸ್ತ್ರೀಯ ತೈಲಪಾಕ ವಿಧಿಯಲ್ಲಿ ಒಂದು ಉನ್ನತ ಮಟ್ಟದ ತಂತ್ರಗಾರಿಕೆಯಿಂದ ಔಷಧಿಯನ್ನು ತಯಾರಿಸಲಾಗುತ್ತದೆ. ಇದು ಕಫ ಯಾ ಕೆಮ್ಮನ್ನು ಪ್ರಚೋದಿಸುವ ತೀವ್ರ ತಂಪು / ಶೀತವಾಗಿ ವರ್ತಿಸುವುದಿಲ್ಲ. ಬದಲಿಗೆ ಶೀತ ಹಾಗೂ ಕೆಮ್ಮು ಅಥವಾ ಸೈನಸ್ ತಲೆ ನೋವಿನ ಸಮಸ್ಯೆ ಇರುವವರು ಕೂಡ ಇದರ ಉಪಯೋಗದಿಂದ ಕೂದಲ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದು. ಮಂಜುಶ್ರೀ ಕೇಶ ತೈಲವು ಕೂದಲಿನ ಬೇರು ಮತ್ತು ನೆತ್ತಿಯನ್ನು ಪೋಷಿಸುತ್ತದೆ ಮತ್ತು ರಕ್ತ ಪರಿಚಲನೆಯನ್ನು ಸುಧಾರಿಸುತ್ತದೆ. ಚರ್ಮ ಹಾಗೂ ಕೂದಲಿನ ಹೊಳಪನ್ನು ಹೆಚ್ಚಿಸುತ್ತದೆ. ಹೀಗೆ 'ಮಂಜುಶ್ರೀ' ಕೇಶ ತೈಲವು ಬಹುಪಯೋಗಿ ಗಿಡಮೂಲಿಕೆಗಳ ಸಂಯೋಜನೆಯಾಗಿದೆ.

ಇದು ಹೇರಳವಾದ ಪ್ರೋಟೀನ್ ಹಾಗೂ ಪೋಷಕಾಂಶಗಳ ಕೊರತೆಗಳನ್ನು ಮರುಪೂರಣಗೊಳಿಸುವುದರಿಂದ ಆರೋಗ್ಯಕರವಾದ ಹಾಗೂ ಬಲವಾದ ಕೂದಲು ಬೆಳೆಯಲು ಸಹಕಾರಿಯಾಗುತ್ತದೆ.

ಮಂಜುಶ್ರೀ ಹೇರ್ ಆಯಿಲ್ ಗ್ರಾಹಕರಿಗೆ ಭಾರತದಾದ್ಯಂತ ಆಯ್ದ ಮೆಡಿಕಲ್, ಆಯುರ್ವೇದ ಶಾಪ್‌ಗಳಲ್ಲಿ ಅಲ್ಲದೆ ಆನ್‌ಲೈನ್ ಮುಖಾಂತರ ಲಭ್ಯವಿದ್ದು ಪ್ರಸ್ತುತ ಉತ್ತಮ ಮಾರುಕಟ್ಟೆಯನ್ನು ಹೊಂದಿದ್ದು ಗ್ರಾಹಕರು ನಿರಂತರವಾಗಿ ಇದನ್ನು ಬಳಸುತ್ತಿದ್ದಾರೆ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಶಶಾಂಕ್ ಸಿಂಗ್ ಸ್ಫೋಟಕ ಬ್ಯಾಟಿಂಗ್ • ಗುಜರಾತ್ ಟೈಟನ್ಸ್‌ಗೆ ಸೋಲು • ಶುಭಮನ್ ಅರ್ಧಶತಕ

ಪಂಜಾಬ್ ಕಿಂಗ್ಸ್‌ಗೆ ರೋಚಕ ಜಯ

ಅಹಮದಾಬಾದ್ (ಪಿಟಿಐ): ಶಶಾಂಕ್ ಸಿಂಗ್ ಅವರ ಸ್ಫೋಟಕ ಬ್ಯಾಟಿಂಗ್ (ಔಟಾಗದೇ 61; 29ಎ, 4x6, 6x4) ನೆರವಿನಿಂದ ಪಂಜಾಬ್ ಕಿಂಗ್ಸ್ ತಂಡವು ಇಂಡಿಯನ್ ಪ್ರೀಮಿಯರ್ ಲೀಗ್‌ನ ಪಂದ್ಯದಲ್ಲಿ ಗುರುವಾರ ಗುಜರಾತ್ ಟೈಟನ್ಸ್ ವಿರುದ್ಧ ಮೂರು ವಿಕೆಟ್‌ಗಳ ರೋಚಕ ಜಯ ಸಾಧಿಸಿತು.

ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಪಂಜಾಬ್ ತಂಡದ ನಾಯಕ ಶಿಖರ್ ಧವನ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಟೈಟನ್ಸ್ ತಂಡವು ನಾಯಕ ಶುಭಮನ್ ಗಿಲ್ (ಅಜೇಯ 89; 48 ಎಸೆತ) ಅವರ ಅಮೋಘ ಆಟದ ಬಲದಿಂದ 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 199 ರನ್ ಗಳಿಸಿತು.

ಈ ಕಠಿಣ ಗುರಿಯನ್ನು ಬೆನ್ನಟ್ಟಿದ ಪಂಜಾಬ್ ತಂಡದ ಆರಂಭ ಉತ್ತಮವಾಗಿರಲಿಲ್ಲ. 70 ರನ್ ಗಳಿಸುವಷ್ಟರಲ್ಲಿ ಪ್ರಮುಖ ನಾಲ್ಕು ವಿಕೆಟ್‌ಗಳನ್ನು ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು. ಅಗ್ರ ಕ್ರಮಾಂಕದ ಬ್ಯಾಟರ್‌ಗಳಾದ ಶಿಖರ್ (1), ಜಾನಿ ಬೇಸ್ಟೊ (22), ಸ್ಯಾಮ್ ಕರನ್ (5) ಮತ್ತು ಸಿಕಂದರ್ ರಝಾ (15) ಬೇಗನೇ ನಿರ್ಗಮಿಸಿದರು.

ಈ ಹಂತದಲ್ಲಿ ಪ್ರಭಸಿಮ್ರನ್ ಸಿಂಗ್ (35; 24ಎ) ಕೊಂಚ ಚೇತರಿಕೆ ನೀಡಿದರು. ಅವರ ನಿರ್ಗಮನದ ನಂತರ ಟೈಟನ್ಸ್ ಮೇಲುಗೈ ಸಾಧಿಸುವಂತೆ ಕಂಡಿತು. ಆದರೆ, ಶಶಾಂಕ್ ಅವರು ಜಿತೇಶ್ ಮತ್ತು ಅಶುತೋಷ್ ಶರ್ಮಾ ಅವರೊಂದಿಗೆ ಉಪಯುಕ್ತ ಜೊತೆಯಾಟದಲ್ಲಿ ಭಾಗಿಯಾಗಿ ಪಂಜಾಬ್ ತಂಡದ ರೋಚಕ ಗೆಲುವಿಗೆ ಕಾರಣರಾದರು. ಶಶಾಂತ್ ಮತ್ತು ಅಶುತೋಷ್ ಏಳನೇ ವಿಕೆಟ್ ಜೊತೆಯಾಟದಲ್ಲಿ 22 ಎಸೆತಗಳಲ್ಲಿ 43 ರನ್ ಗಳಿಸಿದ್ದು ಪಂದ್ಯದ ತಿರುವಿಗೆ ಕಾರಣವಾಯಿತು. ಕಿಂಗ್ಸ್ ತಂಡವು ಒಂದು ಎಸೆತ ಬಾಕಿ ಇರುವಂತೆ 7 ವಿಕೆಟ್‌ಗೆ 200 ರನ್ ಗಳಿಸಿತು. ಈ ಮೂಲಕ ಪಂಜಾಬ್ ತಂಡಕ್ಕೆ ಹ್ಯಾಟ್ರಿಕ್ ಸೋಲು ತಪ್ಪಿತು.

ಪಂಜಾಬ್ ಕಿಂಗ್ಸ್ ತಂಡದ ಶಶಾಂಕ್ ಸಿಂಗ್ –ಪಿಟಿಐ ಚಿತ್ರ

ಇದಕ್ಕೂ ಮೊದಲು ಗಿಲ್ ನಾಯಕನಿಗೆ ತಕ್ಕ ಆಟವಾಡಿದರು. ಗಿಲ್ ತಾವೆದುರಿಸಿದ 31ನೇ ಎಸೆತದಲ್ಲಿ ಡೀಪ್ ಸ್ಕ್ವೇರ್ ಲೆಗ್‌ಗೆ ಬೌಂಡರಿ ಬಾರಿಸಿ ಅರ್ಧಶತಕದ ಗಡಿ ದಾಟಿದರು. ಈ ಬಾರಿಯ ಟೂರ್ನಿಯಲ್ಲಿ ಗಿಲ್ ಅವರಿಗೆ ಇದು ಮೊದಲ ಅರ್ಧಶತಕ ಹಾಗೂ ಐಪಿಎಲ್‌ನಲ್ಲಿ 19ನೇಯದ್ದು.

ಇನಿಂಗ್ಸ್‌ನ ಮೂರನೇ ಓವರ್‌ನಲ್ಲಿ ಕಗಿಸೊ ರಬಾಡ ಬೌಲಿಂಗ್‌ನಲ್ಲಿ ವೃದ್ಧಿಮಾನ್ ಸಹಾ ಔಟಾದರು. ಆಗ ತಂಡದ ಮೊತ್ತ 29 ರನ್‌ಗಳಾಗಿತ್ತು. ಗಿಲ್ ಜೊತೆಗೂಡಿದ ಕೇನ್ ವಿಲಿಯಮ್ಸನ್ (26ರನ್) ಎರಡನೇ ವಿಕೆಟ್ ಜೊತೆಯಾಟದಲ್ಲಿ 40 ರನ್ ಸೇರಿಸಿದರು. ಹರಪ್ರೀತ್ ಬ್ರಾರ್ ಬೌಲಿಂಗ್‌ನಲ್ಲಿ ಕೇನ್ ಔಟಾಗುವುದರೊಂದಿಗೆ ಜೊತೆಯಾಟ ಮುರಿದುಬಿತ್ತು. ಇದರಿಂದಾಗಿ ಗುಜರಾತ್ ತಂಡದ ಮೇಲೆ ಒತ್ತಡ ಹೆಚ್ಚಿತ್ತು. ಈ ಹಂತದಲ್ಲಿ ಗಿಲ್ ಮೂರನೇ ವಿಕೆಟ್ ಜೊತೆಯಾಟದಲ್ಲಿ ಸಾಯಿ ಸುದರ್ಶನ್ (33; 19ಎ) ಅವರೊಂದಿಗೆ 53 ರನ್ ಕಲೆಹಾಕಿದರು

ಪಂಜಾಬ್ ತಂಡದಲ್ಲಿ ಗಾಯ ಗೊಂಡಿರುವ ಲಿಯಾಮ್ ಲಿವಿಂಗ್‌ಸ್ಟೋನ್ ಬದಲು ಸ್ಥಾನ ಪಡೆದ ಸಿಕಂದರ್ ರಝಾ ಹಾಕಿದ 12ನೇ ಓವರ್‌ನಲ್ಲಿ ಸಾಯಿ 14 ರನ್ ಸೂರೆ ಮಾಡಿದರು. ಇದಾಗಿ ಸ್ವಲ್ಪ ಹೊತ್ತಿನಲ್ಲಿ ಸಾಯಿ ವಿಕೆಟ್ ಗಳಿಸಿದ ಹರ್ಷಲ್ ಪಟೇಲ್ ಜೊತೆಯಾಟ ಮುರಿದರು. ವಿಜಯಶಂಕರ್ (10 ಎಸೆತಗಳಲ್ಲಿ 8) ಪ್ರಭಾವಿಯಾಗಲಿಲ್ಲ.

ನಂತರವೂ ಗಿಲ್ ತಂಡದ ಮೊತ್ತ ಹಿಗ್ಗಿಸುವಲ್ಲಿ ನಿರತರಾದರು. ಅವರ ಇನಿಂಗ್ಸ್‌ನಲ್ಲಿ ಒಟ್ಟು ಆರು ಬೌಂಡರಿ ಮತ್ತು ನಾಲ್ಕು ಸಿಕ್ಸರ್‌ಗಳಿದ್ದವು. ಫ್ಲಿಕ್, ಪುಲ್ ಮತ್ತು ಡ್ರೈವ್‌ಗಳ ನಿಖರ ಪ್ರಯೋಗ ಅವರ ಆಟದಲ್ಲಿ ಕಂಡಿತು.

ಇನಿಂಗ್ಸ್‌ನಲ್ಲಿ 14 ಎಸೆತಗಳು ಬಾಕಿಯಿದ್ದಾಗ ಕ್ರೀಸ್‌ಗೆ ಬಂದ ರಾಹುಲ್ ತೆವಾಟಿಯಾ ರನ್ ಗಳಿಕೆಗೆ ಶರವೇಗ ನೀಡಿದರು. ಕೇವಲ 8 ಎಸೆತಗಳಲ್ಲಿ 23 ರನ್ ಗಳಿಸಿದರು. ಗಿಲ್ ಶತಕದ ಸನಿಹವಿದ್ದರೂ ಅವಸರ ಪಡಲಿಲ್ಲ. ರಾಹುಲ್‌ಗೆ ಹೆಚ್ಚು ಅವಕಾಶ ಬಿಟ್ಟುಕೊಟ್ಟರು. 287ರ ಸ್ಟ್ರೈಕ್‌ರೇಟ್ ನಲ್ಲಿ ರನ್ ಗಳಿಸಿದ ರಾಹುಲ್ 3 ಬೌಂಡರಿ, ಒಂದು ಸಿಕ್ಸರ್ ಬಾರಿಸಿದರು.

ಸ್ಕೋರ್ ಕಾರ್ಡ್

ಗುಜರಾತ್ ಟೈಟನ್ಸ್: 4ಕ್ಕೆ 199 (20 ಓವರುಗಳಲ್ಲಿ)

ವೃದ್ಧಿಮಾನ್ ಸಿ ಧವನ್ ಬಿ ರಬಾಡ 11 (13ಎ, 4x2)
ಶುಭಮನ್ ಔಟಾಗದೇ 89 (48ಎ, 4x6, 6x4)
ವಿಲಿಯಮ್ಸನ್ ಸಿ ಬೇಸ್ಟೊ ಬಿ ಬ್ರಾರ್ 26 (22ಎ, 4x4)
ಸುದರ್ಶನ್ ಸಿ ಶರ್ಮಾ ಬಿ ಪಟೇಲ್ 33 (19ಎ, 4x6)
ವಿಜಯ ಶಂಕರ್ ಸಿ ಬ್ರಾರ್ ಬಿ ರಬಾಡ 8 (10ಎ)
ತೆವಾಟಿಯಾ ಔಟಾಗದೇ 23 (8ಎ, 4x3, 6x1)
ಇತರೆ: 9 (ಲೆಗ್‌ಬೈ 5, ವೈಡ್ 4)
ವಿಕೆಟ್ ಪತನ: 1–29 (ವೃದ್ಧಿಮಾನ್ ಸಹಾ, 2.6), 2–69 (ಕೇನ್ ವಿಲಿಯಮ್ಸನ್, 8.3), 3–122 (ಸಾಯಿ ಸುದರ್ಶನ್, 13.5), 4–164 (ವಿಜಯ್ ಶಂಕರ್, 17.4).
ಬೌಲಿಂಗ್: ಹರ್‌ಪ್ರೀತ್ ಬ್ರಾರ್ 4–0–33–1; ಅರ್ಷದೀಪ್ ಸಿಂಗ್4–0–33–0 , ಕಗಿಸೊ ರಬಾಡ 4–0–44–2; ಸ್ಯಾಮ್ ಕರನ್ 2–0–18–0; ಹರ್ಷಲ್ ಪಟೇಲ್ 4–0–44–1; ಸಿಕಂದರ್ ರಝಾ 2–0–22–0.

ಪಂಜಾಬ್ ಕಿಂಗ್ಸ್: 7ಕ್ಕೆ 200 (19.5 ಓವರ್‌ಗಳಲ್ಲಿ)

ಧವನ್ ಬಿ ಯಾದವ್ 1 (2ಎ)
ಬೇಸ್ಟೊ ಬಿ ನೂರ್ ಅಹ್ಮದ್ 22 (13ಎ, 4x4)
ಪ್ರಭಸಿಮ್ರನ್ ಸಿ ಶರ್ಮಾ ಬಿ ನೂರ್ ಅಹ್ಮದ್ 35 (24ಎ, 4x5, 6x1)
ಕರನ್ ಸಿ ವಿಲಿಯಮ್ಸನ್ ಬಿ ಒಮರ್‌ಝೈ 5 (8ಎ)
ಸಿಕಂದರ್ ಸಿ ವೃದ್ಧಿಮಾನ್ ಬಿ ಶರ್ಮಾ 15 (16)
ಶಶಾಂಕ್ ಸಿಂಗ್ ಔಟಾಗದೇ 61 (29ಎ, 4x6, 6x4)
ಜಿತೇಶ್ ಸಿ ನಲ್ಕಂಡೆ ಬಿ ರಶೀದ್ 16 (8ಎ, 6x2)
ಅಶುತೋಷ್ ಸಿ ರಶೀದ್ ಬಿ ದರ್ಶನ್ 31 (17ಎ, 4x3, 6x1)
ಹರಪ್ರೀತ್ ಬ್ರಾರ್ ಔಟಾಗದೇ 1 (2ಎ)
ಇತರೆ: 13 (ಲೆಗ್‌ಬೈ 8, ವೈಡ್ 5)
ವಿಕೆಟ್ ಪತನ: 1–13 (ಶಿಖರ್ ಧವನ್, 1.1), 2–48 (ಜಾನಿ ಬೇಸ್ಟೊ, 5.1), 3–64 (ಪ್ರಭಸಿಮ್ರನ್ ಸಿಂಗ್, 7.2), 4–70 (ಸ್ಯಾಮ್ ಕರನ್, 8.4), 5–111 (ಸಿಕಂದರ್ ರಝಾ, 12.2), 6–150 (ಜಿತೇಶ್ ಶರ್ಮಾ, 15.3), 7-193 (ಅಶುತೋಷ್ ಶರ್ಮಾ)
ಬೌಲಿಂಗ್: ಅಜ್ಮತ್‌ಉಲ್ಲಾ ಒಮರ್‌ಝೈ 4–0–41–1;ಉಮೇಶ್ ಯಾದವ್ 3–0–35–1;ರಶೀದ್ ಖಾನ್ 4–0–40–1; ನೂರ್ ಅಹ್ಮದ್ 4–0–32–2; ಮೋಹಿತ್ ಶರ್ಮಾ 4–0–38–1; ದರ್ಶನ್ ನಲ್ಕಂಡೆ 0.5–0–6–1
ಪಂದ್ಯದ ಆಟಗಾರ: ಶಶಾಂಕ್ ಸಿಂಗ್

ಫಲಿತಾಂಶ: ಪಂಜಾಬ್ ಕಿಂಗ್ಸ್ ತಂಡಕ್ಕೆ ಮೂರು ವಿಕೆಟ್ ಜಯ

ಚೆನ್ನೈಗೆ ಸನ್‌ರೈಸರ್ಸ್ ಸವಾಲು

ಮತ್ತೊಂದು ರನ್ ಹೊಳೆಯ ನಿರೀಕ್ಷೆಯಲ್ಲಿ ಹೈದರಾಬಾದ್

ಹೈದರಾಬಾದ್ (ಪಿಟಿಐ): ವೇಗಿ ಮುಸ್ತಫಿಜುರ್ ರೆಹಮಾನ್ ಅವರಿಲ್ಲದ ಚೆನ್ನೈ ಸೂಪರ್ ಕಿಂಗ್ಸ್ ತಂಡವು 'ಸ್ಫೋಟಕ ಶೈಲಿ' ಬ್ಯಾಟರ್‌ಗಳಿರುವ ಸನ್‌ರೈಸರ್ಸ್ ಹೈದರಾಬಾದ್ ತಂಡದ ವಿರುದ್ಧ ಶುಕ್ರವಾರ ಕಣಕ್ಕಿಳಿಯಲಿದೆ.

ಯುವ ನಾಯಕ ಋತುರಾಜ್ ಗಾಯಕವಾಡ್ ಅವರ ಬಳಗವು ಮೂರು ಪಂದ್ಯಗಳನ್ನಾಡಿದ್ದು ಎರಡರಲ್ಲಿ ಜಯಿಸಿದೆ. ಕಳೆದ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಎದುರು ಸೋತಿತ್ತು. 'ಚಾಂಪಿಯನ್' ಮಹೇಂದ್ರಸಿಂಗ್ ಧೋನಿಯ ಮಾರ್ಗದರ್ಶನ ಮತ್ತು ಅಬ್ಬರದ ಬ್ಯಾಟಿಂಗ್ ಬಲ ಚೆನ್ನೈ ತಂಡಕ್ಕೆ ಇದೆ.

ಆದರೆ ಸನ್‌ರೈಸರ್ಸ್ ತಂಡದ ರನ್ ಗಳಿಕೆಯ ವೇಗಕ್ಕೆ ಕಡಿವಾಣ ಹಾಕುವುದೇ ಚೆನ್ನೈ ಮುಂದಿರುವ ಪ್ರಮುಖ ಸವಾಲು. ಹೋದ ವಾರ ಇದೇ ಉಪ್ಪಳದ ರಾಜೀವಗಾಂಧಿ ಕ್ರಿಕೆಟ್ ಕ್ರೀಡಾಂಗಣದಲ್ಲಿ ಆಡಿದ್ದ ತಂಡವು ಐಪಿಎಲ್‌ನ ಗರಿಷ್ಠ ಮೊತ್ತ (277 ರನ್) ಗಳಿಸಿತ್ತು. ಆ ಪಂದ್ಯದಲ್ಲಿ ಗೆದ್ದಿತ್ತು. ಆದರೆ ನಂತರದ ಪಂದ್ಯದಲ್ಲಿ (ಅಹಮದಾಬಾದ್‌ನಲ್ಲಿ ನಡೆದಿತ್ತು) ಗುಜರಾತ್ ಎದುರು ಸೋತಿತ್ತು. ಸನ್‌ರೈಸರ್ಸ್ ತಂಡವು 162 ರನ್‌ಗಳ ಗುರಿಯೊಡ್ಡಿತ್ತು. ಈ ರೀತಿ ಅನಿರೀಕ್ಷಿತ ಪ್ರದರ್ಶನಗಳನ್ನು ನೀಡುತ್ತಿರುವುದರಿಂದ ಋತುರಾಜ್ ಬಳಗವು ಹೆಚ್ಚು ಜಾಗರೂಕತೆಯಿಂದ ಯೋಜನೆ ಹೆಣೆಯುವ ಸವಾಲು ಇದೆ.

ಚೆನ್ನೈ ತಂಡದ ಬೌಲರ್ ದೀಪಕ್ ಚಾಹರ್, ಮಥೀಷ ಪಥಿರಾಣ, ಮಹೀಷ ತೀಕ್ಷಣ, ತುಷಾರ್ ದೇಶಪಾಂಡೆ ಹಾಗೂ ಸ್ಪಿನ್ನರ್ ರವೀಂದ್ರ ಜಡೇಜ ಅವರ ಮೇಲೆ ಹೆಚ್ಚಿನ ಹೊಣೆ ಇದೆ. ಸನ್‌ರೈಸರ್ಸ್ ತಂಡದ ಅಭಿಷೇಕ್ ಶರ್ಮಾ, ಹೆನ್ರಿಚ್ ಕ್ಲಾಸೆನ್, ಟ್ರಾವಿಸ್ ಹೆಡ್ ಹಾಗೂ ಏಡನ್ ಮರ್ಕರಂ ಅವರು ಅಬ್ಬರಿಸದಂತೆ ತಡೆಯಬೇಕಿದೆ.

ಸನ್‌ರೈಸರ್ಸ್ ಹೈದರಾಬಾದ್ ತಂಡದ ನಾಯಕ ಪ್ಯಾಟ್ ಕಮಿನ್ಸ್

ಚೆನ್ನೈ ತಂಡದ ಋತುರಾಜ್, ಅಜಿಂಕ್ಯ, ಶಿವಂ ದುಬೆ, ರಚಿನ್ ರವೀಂದ್ರ ಹಾಗೂ ಧೋನಿ ಬ್ಯಾಟಿಂಗ್ ವಿಭಾಗದ ಶಕ್ತಿಯಾಗಿದ್ದಾರೆ. ಡೆಲ್ಲಿ ವಿರುದ್ಧದ ಪಂದ್ಯದಲ್ಲಿ ಧೋನಿ 16 ಎಸೆತಗಳಲ್ಲಿ 37 ರನ್ ಸೂರೆ ಮಾಡಿದ್ದರು. ಅವರು ಹೊಡೆದಿದ್ದ ಮೂರು ಸಿಕ್ಸರ್‌ಗಳು ಪ್ರೇಕ್ಷಕರ ಸಂಭ್ರಮವನ್ನು ಇಮ್ಮಡಿಗೊಳಿಸಿದ್ದವು. 42 ವರ್ಷದ ಮಹಿ ವಿಕೆಟ್ ಕೀಪಿಂಗ್‌ನಲ್ಲಿಯೂ ಚುರುಕಾಗಿದ್ದಾರೆ.

ಪಿಚ್ ಹೇಗಿದೆ?

ಈ ಆವೃತ್ತಿಯಲ್ಲಿ ಹೈದರಾಬಾದ್ ಕ್ರೀಡಾಂಗಣದ ಪಿಚ್‌ನಲ್ಲಿ ಒಂದೇ ಪಂದ್ಯ ನಡೆದಿದೆ. ಅದರಲ್ಲಿ ರನ್ ಹೊಳೆ ಹರಿದಿತ್ತು. ಇದೀಗ ಎರಡನೇ ಪಂದ್ಯದ ಲ್ಲಿಯೂ ಸಪಾಟಾದ ವಿಕೆಟ್‌ನಲ್ಲಿ ಬ್ಯಾಟರ್‌ಗಳು ಮಿಂಚಿದರೆ ಅಚ್ಚರಿಯೇನಿಲ್ಲ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಸಿನಿಮಾ ಆ್ಯಪ್

ಮಹೇಂದ್ರಸಿಂಗ್ ಧೋನಿ –ಪಿಟಿಐ ಚಿತ್ರ

ಈ ಸೋಲು ಅರಗಿಸಿಕೊಳ್ಳಲಾಗದು: ರಿಕಿ ಪಾಂಟಿಂಗ್

ವಿಶಾಖಪಟ್ಟಣ (ಪಿಟಿಐ): ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಎದುರಿನ ಸೋಲನ್ನು ಸ್ವೀಕರಿಸಲಾಗದು ಮತ್ತು ಮುಜುಗರದ ಸಂಗತಿಯೂ ಆಗಿದೆ ಎಂದು ಡೆಲ್ಲಿ ಕ್ಯಾಪಿಟಲ್ಸ್ ತಂಡದ ಮುಖ್ಯ ಕೋಚ್ ರಿಕಿ ಪಾಂಟಿಂಗ್ ಬೇಸರ ವ್ಯಕ್ತಪಡಿಸಿದ್ದಾರೆ. ಬುಧವಾರ ಇಲ್ಲಿ ನಡೆದ ಐಪಿಎಲ್ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ್ದ ಕೋಲ್ಕತ್ತ ತಂಡವು 272 ರನ್‌ಗಳನ್ನು ಪೇರಿಸಿತ್ತು. ಐಪಿಎಲ್ ಇತಿಹಾಸದಲ್ಲಿಯೇ ಇದು ಎರಡನೇ ಅತಿ ದೊಡ್ಡ ಮೊತ್ತವಾಗಿ ದಾಖಲಾಯಿತು. ಡೆಲ್ಲಿ ತಂಡವು 17.2 ಓವರ್‌ಗಳಲ್ಲಿ 166 ರನ್ ಗಳಿಸಿ ಸೋಲೊಪ್ಪಿಕೊಂಡಿತು.

ಇಂಡಿಯನ್ ಪ್ರೀಮಿಯರ್ ಲೀಗ್ ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ಕೋಲ್ಕತ್ತ ನೈಟ್ ರೈಡರ್ಸ್	3	3	0	6	2.518
ರಾಜಸ್ಥಾನ ರಾಯಲ್ಸ್	3	3	0	6	1.249
ಚೆನ್ನೈ ಸೂಪರ್ ಕಿಂಗ್ಸ್	3	2	1	4	0.976
ಲಖನೌ ಸೂಪರ್ ಜೈಂಟ್ಸ್	3	2	1	4	0.483
ಪಂಜಾಬ್ ಕಿಂಗ್ಸ್	4	2	2	4	-0.220
ಗುಜರಾತ್ ಟೈಟನ್ಸ್	4	2	2	4	-0.580
ಸನ್‌ರೈಸರ್ಸ್ ಹೈದರಾಬಾದ್	3	1	2	2	0.204
ರಾಯಲ್ ಚಾಲೆಂಜರ್ಸ್ ಬೆಂಗಳೂರು	4	1	3	2	-0.876
ಡೆಲ್ಲಿ ಕ್ಯಾಪಿಟಲ್ಸ್	4	1	3	2	-1.347
ಮುಂಬೈ ಇಂಡಿಯನ್ಸ್	3	0	3	0	-1.423

ಆರೆಂಜ್ ಕ್ಯಾಪ್: ವಿರಾಟ್ ಕೊಹ್ಲಿ, ಆರ್‌ಸಿಬಿ (203 ರನ್)

ಪರ್ಪಲ್ ಕ್ಯಾಪ್: ಮುಸ್ತಫಿಜುರ್ ರೆಹಮಾನ್, ಮೋಹಿತ್ ಶರ್ಮಾ (7 ವಿಕೆಟ್)

ಐಪಿಎಲ್ ಪಂದ್ಯಗಳಿಗೆ ಸಂಸ್ಕರಿಸಿದ ನೀರು

ವರದಿ ಕೇಳಿದ ಎನ್‌ಜಿಟಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನಲ್ಲಿ ನೀರಿನ ಬಿಕ್ಕಟ್ಟಿನ ನಡುವೆಯೇ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿನ ಐಪಿಎಲ್ ಪಂದ್ಯಗಳಿಗೆ ಸಂಸ್ಕರಿಸಿದ ನೀರನ್ನು ಪೂರೈಕೆ ಮಾಡಿರುವುದನ್ನು ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ಪ್ರಧಾನ ಪೀಠ ಗಂಭೀರವಾಗಿ ಪರಿಗಣಿಸಿದೆ. ಕ್ರೀಡಾಂಗಣದಲ್ಲಿ ನೀರಿನ ಬಳಕೆಯ ಪ್ರಸ್ತುತ ಸ್ಥಿತಿಯ ಬಗ್ಗೆ ವರದಿ ಸಲ್ಲಿಸುವಂತೆ ಕರ್ನಾಟಕ ಸರ್ಕಾರ ಹಾಗೂ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಗೆ (ಕೆಎಸ್‌ಸಿಎ) ತಾಕೀತು ಮಾಡಿದೆ.

ಮಾಧ್ಯಮ ವರದಿಗಳ ಆಧಾರದಲ್ಲಿ ಪೀಠದ ಮುಖ್ಯಸ್ಥ ನ್ಯಾಯಮೂರ್ತಿ ಪ್ರಕಾಶ್ ಶ್ರೀವಾಸ್ತವ ಹಾಗೂ ತಜ್ಞ ಸದಸ್ಯ ಎ.ಸೆಂಥೊಲ್ ವೇಲ್ ಅವರನ್ನು ಒಳಗೊಂಡ ಪೀಠವು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದೆ.

ರಾಜ್ಯ ಕ್ರಿಕೆಟ್ ಸಂಸ್ಥೆಯ ಮನವಿಯ ಆಧಾರದಲ್ಲಿ ಕಬ್ಬನ್ ಉದ್ಯಾನದ ತ್ಯಾಜ್ಯ ನೀರು ಸಂಸ್ಕರಣ ಘಟಕದಿಂದ ಸಂಸ್ಕರಿಸಿದ ನೀರನ್ನು ಕ್ರೀಡಾಂಗಣಕ್ಕೆ ಸರಬರಾಜು ಮಾಡಲು ಜಲಮಂಡಳಿ ಅನುಮತಿ ನೀಡಿದೆ. ಈ ಕ್ರೀಡಾಂಗಣದಲ್ಲಿ 3 ಐಪಿಎಲ್ ಪಂದ್ಯಗಳು ನಡೆದಿವೆ. ಪ್ರತಿ ಪಂದ್ಯದ ವೇಳೆ ಕ್ರೀಡಾಂಗಣಕ್ಕೆ ನೀರುಣಿಸಲು 75 ಸಾವಿರ ಲೀಟರ್ ಸಂಸ್ಕರಿಸಿದ ನೀರನ್ನು ಬಳಕೆ ಮಾಡಲಾಗುತ್ತಿದೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿತ್ತು.

ಬೆಂಗಳೂರಿನಲ್ಲಿ ಕುಡಿಯುವ ನೀರಿನ ಬೇಡಿಕೆ ಪ್ರಮಾಣ ದಿನಕ್ಕೆ 260 ಕೋಟಿ ಲೀಟರ್‌ಗೆ ಏರಿದೆ. ನಿತ್ಯ 50 ಕೋಟಿ ಲೀಟರ್‌ನ ಕೊರತೆ ಇದೆ. ನಗರದಲ್ಲಿನ 14 ಸಾವಿರ ಕೊಳವೆಬಾವಿಗಳ ಪೈಕಿ 6,900 ಬತ್ತಿವೆ. ಕಾರು ತೊಳೆಯಲು, ತೋಟಗಾರಿಕೆ ಹಾಗೂ ನಿರ್ಮಾಣ ಚಟುವಟಿಕೆಗಳಿಗೆ ನೀರು ಬಳಸುವುದನ್ನು ಜಲಮಂಡಳಿ ನಿರ್ಬಂಧಿಸಿದೆ. ಅದರ ನಡುವೆಯೂ, ಕ್ರಿಕೆಟ್ ಪಂದ್ಯಕ್ಕೆ ದೊಡ್ಡ ಪ್ರಮಾಣದ ನೀರನ್ನು ಬಳಸಲಾಗಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿತ್ತು. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಜಲಮಂಡಳಿ, ಬೆಂಗಳೂರು ನಗರ ಜಿಲ್ಲಾಧಿಕಾರಿ ಹಾಗೂ ಕ್ರಿಕೆಟ್ ಸಂಸ್ಥೆಗೆ ಪ್ರಧಾನ ಪೀಠ ನೋಟಿಸ್ ಜಾರಿ ಮಾಡಿದೆ.

ಕ್ರೀಡಾಂಗಣಕ್ಕೆ ಸರಬರಾಜು ಮಾಡುವ ನೀರಿನ ಗುಣಮಟ್ಟ ಮತ್ತು ಕ್ರೀಡಾಂಗಣದಲ್ಲಿ ಬಳಸಿದ ಅಂತರ್ಜಲದ ಪ್ರಮಾಣದ ಬಗ್ಗೆ ವರದಿ ನೀಡುವಂತೆ ಜಲಮಂಡಳಿಗೆ ಸೂಚಿಸಿದೆ. ಮುಂದಿನ ವಿಚಾರಣೆಗಾಗಿ ಪ್ರಕರಣವನ್ನು ಮೇ 2ಕ್ಕೆ ಮುಂದೂಡಲಾಗಿದೆ.

ರಿಷಭ್ ಪಂತ್‌ಗೆ ₹24 ಲಕ್ಷ ದಂಡ

ವಿಶಾಖಪಟ್ಟಣ (ಪಿಟಿಐ): ಪ್ರಸಕ್ತ ಐಪಿಎಲ್‌ನಲ್ಲಿ ಎರಡನೇ ಬಾರಿ ಡೆಲ್ಲಿ ಕ್ಯಾಪಿಟಲ್ಸ್ ತಂಡ ನಿಧಾನಗತಿಯಲ್ಲಿ ಓವರ್ ಮಾಡಿದ ತಪ್ಪಿಗಾಗಿ ನಾಯಕ ರಿಷಭ್ ಪಂತ್ ಅವರಿಗೆ ₹24 ಲಕ್ಷ ದಂಡ ವಿಧಿಸಲಾಗಿದೆ.

ಬುಧವಾರ ಕೋಲ್ಕತ್ತ ನೈಟ್ ರೈಡರ್ಸ್ ವಿರುದ್ಧ ಪಂದ್ಯದಲ್ಲಿ ಡೆಲ್ಲಿ ನಿಗದಿ ಅವಧಿಯಲ್ಲಿ ಓವರ್ ಪೂರೈಸಿರಲಿಲ್ಲ. 'ಇಂಪ್ಯಾಕ್ಟ್ ಪ್ಲೇಯರ್' ಸೇರಿ ದಂತೆ ಡೆಲ್ಲಿ ತಂಡದ ಉಳಿದ ಆಟಗಾರರಿಗೆ ವೈಯಕ್ತಿಕವಾಗಿ ಶೇ 25ರಷ್ಟು ಪಂದ್ಯ ಶುಲ್ಕವನ್ನು ದಂಡವಾಗಿ ವಿಧಿಸಲಾಗಿದೆ.

ಈ ಹಿಂದೆ (ಮಾ. 31ರಂದು ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ) ಮೊದಲ ಬಾರಿ ನಿಧಾನಗತಿಯಲ್ಲಿ ಓವರ್ ಮಾಡಿದ್ದಕ್ಕೆ ಪಂತ್ ಅವರಿಗೆ ₹ 12 ಲಕ್ಷ ದಂಡ ವಿಧಿಸಲಾಗಿತ್ತು.

ಐಪಿಎಲ್: ಟಿ.ವಿ ವೀಕ್ಷಣೆಯಲ್ಲಿ ದಾಖಲೆ

ಮುಂಬೈ (ಪಿಟಿಐ): ಈ ಸಲದ ಐಪಿಎಲ್ ಕ್ರಿಕೆಟ್ ಟೂರ್ನಿಯ ಮೊದಲ ಹತ್ತು ಪಂದ್ಯಗಳ ವೀಕ್ಷಣೆಯ ಹೊಸ ದಾಖಲೆ ನಿರ್ಮಾಣವಾಗಿದೆ.

17ನೇ ಆವೃತ್ತಿಯ ಟೂರ್ನಿಯ ಮೊದಲ ಹತ್ತು ಪಂದ್ಯಗಳ ವೀಕ್ಷಣೆಯ ಅವಧಿಯು ದಾಖಲೆಯ ಪುಸ್ತಕ ಸೇರಿದೆ. ಒಟ್ಟು 8028 ಕೋಟಿ ನಿಮಿಷಗಳ ದಾಖಲೆಯಾಗಿದೆ. ಹೋದ ಸಲದ ಟೂರ್ನಿಗಿಂತಲೂ ಶೇ 20ರಷ್ಟು ಹೆಚ್ಚಳವಾಗಿದೆ ಎಂದು ಟಿ.ವಿ. ನೇರಪ್ರಸಾರದ ಅಧಿಕೃತ ಸಂಸ್ಥೆ ಡಿಸ್ನಿ ಸ್ಟಾರ್ ಸ್ಪೋರ್ಟ್ಸ್ ತಿಳಿಸಿದೆ.

'ಅಭಿಮಾನಿಗಳ ಅಪಾರ ಆಸಕ್ತಿಯನ್ನು ನೋಡಿ ನಾವು ಮೂಕವಿಸ್ಮಿತರಾಗಿದ್ದೇವೆ. ಹೋದ ಬಾರಿಯ ಆವೃತ್ತಿಗಿಂತಲೂ ಈ ಸಲ ವೀಕ್ಷಣೆಯ ಅವಧಿ ಮತ್ತು ವೀಕ್ಷಕರ ಸಂಖ್ಯೆಯಲ್ಲಿ ಗಣನೀಯ ಏರಿಕೆಯಾಗಿದೆ' ಎಂದು ಡಿಸ್ನಿ ಸ್ಟಾರ್ ಸ್ಪೋರ್ಟ್ಸ್ ಮುಖ್ಯಸ್ಥ ಸಂಜೋಗ್ ಗುಪ್ತಾ ಹೇಳಿದ್ದಾರೆ.

ಐಪಿಎಲ್ ಪಂದ್ಯಗಳ ಪ್ರಸಾರವು ಭಾರತದ 10 ಭಾಷೆಗಳಲ್ಲಿ ಆಗುತ್ತಿದೆ. ಈ ಬಾರಿ ವಾಕ್, ಶ್ರವಣ ದೋಷವುಳ್ಳವರಿಗಾಗಿ ಸಂಜ್ಞೆ ಭಾಷೆಯ ಕಾಮೆಂಟ್ರಿ ಕೂಡ ಆರಂಭಿಸಲಾಗಿದೆ.

ಟೂರ್ನಿಯ ಉದ್ಘಾಟನೆ ಪಂದ್ಯವನ್ನು (ಸಿಎಸ್‌ಕೆ–ಆರ್‌ಸಿಬಿ) 16.8 ಕೋಟಿ ಜನ ವೀಕ್ಷಿಸಿದ್ದರು. ಆ ದಿನವೇ 1276 ನಿಮಿಷಗಳ ವೀಕ್ಷಣೆ ಅವಧಿಯು ದಾಖಲಾಗಿತ್ತು ಎಂದೂ ಸಂಸ್ಥೆ ತಿಳಿಸಿದೆ.

ಆರ್ಚರಿ ಶಿಬಿರ ಇಂದಿನಿಂದ

ಬೆಂಗಳೂರು: ಕರ್ನಾಟಕ ಅಮೆಚೂರು ಆರ್ಚರಿ ಸಂಸ್ಥೆಯ ಆಶ್ರಯದಲ್ಲಿ 10 ವರ್ಷ ಮೇಲಿನ ಬಾಲಕ ಮತ್ತು ಬಾಲಕಿಯರಿಗೆ ಬೇಸಿಗೆ ತರಬೇತಿ ಶಿಬಿರವನ್ನು ಕಂಠೀರವ ಕ್ರೀಡಾಂಗಣದ ಆರ್ಚರಿ ಮೈದಾನದಲ್ಲಿ ಇದೇ 5ರಿಂದ ಆಯೋಜಿಸಲಾಗಿದೆ.

ಆಸಕ್ತ ಮಕ್ಕಳು ತಮ್ಮ ಹೆಸರನ್ನು ಇದೇ 5ರಂದು ಸಂಜೆ 4 ಗಂಟೆಯೊಳಗೆ ನೋಂದಣಿ ಮಾಡುವಂತೆ ಸಂಸ್ಥೆಯ ಪ್ರಕಟಣೆ ತಿಳಿಸಿದೆ. ದೂರವಾಣಿ: 080–22275656.